ಶುಕ್ರವಾರ, ಫೆಬ್ರುವರಿ 23, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೈಲರ್

ಮುಂಬೈನಲ್ಲಿ ಗುರುವಾರ ನಡೆದ 'ಶೈತಾನ್' ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ನಟಿ ಜ್ಯೋತಿಕಾ ಪಾಲ್ಗೊಂಡಿದ್ದರು

TITLE SPONSOR TATA | ASSOCIATE PARTNER Sintex | OFFICIAL STRATEGIC TIMEOUT PARTNER CEAT | OFFICIAL FANTASY GAME PARTNER DREAM11 | OFFICIAL BEVERAGE PARTNER Amul KOOL

TATA WPL
OPENING CEREMONY
#TATAWPL
SHAHID KAPOOR
VARUN DHAWAN
TIGER SHROFF
SHAH RUKH KHAN
SIDHARTH MALHOTRA
KARTIK AARYAN
CRICKET KA
QUEENDOM
THE BIGGEST ENTERTAINMENT EXTRAVAGANZA
23 FEB. 2024
6:30 PM ONWARDS
JioCinema
sports 18
M. CHINNASWAMY STADIUM, BENGALURU
TITLE SPONSOR
TATA
ASSOCIATE PARTNER
Sintex
OFFICIAL STRATEGIC TIMEOUT PARTNER
CEAT
OFFICIAL FANTASY GAME PARTNER
DREAM11
OFFICIAL BEVERAGE PARTNER
Amul KOOL

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಸಿನಿಮಾ ಮೂಲಕ ನಟ ಸಂಪದಾ 'ದಕ್ಷಿಣ'ಕ್ಕೆ ಬರುತ್ತಿದ್ದಾರೆ

ಆಳ-ಅಗಲ
ನಾಕೌಟ್ 'ಗುಮ್ಮ'ನ ಭಯ ದಾಟುವುದೇ ಕರ್ನಾಟಕ?
ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಒಪ್ಪಿಗೆ 13
ಬೆಳೆಗಾರರಿಗೆ 'ಹುಳಿ'ಯಾದ ದ್ರಾಕ್ಷಿ 14

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,158 ▲	22,217 ▲	₹64,050 (ಬೆಂಗಳೂರು) ▼	₹72,400 (ಬೆಂಗಳೂರು) ▼	82.85 ▲

ಬಿಜೆಪಿ–ಜೆಡಿಎಸ್ ಸ್ಥಾನ ಹಂಚಿಕೆಗೆ ಅಮಿತ್ ಶಾ – ಎಚ್.ಡಿ. ಕುಮಾರಸ್ವಾಮಿ ಅಂತಿಮ ಸ್ಪರ್ಶ

ದಳಕ್ಕೆ ಮೂರು ಮತ್ತೊಂದು ಕ್ಷೇತ್ರ

● ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ವಿರುದ್ಧ ಸೆಣಸಲು ಮೈತ್ರಿ ಮಾಡಿಕೊಂಡಿರುವ ಬಿಜೆಪಿ–ಜೆಡಿಎಸ್ ಮಧ್ಯೆ ಲೋಕಸಭೆ ಚುನಾವಣೆಯ ಸ್ಥಾನ ಹಂಚಿಕೆ ಪ್ರಕ್ರಿಯೆ ಅಂತಿಮ ಘಟ್ಟಕ್ಕೆ ತಲುಪಿದೆ. ಹಾಸನ, ಮಂಡ್ಯ ಹಾಗೂ ಕೋಲಾರ ಕ್ಷೇತ್ರಗಳನ್ನು ಮಿತ್ರ ಪಕ್ಷಕ್ಕೆ ಬಿಟ್ಟುಕೊಡಲು ಬಿಜೆಪಿ ಒಪ್ಪಿದೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹಾಗೂ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಬೆಳಿಗ್ಗೆ ಇಲ್ಲಿ ಭೇಟಿ ಮಾಡಿ ಸುಮಾರು 20 ನಿಮಿಷ ಸಮಾಲೋಚನೆ ನಡೆಸಿದರು. ಬೆಂಗಳೂರು ಗ್ರಾಮಾಂತರ, ತುಮಕೂರಿನಲ್ಲಿ ಅಭ್ಯರ್ಥಿ ಹಾಗೂ ಚಿಹ್ನೆ ವಿನಿಮಯಕ್ಕೆ ಉಭಯ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ.

'ಹಾಸನ, ಮಂಡ್ಯ ಮತ್ತು ಕೋಲಾರದಿಂದ ನಾವು ಸ್ಪರ್ಧಿಸುತ್ತೇವೆ. ಬೆಂಗಳೂರು ಗ್ರಾಮಾಂತರದಿಂದ ಬಿಜೆಪಿ ಚಿಹ್ನೆಯಡಿ ನಮ್ಮ ಪಕ್ಷದವರು ಮತ್ತು ತುಮಕೂರಿನಿಂದ ನಮ್ಮ ಚಿಹ್ನೆಯಡಿ ಬಿಜೆಪಿಯವರು ಕಣಕ್ಕಿಳಿಯಲಿದ್ದಾರೆ' ಎಂದು ಜೆಡಿಎಸ್‌ನ ನಾಯಕರೊಬ್ಬರು ತಿಳಿಸಿದರು.

'ಸ್ಥಾನ ಹಂಚಿಕೆಗೆ ಸಂಬಂಧಿಸಿದಂತೆ ಯಾವುದೇ ಗೊಂದಲವಿಲ್ಲ. ಐದು ಕ್ಷೇತ್ರಗಳನ್ನು ಆಯ್ಕೆ ಮಾಡಲು ಬಿಜೆಪಿ ವರಿಷ್ಠರು ಅವಕಾಶ ನೀಡಿದ್ದಾರೆ' ಎಂದೂ ಅವರು ಸ್ಪಷ್ಟಪಡಿಸಿದರು.

ಹಿಂದಿನ ಚುನಾವಣೆಗಳಲ್ಲಿ ಜಾತಿವಾರು ಮತ್ತು ಪಕ್ಷವಾರು ಮತಗಳಿಕೆ, ಅಭ್ಯರ್ಥಿಯ ಗೆಲುವಿನ ಸಾಮರ್ಥ್ಯ ಮತ್ತಿತರ ಅಂಶಗಳನ್ನು ಲೆಕ್ಕ ಹಾಕಿ ಈ ತೀರ್ಮಾನಕ್ಕೆ ಬರಲಾಗಿದೆ ಎಂದೂ ಅವರು ಹೇಳಿದರು.

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರ್ಪಡೆಯಾಗಿ ನಾಲ್ಕೈದು ತಿಂಗಳು ಕಳೆದಿವೆ. ಜನವರಿ ಅಂತ್ಯದೊಳಗೆ ಸ್ಥಾನ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ಉಭಯ ಪಕ್ಷಗಳ ನಾಯಕರು ಹೇಳಿದ್ದರು. ಐದರಿಂದ ಆರು ಕ್ಷೇತ್ರಗಳನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಜೆಡಿಎಸ್ ನಾಯಕರು ಪಟ್ಟು ಹಿಡಿದಿದ್ದರು. ಗರಿಷ್ಠ ಮೂರರಿಂದ ನಾಲ್ಕು ಕ್ಷೇತ್ರಗಳನ್ನು ಬಿಟ್ಟುಕೊಡುವುದಾಗಿ ಬಿಜೆಪಿ ವರಿಷ್ಠರು ಸೂಚ್ಯವಾಗಿ ಹೇಳಿದ್ದರು.

ಮಂಡ್ಯ ಕ್ಷೇತ್ರದಲ್ಲಿ ಸುಮಲತಾ ಅಂಬರೀಷ್ ಸಂಸದೆಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಕಮಲದ ಚಿಹ್ನೆಯಡಿ ಸ್ಪರ್ಧಿಸಲು ಸುಮಲತಾ ಅವರು ಹಲವು ತಿಂಗಳುಗಳಿಂದ ಲಾಬಿ ನಡೆಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. 'ಮಂಡ್ಯ ಬಿಟ್ಟು ಬೇರೆ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸುವುದಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದರು.

7ನೇ ಪುಟ ನೋಡಿ

ಎಚ್.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಗುರುವಾರ ಭೇಟಿಯಾದರು

> **ಕ್ಷೇತ್ರಗಳ ಹಂಚಿಕೆ ಕುರಿತು ಎರಡು ಪಕ್ಷಗಳ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. 28 ಕ್ಷೇತ್ರಗಳಲ್ಲೂ ಗೆಲ್ಲುವುದಷ್ಟೆ ಗುರಿ. ಮಂಡ್ಯ–ಹಾಸನದಲ್ಲಿ ಯಾರು ನಿಲ್ಲುತ್ತಾರೆ ಎಂಬುದು ಮುಖ್ಯವಲ್ಲ**
> **ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಪಂಚ ಕ್ಷೇತ್ರಕ್ಕೆ ಸಂಭಾವ್ಯ ಅಭ್ಯರ್ಥಿಗಳು	
ಮಂಡ್ಯ	ಎಚ್.ಡಿ.ಕುಮಾರಸ್ವಾಮಿ/ ಸಿ.ಎಸ್. ಪುಟ್ಟರಾಜು
ಹಾಸನ	ಪ್ರಜ್ವಲ್ ರೇವಣ್ಣ
ಬೆಂಗಳೂರು ಗ್ರಾಮಾಂತರ	ಡಾ.ಸಿ.ಎನ್. ಮಂಜುನಾಥ್
ತುಮಕೂರು	ವಿ.ಸೋಮಣ್ಣ
ಕೋಲಾರ	ಸಮೃದ್ಧಿ ಮಂಜುನಾಥ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೇಂದ್ರ ವಿರುದ್ಧ ರಾಜ್ಯ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಮತ್ತು ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ನೀಡುವಂತೆ ಆಗ್ರಹಿಸಿ ದೆಹಲಿಯಲ್ಲಿ ಧರಣಿ ನಡೆಸಿದ್ದ ರಾಜ್ಯ ಸರ್ಕಾರ, ವಿಧಾನಸಭೆಯಲ್ಲಿ ವಿರೋಧ ಪಕ್ಷಗಳಿಗೆ ಸುಳಿವು ಕೊಡದೆ ಕೇಂದ್ರ ಸರ್ಕಾರದ ವಿರುದ್ಧ ಎರಡು ನಿರ್ಣಯಗಳನ್ನು ಗುರುವಾರ ದಿಢೀರ್ ಮಂಡಿಸಿ, ಅಂಗೀಕಾರ ಪಡೆಯಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅವರು ಬಜೆಟ್ ಮೇಲಿನ ಚರ್ಚೆ ಮುಗಿದ ಬಳಿಕ ದಿಢೀರನೆ ಎರಡು ನಿರ್ಣಯಗಳನ್ನು ಮಂಡಿಸಿದರು. ಕೇಂದ್ರ ಸರ್ಕಾರವು ಆರ್ಥಿಕ ಸಂಪನ್ಮೂಲಗಳನ್ನು ತಾರತಮ್ಯ ರಹಿತವಾಗಿ ಸಮಾನವಾಗಿ ಹಂಚಿಕೆ ಮಾಡಬೇಕು ಎಂಬುದು ಮೊದಲ ನಿರ್ಣಯ. ರೈತರ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕಾಯ್ದೆ ರೂಪಿಸಬೇಕು ಎಂಬ ಒತ್ತಾಯ ಎರಡನೇ ನಿರ್ಣಯದಲ್ಲಿದೆ.

ಸಚಿವರು ನಿರ್ಣಯ ಮಂಡಿಸುತ್ತಿದ್ದಾಗ ಬಿಜೆಪಿಯವರಿಗೆ ಗೊತ್ತಾಗಲಿಲ್ಲ. ವಿಷಯ ತಿಳಿಯುತ್ತಿದ್ದಂತೆ ತೀವ್ರ ವಿರೋಧ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು, ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು. ಜೆಡಿಎಸ್ ಸದಸ್ಯರೂ ಜತೆಗೂಡಿದರು. ಪ್ರತಿಭಟನೆ ಮಧ್ಯದಲ್ಲೇ ಧ್ವನಿಮತದ ಮೂಲಕ ನಿರ್ಣಯವನ್ನು ಅಂಗೀಕರಿಸಲಾಯಿತು. ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ ಶುಕ್ರವಾರ ರಾಜಭವನಕ್ಕೆ ಪಾದಯಾತ್ರೆ ನಡೆಸುವುದಾಗಿ ಬಿಜೆಪಿ ಹೇಳಿದೆ.

ಇನ್ನೊಂದು ಸುದ್ದಿ 6

ಲಂಚ ಆರೋಪ: ಸಿ.ಎಂ ವಿರುದ್ಧ ಮರುತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ವಿವೇಕ್ ಹೋಟೆಲ್ ವ್ಯವಸ್ಥಾಪಕ ನಿರ್ದೇಶಕ ಎಲ್. ವಿವೇಕಾನಂದ ಅಲಿಯಾಸ್ ಕಿಂಗ್ಸ್ ಕೋರ್ಟ್ ವಿವೇಕ್ ಅವರಿಂದ ಕೋಟ್ಯಂತರ ರೂಪಾಯಿ ಲಂಚ ಪಡೆದು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್‌ನ (ಬಿಟಿಸಿಎಲ್) ಸ್ಟೀವರ್ಡ್ ಆಗಿ ನೇಮಕ ಮಾಡಿದ್ದಾರೆ' ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

'ಬಿ' ರಿಪೋರ್ಟ್ ಸಲ್ಲಿಕೆಯನ್ನು ಆಕ್ಷೇಪಿಸಿ, ದೂರುದಾರರೂ ಆದ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪುರಸ್ಕರಿಸಿದ್ದಾರೆ.

7ನೇ ಪುಟ ನೋಡಿ

ತಪ್ಪಾಗಿ ಘೋಷಿಸಿಕೊಂಡಿದ್ದ ಆಸ್ತಿ ತೆರಿಗೆ: ಮಾಲೀಕರಿಗೆ ಬಿಬಿಎಂಪಿ ಅವಕಾಶ

‘ಒಂದು ಬಾರಿ ತೀರುವಳಿ’ ಯೋಜನೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಆಸ್ತಿ ತೆರಿಗೆ ತಪ್ಪಾಗಿ ಘೋಷಿಸಿಕೊಂಡಿರುವ ಮಾಲೀಕರಿಗಾಗಿ ‘ಒಂದು ಬಾರಿ ತೀರುವಳಿ’ (ಒಟಿಎಸ್) ಯೋಜನೆಯನ್ನು ಬಿಬಿಎಂಪಿ ಜಾರಿಗೆ ತಂದಿದೆ.

ಈ ಬಗ್ಗೆ ಗುರುವಾರ ಅಧಿಸೂಚನೆ ಹೊರಡಿಸಲಾಗಿದ್ದು, ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ತಪ್ಪಾಗಿ ಆಸ್ತಿ ಘೋಷಿಸಿಕೊಂಡ, ವಸತಿ ವರ್ಗ-3ರ ಅಡಿಯಲ್ಲಿ ಸ್ವಂತ ಉಪಯೋಗದ 1000 ಚದರ ಅಡಿಗಿಂತ ಹೆಚ್ಚಿಲ್ಲದ, ನೆಲ ಮಹಡಿಯನ್ನಷ್ಟೇ ಹೊಂದಿರುವ ಆರ್‌ಸಿಸಿ ಇಲ್ಲದ ವಸತಿ ಆಸ್ತಿಗಳಿಗೆ ವಂಚಿಸಿದ ತೆರಿಗೆ ಮೇಲೆ ಶೇ 25ರಷ್ಟು ದಂಡ ವಿಧಿಸಲಾಗಿದೆ.

ಗುಡಿಸಲು, ಬಡವರಿಗಾಗಿ ಸರ್ಕಾರಿ ವಸತಿ ಸೌಲಭ್ಯ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಥವಾ ಬಿಬಿಎಂಪಿಯಿಂದ ಕೊಳೆಗೇರಿ ಎಂದು ಘೋಷಿಸಿದ ವಸತಿ ಆಸ್ತಿಗಳು ಸ್ವಂತ ಉಪಯೋಗದಲ್ಲಿ 300 ಚದರ ಅಡಿಗಿಂತ ಕಡಿಮೆಯಿದ್ದರೆ ಅವುಗಳಿಗೆ ಯಾವುದೇ ದಂಡ ಅನ್ವಯಿಸುವುದಿಲ್ಲ.

ವಂಚಿಸಿದ ತೆರಿಗೆ ಮೇಲಿನ ಬಡ್ಡಿ, ಆಸ್ತಿ ತೆರಿಗೆ ನಿಗದಿಯಾದ, ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಸ್ವತ್ತುಗಳಿಗೆ ವಿಧಿಸುವ ಬಡ್ಡಿಯಲ್ಲಿ ವಿನಾಯಿತಿ ನೀಡಲಾಗಿದೆ.

ಬಿಬಿಎಂಪಿ ದಾಖಲೆಗಳಲ್ಲಿ ಒಂದೇ ಆಸ್ತಿ ಗುರುತಿನ ಸಂಖ್ಯೆಯಲ್ಲಿ ಭಾಗಶಃ ವಸತಿ ಮತ್ತು ಭಾಗಶಃ ವಸತಿಯೇತರ ಉದ್ದೇಶಕ್ಕೆ ಬಳಸುತ್ತಿರುವ ಆಸ್ತಿಗಳಿಗೆ ಬಾಕಿ ವಸೂಲಾತಿ, ಪಾವತಿಸಬೇಕಾದ ಬಡ್ಡಿ ಅಥವಾ ಅದರ ಮೇಲಿನ ಬಡ್ಡಿಯನ್ನು ಗರಿಷ್ಠ ಐದು ವರ್ಷಕ್ಕೆ ಮಿತಿಗೊಳಿಸಲಾಗಿದೆ.

ಆಸ್ತಿ ತೆರಿಗೆ ವಂಚನೆ ಪ್ರಕರಣ ಅಥವಾ ಆಸ್ತಿ ತೆರಿಗೆ ಬಾಕಿ ಇರುವ ಸ್ವತ್ತುಗಳಿಗೆ ಈಗಾಗಲೇ ನೀಡಿರುವ ಬೇಡಿಕೆಗೆ ಪೂರ್ಣ ತೆರಿಗೆ ಪಾವತಿ ಮಾಡದ ಪ್ರಕರಣಗಳಿಗೂ ಈ ಆದೇಶ ಅನ್ವಯವಾಗುತ್ತದೆ. ‘ಒಂದು ಬಾರಿ ತೀರುವಳಿ’ (ಒಟಿಎಸ್) ಯೋಜನೆ ತಕ್ಷಣದಿಂದ ಜಾರಿಯಾಗಿದ್ದು, ಜುಲೈ 31ರೊಳಗೆ ಎಲ್ಲ ಬಾಕಿಯನ್ನು ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆರೋಗ್ಯಕ್ಕೆ ‘ರಾಗಿ ಮಾಲ್ಟ್’

ಶಾಲಾ ಮಕ್ಕಳಿಗೆ ವಿತರಣಾ ಕಾರ್ಯಕ್ಕೆ ಚಾಲನೆ ನೀಡಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ವಿಧಾನಸೌಧದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಲಾ ವಿದ್ಯಾರ್ಥಿಗಳಿಗೆ ರಾಗಿ ಮಾಲ್ಟ್ ವಿತರಿಸಿದರು. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಂಸ್ಥಾಪಕ ಮಧುಸೂದನ ಸಾಯಿ ಭಾಗವಹಿಸಿದ್ದರು

ಬೆಂಗಳೂರು: ಕ್ಷೀರಭಾಗ್ಯ ಯೋಜನೆ ಜಾರಿಯಿಂದಾಗಿ ರಾಜ್ಯದ ಶಾಲಾ ಮಕ್ಕಳ ಆರೋಗ್ಯ ವೃದ್ಧಿಸಿದೆ. ಜತೆಗೆ, ಹಾಲು ಉತ್ಪಾದಕರು, ಒಕ್ಕೂಟಗಳಿಗೂ ನೆರವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಮಕ್ಕಳಿಗೆ ಹಮ್ಮಿಕೊಂಡಿದ್ದ ಪೌಷ್ಟಿಕಾಂಶ ಯುಕ್ತ ‘ಸಾಯಿಶೂರ್ ರಾಗಿ ಮಾಲ್ಟ್ ಪೌಡರ್’ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯದ ಮಕ್ಕಳು ರಕ್ತಹೀನತೆಯಿಂದ ಸಂಪೂರ್ಣ ಮುಕ್ತರಾಗಬೇಕು. ಅದಕ್ಕಾಗಿ ಶಾಲೆಯಲ್ಲಿ ಹಾಲು, ಮೊಟ್ಟೆ, ಚಿಕ್ಕಿ, ಬಾಳೆಹಣ್ಣು ನೀಡಲಾಗುತ್ತಿದೆ. ಈಗ ಹಾಲಿನ ಜತೆಗೆ ರಾಗಿ ಮಾಲ್ಟ್ ಸಿಗಲಿದೆ. ಆರೋಗ್ಯವಂತರಾಗುವ ಮಕ್ಕಳು ಓದಿನ ಕಡೆ ಹೆಚ್ಚಿನ ಗಮನಹರಿಸಲು ಇದು ಸಹಕಾರಿಯಾಗಲಿದೆ ಎಂದರು.

ಶಿಕ್ಷಣವಿದ್ದರೆ ಮಾತ್ರ ಸ್ವಾಭಿಮಾನದ ಬದುಕು ಸಾಧ್ಯ. ಶಿಕ್ಷಣದ ಮೂಲಕ ವೈಚಾರಿಕತೆ ಬೆಳೆಸಿಕೊಳ್ಳಬೇಕು. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಬೇಕು. ಆಗ ಮಾತ್ರ ಪಡೆದ ಶಿಕ್ಷಣ ಸಾರ್ಥಕವಾಗುತ್ತದೆ. ದೇವರ ಪೂಜೆ ಮಾಡುವುದು ತಪ್ಪಲ್ಲ. ಆದರೆ, ಮೌಢ್ಯ, ಕಂದಾಚಾರಗಳ ಪಾಲನೆ ತಪ್ಪು. ಉನ್ನತ ಶಿಕ್ಷಣ ಪಡೆದವರು, ವೈದ್ಯರು, ಎಂಜಿನಿಯರ್‌ಗಳೂ ಇಂದು ಮೌಢ್ಯ ಅನುಸರಿಸುತ್ತಿದ್ದಾರೆ. ಅಂಥವರು ಬಸವಾದಿ ಶರಣರ ಸಾಹಿತ್ಯ ಓದಬೇಕು ಎಂದು ಸಲಹೆ ನೀಡಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ಶಾಲಾ ಮಕ್ಕಳಿಗೆ ವಾರದಲ್ಲಿ ಮೂರು ದಿನ ರಾಗಿ ಮಾಲ್ಟ್ ನೀಡಲಾಗುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶಿಕ್ಷಣ ಕ್ಷೇತ್ರಕ್ಕೆ ₹7 ಸಾವಿರ ಕೋಟಿಗೂ ಹೆಚ್ಚು ಅನುದಾನ ದೊರೆತಿದೆ ಎಂದರು.

ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಂಸ್ಥಾಪಕ ಮಧುಸೂದನ ಸಾಯಿ, ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಉಪಸ್ಥಿತರಿದ್ದರು.

‘ಬಿಜೆಪಿ –ಎನ್‌ಡಿಎ ಮೈತ್ರಿಕೂಟವನ್ನು ಸೋಲಿಸಿ’

ಬಳ್ಳಾರಿ: ‘ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿದಂತೆ, 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ-ಎನ್‌ಡಿಎ ಮೈತ್ರಿಕೂಟವನ್ನು ಸೋಲಿಸಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್ ಹಿರೇಮಠ ಹೇಳಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರದಲ್ಲಿನ ಬಿಜೆಪಿ ಸರ್ಕಾರವು ಸಾಮಾಜಿಕ ಸೌಹಾರ್ದತೆಗೆ ಅಪಾಯಕಾರಿಯಾಗಿದೆ’ ಎಂದರು.

‘ಬಿಜೆಪಿ, ಆರ್‌ಎಸ್‌ಎಸ್ ಮತ್ತು ಎನ್‌ಡಿಎ ಕ್ರಮಗಳು ಅಪಾಯಕಾರಿ. ಅವು ಸಮಾಜಕ್ಕೆ ವಿಷವಿಕ್ಕುವ ಕೆಲಸ ಮಾಡುತ್ತಿವೆ. ರಾಜ್ಯದಲ್ಲಿ ಕನಿಷ್ಠ 20 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲಬೇಕು’ ಎಂದರು.

ವಕ್ಕಲೇರಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ವಕ್ಕಲೇರಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ

ಸಂಖ್ಯೆ:ವಗ್ರಾಪಂ/ಅಂ.ಮ.ಹ/02/2023–24 ದಿನಾಂಕ:17.02.2024

ಅಂಗಡಿ ಮಳಿಗೆಗಳ ಬಾಡಿಗೆ ಬಹಿರಂಗ ಮರು ಹರಾಜು ಪ್ರಕಟಣೆ

ವಕ್ಕಲೇರಿ ಗ್ರಾಮ ಪಂಚಾಯಿತಿಗೆ ಸೇರಿದ ಸಂಖ್ಯೆ 01, 02, 03, 04, 13 ಮತ್ತು 14 ಅಂಗಡಿ ಮಳಿಗೆಗಳನ್ನು ಮಾಸಿಕವಾಗಿ ಬಾಡಿಗೆ ನೀಡಲು **ದಿನಾಂಕ: 28.02.2024 ರಿಂದ 27.02.2027 ರವರೆಗೆ** ಅಂದರೆ ಮೂರು ವರ್ಷಗಳ ಅವಧಿಗೆ ಕನಿಷ್ಠ ಮಾಸಿಕ ಬಾಡಿಗೆ ನಿಗಧಿಪಡಿಸಿ, ಮುಂಗಡ ಠೇವಣಿ ಮೊತ್ತಕ್ಕೆ ಬಿಡ್ ಮೂಲಕ ಸಾರ್ವಜನಿಕ ಬಹಿರಂಗ ಹರಾಜು ಮಾಡಲು ತೀರ್ಮಾನಿಸಿದ್ದು, ಆಸಕ್ತರು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಬಾಡಿಗೆ ಹಕ್ಕನ್ನು ಪಡೆಯಲು ಕೋರಿದೆ. **(1) ಹರಾಜು ದಿನಾಂಕ ಮತ್ತು ಸ್ಥಳ: ದಿ: 28.02.2024 ಬುಧವಾರ ಬೆಳಿಗ್ಗೆ 11.00 ಗೆ** ವಕ್ಕಲೇರಿ ಗ್ರಾ.ಪಂ. ಕಛೇರಿ ಆವರಣ, ವಕ್ಕಲೇರಿ. **(2) ಹರಾಜು ಪ್ರವೇಶ ಠೇವಣಿ ಮೊತ್ತ: ರೂ.50,000/– (ಇತರೆ ವರ್ಗ), ರೂ. 20,000/– (ಪ.ಜಾ.,ಪ.ಪಂ.,ವಿಕಲಾಂಗ).** ಹೆಚ್ಚಿನ ವಿವರಗಳಿಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಅಧ್ಯಕ್ಷರು, ಉಪಾಧ್ಯಕ್ಷರು, ಪಂ.ಅ.ಅಧಿಕಾರಿ, ವಕ್ಕಲೇರಿ ಗ್ರಾ.ಪಂ. ಕೋಲಾರ ತಾ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:371/ಕೆಎಸ್‌ಎಂಸಿಎ/2023–24

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ–561203.

ಸಂಖ್ಯೆ: ಬಾಪಪಂ/ತಾಂ.ಶಾ/ಟೆ.ಪ್ರ/09/2023–24 ದಿನಾಂಕ: 21–02–2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರಿಂದ 2023–24ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು ಪಟ್ಟಣ ಪಂಚಾಯಿತಿ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳಿಗೆ, ವಾಹನ ಸರಬರಾಜು ಹಾಗೂ ಸೇವೆಗೆ ಅರ್ಹ ಗುತ್ತಿಗೆದಾರರಿಂದ **ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ **ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಟಿ.ಪಿ.ಪಿ** ನಿಯಮಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ಯಾಕೇಜ್ ಸಂ.	ಕೆಲಸದ ವಿವರ
1	DMA/2023-24/RD/WORK_INDENT6973/CALL-2
2	DMA/2023-24/OW/WORK_INDENT6974/CALL-2
3	DMA/2023-24/WS/WORK_INDENT2450/CALL-4
4	DMA/2023-24/WS/WORK_INDENT13596
5	DMA/2023-24/WS/WORK_INDENT13602
6	DMA/2023-24/IND1245
7	DMA/2023-24/SE1608/CALL-3

ಟೆಂಡರ್ ದಾಖಲೆಗಳನ್ನು ಪಡೆದು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮುಖಾಂತರ ಕಾಮಗಾರಿ ಮಾಡಲು, ವಾಹನ ಸರಬರಾಜು ಮಾಡಲು ಹಾಗೂ ಸೇವೆ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೊತ್ತ ಕನಿಷ್ಠ 2.50 ಲಕ್ಷದಿಂದ ಗರಿಷ್ಠ 37.20 ಲಕ್ಷಗಳಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **06–03–2024 ರ 17.00 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ: **07–03–2024 ರಂದು 17.15 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ | ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ವಾಸಾಸಂಇ/ವಾಪ್ರಾ/3822/ಸ್ಕ್ಯಾನ್/23–24

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಚಿಕ್ಕಬಳ್ಳಾಪುರ

ಜಿ.ಬಿ.–5, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ. Email ID: dhochikballapur@gmail.com. Phone & Fax:08156-277177/277040

ಸಂಖ್ಯೆ:ಆರ್.ಸಿ.ಹೆಚ್.ಒ/ಆರ್.ಬಿ.ಎಸ್.ಕೆ/ಟೆಂಡರ್/115/2023–24 ದಿನಾಂಕ:17.02.2024

ಇ–ಟೆಂಡರ್ ಅಧಿಸೂಚನೆ

ವಿಷಯ: 2024–25 & 2025–26ನೇ ಸಾಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಅವಶ್ಯಕತೆ ಇರುವ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 4 ಚಕ್ರದ ಚಾಲಕ ಸಹಿತ 17 ವಾಹನಗಳನ್ನು ಹೊರಸಂಪನ್ಮೂಲದಿಂದ ಪಡೆಯುವ ಬಗ್ಗೆ.

ಉಲ್ಲೇಖ: (1) 2024–25 ಮತ್ತು 2025–26 ನೇ ಸಾಲಿಗೆ ಮಾನ್ಯ ಅಪರ ನಿರ್ದೇಶಕರು ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರು ರವರ ಪತ್ರದ ಸಂಖ್ಯೆ: **NHM/SPM/09/2023-24,** ದಿನಾಂಕ: 23.08.2023.

(2) ದಿನಾಂಕ: 05.02.2024 ರಂದು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ನಡೆದ 76ನೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಅನುಮೋದನೆಯಂತೆ.

(3) ಉಪ ನಿರ್ದೇಶಕರು, ಆರ್.ಬಿ.ಎಸ್.ಕೆ ರವರ ಮಾರ್ಗಸೂಚಿ ಪತ್ರದ ಸಂಖ್ಯೆ:**NHM/RBSK/11/2022-23, Dated: 26.07.2022.**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನುಸಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಅವಶ್ಯಕತೆ ಇರುವ ರಾಷ್ಟ್ರೀಯ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ 4 ಚಾಲಕ ಸಹಿತ 17 ವಾಹನಗಳನ್ನು ಹೊರಸಂಪನ್ಮೂಲದಿಂದ ಪಡೆಯುವ ಸಲುವಾಗಿ ಇ–ಟೆಂಡರ್ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಪತ್ರಗಳನ್ನು ಸಿದ್ಧಪಡಿಸಿದ್ದು, ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ. **ವಿವರ:** (1) ಟೆಂಡರ್ ಪ್ರಕಟಣೆಯ **ದಿನಾಂಕ: 17.02.2024.** (2) ಇ.ಎಂ.ಡಿ ಮೊತ್ತ **ರೂ. 1,50,000/–** + ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ. (3) ಟೆಂಡರ್ ಪ್ರಾರಂಭದ ದಿನಾಂಕ (Web Portal): **17.02.2024.** (4) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ: **ದಿನಾಂಕ: 02.03.2024ರಂದು ಸಂಜೆ: 5.00 ಘಂಟೆಗೆ.** (5) ಟೆಂಡರ್‌ದಾರರ ಪ್ರೀ ಬಿಡ್ ಸಭೆಯ **ದಿನಾಂಕ: ದಿನಾಂಕ: 26.02.2024, 4.00 PM.** (6) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **ದಿನಾಂಕ: 04.03.2024 ರಂದು ಸಂಜೆ: 5.00 ಘಂಟೆಗೆ.** (7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 07.03.2024, ಸಂಜೆ: 5.00 ಘಂಟೆಗೆ.** ಹೆಚ್ಚಿನ ವಿವರಗಳನ್ನು **https://kppp.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:281/ಕೆಎಸ್‌ಎಂಸಿಎ/2023–24

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)

ಯೂನಿಟ್ ನಂ.702–ಬಿ, 7ನೇ ಮಹಡಿ, ಕನ್ನೆಕ್ಟಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೀರಿ ಗೇಟ್, ನವದೆಹಲಿ–110002 ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ

(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2024/ಆರ್‌ಎಫ್‌ಪಿ/ಸಿಡಿ–ಸಿಆರ್‌ಡಿ/15 ದಿನಾಂಕ: 19–02–2024)

ನೈರುತ್ಯ ರೈಲ್ವೆಯ ಬೆಂಗಳೂರು ಡಿವಿಜನ್‌ನಲ್ಲಿನ ಯಶವಂತಪುರ ರೈಲ್ವೆ ಕಾಲೋನಿಯಲ್ಲಿರುವ ರೈಲ್ವೆಯ ಕಾಲೋನಿಯ ಪುನರಾಭಿವೃದ್ಧಿಗಾಗಿ, 99 ವರ್ಷಗಳ ಅವಧಿಗೆ ವಸತಿ ಅಭಿವೃದ್ಧಿಗಾಗಿ 34,517 ಚ.ಮೀ. (ಅಂದಾಜು) ರೈಲ್ವೆ ಜಮೀನು ಭೋಗ್ಯ ಮತ್ತು 15,446 ಚ.ಮೀ. (ಅಂದಾಜು) ಲೈಸನ್ಸ್ ಮಂಜೂರಾತಿ.

ನಿವೇಶನದ ವಿವರ	ನಿವೇಶನದ ಅಂದಾಜು ವಿಸ್ತೀರ್ಣ	ರೆಫರೆನ್ಸ್ ಬಿಲ್ಟಪ್ ಏರಿಯಾ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ಯಶವಂತಪುರ ರೈಲ್ವೆ ಕಾಲೋನಿ, ಬೆಂಗಳೂರು, ಕರ್ನಾಟಕ	34,517 ಚ.ಮೀ.	7,05,917 ಚ.ಅ.	ರೂ. 1.36 ಕೋಟಿ	ರೂ. 120.00 ಕೋಟಿ

ಬಿಡ್‌ಪೂರ್ವ ಆನ್‌ಲೈನ್ ಮತ್ತು ಆಫ್‌ಲೈನ್ ಸಭೆ: 05ನೇ ಮಾರ್ಚ್, 2024 ರಂದು 11:30 ಗಂಟೆ.
(ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಜಾಯಿಂಟ್ ಜನರಲ್ ಮ್ಯಾನೇಜರ್/ಪಿ/ಎಸ್‌ಬಿಸಿ ಇವರಿಂದ ಪಡೆದುಕೊಳ್ಳುವುದು)
ಆನ್‌ಲೈನ್‌ನಲ್ಲಿ ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 08.04.2024 ರಂದು 15:00 ಗಂಟೆವರೆಗೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ ‘ಇ–ಟೆಂಡರ್’ ಶೀರ್ಷಿಕೆಯನ್ನು ಪರಿಶೀಲಿಸಿರಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:–

ಜಾ. ಜನರಲ್ ಮ್ಯಾನೇಜರ್ /ಪಿ/ಎಸ್‌ಬಿಸಿ ಮೊ: 9959187887 jgmpsbc@rlda.railnet.gov.in	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ ಎಸ್‌ಬಿಸಿ ಮೊ: 9361591387 cpmbangalore@rlda.railnet.gov.in	ಕನ್ಸಲ್ಟಂಟ್/ ಆರ್‌ಎಲ್‌ಡಿಎ ಶ್ರೀ ಕರಣ್ ಶರ್ಮಾ ಮೊ: 9999690805 karan.sharma@anarock.com	ಇ–ಬಿಡ್ ವಿಚಾರಣೆಗಾಗಿ ಶ್ರೀ ಸೂರಜ್ ಸಿಂಗ್ ಮೊ: 9599653865 suraj@etenderwizard.com

ಸೂಚನೆ:– ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಅಸಿಸ್ಟಂಟ್ ಮ್ಯಾನೇಜರ್/ಟೆಂಡರ್, (ಮೊ) 87505 54811

PUBLIC NOTICE

Our client ('**Client**') is desirous of entering into certain transaction in connection with the immovable property morefully described in the '**Schedule**' hereto and hereinafter referred to as '**Schedule Property**' with (i) Mr. C. Krishna Prasad, son of Late C. Krishnaswamy Naidu; (ii) Mr. C. Krishna Jeet, son of Mr. C. Krishna Prasad; (iii) Ms. Priyale K. Prasad, daughter of Mr. C. Krishna Prasad; and (iv) Mr. C. Krishna Kumar, son of Late C. Krishnaswamy Naidu, residing at Bengaluru ('**Owners**'). The Owners have represented to our Client that they are the joint and absolute owners of the Schedule Property, with unrestricted rights of alienation over the same.

Notice is hereby given to the general public that any person/s other than the Owners, asserting any right, title, charge, lien, claim/s or any interest whatsoever in respect of the Schedule Property are hereby called upon to submit to the undersigned, their claim/s, if any, over the Schedule Property or their objections, if any, to the aforementioned transaction. The said claim/s or objections must be in writing, together with documentary proof of such claim/s or objections, so as to reach us at the address given below within a period of **15 (Fifteen) days** from the date of publication of this Notice. If no such claim/s or objections are received, it shall be deemed that no one else other than the Owners has/ have any right, title, interest or claim/s in respect of the Schedule Property and our Client would be at liberty to proceed with the said transaction in connection with the Schedule Property.

SCHEDULE

(Description of the Schedule Property)

All that piece and parcel of undeveloped immovable property bearing Premises No. 6 (Old Nos. 2 & 2/1) having PID No. 27-24-6, measuring 24,000 Square Feet (approximately), situated at Srinivasa Mandiram Road, Balepet, Bengaluru – 560002 and bounded on the:

East by : Private Property;
West by : Srinivasa Mandiram Road;
North by : No. 16, Kempe Gowda Road; and
South by : Krishnappa Naike Lane.

Sd/-
Ms. Brijita Prakash, Partner
DSK Legal
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025, Tel: 080-69548770.

Place : Bangalore,
Date : 23-02-2024

ಜಿಗಣಿ ಪುರಸಭಾ ಕಾರ್ಯಾಲಯ

ಜಿಗಣಿ ಹೋಬಳಿ, ಜಿಗಣಿ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 105

ದೂರವಾಣಿ ಸಂಖ್ಯೆ : 080-29760400, Email :- itstaff_ulb_jigani@yahoo.com, jiganideo@gmail.com

ಕ್ರ.ಸಂ.ಜಿ.ಪು.ಕಾ/ತಾಂ.ಶಾ/ಜೆ.ಇ/ಕೆಪಿಪಿಪಿ/ಟೆಂಡರ್/09/2023–24 ದಿನಾಂಕ: 22.02.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ, ಪುರಸಭೆ, ಜಿಗಣಿ ಬೆಂಗಳೂರು ನಗರ ಜಿಲ್ಲೆ, ಇವರಿಂದ 2023–24ನೇ ಸಾಲಿನ ಪುರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಕೆ.ಪಿ.–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಇಂಡೆಂಟ್ ನಂ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ರೂ.ಗಳಲ್ಲಿ
01	DMA/2023-24/WS/WORK_INDENT15744	170.00/–	2,55,000/–

1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in**ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. 2) ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **11.03.2024**ರಂದು ಸಂಜೆ 4.30 ಗಂಟೆಯವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12.03.2024**ರಂದು ಸಂಜೆ 5.00 ಗಂಟೆಗೆ ನಿಗದಿಪಡಿಸಲಾಗಿರುತ್ತದೆ. 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 22.03.2024 ರಂದು ಬೆಳಿಗ್ಗೆ 11.00 ಗಂಟೆಗೆ. 5) ಹೆಚ್ಚಿನ ವಿವರಗಳನ್ನು ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಿಂದ ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆ.ಪಿ.–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/– ಮಾನ್ಯ ಆಡಳಿತಾಧಿಕಾರಿಗಳು ಪುರಸಭೆ, ಜಿಗಣಿ ಹಾಗೂ ಉಪವಿಭಾಗಧಿಕಾರಿಗಳು ಬೆಂಗಳೂರು ದಕ್ಷಿಣ ವಿಭಾಗ | ಸಹಿ/– ಮುಖ್ಯಾಧಿಕಾರಿ ಪುರಸಭೆ ಜಿಗಣಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ&ಕ್ಯೂಸಿ) ವಿಭಾಗ, ಪೂರ್ವ ವಲಯ, ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು– 560 002.

ಸಂಖ್ಯೆ:ಕಾಪಾಅ(ಕ್ಯೂಎ&ಕ್ಯೂಸಿ)/ಪೂರ್ವ/ಟೆಂಡರ್/11/2023–24 ದಿನಾಂಕ:22.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ಪೂರ್ವ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ), ಇವರು ಈ ಕೆಳಕಂಡ ಕಾಮಗಾರಿಗಳಿಗೆ ತದ್ರೂಪಿ ಕೆಲಸಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿ/ಸಂಸ್ಥೆಗಳಿಂದ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸಲು ಪ್ರಸ್ತಾವನೆ ಕೋರಿಕೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಬೃ.ಬೆಂ.ಮ.ಪಾಲಿಕೆ ಪೂರ್ವ ವಲಯ ವ್ಯಾಪ್ತಿಯಲ್ಲಿ ಎಸ್ಕ್ರೋ ಅನುದಾನಗಳಡಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಹಾಗೂ 13 ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸುವುದು ಪ್ಯಾಕೇಜ್–01 **ಇಎಂಡಿ ಮೊತ್ತ: ₹.3,45,000/–**
2	ಬೃ.ಬೆಂ.ಮ.ಪಾಲಿಕೆ ಪೂರ್ವ ವಲಯ ವ್ಯಾಪ್ತಿಯಲ್ಲಿ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಹಾಗೂ 11 ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸುವುದು. ಪ್ಯಾಕೇಜ್–02 **ಇಎಂಡಿ ಮೊತ್ತ: ₹.2,00,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **23.02.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ **27.02.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **02.03.2024**ರ ಸಂಜೆ **4:30** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **04.03.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ&ಕ್ಯೂಸಿ) ವಿಭಾಗ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No. : ಕಹಾಮ/ಅಭಿ/NMP-Nitrogen Gas Plant /1822/2023-24 ದಿನಾಂಕ: 22–02–2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ನಂದಿನಿ ಹಾಲು ಉತ್ಪನ್ನ ಘಟಕಕ್ಕೆ ಸಾರಜನಿಕ ಅನಿಲ ಘಟಕದ ವಿನ್ಯಾಸ, ತಯಾರಿಕೆ, ಸರಬರಾಜು, ಚಾಲನೆಗೊಳಿಸುವ ಹಾಗೂ ಸಂಬಂಧಿಸಿದ ಕೆಲಸಗಳು.	1 ಜಾಬ್	50,000/–	3 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 23–02–2024 ರಿಂದ 01–03–2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–03–2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 02–03–2024 ರಂದು ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

ಪ್ರಜಾವಾಣಿ | DH DECCAN HERALD

ಫೆಬ್ರುವರಿ 24 & 25

ಕ್ಯಾನ್ಸರ್ ವಿರುದ್ಧ ಜಾಗೃತಿ ಅಭಿಯಾನ

ಎಲ್ಲರೂ ಬನ್ನಿ. ಸುರಕ್ಷಿತವಾಗಿ ಇರಿ

ಕ್ಯಾನ್ಸರ್ ವಿರುದ್ಧ ಜಾಗೃತಿ ಅಭಿಯಾನ

ಫ್ಯಾಷನ್ ಮತ್ತು ಉಡುಪು | ಕಲೆ ಮತ್ತು ಕರಕುಶಲ | ಯೋಗ ಕ್ಷೇಮ | ಆರೋಗ್ಯಕರ ಆಹಾರ

ಕುಟುಂಬ ಮತ್ತು ಸ್ನೇಹಿತರೊಂದಿಗೆ ಭೇಟಿ ನೀಡಲೇಬೇಕಾದ ಎಕ್ಸ್ಪೋ!

ಮೆಟ್ರೊ ಬೌಲೆವಾರ್ಡ್, ಎಂ ಜಿ ರಸ್ತೆ
ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ

Aster International Institute of Oncology | CYTECARE HOSPITALS | Fortis Bannerghatta Road | Indian Cancer Society | Mannheim | ನಮ್ಮ ಮೆಟ್ರೋ namma metro | Narayana Health | NPHCE | Palliative Care

ಹನುಮೇಶ್ ಸೇರಿ ಮೂವರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಲುಕೋಟೆಯ ಯದುಗಿರಿ ಯತಿರಾಜ ಶಾಖಾ ಮಠ ನೀಡುವ 'ಶ್ರೀ ರಾಮಾನುಜಾಚಾರ್ಯ ಸದ್ಭಾವನಾ ಪ್ರಶಸ್ತಿ'ಗೆ ಪತ್ರಕರ್ತ ಹನುಮೇಶ್ ಕೆ. ಯಾವಗಲ್ ಸೇರಿ ಮೂವರು ಆಯ್ಕೆಯಾಗಿದ್ದಾರೆ.

ಆಧ್ಯಾತ್ಮಿಕ ಹಾಗೂ ಜೀವನ ಕಲೆಯ ಶಿಕ್ಷಣದ ಮೂಲಕ ಸಾಮಾಜಿಕ ಮೌಲ್ಯಗಳನ್ನು ಸಂರಕ್ಷಣೆ ಮಾಡುತ್ತಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಟ್ರಸ್ಟಿ ರಂಗನಾಥ್ ಪ್ರಸಾದ್ ಮತ್ತು ಶಿಕ್ಷಣ, ಸಮಾಜ ಸೇವೆ ಹಾಗೂ ಉದ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಧರ್ ಐಯ್ಯಂಗಾರ್ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇದೇ ಶನಿವಾರ ಮಲ್ಲೇಶ್ವರದಲ್ಲಿರುವ ಯದುಗಿರಿ ಯತಿರಾಜ ಶಾಖಾ ಮಠದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ವಧು-ವರ ಸಮಾವೇಶ ಹಾಗೂ ಶ್ರೀನಿವಾಸ ಕಲ್ಯಾಣೋತ್ಸವವನ್ನೂ ಅದೇ ದಿನ ನಡೆಸಲಾಗುವುದು ಎಂದು ಸಪ್ತಪದಿ ಫೌಂಡೇಷನ್ ಮುಖ್ಯಸ್ಥ ಶ್ರೀನಿವಾಸ ಭಾರದ್ವಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಾ ಭೂಮಿ ಪಡೆದು ಅರಣ್ಯ ವಿಸ್ತರಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ– ವನ್ಯಜೀವಿ ಸಂಘರ್ಷದ ಕಾರಣ ಕೃಷಿ ಮಾಡಲು ಸಾಧ್ಯವಾಗದೇ ಇರುವ ಅಥವಾ ವನ್ಯಜೀವಿ ಕಾರಿಡಾರ್ ವ್ಯಾಪ್ತಿಯಲ್ಲಿನ ಖಾಸಗಿ ಜಮೀನನ್ನು ರೈತರು ಸ್ವ ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟುಕೊಡಲು ಮುಂದೆ ಬಂದರೆ ಅಂತಹ ಜಮೀನುಗಳನ್ನು ಸ್ವಾಧೀನಕ್ಕೆ ಪಡೆಯಲು ರಚಿಸಲಾಗಿರುವ ಮಾರ್ಗಸೂಚಿಗಳಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅರಣ್ಯ ವ್ಯಾಪ್ತಿ ಹೆಚ್ಚಿಸಲು ಮತ್ತು ರೈತರ ಬೆಳೆ ಮತ್ತು ಜೀವ ಉಳಿಸಲು ಅರಣ್ಯ ಪ್ರದೇಶಗಳನ್ನು ಒಗ್ಗೂಡಿಸಿ ವನ್ಯಜೀವಿಗಳ ಸುಗಮ ಓಡಾಟಕ್ಕೆ ಅನುವು ಮಾಡಿಕೊಡುವ ಪ್ರಸ್ತಾವವನ್ನು ಅರಣ್ಯ ಇಲಾಖೆ ಸಂಪುಟದ ಮುಂದೆ ತಂದಿತ್ತು.

ಅರಣ್ಯ ಪ್ರದೇಶಗಳ ಮಧ್ಯದಲ್ಲಿ, ಅಂಚಿನಲ್ಲಿ ಮತ್ತು ಕಾರಿಡಾರ್ ಪ್ರದೇಶಗಳಲ್ಲಿ ಇರುವ ಆದಿವಾಸಿಗಳು, ಪಟ್ಟಾ ಭೂಮಿ ಹೊಂದಿರುವರು, ರೈತರು ಸ್ವಯಂ ಪ್ರೇರಣೆಯಿಂದ ತಮ್ಮ ಜಮೀನನ್ನು ಅರಣ್ಯ ಇಲಾಖೆಗೆ ನೀಡಲು ಮುಂದೆ ಬಂದರೆ ಆ ಭೂಮಿಯನ್ನು ಯಾವ ದರದಲ್ಲಿ ನೀಡಿ ಪಡೆಯಬೇಕು ಎಂಬ ಬಗ್ಗೆ ಮಾರ್ಗಸೂಚಿ ರಚಿಸಲಾಗಿದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ 2012 ರಲ್ಲಿ ಹೊರಡಿಸಿರುವ ಕ್ರೋಡೀಕೃತ ಮಾರ್ಗಸೂಚಿ ರೀತಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವಾಸಿಸುವ ಮತ್ತು ಹೊರಬರಲು ಸಿದ್ಧವಿರುವ ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸಲು ಪ್ರತಿ ಕುಟುಂಬಕ್ಕೆ ₹15 ಲಕ್ಷ ನೀಡುವ ಕುರಿತಂತೆ ಪ್ರಸ್ತಾವಿಸಲಾಗಿದೆ.

ಅಲ್ಲದೆ, ಸಚಿವ ಸಂಪುಟ ಉಪಸಮಿತಿಯ ಶಿಫಾರಸಿನಂತೆ ಬುಕ್ಕಾಪಟ್ಟಣ ಚಿಂಕಾರ ವನ್ಯಜೀವಿಧಾಮ, ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನ, ಕಪ್ಪತಗುಡ್ಡ ವನ್ಯಜೀವಿ ಧಾಮ, ಅಣಶಿ ರಾಷ್ಟ್ರೀಯ ಉದ್ಯಾನವನ ಮತ್ತು ದಾಂಡೇಲಿ ವನ್ಯಜೀವಿಧಾಮ ಹಾಗೂ ಕಾವೇರಿ ವಿಸ್ತರಿತ ವನ್ಯಜೀವಿಧಾಮಗಳ ಸುತ್ತಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸುವ ಹೊಸ ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಸಲ್ಲಿಸಲು ಅನುಮೋದನೆ ನೀಡಿದೆ.

ಸುಪ್ರೀಂ ಕೋರ್ಟ್ ತೀರ್ಪು, ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ 2011ರ ಫೆ. 9 ರಂದು ಹೊರಡಿಸಿರುವ ಮಾರ್ಗಸೂಚಿ ಅನ್ವಯ ರೂಪಿಸಲಾಗಿದೆ. 2023ರ ಅಕ್ಟೋಬರ್ 11 ರಂದು ನಡೆದ ಸಚಿವ ಸಂಪುಟದ ಉಪಸಮಿತಿಯ ಶಿಫಾರಸಿನಂತೆ ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಪ್ರಸ್ತಾವ ಇದಾಗಿದೆ ಎಂದು ಮೂಲಗಳು ಹೇಳಿವೆ.

ಸಂಪುಟದ ಪ್ರಮುಖ ತೀರ್ಮಾನಗಳು

- ರಾಜ್ಯದ ಆರು ಕೇಂದ್ರ ಕಾರಾಗೃಹಗಳು ಮತ್ತು ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಳವಡಿಸಲಾಗಿರುವ ಮೊಬೈಲ್ ಜಾಮರ್‌ಗಳ ದುರಸ್ತಿ, ಮೇಲ್ದರ್ಜೆಗೇರಿಸುವುದು ಮತ್ತು ಮೂರು ವರ್ಷಗಳ ಕಾಲ ಸಾಮಗ್ರಿ ನಿರ್ವಹಣೆಗೆ ₹43.76 ಕೋಟಿ ನೀಡಲು ಒಪ್ಪಿಗೆ
- ಬೆಂಗಳೂರಿನಲ್ಲಿ ಹೆಲ್‌-ಟೆಕ್ ಮೆಡ್– ಟೆಕ್ ಮತ್ತು ಉತ್ಕೃಷ್ಟತಾ ಕೇಂದ್ರವನ್ನು ₹50 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಒಪ್ಪಿಗೆ
- ಕರ್ನಾಟಕ ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ ನೀತಿ 3.0 ಗೆ ಅನುಮೋದನೆ
- ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ 'ಹಬ್ ರೋಬೋಟಿಕ್ಸ್ ಮತ್ತು ಸ್ವಾಯತ್ತ ಸಿಸ್ಟಮ್ಸ್ ಇನೋವೇಷನ್ ಫೌಂಡೇಶನ್' ಮತ್ತು 'ರೋಬೋಟಿಕ್ ಟೆಕ್ನಾಲಜಿ ಪಾರ್ಕ್' ಸಹಯೋಗದೊಂದಿಗೆ ₹25 ಕೋಟಿ ವೆಚ್ಚದಲ್ಲಿ ವೈರ್ಡ್ ಮತ್ತು ವೈರ್‌ಲೆಸ್ ತಂತ್ರಜ್ಞಾನದಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೆ ಅನುಮತಿ
- ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಕುಣಿಸಂಗಾವಿ ಗ್ರಾಮದ ಹೆಸರನ್ನು ಬಸವನಸಂಗೊಳಗಿ ಗ್ರಾಮ ಎಂದು ಬದಲಾವಣೆ ಮಾಡಲು ಒಪ್ಪಿಗೆ
- ಮೈಸೂರು, ಕಲಬುರಗಿ, ಹಾವೇರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ₹972 ಕೋಟಿ ವೆಚ್ಚದಲ್ಲಿ ಜಲ್ ಜೀವನ್ ಮಿಷನ್ ಅಡಿ ಕುಡಿಯುವ ನೀರು ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ
- ಬಿಬಿಎಂಪಿಯಲ್ಲಿ ನೇರ ಪಾವತಿಯಡಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಕಾಯಂಗೊಳಿಸಲು ಸೃಜಿಸಲಾಗಿರುವ 11,307 ಸಂಖ್ಯಾತಿರಿಕ್ತ ಪೌರಕಾರ್ಮಿಕರ ಹುದ್ದೆಗಳಿಗೆ ನೇಮಕಾತಿ ಮಾಡುವ ಸಮಯದಲ್ಲಿ ಅರ್ಹ ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ, ಅರ್ಹ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಿಸಲು ಒಪ್ಪಿಗೆ.
- ರಾಜ್ಯ ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 77 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆಗೆ ಒಪ್ಪಿಗೆ

ಎಳನೀರು

ಬಿಸಿಲ ಧಗೆ ಏರುತ್ತಿದ್ದಂತೆ ಎಳನೀರಿಗೆ ಬೇಡಿಕೆ ಹೆಚ್ಚಾಗಿದೆ. ಬಸವನಗುಡಿ ರಾಮಕೃಷ್ಣ ಸರ್ಕಲ್ ಬಳಿ ಜನರು ಎಳನೀರು ಕುಡಿದು ಬಾಯಾರಿಕೆ ತೀರಿಸಿಕೊಂಡರು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ನಾಡಪ್ರಭು ಕೆಂಪೇಗೌಡ ಬಡಾವಣೆ

ಮೇಲ್ಮನವಿ ಪುರಸ್ಕರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ 12 ಗ್ರಾಮಗಳಲ್ಲಿ ಸುಮಾರು 4,043 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಬಿಡಿಎ ಮತ್ತು 140ಕ್ಕೂ ಹೆಚ್ಚು ಪ್ರತ್ಯೇಕ ಅರ್ಜಿದಾರರು ಸಲ್ಲಿಸಿದ್ದ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

'ಅಧಿಸೂಚನೆಯಲ್ಲಿ ಸ್ವಾಧೀನಕ್ಕೆ ಗುರುತಿಸಲಾಗಿದ್ದ ಜಾಗದಲ್ಲಿ ನರ್ಸರಿ ಅಭಿವೃದ್ಧಿಯಾಗಿರುವುದು ಹಾಗೂ ಕಟ್ಟಡ ನಿರ್ಮಾಣವಾಗಿರುವುದೂ ಸೇರಿದಂತೆ ಇತರೆ ಕಾರಣಗಳಿಂದ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಬೇಕು ಎಂಬ ಬಗ್ಗೆ ಯಾರದಾದರೂ ಮನವಿ ಇದ್ದರೆ, ಅಂತಹ ಭೂ ಮಾಲೀಕರು ಮೂರು ತಿಂಗಳಲ್ಲಿ ಬಿಡಿಎಗೆ ಮನವಿ ಸಲ್ಲಿಸಬೇಕು. ಅಂತಹ ಮನವಿಗಳನ್ನು ಕಾನೂನು ಪ್ರಕಾರ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸಬೇಕು' ಎಂದು ನ್ಯಾಯಪೀಠ ಬಿಡಿಎಗೆ ಆದೇಶಿಸಿದೆ.

'ಸರ್ಕಾರದಿಂದ ಪೂರ್ವಾನುಮತಿ ಪಡೆಯದೇ ಇರುವುದೂ ಸೇರಿದಂತೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ನಿಯಮಗಳ ಪಾಲನೆ ಮಾಡಿಲ್ಲ. ಭೂ ಸ್ವಾಧೀನದಲ್ಲಿ ತಾರತಮ್ಯ ನೀತಿ ಅನುಸರಿಸಲಾಗಿದೆ. ಹಾಗಾಗಿ, ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ನಡೆಸಿರುವ ಭೂ ಸ್ವಾಧೀನ ಪ್ರಕ್ರಿಯೆ ಕಾನೂನು ಬಾಹಿರವಾಗಿದೆ' ಎಂದು ಇದೇ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ತೀರ್ಮಾನಿಸಿತ್ತು. ಭೂ ಸ್ವಾಧೀನಕ್ಕೆ ಹೊರಡಿಸಿದ್ದ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಿ 2014ರ ಜುಲೈ 11ರಂದು ಆದೇಶಿಸಿತ್ತು.

ಇದೀಗ ಈ ತೀರ್ಪನ್ನು ರದ್ದುಪಡಿಸಿರುವ ವಿಭಾಗೀಯ ನ್ಯಾಯಪೀಠವು ಭೂ ಸ್ವಾಧೀನ ಅಧಿಸೂಚನೆಯನ್ನು ಪುರಸ್ಕರಿಸಿದೆ. ಬಿಡಿಎ ಪರವಾಗಿ ಹಿರಿಯ ವಕೀಲ ಗುರುದಾಸ್ ಕಣ್ಣೂರು, ಬಿ.ವಚನ್, ಮುರುಗೇಶ್ ವಿ.ಚರಾಟಿ, ಕೆ.ಕೃಷ್ಣ, ಜಿ.ಲಕ್ಷ್ಮೀಶ ರಾವ್, ಗೌತಮ ಉಲ್ಲಾಳ್ ಮತ್ತು ಅಜಯಕುಮಾರ್ ಅವರ ತಂಡ ವಾದ ಮಂಡಿಸಿತ್ತು.

ಎನ್‌ಸಿಪಿ ಶರದ್ ಬಣಕ್ಕೆ 'ಕಹಳೆ ಊದುತ್ತಿರುವ ಮನುಷ್ಯ' ಚಿಹ್ನೆ

ಮುಂಬೈ(ಪಿಟಿಐ): ಪಕ್ಷಕ್ಕೆ 'ಕಹಳೆ ಊದುತ್ತಿರುವ ಮನುಷ್ಯ' ಚಿಹ್ನೆಯನ್ನು ಚುನಾವಣಾ ಆಯೋಗ ಗುರುವಾರ ಹಂಚಿಕೆ ಮಾಡಿದೆ ಎಂದು ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ)–ಶರದ್‌ಚಂದ್ರ ಪವಾರ್ ಬಣ ವಕ್ತಾರ ಕ್ಲೈಡ್ ಕ್ರಾಸ್ಟೊ ತಿಳಿಸಿದ್ದಾರೆ.

'ಪಕ್ಷದ ಅಭ್ಯರ್ಥಿಗಳು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಈ ಹೊಸ ಚಿಹ್ನೆಯಡಿ ಸ್ಪರ್ಧಿಸುವರು' ಎಂದು ತಿಳಿಸಿದ್ದಾರೆ.

ನೂತನ ಚಿಹ್ನೆ ಕುರಿತು ತನ್ನ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಪಕ್ಷ, ಸದ್ದಡಗಿಸಿತ್ತು. 'ಕಹಳೆ ಊದುತ್ತಿರುವ ಮನುಷ್ಯ' ಚಿಹ್ನೆಯನ್ನು ಕೊಟ್ಟಿರುವುದು ಪಕ್ಷದ ಪಾಲಿಗೆ ದೊಡ್ಡ ಗೌರವ. ಇದು ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಗೆಲುವಿನ ಸಂಕೇತವೂ ಆಗಿದೆ. ದೆಹಲಿಯಲ್ಲಿ ಆಳ್ವಿಕೆ ನಡೆಸುತ್ತಿರುವವರನ್ನು ಅಧಿಕಾರದಿಂದ ಕೆಳಗಿಳಿಸಲು ಶರದ್ ನಾಯಕತ್ವದಲ್ಲಿ ಕಹಳೆ ಮೊಳಗಲಿದೆ' ಎಂದೂ ಪೋಸ್ಟ್ ಮಾಡಿದೆ.

24ಕ್ಕೆ ದಿಶಾ ಭಾರತ್ 'ಸಂಭ್ರಮ'

ಬೆಂಗಳೂರು: 'ದಿಶಾ ಭಾರತ್ ಸಂಸ್ಥೆಯ 20ನೇ ವಾರ್ಷಿಕೋತ್ಸವದ ಅಂಗವಾಗಿ ಇದೇ 24ರಂದು 'ಸಂಭ್ರಮ' ಎಂಬ ಕಾರ್ಯಕ್ರಮವನ್ನು ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ 2024ರಲ್ಲಿ ಸಂಸ್ಥೆ ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳಿಗೂ ಚಾಲನೆ ನೀಡಲಾಗುವುದು' ಎಂದು ದಿಶಾ ಭಾರತ್ ಸಂಸ್ಥಾಪಕಿ ರೇಖಾ ರಾಮಚಂದ್ರನ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ ಎರಡು ದಶಕಗಳಲ್ಲಿ ದಿಶಾ ಭಾರತ್ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ತುಂಬಿ ಜವಾಬ್ದಾರಿಯುತ ನಾಗರಿಕರನ್ನು ಬೆಳೆಸುವ ಉದ್ದೇಶ ಹೊಂದಿದೆ. ತಿಂಗಳ ಉಪನ್ಯಾಸ ಮಾಲಿಕೆ, ಶಿಕ್ಷಣ ತಜ್ಞರ ವಿಚಾರಗೋಷ್ಠಿ, ಯುವ ಸಮಾವೇಶ, ಎನ್‌ಎಸ್‌ಎಸ್ ಸಂಯೋಜಕರ ಸಮಾಗಮ, ಮೇರಾ ಭಾರತ್ ಮಹಾನ್ ಎಂಬ ರಾಜ್ಯಮಟ್ಟದ ರಸಪ್ರಶ್ನೆ ಹಮ್ಮಿಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ. ಜಗದೀಶ ಕುಮಾರ್, ಶಿಕ್ಷಣ ತಜ್ಞ ಗುರುರಾಜ ಕರಜಗಿ, ಐಐಎಂಬಿ ಪ್ರಾಧ್ಯಾಪಕ ಮಹಾದೇವನ್ ಅವರು 'ಸಂಭ್ರಮ' ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಿಐಡಿ ತನಿಖೆ: ಬ್ರದರ್ಸ್ ಬಯೊ ಮೆಡಿಕಲ್ ಕಂಪನಿ ಮಾರಾಟ ಮಾಡಿದ್ದ ಮೂರು ಸ್ಕ್ಯಾನಿಂಗ್ ಯಂತ್ರಗಳು ಜಪ್ತಿ

ಹೆಣ್ಣು ಭ್ರೂಣ ಹತ್ಯೆ: ಮಾಲೀಕ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಲಿಂಗ ಪತ್ತೆ ಮಾಡಿ ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಸ್ಕ್ಯಾನಿಂಗ್ ಯಂತ್ರಗಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದ ಆವಿಷ್ಕಾರ ಬ್ರದರ್ಸ್ ಬಯೊ ಮೆಡಿಕಲ್ ಕಂಪನಿ ಮಾಲೀಕ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

'ಬೈಯಪ್ಪನಹಳ್ಳಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಮುಂದುವರಿಸಲಾಗಿದೆ. ಆವಿಷ್ಕಾರ ಬ್ರದರ್ಸ್ ಬಯೊ ಮೆಡಿಕಲ್ ಕಂಪನಿ ಮಾಲೀಕ ಲಕ್ಷ್ಮಣ ಗೌಡ ಹಾಗೂ ಸಿದ್ದೇಶ್ ಎಂಬುವವರನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಲ್ಟ್ರಾ ಸೌಂಡ್ ಹಾಗೂ ಇಮೇಜಿಂಗ್ ಸ್ಕ್ಯಾನಿಂಗ್ ಯಂತ್ರಗಳ ಮಾರಾಟ, ಮರು ಖರೀದಿ ಹಾಗೂ ದುರಸ್ತಿ ಸಂಬಂಧ ಆವಿಷ್ಕಾರ ಬ್ರದರ್ಸ್ ಬಯೊ ಮೆಡಿಕಲ್ ಕಂಪನಿಯವರು ಪರವಾನಗಿ ಪಡೆದಿದ್ದರು. ಪ್ರತಿಯೊಂದು ಸ್ಕ್ಯಾನಿಂಗ್ ಯಂತ್ರದ ಮಾರಾಟ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕಿತ್ತು. ಆದರೆ, ಕಂಪನಿ ಮಾಲೀಕ ಹಾಗೂ ಇತರರು ಮೂರು ಸ್ಕ್ಯಾನಿಂಗ್ ಯಂತ್ರಗಳನ್ನು ಅಕ್ರಮವಾಗಿ ಮಾರಾಟ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

'ಅ.15ರಂದು ಒಂದು ಸ್ಕ್ಯಾನಿಂಗ್ ಯಂತ್ರವನ್ನು ಜಪ್ತಿ ಮಾಡಲಾಗಿತ್ತು. ಚನ್ನರಾಯಪಟ್ಟಣದಲ್ಲೂ ಭ್ರೂಣ ಹತ್ಯೆ ಸಂಬಂಧ ಪ್ರಕರಣ ದಾಖಲಾಗಿದ್ದು, ಮತ್ತೊಂದು ಯಂತ್ರವನ್ನು ಜಪ್ತಿ ಮಾಡಲಾಗಿದೆ. ತಲೆಮರೆಸಿಕೊಂಡಿದ್ದ ಆರೋಪಿ ಸಿದ್ದೇಶನನ್ನು ಬಂಧಿಸಲಾಗಿದ್ದು, ಈತನ ಬಳಿಯೂ ಯಂತ್ರವೊಂದು ಸಿಕ್ಕಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಲಿಂಗ ಪತ್ತೆಗೆ ಯಂತ್ರ ಬಳಕೆ: 'ಆರೋಪಿ ಲಕ್ಷ್ಮಣ ಗೌಡ ಬಳಿ ಯಂತ್ರ ಖರೀದಿಸಿದ್ದ ಕೆಲ ವೈದ್ಯರು ಹಾಗೂ ಇತರರು, ಅಕ್ರಮವಾಗಿ ಲಿಂಗ ಪತ್ತೆ ಮಾಡುತ್ತಿದ್ದರು. ಆಲೆಮನೆ ಹಾಗೂ ಆಸ್ಪತ್ರೆಯಲ್ಲಿ ಯಂತ್ರಗಳು ಇದ್ದವು. ತಮ್ಮದೇ ಜಾಲದ ಸದಸ್ಯರಿಂದ ಗರ್ಭಿಣಿಯರನ್ನು ಕರೆಸಿ ಸ್ಕ್ಯಾನಿಂಗ್ ಮಾಡಲಾಗುತ್ತಿತ್ತು. ಹೆಣ್ಣು ಭ್ರೂಣವೆಂಬುದು ಗೊತ್ತಾಗುತ್ತಿದ್ದಂತೆ ಹತ್ಯೆ ಮಾಡಲಾಗುತ್ತಿತ್ತು. ಇದೇ ಜಾಲ 900ಕ್ಕೂ ಹೆಚ್ಚು ಭ್ರೂಣಗಳನ್ನು ಹತ್ಯೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಲಾರಿ ಚಕ್ರ ಹರಿದು ಆಸ್ಪತ್ರೆ ಕೆಲಸಗಾರ ಸಾವು

ಬೆಂಗಳೂರು: ಮೈಕೊ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದ್ದು, ಲಾರಿ ಚಕ್ರ ಕಾಲುಗಳ ಮೇಲೆ ಹರಿದು ಮಹೇಶ್ (32) ಅವರು ಮೃತಪಟ್ಟಿದ್ದಾರೆ.

ಮೂಡಿಗೆರೆಯ ಮಹೇಶ್, ವರ್ತೂರು ಬಳಿಯ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು.

'ಮಹೇಶ್ ಅವರು ತಡರಾತ್ರಿ ಡೇರಿ ವೃತ್ತದಿಂದ ಮಡಿವಾಳ ಕಡೆ ಬೈಕ್‌ನಲ್ಲಿ ಹೋಗುತ್ತಿದ್ದರು. ಕ್ರೈಸ್ಟ್ ವಿಶ್ವವಿದ್ಯಾಲಯ ಎದುರು ರಸ್ತೆಯಲ್ಲಿ ನಿಂತಿದ್ದ ಸಿಮೆಂಟ್ ಲಾರಿಗೆ ಬೈಕ್ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಮಹೇಶ್ ರಸ್ತೆಯಲ್ಲಿ ಬಿದ್ದಿದ್ದರು. ಇದೇ ಮಾರ್ಗವಾಗಿ ಹೊರಟಿದ್ದ ಮತ್ತೊಂದು ಲಾರಿಯ ಚಕ್ರಗಳು, ಮಹೇಶ್ ಕಾಲುಗಳ ಮೇಲೆ ಹರಿದಿದ್ದವು. ತೀವ್ರ ರಕ್ತಸ್ರಾವದಿಂದ ಅವರು ಮೃತಪಟ್ಟಿದ್ದಾರೆ. ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ವೃದ್ಧ ದಂಪತಿ ಆತ್ಮಹತ್ಯೆ

ಬೆಂಗಳೂರು: ಇಟ್ಟಮಡು ಮುಖ್ಯರಸ್ತೆಯ ಕೃಷ್ಣಯ್ಯ ಬಡಾವಣೆಯಲ್ಲಿ ಕೃಷ್ಣ ನಾಯ್ಡು (84) ಹಾಗೂ ಪತ್ನಿ ಸರೋಜಮ್ಮ (74) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡಿನ ಕೃಷ್ಣ ಹಾಗೂ ಸರೋಜಮ್ಮ, ಹಲವು ವರ್ಷಗಳಿಂದ ಕೃಷ್ಣಯ್ಯ ಬಡಾವಣೆಯಲ್ಲಿ ನೆಲೆಸಿದ್ದರು. ಗುರುವಾರ ಬೆಳಿಗ್ಗೆ ನೇಣು ಬಿಗಿದ ಸ್ಥಿತಿಯಲ್ಲಿ ಇಬ್ಬರ ಮೃತದೇಹಗಳು ಪತ್ತೆಯಾಗಿವೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ದಂಪತಿಗೆ ಮಗ ಇದ್ದಾರೆ. ಸ್ವಂತ ಕಟ್ಟಡದ ಮೊದಲ ಮಹಡಿಯಲ್ಲಿ ದಂಪತಿ ನೆಲೆಸಿದ್ದರು. ನೆಲ ಮಹಡಿಯಲ್ಲಿ ಮಗನ ಕುಟುಂಬ ವಾಸವಿತ್ತು.'

'ದಂಪತಿ ನಡುವೆ ಪದೇ ಪದೇ ಜಗಳ ಆಗುತ್ತಿತ್ತು. ಬುಧವಾರ ರಾತ್ರಿಯೂ ಇಬ್ಬರೂ ಜಗಳ ಮಾಡುತ್ತಿದ್ದರು. ಜಗಳ ಸಾಮಾನ್ಯವೆಂದು ತಿಳಿದು ಮಗ ಹಾಗೂ ಅಕ್ಕ–ಪಕ್ಕದ ಮನೆಯವರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಗುರುವಾರ ಬೆಳಿಗ್ಗೆ ದಂಪತಿ ಮನೆಯಿಂದ ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ಸ್ಥಳೀಯರು, ಪರಿಶೀಲನೆ ನಡೆಸಿದಾಗ ಮೃತದೇಹಗಳು ಕಂಡಿದ್ದವು' ಎಂದು ಪೊಲೀಸರು ತಿಳಿಸಿದರು.

'ಬುಧವಾರ ರಾತ್ರಿಯೇ ದಂಪತಿ ನೇಣು ಹಾಕಿಕೊಂಡಿರುವ ಅನುಮಾನವಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಸಾವಿನ ಬಗ್ಗೆ ಮತ್ತಷ್ಟು ಮಾಹಿತಿ ತಿಳಿಯಲಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT

Jain University's School of CSE Hosts International-Level FDP

The School of CSE at Jain (Deemed-to-be University), Bangalore, is currently conducting a One-week online Faculty Development Program (FDP) titled "Interdisciplinary Insights: Data Science, Machine Learning, and Cyber Security" from February 19th to 24th, 2024. **Dr. G. Geetha,** the Director of the School of CSE, addressed the participants during the inaugural session of the FDP. The convener of the FDP, **Dr.J.Somasekar,** Professor of CSE, provided insights into the schedule of the FDP. The event was graced by the Deputy Directors of CSE, **Dr. Krishnan Batri** and **Dr. V. Vivek,** as well as all the program heads of the CSE department. A total of 877 registrations were received from 18 states across the country and 5 other countries. The sessions are being conducted by experts from prestigious universities in the US, Australia, Malaysia, and India. The expert talks cover a wide range of topics including cyber security, machine learning, data science, blockchain, Leadership in the Digital Age, and other interdisciplinary domains.

REAL ESTATE SELLING

Agricultural Land Converted

Intl Airport Road

LAND SALE 40,00,000 to 1Crore (per acre) 90 minutes journey from Airport, Clear Documents. 9343510635

Sites

Bannerghatta Road

3600, 5220, 19,700 SQFT E/F Corner A-Khata Land, 600 mts from Bannerghatta Main Road, Hulimavu Metro station Suitable for Industrial/ Commercial/ Residential. 9916310226/ 9353128035. vernadevelopers.com

BUILDERS ESSENTIAL

Building Contractors

CONSTRUCTION OF Residential/ Commercial building done on turn key basis reasonable cost. Quality materials and fast work: 9113668306

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Farm House/Land/ Resorts

15 FURNISHED AC rooms for resort hotel ayurveda retreat hospital Nandi hills rd Rs.7lac/1Cr advance Ph 9677002197

Industrial And Factory

DEVANAHALLI KIADB Land for rent near Battara Marenahalli, near BIA 7 kms 40,000 sqft. Contact:- 8867013630/ 9663314949.

BUSINESS

Business to Business

Business

WANTED BUSINESS Partners Saree Business Contact: 8892501007/ 9606701007

DH Classifieds More value, more impact
NAME CHANGE
ಪ್ರಜಾವಾಣಿ
Tell us your New Name!
Book your AD WITH US NOW!
www.dhclassifieds.com
BOOK NOW
For more details contact:
9886213331 | 9901641752
9845114560 | 9900428036
9731810277 | 080- 45557163/164

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Drivers

WANTED EXPERIENCED DRIVERS for Water Tankers in Bangalore South. Contact Immediately. Call 9448171416

Part-Time Jobs

TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35000/- To 40000/- 7019215243/ 9886641282

PUBLIC NOTICE

PUBLIC NOTICE

Public at large are hereby informed that our client Mrs.Shilpashree. V.N, W/o. Deepu B.G, residing at No.1539 Salgame Road, Opp Govt Science College, Saraswathipuram, Hassan Alur Hassan, Karnataka - 573201 is intending to purchase the Schedule Property from **i.**Mr.V.Devaraj, S/o.Mr. Late M Veeraiah, **ii.**Smt. Savitha Ravi G, W/o. Devaraj and **iii.**Ms.Medha D, D/o Mr. Devaraj, all are residing at No.16/A, West of Chord Road, 2nd Stage Extension, Bangalore.

As the Schedule Property has been mortgaged in favour of Bajaj Housing Finance Ltd, the Purchasers intends to purchase the Schedule Property subject to clearing the loan outstanding with Bajaj Housing Finance Ltd. Therefore, apart from Bajaj Housing Finance Ltd, people who are having objections or claims with respect to the Schedule Property,are hereby called upon to submit their objections / claims within Seven days from the date of this notice.

SCHEDULE PROPERTY

All that piece and parcel of Residential Property bearing No.16/A, Site measuring East to West (50+49)/2 feet and North to South 40 Feet, in all measuring 1980 Sq. Ft., situated at West of Chord Road, 2nd Stage Extension, Bangalore, now property comes under BBMP Ward No.67, Municipal No.16/A, having PID No.14-74-16/A, together with RCC Roofed Building therein and bounded as follows:-East by: 1st Main Road
West by :Property No.27
North by :Property No.17
South by :Property No.16

M.G.C.& Co., Advocates & Solicitors, No.66, 4th Cross, Xavier Layout, Bangalore - 560047
Ph. No.080-25546276
Mob:9844152556
Date: 22.02.2024, Place:Bangalore

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

EDUCATION SUCCESS

CONGRATULATIONS

Dr. Madhusudhan G
Associate Prof. KLE Law Collage
S/o Gopalakrishna Swamy, Bapuji Layout, Bengaluru.

Guide : Dr. Meena Kumari Despande (Retired Professor Department of Political Science)
Topic: E-GOVERNANCE IN KARNATAKA: A STUDY OF POLICE DEPARTMENT IN BANGALORE
University : Bangalore University
Best Wishes By: Family and Friends

PUBLIC NOTICE

Notice is hereby given to the general public that my client is intending to purchase all that immovable property described in the Schedule hereunder from its present owners **(i) Mrs. ZEENATH UNNISA,** wife of Mr.Ghouse Khan, and **(ii) Mr. ABDULLAH MUHAMMAD,** son of Mr. Naseeruddin & Mrs. Fathimuz Zahra, both are residing at No.46/1, 1st Main Road, Ganganagar Extension, Bangalore-560 032, who are representing that they are the absolute joint owners of the Schedule property, having acquired the same from Mrs. Fathimuz Zahra wife of Mr. Naseeruddin & daughter of Mr.Ghouse Khan, under a Gift deed dated 19.11.2022, registered as No.BNS-1-14527/2022-23, in Book I, Stored in CD No.BNSD1663, in the office of the sub registrar, Banasawadi, Bangalore and other than themselves, no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within **FIFTEEN DAYS** from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property bearing Vacant Site No.634, in Part - 1, Kanakashree Layout-II, formed in survey No.139, by **"KANAKASHREE HOUSE BUILDING CO-OPERATIVE SOCIETY LIMITED",** approved by the Bangalore Development Authority, situated at Kannur Village, Bidarahalli Hobli, Bangalore East Taluk, Bangalore Urban District and bounded on the: **East by :** Site bearing No.633; **West by :** Private property; **North by :** Site bearing No.635; and **South by :** 9.14 meter wide Road (7th C Main Road); measuring East to West (32'4"+ 36'3")/2 feet; North to South 40 feet, in all measuring a total extent of 1374 square feet.

Bangalore
Dated: 22.02.2024.

A. NAGARAJA, Advocate & Notary, No.6, KHB Buildings, II Block, 13th Cross, Indiranagar II Stage, Bangalore-560 038. Ph:9448067511.

PERSONAL

Change of Name

I, NANDAKUMAR C PATIL S/o Chandrashekhar Reddy R/a Flat No. 14, Nandi Garden Phase-2, H M World City, Bengaluru- 560062, I declare that NANDAKUMAR REDDY and NANDAKUMAR C PATIL both the names are belongs to me only vide affidavit dated 21-2-2024 sworn before Notary G.R. Rajanna, Bangalore.

CHANGE OF NAME

I, **NAGESH BABU MUNISWAMY** S/o. C Muniswamy R/a No. 1102, Anriya Palatial No. 8, 2nd Main, Lottegollahalli, RMV 2nd Stage, Bengalore- 560094 Declare that in my Son Krishna Nagesh Education Records my name is wrongly recorded as **NAGESH MUNISWAMY** instead of **NAGESH BABU MUNISWAMY** vide affidavit dated 22.02.2024 Sworn before Notary Jalandhara, Bangalore.

CHANGE OF NAME

I, **LEELAVATI SHAMBAYA** W/o IC-18910W Rank:Colonel, Name: **CHETTRANDA GANAPATHY SHAMBAIAH** Residing at # Vanasiri Estate, Ibnivalavadi Village, Boikeri PO, Madikeri Dist, Kodagu-571201, have changed my name to **LEELA SHAMBAYA** vide affidavit dated 22.2.2024 before notary N. Narayana Swamy, Bangalore. Henceforth I shall be called **LEELA SHAMBAYA** only.

I, ASHARANI SETRU NEELAPPA R/a.#242, 14th A-Cross, A-Sector, 1st Phase, Yelahanka New Town, Bangalore-64, have changed my name to ASHA RANI SHETRU NEELAPPA affidavit dated 17-02-2024 notary Ashok Raj Gowda, Bellary.

CHANGE OF NAME

I, **LOKESH. R** son of **RAMANNA,** aged about 48 years residing at No. 202, GR OPAL Apartment, RWF west colony, Yelahanka New town, Bengaluru -560 064, I state that my present name is **LOKESH. R** and my wife name is **SUMA. R** and my daughter name is **SAHITHYA. L. S.** Henceforth my name shall be **LOKESH. R** and my wife name is **SUMA. R** and the same shall appear in my daughter's school documents and for all other purposes. This is sworn before VII Additional Chief Metropolitan Magistrate (A.C.M.M.), Bengaluru dated on 20-02-2024.

CHANGE OF NAME

I, **ANNAMMA ZACHARIAH** alias **ANNAMMA ZACHARIAH KALAPPURAKKAL** W/o Late. Mathew Thottamalil Koshy, Residing at No.246, 1 Main, MES Road, JPN Park Subway, Gokul Post, JPN Park, Jalahalli, Bengaluru, Karnataka-560054. All the above names pertain to Same person only. Vide affidavit dated 21.02.2024 before notary M.Devaraja, Bangalore.

I, RAJESHKUMAR NAYAK, have changed to New name RAJESH NAYAK, residing at Sy No- 182 Manjushree Layout, Koraluru Village, Naduvathi post, Bangalore-560067 vide affidavit dated 22/02/2024 before notary Veena J, Bangalore.

Lost

DOCUMENT LOST

I, **V. Jayakumar** have lost my original Sale Deed, Documents bearing document identification **No. 3653/91-92,** Site Address: P134 Sector 12, Kodihalli Village, Jeevanbima Nagar, HAL 3rd Stage, Bangalore- 75. While in transit, **finders Please Contact : 7975526210**

ವೈನ್ ಮರ್ಚಂಟ್ಸ್ ಪ್ರತಿಭಟನೆ

'ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ 20ರಷ್ಟು ಲಾಭಾಂಶ ನೀಡಬೇಕು. ಅಬಕಾರಿ ಶುಲ್ಕವನ್ನು ಕಡಿಮೆ ಮಾಡಬೇಕು. ಲೋಕಾಯುಕ್ತ ಪೊಲೀಸರ ದಾಳಿಯಲ್ಲಿ ಸಿಕ್ಕಿಬಿದ್ದ ಅಬಕಾರಿ ಅಧಿಕಾರಿಗೆ ಎಕ್ಸಿಕ್ಯುಟಿವ್ ಹುದ್ದೆ ನೀಡಬಾರದು' ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ಫೆಡರೇಶನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಶನ್ ಕರ್ನಾಟಕ' ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಮಗ ತೀರಿಕೊಂಡ ಮರುದಿನ ತಂದೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ರಾಮಸಂದ್ರದಲ್ಲಿರುವ ಗುಜರಿ ಮಳಿಗೆಯೊಂದರಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಮೃತರ ಸಂಖ್ಯೆ 6ಕ್ಕೆ ಏರಿದ್ದು, ಆಸ್ಪತ್ರೆಯಲ್ಲಿ ಮಗ ರಿಹಾನ್ (10) ಮೃತಪಟ್ಟ ಮರುದಿನವೇ ತಂದೆ ಅಫ್ರೋಜ್ ಪಾಷಾ (38) ಸಹ ತೀರಿಕೊಂಡಿದ್ದಾರೆ.

ಫೆ. 18ರಂದು ಸುಗಂಧ ದ್ರವ್ಯ ಡಬ್ಬಿ ಜಜ್ಜುವಾಗ ಸಂಭವಿಸಿದ್ದ ಸ್ಫೋಟದಿಂದ ಗುಜರಿ ಮಳಿಗೆ ಬೆಂಕಿಗೆ ಆಹುತಿಯಾಗಿತ್ತು. ಗುಜರಿ ಮಳಿಗೆ ಮಾಲೀಕ ಚಿಕ್ಕಬಸ್ತಿಯ ಸಲೀಂ(32), ಮೆಹಬೂಬ್ ಪಾಷಾ (32) ಹಾಗೂ ಬಾಲಕ ಅರ್ಬಾಜ್ (14) ಸಜೀವ ದಹನವಾಗಿದ್ದಾರೆ.

'ತೀವ್ರ ಗಾಯಗೊಂಡಿದ್ದ ಅಫ್ರೋಜ್, ಮಗ ರಿಹಾನ್ ಹಾಗೂ ತಂಗಿಯ ಮಗ ಸಾಜಿದ್ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೈ ಮೇಲೆ ತೀವ್ರ ಪ್ರಮಾಣದಲ್ಲಿ ಸುಟ್ಟ ಗಾಯ ಗಳಾಗಿದ್ದರಿಂದ ಸಾಜಿದ್ ಪಾಷಾ (15) ಹಾಗೂ ರಿಹಾನ್ (10) ಬುಧವಾರ ತೀರಿಕೊಂಡಿದ್ದರು. ಅಫ್ರೋಜ್ ಸಹ ಗುರುವಾರ ಸಂಜೆ ಅಸುನೀಗಿದ್ದಾರೆ. ಗಾಯಗೊಂಡಿರುವ ಮೂವರು ಆಸ್ಪತ್ರೆಯಲ್ಲಿದ್ದು, ಅವರ ಆರೋಗ್ಯ ಸ್ಥಿತಿಯೂ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದರು.

'ಅಫ್ರೋಜ್, ಕ್ಯಾಂಟರ್ ವಾಹನ ಚಾಲಕ. ಪರಿಚಯಸ್ಥ ಸಲೀಂ ಗುಜರಿ ಮಳಿಗೆಗೆ ಹೋಗಿದ್ದರು. ರಿಹಾನ್ ಹಾಗೂ ಸಾಜಿದ್, ಮಧ್ಯಾಹ್ನ ಅಫ್ರೋಜ್ ಅವರಿಗೆ ಊಟ ನೀಡಲೆಂದು ಮಳಿಗೆಗೆ ಹೋಗಿದ್ದರು. ನಂತರ, ತಂದೆ ಜೊತೆಗೆಯೇ ಮಳಿಗೆಯಲ್ಲಿ ಕುಳಿತಿದ್ದರು' ಎಂದು ತಿಳಿಸಿದರು.

₹ 15 ಸಾವಿರಕ್ಕೆ ಗುತ್ತಿಗೆ: 'ಅಕ್ರಮವಾಗಿ ಗುಜರಿ ಮಳಿಗೆ ತೆರೆಯಲು ಅವಕಾಶ ಮಾಡಿಕೊಟ್ಟಿದ್ದ ನಿವೇಶನ ಮಾಲೀಕ ವಿಠ್ಠಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ವಿಠ್ಠಲ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಸುಗಂಧ ದ್ರವ್ಯಗಳ ತಗಡಿನ ಡಬ್ಬಿಗಳನ್ನು ಜಜ್ಜಿ ಸಮತಟ್ಟಾಗಿ ಮಾಡಿಕೊಡುವ ಕೆಲಸವನ್ನು ಸಲೀಂ ಅವರು ₹ 15 ಸಾವಿರಕ್ಕೆ ಗುತ್ತಿಗೆ ಪಡೆದಿದ್ದರು. ಪರಿಚಯಸ್ಥರನ್ನೇ ಮಳಿಗೆಗೆ ಕರೆಸಿ, ಅವರ ಮೂಲಕವೇ ಕೆಲಸ ಮಾಡಿಸುತ್ತಿದ್ದರು. ದಿನಕ್ಕೆ ₹200ರಿಂದ ₹ 400 ಸಂಬಳ ನೀಡುತ್ತಿದ್ದರು' ಎಂದು ತಿಳಿಸಿದರು.

ಕುಪೇಂದ್ರ ರೆಡ್ಡಿ ವಿರುದ್ಧ ಎಫ್‌ಐಆರ್

ಬೆಂಗಳೂರು: ತಮ್ಮ ಪರ ಮತ ಚಲಾಯಿಸುವಂತೆ ಶಾಸಕರಿಗೆ ಹಣದ ಆಮಿಷವೊಡ್ಡಿರುವ ಆರೋಪದಡಿ ರಾಜ್ಯಸಭೆ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ಡಿ. ಕುಪೇಂದ್ರ ರೆಡ್ಡಿ ಹಾಗೂ ಇತರರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಅವರು ದೂರು ನೀಡಿದ್ದಾರೆ. ಕುಪೇಂದ್ರ ರೆಡ್ಡಿ, 37/ ಕ್ರೆಸೆಂಟ್ ಹೋಟೆಲ್ ಮಾಲೀಕ ರವಿ, ಕುಪೇಂದ್ರ ರೆಡ್ಡಿ ಭಾವ ಮಹಾಂತೇಶ್, ಹರಿಹರದ ಶಿವಶಂಕರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ಚುನಾವಣೆ ನಡೆಯಲಿದೆ. ಬಿಜೆಪಿ ಬೆಂಬಲಿತ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಗೆಲುವಿಗೆ ಬೇಕಾದ ನಿರ್ದಿಷ್ಟ ಸಂಖ್ಯೆಯ ಮತಗಳಿಲ್ಲ. ಹೀಗಾಗಿ, ಅವರು ಹಾಗೂ ಅವರ ಹೆಸರಿನಲ್ಲಿ ಕೆಲವರು ಮತಕ್ಕಾಗಿ ಹಣದ ಆಮಿಷವೊಡ್ಡುತ್ತಿದ್ದಾರೆ' ಎಂದು ರವಿಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

'ಕುಪೇಂದ್ರ ರೆಡ್ಡಿ ಅವರ ಪುತ್ರ ಹಣ ನೀಡುತ್ತಾರೆ. ಅದನ್ನು ಪಡೆದುಕೊಂಡು ಮತ ಚಲಾಯಿಸಿ. ಇಲ್ಲದಿದ್ದರೆ ಮುಂದೆ ನಿಮಗೆ ತೊಂದರೆಯಾಗುತ್ತದೆ' ಎಂಬುದಾಗಿ ಆರೋಪಿಗಳು ಬೆದರಿಸಿದ್ದರು. ಜೊತೆಗೆ, ಹಲವರು ಕುಪೇಂದ್ರ ರೆಡ್ಡಿ ಪರವಾಗಿ ನನಗೆ ಆಮಿಷವೊಡ್ಡಿದ್ದಾರೆ. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಗೂ ಆಮಿಷ ಬಂದಿರುವುದು ಗೊತ್ತಾಗಿದೆ' ಎಂದು ಅವರು ಉಲ್ಲೇಖಿಸಿದ್ದಾರೆ.

'ಬಾಂಬೆ ಮಿಠಾಯಿ' ಮಾದರಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುದುಚೇರಿ ಮತ್ತು ತಮಿಳುನಾಡು ಸರ್ಕಾರ ಬಾಂಬೆ ಮಿಠಾಯಿ (ಕಾಟನ್ ಕ್ಯಾಂಡಿ) ಉತ್ಪಾದನೆ ಮತ್ತು ಮಾರಾಟ ನಿಷೇಧಿಸಿದ ಬೆನ್ನಲ್ಲೇ ಆಹಾರ ಸುರಕ್ಷತೆ ಆಯುಕ್ತರ ಕಾರ್ಯಾಲಯ ಕೂಡ ಮಾದರಿಗಳನ್ನು ಸಂಗ್ರಹಿಸಲು ಸೂಚಿಸಿದೆ.

'ತಮಿಳುನಾಡಿನ ಸರ್ಕಾರಿ ಪ್ರಯೋಗಾಲಯ ದಲ್ಲಿ ನಡೆಸಲಾದ ಪರೀಕ್ಷೆಗಳಲ್ಲಿ ಬಾಂಬೆ ಮಿಠಾಯಿಯಲ್ಲಿ ರೊಡಮೈನ್-ಬಿ ಅಂಶ ಇರುವುದು ದೃಢಪಟ್ಟಿದೆ. ಇದನ್ನು ನಿಯಮಿತವಾಗಿ ಸೇವನೆ ಮಾಡುವುದರಿಂದ ಕ್ಯಾನ್ಸರ್ ರೋಗ ಬರುವ ಸಾಧ್ಯತೆ ಇದೆ ಎಂಬ ಅಂಶ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ, ರಾಜ್ಯದಲ್ಲೂ ಬಾಂಬೆ ಮಿಠಾಯಿಯ ಮಾದರಿಗಳನ್ನು ಸಂಗ್ರಹಿಸಲು ಸೂಚನೆ ನೀಡಲಾಗಿದೆ' ಎಂದು ಆಹಾರ ಸುರಕ್ಷತೆ ಆಯುಕ್ತ ಕೆ. ಶ್ರೀನಿವಾಸ್ ತಿಳಿಸಿದರು.

'ಬಾಂಬೆ ಮಿಠಾಯಿಗೆ ಸಕ್ಕರೆ, ಬಣ್ಣಗಳನ್ನು ಹಾಕುವುದು ಅಪಾಯಕಾರಿ' ಎಂದು ತಮಿಳುನಾಡು ಆಹಾರ ತಜ್ಞರು ಎಚ್ಚರಿಕೆ ನೀಡಿದ್ದರು. ಇದರಲ್ಲಿ ರಾಸಾಯನಿಕ ವಸ್ತುಗಳು ಪತ್ತೆಯಾಗಿತ್ತು. ನಿರಂತರ ಪರೀಕ್ಷೆ ಬಳಿಕ ಇದರಲ್ಲಿ ರೊಡಮೈನ್–ಬಿ ಅಂಶ ಹೆಚ್ಚು ಇರುವುದು ಕಂಡು ಬಂದಿತ್ತು. ಇದನ್ನು ಸೇವನೆ ಮಾಡಿದರೆ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

'ರೊಡಮೈನ್–ಬಿ ಎಂಬ ರಾಸಾಯನಿಕವನ್ನು ಕಾಗದ, ಚರ್ಮ, ಜವಳಿ ಮತ್ತು ಬಣ್ಣಗಳ ಉದ್ಯಮದಲ್ಲಿ ಕೆಂಪು ಮತ್ತು ಗುಲಾಬಿ ಬಣ್ಣ ಪಡೆಯಲು ಬಳಕೆ ಮಾಡಲಾಗುತ್ತದೆ. ಪುಡಿ ರೂಪದಲ್ಲಿರುವ ಹಸಿರು ಬಣ್ಣದ ಈ ರಾಸಾಯನಿಕ ನೀರಿಗೆ ಸೇರಿಸಿದರೆ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ. ಇದು ನೇರವಾಗಿ ದೇಹದೊಳಕ್ಕೆ ಪ್ರವೇಶಿಸಿದರೆ ಕ್ಯಾನ್ಸರ್ ಬರುವ ಸಾಧ್ಯತೆ ಇದೆ' ಎಂದು ತಜ್ಞರು ತಿಳಿಸಿದ್ದಾರೆ.

ಮುರ್ಡೇಶ್ವರ: ರಷ್ಯನ್ ಪ್ರಜೆ ಸಾವು

ಭಟ್ಕಳ: ಪ್ರವಾಸಕ್ಕೆಂದು ಬಂದ ಅಲೆಕ್ಸಾಂಡರ್ ತನಗ (73) ಎಂಬ ರಷ್ಯನ್ ಪ್ರಜೆಯೊಬ್ಬರು ತಾಲ್ಲೂಕಿನ ಮುರ್ಡೇಶ್ವರ ದೇವಸ್ಥಾನದಲ್ಲಿ ಗುರುವಾರ ಮೃತಪಟ್ಟಿದ್ದಾರೆ.

'ದೇವಸ್ಥಾನ ವೀಕ್ಷಿಸುತ್ತಿದ್ದ ವೇಳೆ ಅಲೆಕ್ಸಾಂಡರ್ ಏಕಾಏಕಿ ಕುಸಿದು ಬಿದ್ದರು. ಅವರನ್ನು ತಕ್ಷಣವೇ ಭಟ್ಕಳದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು ಎಂಬ ಮಾಹಿತಿ ಅಲೆಕ್ಸಾಂಡರ್ ಸಂಬಂಧಿ ಎಲೆನಾ ಬಿಲಾಗ್ ಲಜೊವಾ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರು ತಿಂಗಳು ಅಥವಾ ಮುಂದಿನ ಆದೇಶದವರೆಗೆ ಜಾರಿ

ಕಿದ್ವಾಯಿ ಸಂಸ್ಥೆಗೆ ಆಡಳಿತಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸುಧಾರಣೆಗೆ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ. ಈ ನೇಮಕಾತಿಯು ಆರು ತಿಂಗಳು ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ.

ಸಂಸ್ಥೆಯಲ್ಲಿ ಒದಗಿಸುತ್ತಿರುವ ಸೇವೆಗಳಿಗೆ ರೋಗಿಗಳಿಂದ ಹೆಚ್ಚಿನ ಶುಲ್ಕವನ್ನು ಪಡೆಯುತ್ತಿರುವುದು, ಅನುದಾನದ ದುರ್ಬಳಕೆ, ಭ್ರಷ್ಟಾಚಾರ, ಸಂಸ್ಥೆಯ ಸಿಬ್ಬಂದಿ ಖಾಸಗಿ ಸಂಸ್ಥೆಗಳೊಂದಿಗೆ ಕೈಜೋಡಿಸಿ ಸಂಸ್ಥೆಗೆ ಆರ್ಥಿಕ ನಷ್ಟ ಉಂಟು ಮಾಡುತ್ತಿರುವುದು, ರೋಗಿಗಳಿಗೆ ಕಳಪೆ ಗುಣಮಟ್ಟದ ಚಿಕಿತ್ಸೆ ನೀಡುತ್ತಿರುವುದು, ಔಷಧಗಳ ಕೊರತೆ, ನಿಗದಿತ ಸಂಸ್ಥೆಗೆ ಹೆಚ್ಚಿನ ಲಾಭ ಬರುವಂತೆ ಟೆಂಡರ್ ನೀಡಿರುವುದು ಹಾಗೂ ಔಷಧಗಳ ಖರೀದಿಯಲ್ಲಿ ಪಾರದರ್ಶಕತೆ ಇಲ್ಲದಿರುವುದರ ಬಗ್ಗೆ ಸಂಸ್ಥೆಯಲ್ಲಿನ ವೈದ್ಯರು ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನಾಲ್ಕು ಪುಟಗಳ ವರದಿ ಸಹಿತ ದೂರು ನೀಡಿ, ತನಿಖೆ ನಡೆಸುವಂತೆ ಒತ್ತಾಯಿಸಿದ್ದರು.

ದೂರುಗಳ ಬಗ್ಗೆ ತನಿಖೆಗೆ ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ನೇತೃತ್ವದಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ಈ ಸಮಿತಿಯು 2023ರ ನ.16ರಂದು ವರದಿ ಸಲ್ಲಿಸಿದೆ. ಈ ವರದಿಯಲ್ಲಿ ಆಡಳಿತ ವ್ಯವಸ್ಥೆ ಕುಸಿದಿರುವ ಬಗ್ಗೆ ತಿಳಿಸಲಾಗಿತ್ತು. ಒಟ್ಟಾರೆ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಗೆ ಆಡಳಿತ ಸೇವೆಗೆ ಸೇರಿದ ಅಧಿಕಾರಿ ಯನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸುವ ಬಗ್ಗೆ ಶಿಫಾರಸು ಮಾಡ ಲಾಗಿತ್ತು. ಅದರಂತೆ ಈಗ ನೇಮಕ ಮಾಡಲಾಗಿದೆ.

ವಿ.ಲೋಕೇಶ್ ಸೇವೆಯಿಂದ ಅಮಾನತು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಹುದ್ದೆಯಿಂದ ಕೆಲ ದಿನಗಳ ಹಿಂದೆ ವಜಾಗೊಂಡಿದ್ದ ಡಾ.ವಿ. ಲೋಕೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಈ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಆದೇಶ ಹೊರಡಿಸಿದ್ದಾರೆ.

ಡಾ. ವಿ. ಲೋಕೇಶ್ ಅವರ ವಿರುದ್ಧ ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳ ಬಗ್ಗೆ ಲೋಕಾಯುಕ್ತಕ್ಕೆ ಸಲ್ಲಿಕೆಯಾಗಿದ್ದವು. ಪೆಟ್‌ಸ್ಕ್ಯಾನ್ ದರ ನಿಗದಿಗೆ ಸಂಬಂಧಿಸಿದಂತೆ ಹೊರಡಿಸಿದ್ದ ಕಾರ್ಯಾದೇಶ ರದ್ದುಪಡಿಸಿ, ಹೊಸ ಕಾರ್ಯಾದೇಶ ಹೊರಡಿಸಿದ್ದೂ ಸೇರಿದಂತೆ ಹಲವು ಆರೋಪಗಳು ಬಂದಿದ್ದವು. ಅರುಂಧತಿ ಚಂದ್ರಶೇಖರ್ ನೇತೃತ್ವದ ಸಮಿತಿಯ ವರದಿ ಆಧರಿಸಿ ಕ್ರಮಕೈಗೊಳ್ಳಲಾಗಿದೆ. ತಾತ್ಕಾಲಿಕ ನಿರ್ದೇಶಕರಾಗಿ ನೇಮಕಗೊಂಡಿದ್ದ ಡಾ. ಸೈಯದ್ ಅಲ್ತಾಫ್ ಅವರನ್ನು ಪ್ರಭಾರದಲ್ಲಿ ಇರಿಸಿ ಆದೇಶಿಸಲಾಗಿದೆ.

POWERED BY
NPCI
भारतीय राष्ट्रीय भुगतान निगम
NATIONAL PAYMENTS CORPORATION OF INDIA

“ನನಗನಿಸುತ್ತದೆ BHIM
ಸುರಕ್ಷಿತ
ನನಗನಿಸುತ್ತದೆ BHIM
ಸರಳ
ನನಗನಿಸುತ್ತದೆ BHIM
ನಾಟಿರಹಿತ
ವಿಶ್ವಾಸಾರ್ಹ ಡಿಜಿಟಲ್
ಪಾವತಿ ಆಪ್
ಆಗಿ BHIM ಮುಂದುವರೆಯುತ್ತದೆ
ಎನ್ನುವುದು ನನ್ನ ನಂಬಿಕೆ”

ಡೌನ್ಲೋಡ್ ಮಾಡಿ

BHIM
BHARAT INTERFACE FOR MONEY

GET IT ON Google Play

Available on the App Store

BHIM
BHARAT INTERFACE FOR MONEY

ಸಂಕ್ಷಿಪ್ತ ಸುದ್ದಿ

ನೀರು ಪೂರೈಕೆ ವ್ಯತ್ಯಯ

ಬೆಂಗಳೂರು: ಜಲಮಂಡಳಿಯ ಕೆಲವು ಕಾಮಗಾರಿಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಫೆ. 27ರ ಬೆಳಿಗ್ಗೆ 6 ಗಂಟೆಯಿಂದ ಫೆ. 28ರ ಬೆಳಿಗ್ಗೆ 6 ಗಂಟೆಯವರೆಗೆ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಕಾಮಗಾರಿ ಸಂದರ್ಭದಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ 4ನೇ ಹಂತದ 2ನೇ ಘಟ್ಟವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸ ಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪುಸ್ತಕ ಬಿಡುಗಡೆ ಇದೇ 25ಕ್ಕೆ

ಬೆಂಗಳೂರು: ಶಂಕರ್ ಕೆ. ಪ್ರಸಾದ್, ನೇತ್ರಕೆರೆ ಉದಯಶಂಕರ ಅವರು ಬರೆದಿರುವ 'ಬೆಂಗಳೂರಿನ ಭೂಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ' ಪುಸ್ತಕ ಇದೇ 25ರಂದು ಬಂಗಾರಪ್ಪನಗರದ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಪಸ್ತಕ ಬಿಡುಗಡೆ ಮಾಡಲಿದ್ದಾರೆ.

225 ವಾರ್ಡ್, 75 ಉಪ ವಿಭಾಗಗಳ ಕಚೇರಿ ತೆರೆಯಲು ವಲಯ ಆಯುಕ್ತರು ವಿಫಲ

ವಾರ್ಡ್ ಕಚೇರಿ: ಆರಂಭ ಎಂದು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 225 ವಾರ್ಡ್‌ಗಳ ಕಚೇರಿ ಹಾಗೂ 75 ಉಪ ವಿಭಾಗ ಕಚೇರಿಗಳನ್ನು ತೆರೆಯುವಂತೆ ಮುಖ್ಯ ಆಯುಕ್ತರು ಆದೇಶ ನೀಡಿ ಒಂದೂವರೆ ತಿಂಗಳಾದರೂ ವಲಯ ಆಯುಕ್ತರು ಕ್ರಮ ಕೈಗೊಂಡಿಲ್ಲ.

ಹೊಸದಾಗಿ ಪುನರ್‌ರಚಿಸಲಾಗಿರುವ ವಾರ್ಡ್‌ಗಳಲ್ಲಿ ಕಾಮಗಾರಿ, ಕಂದಾಯ, ಆರೋಗ್ಯ ಮತ್ತು ಪಾಲಿಕೆಯ ಇತರೆ ವಿಭಾಗಗಳ ವ್ಯಾಪ್ತಿಯನ್ನು ಹೊಸ ಉಪ ವಿಭಾಗಗಳಿಗೆ ವಹಿಸಿ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜನವರಿ 10ರಂದು ಆದೇಶ ಹೊರಡಿಸಿದ್ದರು.

ಈ ಆದೇಶವನ್ನು ಯಲಹಂಕ ವಲಯ ಹೊರತುಪಡಿಸಿದಂತೆ ಉಳಿದ ಏಳು ವಲಯದ ಆಯುಕ್ತರು ಪಾಲಿಸಿಲ್ಲ.

198 ವಾರ್ಡ್‌ಗಳನ್ನು ಪುನರ್ ರಚಿಸಿ, 225 ವಾರ್ಡ್ ರಚನೆ ಮಾಡಿ ನಗರಾಭಿವೃದ್ಧಿ ಇಲಾಖೆ 2023ರ ಸೆಪ್ಟೆಂಬರ್ 30ರಂದು ಅಧಿಸೂಚನೆ ಹೊರಡಿಸಿದೆ. ಅದರ ಪ್ರಕಾರ ಪ್ರತಿ ಉಪ ವಿಭಾಗ, ವಾರ್ಡ್ ಕಚೇರಿಗಳನ್ನು ಹೊಸದಾಗಿ ತೆರೆಯಬೇಕು. ಈ ಹೊಸ ಕಚೇರಿಗಳ ವಿಳಾಸವನ್ನು,-ಪುನರ್‌ರಚನೆಗೊಂಡ ವಾರ್ಡ್‌ಗಳ ವಿವರಗಳನ್ನು ಸಾರ್ವಜನಿಕರ ಮಾಹಿತಿಗೆ ಪ್ರಕಟಿಸಿ, ರಸ್ತೆಯ ನಾಮಫಲಕಗಳಲ್ಲಿ ಅಳವಡಿಸಬೇಕು ಎಂದು ಕೂಡ ಸೂಚಿಸಲಾಗಿತ್ತು.

ಹೊಸ ಕಚೇರಿಗಳಿಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಪ್ರತ್ಯಾಯೋಜನೆ ಮಾಡಿ ತಾತ್ಕಾಲಿಕವಾಗಿ ತಮ್ಮ ಹಂತದಲ್ಲಿಯೇ ಮರು ಹಂಚಿಕೆ ಮಾಡಿ ನಿಯೋಜಿಸಬೇಕು. ಅಗತ್ಯ ಹುದ್ದೆಗಳ ಸೃಜನೆಗಾಗಿ ಪ್ರಸ್ತಾವ ಸಲ್ಲಿಸಬೇಕು. ಉಪವಿಭಾಗ ಹಾಗೂ ವಾರ್ಡ್ ಕಚೇರಿಗಳಿಗೆ ಸಂಬಂಧಿಸಿದ ಕಡತ ಹಾಗೂ ದಾಖಲೆಗಳನ್ನು ಸಂಬಂಧಿಸಿದ ಕಚೇರಿಗೆ ರವಾನಿಸಿ, ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳಿಗೆ ಆದೇಶ ನೀಡಲಾಗಿತ್ತು. ಆದರೆ, ಈ ಪ್ರಕ್ರಿಯೆ ಇನ್ನೂ ಏಳು ವಲಯಗಳಲ್ಲಿ ಆರಂಭವಾಗಿಲ್ಲ.

ರಾಜರಾಜೇಶ್ವರಿನಗರ, ಪಶ್ಚಿಮ, ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರು ಕಚೇರಿಗಳನ್ನು ಶೀಘ್ರ ತೆರೆಯಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ದಾಸರಹಳ್ಳಿ, ಮಹದೇವಪುರ, ಪೂರ್ವ, ದಕ್ಷಿಣದ ಆಯುಕ್ತರು ಪ್ರತಿಕ್ರಿಯೆ ನೀಡಲಿಲ್ಲ.

225 ವಾರ್ಡ್‌ಗಳಂತೆ ಉಪ ವಿಭಾಗ ಕಚೇರಿ ಹಾಗೂ ವಾರ್ಡ್ ಕಚೇರಿಗಳು ಪ್ರಾರಂಭವಾಗದಿದ್ದರೆ ನಾಗರಿಕರು ನೀಡುವ ದೂರು ಸೇರಿದಂತೆ ಖಾತಾ, ಆಸ್ತಿ ತೆರಿಗೆ ಎಲ್ಲವೂ ಹಳೆಯ ವಾರ್ಡ್ ಲೆಕ್ಕಾಚಾರದಲ್ಲೇ ದಾಖಲಾಗುತ್ತಿದೆ. ಖಾತೆ ವರ್ಗಾವಣೆಗೆ ಹೋದರೆ 'ಹೊಸ ವಾರ್ಡ್ ಕಚೇರಿ ಆರಂಭವಾದ ಮೇಲೆ ಬನ್ನಿ' ಎಂದು ಪಾಲಿಕೆ ಸಿಬ್ಬಂದಿ ಹೇಳುತ್ತಿದ್ದಾರೆ ಎಂದು ಹಲವು ನಾಗರಿಕರು ದೂರಿದರು.

ಎಲ್ಲೆಲ್ಲಿ ಎಷ್ಟೆಷ್ಟು ಉಪವಿಭಾಗ?

ವಲಯ	198 ವಾರ್ಡ್‌ಗಳಂತೆ		225 ವಾರ್ಡ್‌ಗಳಂತೆ	
	ಉಪ ವಿಭಾಗ	ವಾರ್ಡ್	ಉಪ ವಿಭಾಗ	ವಾರ್ಡ್
ದಾಸರಹಳ್ಳಿ	4	8	4	11
ಯಲಹಂಕ	5	11	6	14
ಆರ್.ಆರ್. ನಗರ	6	14	7	20
ಬೊಮ್ಮನಹಳ್ಳಿ	7	16	9	24
ಮಹದೇವಪುರ	6	17	9	22
ಪೂರ್ವ	12	44	13	46
ಪಶ್ಚಿಮ	12	44	13	44
ದಕ್ಷಿಣ	12	44	14	44
ಒಟ್ಟು	64	198	75	225

ಸ್ಥಳ ನಿಯುಕ್ತಿಗೆ ಮನವಿ

'ಉಪ ಕಂದಾಯ ಅಧಿಕಾರಿ ಹುದ್ದೆಯಿಂದ ಕಂದಾಯ ಅಧಿಕಾರಿ ಹುದ್ದೆಗೆ, ಸಹ ಕಂದಾಯ ಅಧಿಕಾರಿ ಹುದ್ದೆಯಿಂದ ಸಹಾಯಕ ಆಯುಕ್ತರ ಹುದ್ದೆಗೆ ಮುಂಬಡ್ತಿ ನೀಡಿ ಆರು ತಿಂಗಳಾದರೂ ಅವರಿಗೆ ಸ್ಥಳ ನೀಡಿಲ್ಲ. ಇದರಿಂದ ಕೆಳಹಂತದ ಅಧಿಕಾರಿಗಳಿಗೆ ಮುಂಬಡ್ತಿ ಸಿಗುತ್ತಿಲ್ಲ' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘ ಹೇಳಿದೆ.

ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿದರುವ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, 'ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಮುಂಬಡ್ತಿ ಸಭೆಯಲ್ಲಿ ಮುಂಬಡ್ತಿಗಳನ್ನು ಅನುಮೋದಿಸಲಾಗಿದೆ. ಅವರಿಗೆ ಸ್ಥಳ ನಿಯೋಜಿಸಿ, ಅರ್ಹರಿಗೆ ಮುಂಬಡ್ತಿ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಚುನಾವಣಾ ತಕರಾರು ಅರ್ಜಿ: ಹ್ಯಾರಿಸ್ ಮನವಿ ತಿರಸ್ಕೃತ

ಬೆಂಗಳೂರು: 'ನನ್ನ ಆಯ್ಕೆಯನ್ನು ಅನೂರ್ಜಿತಗೊಳಿಸುವಂತೆ ಕೋರಿರುವ ಬಿಜೆಪಿಯ ಪರಾಜಿತ ಅಭ್ಯರ್ಥಿ ಕೆ.ಶಿವಕುಮಾರ್ ಅರ್ಜಿ ವಜಾಗೊಳಿಸಬೇಕು' ಎಂದು ಕೋರಿದ್ದ ಶಾಂತಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಶಾಸಕ ಎನ್.ಎ.ಹ್ಯಾರಿಸ್ ಅವರ ಮಧ್ಯಂತರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ ಕೆ.ಶಿವಕುಮಾರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದರಿಂದಾಗಿ ಶಿವಕುಮಾರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ಮುಂದುವರೆಯಲಿದೆ.

'ಒಂದು ವೇಳೆ ಪ್ರತಿವಾದಿ ಹ್ಯಾರಿಸ್ ಅವರ ಆಯ್ಕೆಯನ್ನು ಅನೂರ್ಜಿತ ಎಂದು ಘೋಷಿಸಿದರೂ, ಇದೇ ಕಾರಣದಿಂದಾಗಿ ಅರ್ಜಿದಾರ ಶಿವಕುಮಾರ್ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲು ಸಾಧ್ಯವಾಗುವುದಿಲ್ಲ. ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ ಆಧಾರಗಳ ಅವಶ್ಯಕತೆ ಇದೆ. ಹಾಗಾಗಿ, ಮಧ್ಯಂತರ ಅರ್ಜಿ ವಜಾಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ತಿಳಿಸಿದೆ.

'ಚುನಾವಣೆ ವೇಳೆಹ್ಯಾರಿಸ್ ಸಲ್ಲಿಸಿರುವ ಪ್ರಮಾಣ ಪತ್ರ ಅಸಮರ್ಪಕವಾಗಿದೆ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು. ನನ್ನನ್ನೇ ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಂದು ಘೋಷಿಸಬೇಕು' ಎಂದು ಕೋರಿ ಕೆ.ಶಿವಕುಮಾರ್ ಈ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ಸಪ್ತಸ್ವರ ಸಂಗೀತ ಸಂಜೆ ಕಾರ್ಯಕ್ರಮ ಇಂದು

ಬೆಂಗಳೂರು: ವಿಜಯ ಮ್ಯೂಸಿಕ್ ಸ್ಕೂಲ್ ವತಿಯಿಂದ ಇದೇ 23ರಂದು (ಶುಕ್ರವಾರ) 'ಸಪ್ತಸ್ವರ ಸಂಗೀತ ಸಂಜೆ' ಕಾರ್ಯಕ್ರಮವು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್, ಶಾಸಕರಾದ ಎಂ. ಕೃಷ್ಣಪ್ಪ, ಪ್ರದೀಪ್ ಈಶ್ವರ್, ಐಪಿಎಸ್ ಅಧಿಕಾರಿ ಅರುಣ್ ಚಕ್ರವರ್ತಿ, ಸಮಗ್ರ ಶಿಕ್ಷಣ ರಾಜ್ಯ ಯೋಜನಾ ನಿರ್ದೇಶಕ ಕೆ.ಎನ್. ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಡಿಸಿಪಿ ಸಿದ್ಧರಾಜು, ವಿಧಾನ ಪರಿಷತ್ತಿನ ಸದಸ್ಯ ಟಿ.ಎ. ಶರವಣ ಅವರನ್ನು ಸನ್ಮಾನಿಸ ಲಾಗುತ್ತದೆ.

ಸಂಗೀತ ನಿರ್ದೇಶಕರಾದ ಹಂಸಲೇಖ, ಅರ್ಜುನ್ ಜನ್ಯ, ನಟ ಶಶಿಕುಮಾರ್, ನಟಿ ಭವ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಸಂಗೀತ ನಿರ್ದೇಶಕ ರಾಜನ್–ನಾಗೇಂದ್ರ ಅವರು ರಾಗ ಸಂಯೋಜಿಸಿದ ಸುಮಧುರ ಗೀತೆಗಳ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮತ್ತೆ 'ಕೈ' ಹಿಡಿದ ಮುದ್ದಹನುಮೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ತ್ಯಜಿಸಿದ ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಅವರು ಗುರುವಾರ ಕಾಂಗ್ರೆಸ್‌ಗೆ ಮರಳಿದರು. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರು ಕಣಕ್ಕೆ ಇಳಿಯುವುದು ಬಹುತೇಕ ಖಚಿತವಾಗಿದೆ.

ಕೆಪಿಸಿಸಿ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮುದ್ದಹನುಮೇಗೌಡ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಕೆ.ಎನ್. ರಾಜಣ್ಣ, 'ಮುದ್ದಹನುಮೇಗೌಡರ ಬಗ್ಗೆ ಸಹಾನುಭೂತಿ, ಕೋಪ ಎರಡೂ ಇದೆ. ಬಿಜೆಪಿಗೆ ಹೋಗಬೇಡಿ, ನಿಮಗೆ ಸರಿ ಹೋಗುವುದಿಲ್ಲ ಎಂದು ಹೇಳಿದ್ದೆ... ಈಗ ಒಳ್ಳೆಯ ನಿರ್ಧಾರ ತೆಗೆದುಕೊಂಡು ಕಾಂಗ್ರೆಸ್‌ಗೆ ಮರಳಿದ್ದಾರೆ' ಎಂದರು.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ಬಾವುಟ ನೀಡಿ ಎಸ್‌.ಪಿ. ಮುದ್ದಹನುಮೇಗೌಡ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡಿರು. ಗುಬ್ಬಿ ಶ್ರೀನಿವಾಸ್, ಕೆ.ಎನ್. ರಾಜಣ್ಣ, ಜಿ. ಪರಮೇಶ್ವರ, ಕೆ.ವೈ. ನಂಜೇಗೌಡ, ಬಿ.ಎನ್. ಚಂದ್ರಪ್ಪ ಇದ್ದರು.

'ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದಾಗ ಮುದ್ದಹನುಮೇಗೌಡ ಅವರಿಗೆ ಲೋಕಸಭೆ ಚುನಾವಣೆಗೆ ಟಿಕೆಟ್ ನೀಡಿದ್ದೆ. ಹೈಕಮಾಂಡ್ ತೀರ್ಮಾನದಿಂದ 2019ರ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡಬೇಕಾಯಿತು. ಬೇರೆ ಪಕ್ಷಕ್ಕೆ ಮತ ಹಾಕದ ನಾವು ಜೆಡಿಎಸ್‌ಗೆ ಮತ ಹಾಕುವ ಪರಿಸ್ಥಿತಿ ಬಂತು. ತಪ್ಪಿನ ಅರಿವಾಗಿ ಪಕ್ಷಕ್ಕೆ ವಾಪಸಾಗಿದ್ದಾರೆ' ಎಂದು ಜಿ. ಪರಮೇಶ್ವರ ಹೇಳಿದರು.

ಶಿವಕುಮಾರ್ ಮಾತನಾಡಿ, 'ಯಾವುದೇ ಷರತ್ತು ಹಾಕದೇ ಮುದ್ದಹನುಮೇಗೌಡರು ಪಕ್ಷಕ್ಕೆ ಸೇರಿದ್ದಾರೆ. ನಾವು ಯಾರಿಗೆ ಟಿಕೆಟ್ ನೀಡುತ್ತೇವೊ ಅವರ ಪರ ಕೆಲಸ ಮಾಡಬೇಕು. ಇದು ಕಾಂಗ್ರೆಸ್ ಪಕ್ಷದ ಶಿಸ್ತು. ಮುದ್ದಹನುಮೇಗೌಡರ ಪಕ್ಷ ಸೇರ್ಪಡೆ ವಿಚಾರವಾಗಿ ರಾಜಣ್ಣ, ಶ್ರೀನಿವಾಸ್ ಸೇರಿದಂತೆ ತುಮಕೂರು ಜಿಲ್ಲೆಯ ಎಲ್ಲ ನಾಯಕರು ಚರ್ಚಿಸಿ ತೀರ್ಮಾನಕ್ಕೆ ಬಂದಿದ್ದೇವೆ' ಎಂದರು.

'ಮಾಜಿ ಶಾಸಕ ಗೌರಿಶಂಕರ್ ಅವರನ್ನು ಈಗಾಗಲೇ ಪಕ್ಷಕ್ಕೆ ಸೇರಿಸಿಕೊಂಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಅನೇಕರು ಕಾಂಗ್ರೆಸ್ ಸೇರಲು ಉತ್ಸುಕರಾಗಿದ್ದಾರೆ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ತುಮಕೂರು ಕ್ಷೇತ್ರಕ್ಕೆ ಆ ಜಿಲ್ಲೆಯವರು ಹೇಳಿದವರನ್ನು ಅಭ್ಯರ್ಥಿ ಮಾಡುತ್ತೇವೆ. ತುಮಕೂರು ಸೇರಿದಂತೆ ಇಡೀ ರಾಜ್ಯದಲ್ಲಿ ಉತ್ತಮ ವಾತಾವರಣ ಇದೆ. ಬಿಜೆಪಿಯವರು ಏನೇ ಹೇಳಲಿ, ನಾವು ಕನಿಷ್ಠ 20 ಸ್ಥಾನ ಗೆಲ್ಲುತ್ತೇವೆ. ಏನೇ ಭಿನ್ನಾಭಿಪ್ರಾಯ ಇದ್ದರೂ ಒಗ್ಗಟ್ಟಿನಿಂದ ಕೆಲಸ ಮಾಡಿ' ಎಂದು ತುಮಕೂರಿನ ಪಕ್ಷದ ನಾಯಕರಿಗೆ ಕರೆ ನೀಡಿದರು.

> **ಚುನಾವಣೆ ವಿಚಾರಕ್ಕೆ ಪಕ್ಷಾಂತರ ಮಾಡಿದ್ದೆ. ರಾಜಕೀಯ ಬದುಕು ಕೊಟ್ಟ ಪಕ್ಷದಲ್ಲಿ ಮುಂದುವರಿಯಲು ನಿರ್ಧರಿಸಿದ್ದೇನೆ**
> **ಎಸ್.ಪಿ. ಮುದ್ದಹನುಮೇಗೌಡ,** ಮಾಜಿ ಸಂಸದ

ಹನುಮಂತಯ್ಯಗೆ ಪರಿಷತ್ ಸದಸ್ಯ ಸ್ಥಾನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್. ಹನುಮಂತಯ್ಯ ಅವರಿಗೆ ಕಾಂಗ್ರೆಸ್‌ನಿಂದ ರಾಜ್ಯಸಭೆಯ ಟಿಕೆಟ್ ಕೈತಪ್ಪಿರುವುದರಿಂದ ಮಾದಿಗ ಸಮುದಾಯಕ್ಕೆ ಅನ್ಯಾಯ ಆಗಿದೆ. ಆದ್ದರಿಂದ, ಅವರನ್ನು ವಿಧಾನ ಪರಿಷತ್ತಿನ ಸದಸ್ಯರನ್ನಾಗಿ ಮಾಡಿ ಸಚಿವ ಸ್ಥಾನ ನೀಡಬೇಕು' ಎಂದು ಕರ್ನಾಟಕ ರಾಜ್ಯ ಮಾದಿಗ ಸಂಘಟನೆಗಳ ಒಕ್ಕೂಟವು ಸರ್ಕಾರವನ್ನು ಒತ್ತಾಯಿಸಿದೆ.

ಹನುಮಂತಯ್ಯ

'ವಿಧಾನಪರಿಷತ್ ಸದಸ್ಯ ಸ್ಥಾನ ನೀಡದಿದ್ದರೆ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ಒಕ್ಕೂಟ ಎಚ್ಚರಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾದಿಗ ಮೀಸಲಾತಿ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಕೇಶವಮೂರ್ತಿ, 'ಎಲ್. ಹನುಮಂತಯ್ಯ ಅವರು ಸಂಸತ್ತಿನಲ್ಲಿ ಶೋಷಿತ ಸಮುದಾಯಗಳ ಪರವಾಗಿ ಧ್ವನಿ ಎತ್ತುತ್ತಿದ್ದರು. ಆದರೆ, ಕಾಂಗ್ರೆಸ್ ಪಕ್ಷ ಈ ಬಾರಿ ಅವರನ್ನು ರಾಜ್ಯಸಭೆ ಸದಸ್ಯರನ್ನಾಗಿ ಮುಂದುವರಿಸದೇ, ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡಿದೆ. ಇದರಿಂದ ಬಹಳ ನೋವು ಉಂಟಾಗಿದೆ' ಎಂದು ಹೇಳಿದರು.

'ಕರ್ನಾಟಕದ ಮಾದಿಗ ಸಮುದಾಯಕ್ಕೆ ಸಲ್ಲಬೇಕಾಗಿದ್ದ ರಾಜ್ಯಸಭೆ ಸದಸ್ಯ ಸ್ಥಾನವನ್ನು ಕಾಂಗ್ರೆಸ್ ಯಾರೋ ದೆಹಲಿವಾಲನಿಗೆ ನೀಡಿರುವುದು ಖಂಡನೀಯ. ಮಲ್ಲಿಕಾರ್ಜುನ ಖರ್ಗೆಯವರು ಎಐಸಿಸಿ ಅಧ್ಯಕ್ಷರಾಗಿರುವ ಕಾಲದಲ್ಲೂ ಮಾದಿಗ ಸಮುದಾಯಕ್ಕೆ ಸರಿಯಾದ ಪ್ರಾತಿನಿಧ್ಯ ಸಿಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಮಾದಿಗ ದಂಡೋರ ಜಾಗೃತಿ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಂ.ಸಿ. ಶ್ರೀನಿವಾಸ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನರಸಿಂಹ ಕೆ.ಬಿ., ಎನ್. ಮೂರ್ತಿ ಪಾಲ್ಗೊಂಡಿದ್ದರು.

ಶ್ರೀ ರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ಸ್ ಟ್ರಸ್ಟ್ ಏ.9ರಿಂದ ಮೇ 10ರವರೆಗೆ ಹಮ್ಮಿಕೊಂಡಿರುವ '86ನೇ ಶ್ರೀ ರಾಮನವಮಿ ಜಾಗತಿಕ ಸಂಗೀತೋತ್ಸವ-2024'ರ ವಿಶೇಷ ಪೆಂಡಾಲ್‌ನ ಗುದ್ದಲಿ ಪೂಜೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ ಸದಸ್ಯ ಎಸ್. ಶಿವಶೈಲಂ, ಮಂಡಳಿ ಅಧ್ಯಕ್ಷ ಸಿ.ಎಸ್. ಕೇದಾರ್ ಅವರು ಚಾಮರಾಜಪೇಟೆಯ ಹಳೆ ಕೋಟೆ ಪ್ರೌಢಶಾಲೆ ಮೈದಾನದಲ್ಲಿ ಗುರುವಾರ ನೆರವೇರಿಸಿದರು. ಮಂಡಳಿಯ ಅಭಿಜಿತ್ ವರದರಾಜ್, ಸಂಸ್ಕೃತಿ ಸಚಿವಾಲಯದ ನಿರ್ದೇಶಕ ದಲ್ಜಿತ್ ಸಿಂಗ್, ಸುಬ್ಬಣ್ಣ, ಪಿ. ಬಾಲಸುಬ್ರಮಣ್ಯಂ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಬಿಜೆಪಿ ಬಿಡುವುದಿಲ್ಲ: ಸುಧಾಕರ್

ಚಿಕ್ಕಬಳ್ಳಾಪುರ: 'ಜನರ ದಿಕ್ಕು ತಪ್ಪಿಸುವ ಉದ್ದೇಶದಿಂದ ನಾನು ಪಕ್ಷ ತೊರೆಯುತ್ತೇನೆ ಎಂಬ ಊಹಾಪೋಹಗಳನ್ನು ಕೆಲವರು ಪದೇ ಪದೇ ಹುಟ್ಟು ಹಾಕುತ್ತಿದ್ದಾರೆ. ಮಾಧ್ಯಮಗಳು ಇಂತಹ ವದಂತಿಗೆ ಕಿವಿಗೊಡಬಾರದು ಎಂದು ಮನವಿ ಮಾಡುತ್ತೇನೆ'–ಹೀಗೆಂದು ಮಾಜಿ ಸಚಿವ ಡಾ.ಕೆ.ಸುಧಾಕರ್ 'ಎಕ್ಸ್'ನಲ್ಲಿ ಬರಹ ಪ್ರಕಟಿಸಿದ್ದಾರೆ. ಅಲ್ಲದೆ ಫೇಸ್‌ಬುಕ್‌ನಲ್ಲಿಯೂ 'ನಾನು ಬಿಜೆಪಿ ತೊರೆಯುವುದಿಲ್ಲ' ಎಂದು ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭೆ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ ಡಾ.ಕೆ. ಸುಧಾಕರ್ ಪ್ರಮುಖರಾಗಿದ್ದಾರೆ. ಟಿಕೆಟ್ ದೊರೆಯುವುದು ಅನಿಶ್ಚಿತವಾಗಿದೆ. ಆದ್ದರಿಂದ ಅವರು ಕಾಂಗ್ರೆಸ್ ಸೇರುತ್ತಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ ಎಂಬ ಸುದ್ದಿಗಳು ವ್ಯಾಪಕವಾಗಿ ಹರಿದಾಡುತ್ತಿವೆ.

ವೀರಶೈವ–ಲಿಂಗಾಯತ ನಿಗಮಕ್ಕೆ ₹500 ಕೋಟಿ ಕೊಡಿ: ವಿಜಯಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ-ಲಿಂಗಾಯತ ಸಮುದಾಯದ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ನಿಗಮಕ್ಕೆ ಹೆಚ್ಚುವರಿಯಾಗಿ ₹500 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಕರ್ನಾಟಕ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

'ಸಿದ್ದರಾಮಯ್ಯನವರು ನನ್ನ ಮೇಲೆ ಅಪಾರ ನಂಬಿಕೆ ಇರಿಸಿ, ನಿಗಮದ ಜವಾಬ್ದಾರಿ ವಹಿಸಿದ್ದಾರೆ. ಅವರ ಸಮ್ಮುಖದಲ್ಲೇ ಅಧಿಕಾರ ಸ್ವೀಕರಿಸಿರುವೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ವೀರಶೈವ-ಲಿಂಗಾಯತ ಸಮುದಾಯಕ್ಕೆ ನ್ಯಾಯ ಒದಗಿಸುವ ಕರ್ತವ್ಯ ನಿಭಾಯಿಸುವೆ' ಎಂದು ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ವಿಜಯಾನಂದ ಕಾಶಪ್ಪನವರ

ನಿಗಮದ ಮೂಲಕ ಬಸವ ಬೆಳಗು, ವಿದೇಶ ವಿದ್ಯಾ ವಿಕಾಸ, ಕಾಯಕ ಕಿರಣ, ಜೀವಜಲ, ಸ್ವಾವಲಂಬಿ ಸಾರಥಿ, ವಿಭೂತಿ ನಿರ್ಮಾಣ ಘಟಕ ಸ್ಥಾಪನೆ, ಭೋಜನಾಲಯ ಕೇಂದ್ರ ಮತ್ತು ಸ್ವಯಂ ಉದ್ಯೋಗ ಯೋಜನೆಗಳು ಜಾರಿಯಲ್ಲಿವೆ. ನಿಗಮದ 10 ಯೋಜನೆಗಳಿಗೆ 59,027 ಅರ್ಜಿಗಳು ಸಲ್ಲಿಕೆಯಾಗಿವೆ. ಅವರಿಗೆಲ್ಲ ಸೌಲಭ್ಯ ಕಲ್ಪಿಸಲು ಅನುದಾನದ ಅಗತ್ಯವಿದೆ ಎಂದರು.

'ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ನಿಗಮದ ಆರಂಭದ ವೇಳೆ ₹500 ಕೋಟಿ ಅನುದಾನ ಘೋಷಣೆ ಮಾಡಿ, ₹100 ಕೋಟಿ ಬಿಡುಗಡೆ ಮಾಡಿದ್ದರು. ಕಳೆದ ಸರ್ಕಾರ ಸಹ ಯಾವುದೇ ನಿಗಮಕ್ಕೂ ಆದ್ಯತೆ ನೀಡಿಲ್ಲ. ನಮ್ಮ ನಿಗಮಕ್ಕೆ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿದ್ದು, ಹೆಚ್ಚಿನ ಅನುದಾನ ತರಲಾಗುತ್ತದೆ' ಎಂದು ವಿಜಯಾನಂದ ಕಾಶಪ್ಪನವರ ವಿಶ್ವಾಸ ವ್ಯಕ್ತಪಡಿಸಿದರು.

'ಕನ್ನಡದ ತಂಟೆಗೆ ಬಂದರೆ ಸುಮ್ಮನಿರೆವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಮಫಲಕಗಳಲ್ಲಿ ಶೇ 60ರಷ್ಟು ಭಾಗವು ಕನ್ನಡದಲ್ಲಿ ಕಡ್ಡಾಯವಾಗಿ ಇರಬೇಕು ಎಂಬ ಬಗ್ಗೆ ಮಸೂದೆ ಜಾರಿಗೆ ತಂದರೆ ಅದನ್ನು ಪ್ರಶ್ನಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಸಂಘಟನೆಯವರು ಯಾರು? ಕನ್ನಡದ ತಂಟೆಗೆ ಬಂದರೆ ಸುಮ್ಮನಿರುವುದಿಲ್ಲ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಎಚ್ಚರಿಕೆ ನೀಡಿದರು.

ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸುವ ಮಸೂದೆ ವಿಧಾನಮಂಡಲದಲ್ಲಿ ಅಂಗೀಕರವಾದ ಬೆನ್ನಲ್ಲಿಯೇ ಮಹಾರಾಷ್ಟ್ರ ಸಚಿವ ಶಂಭುರಾಜ್ ದೇಸಾಯಿ ನೇತೃತ್ವದಲ್ಲಿ ಎಂಇಎಸ್ ಕಾರ್ಯಕರ್ತರು ಸಭೆ ನಡೆಸಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ನಮ್ಮ ರಾಜ್ಯದಲ್ಲಿ ನಾವು ಕಾಯ್ದೆ ರೂಪಿಸುತ್ತೇವೆ. ಮಹಾರಾಷ್ಟ್ರದಲ್ಲಿ ಏನಾದರೂ ನಾಮಫಲಕದಲ್ಲಿ ಕನ್ನಡ ಹಾಕಿ ಎಂದು ಹೇಳಿದ್ದೇವೆಯೆ' ಎಂದರು.

'ಮಸೂದೆಯನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುತ್ತೇವೆ. ಈ ನೆಲದ ಶಾಸನವನ್ನು ಪ್ರಶ್ನೆ ಮಾಡಲು ಮಹಾರಾಷ್ಟ್ರದವರು ಯಾರು? ಈ ಬಗ್ಗೆ ಕೇಳಲು ಕೂಡ ಮಹಾರಾಷ್ಟ್ರಕ್ಕೆ ಅಧಿಕಾರ ಇಲ್ಲ. ನಾಮಫಲಕದಲ್ಲಿ ಕನ್ನಡ ಅಳವಡಿಸುವ ಕೆಲಸ ಮಾಡುವುದು ನಿಶ್ಚಿತ' ಎಂದು ಹೇಳಿದರು.

'ಕನ್ನಡದ ವಿಚಾರಕ್ಕೆ ಬಂದಾಗ ಸರ್ಕಾರ ಕಠಿಣ ಕ್ರಮಕೈಗೊಳ್ಳಲಿದೆ. ಇಲ್ಲಿ ಗಡಿ ಜಿಲ್ಲೆ, ಮಧ್ಯ ಕರ್ನಾಟಕ ಎಂಬ ವಿಂಗಡಣೆಯಿಲ್ಲ. ಇಡೀ ರಾಜ್ಯದಲ್ಲಿ ನಾಮಫಲಕಗಳಲ್ಲಿ ಕಡ್ಡಾಯವಾಗಿ ಶೇ 60ರಷ್ಟು ಕನ್ನಡ ಬಳಕೆ ಆಗಬೇಕು' ಎಂದು ತಿಳಿಸಿದರು.

'ಸ್ಟಾರ್ ಚಂದ್ರು ಮಂಡ್ಯ ಕಾಂಗ್ರೆಸ್ ಅಭ್ಯರ್ಥಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ನಾಗಮಂಗಲ ತಾಲ್ಲೂಕು ಕನ್ನಾಘಟ್ಟ ಗ್ರಾಮದ ಉದ್ಯಮಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರೆ' ಎಂದು ಶಾಸಕ ಗಣಿಗ ರವಿಕುಮಾರ್ ಹೇಳಿದರು.



ಸ್ಟಾರ್ ಚಂದ್ರು

ನಗರದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಾಸಕರು ಜೊತೆಯಲ್ಲಿದ್ದ ಸ್ಟಾರ್ ಚಂದ್ರು ಅವರನ್ನು ಜನರಿಗೆ ಪರಿಚಯಿಸಿ ಮಾತನಾಡಿದರು. 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅವರಿಗೆ ಮತ ಹಾಕಬೇಕು' ಎಂದು ಮನವಿ ಮಾಡಿದರು.

'ಕಾಂಗ್ರೆಸ್ ಮುಖಂಡರೆಲ್ಲರೂ ಒಗ್ಗಟ್ಟಿನಿಂದ ಸ್ಟಾರ್ ಚಂದ್ರು ಅವರನ್ನು ಕಣಕ್ಕಿಳಿಸಲು ನಿರ್ಧಾರ ಕೈಗೊಂಡಿದ್ದೇವೆ. ಗೌರಿಬಿದನೂರು ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಅವರ ಸಹೋದರರಾಗಿರುವ ಚಂದ್ರು ಸಮಾಜ ಸೇವೆಯಲ್ಲಿ ಗುರುತಿಸಿಕೊಂಡಿದ್ದಾರೆ. ಬೆಳ್ಳೂರು, ಆದಿಚುಂಚನಗಿರಿಯಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಿದ್ದಾರೆ' ಎಂದರು.

'ಚಂದ್ರು ಅವರಿಗೆ ಜಿಲ್ಲೆಯ ಜನ ಆಶೀರ್ವಾದ ಮಾಡಬೇಕು' ಎಂದರು.

ಸಾರಿಗೆ ನೌಕರರ ಉಪವಾಸ ಸತ್ಯಾಗ್ರಹ

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಸದಸ್ಯರು ಉಪವಾಸ ಸತ್ಯಾಗ್ರಹ ನಡೆಸಿದರು –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ, 38 ತಿಂಗಳ ವೇತನ ಬಾಕಿ ಪಾವತಿ, ಶಕ್ತಿಯೋಜನೆಯ ಪೂರ್ಣ ಹಣ ಬಿಡುಗಡೆ ಮತ್ತಿತರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ವತಿಯಿಂದ ಗುರುವಾರ ಉಪವಾಸ ಸತ್ಯಾಗ್ರಹ ನಡೆಯಿತು.

ಮೂಲ ವೇತನದಲ್ಲಿ ಶೇ 25ರಷ್ಟು ಹೆಚ್ಚಳ ಮಾಡಬೇಕು. ಬಾಕಿ ವೇತನವನ್ನು ನಿವೃತ್ತರಾದಿಯಾಗಿ ಎಲ್ಲರಿಗೂ ನೀಡಲು ಸರ್ಕಾರ ಹಣ ಮಂಜೂರು ಮಾಡಬೇಕು. ಬಾಕಿ ಉಳಿಸಿಕೊಂಡಿರುವ ಪಿಎಫ್, ಗ್ರಾಚ್ಯುಟಿ, ರಜೆ ನಗದೀಕರಣವನ್ನು ನೀಡಲು ಸಾರಿಗೆ ನಿಗಮಗಳಿಗೆ ₹2000 ಕೋಟಿ ಒದಗಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಾರಿಗೆ ನೌಕರರು ಮತ್ತು ಅವರ ಕುಟುಂಬದವರಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ರಿಯಾಯಿತಿ ದರದಲ್ಲಿ ಕ್ಯಾಂಟೀನ್ ಸೌಲಭ್ಯ ನೀಡಬೇಕು. ಮಹಿಳಾ ನೌಕರರಿಗೆ ಬಸ್ ನಿಲ್ದಾಣಗಳಲ್ಲಿ ವಿಶ್ರಾಂತಿ ಕೊಠಡಿ ಒದಗಿಸಬೇಕು. ಶಿಶುಪಾಲನಾ ಕೇಂದ್ರಗಳನ್ನು ತೆರೆಯಬೇಕು. ನಾಲ್ಕು ಸಾರಿಗೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಬೇಗ ಪೂರ್ಣಗೊಳಿಸಬೇಕು. ವಿದ್ಯುತ್ ಚಾಲಿತ ಬಸ್‌ಗಳಿಗೆ ಸಂಸ್ಥೆಯೇ ಚಾಲಕರನ್ನು ನಿಯೋಜಿಸಬೇಕು ಎಂದು ಒತ್ತಾಯಿಸಿದರು.

ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ (ಎಐಟಿಯುಸಿ), ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನೌಕರರ ಸಂಘ, ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಇಲಿನಾಯ್ಸ್ ವಿ.ವಿ - ಎಂ.ಎಸ್.ರಾಮಯ್ಯ ವಿ.ವಿ ಸಹಯೋಗ

ಶೈಕ್ಷಣಿಕ, ಸಂಶೋಧನೆ: ಜ್ಞಾನ ವಿನಿಮಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೈಕ್ಷಣಿಕ, ಸಂಶೋಧನೆ, ಎಂಜಿನಿಯರಿಂಗ್ ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿ ಹಾಗೂ ಮಾಹಿತಿ ಹಂಚಿಕೆ ಉದ್ದೇಶದಿಂದ ಅಮೆರಿಕದ ಇಲಿನಾಯ್ಸ್ ವಿಶ್ವವಿದ್ಯಾಲಯ ಹಾಗೂ ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ನಡುವೆ ಸಹಯೋಗ ಏರ್ಪಟ್ಟಿದೆ.

ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್, ಸೈಬರ್ ಸುರಕ್ಷತೆ, ಇಂಧನ ಸಂರಕ್ಷಣೆ ಹಾಗೂ ಇತರೆ ವಿಷಯಗಳ ಬಗ್ಗೆ ಎರಡೂ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಪರಸ್ಪರ ಜ್ಞಾನ ಹಂಚಿಕೆ ಮಾಡಿಕೊಳ್ಳಲಿದ್ದಾರೆ.

ನಗರದ ರಾಮಯ್ಯ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಇಲಿನಾಯ್ಸ್ ವಿಶ್ವವಿದ್ಯಾಲಯದ ಅಧ್ಯಕ್ಷ ಡಾ. ತಿಮೊತಿ ಕಿಲ್ಲೀನ್ ಅವರು ಸಹಯೋಗದ ಬಗ್ಗೆ ಮಾಹಿತಿ ನೀಡಿದರು. 'ಇಲಿನಾಯ್ಸ್ ವಿಶ್ವವಿದ್ಯಾಲಯ ಭಾರತದೊಂದಿಗೆ ದೀರ್ಘಕಾಲದ ನಂಟು ಹೊಂದಿದೆ. 1910ರಲ್ಲಿ ಕವಿ ರವೀಂದ್ರನಾಥ ಟ್ಯಾಗೋರ್ ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದರು. 2000ನೇ ಇಸವಿಯಿಂದ ಇಲ್ಲಿವರೆಗೆ ನಮ್ಮ ವಿವಿಯಲ್ಲಿ 50 ಸಾವಿರಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದಾರೆ. ಪ್ರಸ್ತುತ 4,900 ವಿದ್ಯಾರ್ಥಿಗಳು ವಿ.ವಿ.ಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ' ಎಂದು ಡಾ. ಕಿಲ್ಲೀನ್ ಹೇಳಿದರು.

ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ. ಎಂ.ಆರ್. ಜಯರಾಮ್, 'ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ, ಇಂಧನ ಸಂರಕ್ಷಣೆ, ಮಷಿನ್ ಲರ್ನಿಂಗ್‌ನಂತಹ ಎಂಜಿನಿಯರಿಂಗ್ ಪದವಿ ಕೋರ್ಸ್‌ಗಳ ಕಲಿಕೆ ಮತ್ತು ಕೌಶಲ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿವೆ. ಇಲಿನಾಯ್ ವಿವಿ ಜೊತೆಗಿನ ಸಹಯೋಗದಿಂದ ಅದು ಸಾಕಾರಗೊಳ್ಳಲಿದೆ' ಎಂದರು.

'ಎರಡು ಪ್ರಮುಖ ಶೈಕ್ಷಣಿಕ ಸಂಸ್ಥೆಗಳ ನಡುವೆ ಜ್ಞಾನ ವಿನಿಮಯಕ್ಕೆ ಇದು ಸಕಾಲವಾಗಿದೆ. ಸಮಾಜದ ಅಭಿವೃದ್ಧಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಜ್ಞಾನ ಪ್ರಸಾರಕ್ಕೆ ಎರಡೂ ಸಂಸ್ಥೆಗಳು ಜಂಟಿಯಾಗಿ ಶ್ರಮಿಸಲಿವೆ' ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಾ. ಎಂ.ಆರ್. ಜಯರಾಮ್ ಮತ್ತು ಡಾ. ತಿಮೊತಿ ಕಿಲ್ಲೀನ್ ಪರಸ್ಪರ ಹಸ್ತಲಾಘವ ನೀಡಿದರು. ಪ್ರೊ. ಕುಲದೀಪ್ ಕೆ. ರೈನಾ, ಡಾ.ಎಂ.ಆರ್. ಶ್ರೀನಿವಾಸ ಮೂರ್ತಿ, ಡಾ. ಬೆಳ್ಳೂರು ಪ್ರಭಾಕರ್ ಹಾಜರಿದ್ದರು.

ಇಲಿನಾಯ್ಸ್ ಮಂಡಳಿಯ ಟ್ರಸ್ಟಿ ಎಡ್ವರ್ಡ್ಸ್, ಇಲಿನಾಯ್ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಶಾಸ್ತ್ರ ಮತ್ತು ರೋಗ ನಿರೋಧಕ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮತ್ತು ಹಿರಿಯ ಡೀನ್ ಡಾ. ಬೆಳ್ಳೂರು ಪ್ರಭಾಕರ್, ಆರ್ಥಿಕ ಅಭಿವೃದ್ಧಿ ಮತ್ತು ಅನ್ವೇಷಣೆಯ ವಿಭಾಗದ ಉಪಾಧ್ಯಕ್ಷ ಜೇ ವಾಲ್ಸ್, ಗೋಕುಲ ಶಿಕ್ಷಣ ಪ್ರತಿಷ್ಠಾನದ (ವೈದ್ಯಕೀಯ) ಮುಖ್ಯ ಕಾರ್ಯನಿರ್ವಾಹಕ ಶ್ರೀನಿವಾಸ ಮೂರ್ತಿ ಮತ್ತು ಕುಲಪತಿ ಪ್ರೊ. ಕುಲದೀಪ್ ರೈನಾ ಹಾಜರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಭಾಷಾ ಮೇಳ–2024: ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ಚೂಡಾಮಣಿ ನಂದಗೋಪಾಲ್, ಥಿಯೆರ್ರಿ ಬರ್ಥಲೋಟ್, ಅಲ್ಫೊನ್ಸೊ ಟ್ಯಾಗ್ಲಿಯಾಫೆರಿ, ಸುಮನ್ ವೆಂಕಟೇಶ್, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 10

ಎಸ್.ಸಿ., ಎಸ್.ಟಿ ಜನಾಂಗಗಳ ವಿಶೇಷ ಘಟಕ ಯೋಜನೆ ಹಣದ ದುರಪಯೋಗ 'ದುಂಡು ಮೇಜಿನ ಸಭೆ': ಉದ್ಘಾಟನೆ: ಎಂ. ವೆಂಕಟಸ್ವಾಮಿ, ಪ್ರಾಸ್ತಾವಿಕ ನುಡಿ: ಪಾವಗಡ ಶ್ರೀರಾಮ್, ಅಧ್ಯಕ್ಷತೆ: ಅಶ್ವತ್ಥ ಅಂತ್ಯಜ, ಭಾಗವಹಿಸುವವರು: ಹೆಬ್ಬಾಳ ವೆಂಕಟೇಶ್, ಮುತ್ತುರಾಜ್, ಬಾಲಕೃಷ್ಣ, ಯಶೋಧ, ಬಿ.ಸಿ. ವೆಂಕಟರಮಣಪ್ಪ, ಕಂದೇಗಾಲ ಶಿವಣ್ಣ, ಆಯೋಜನೆ: ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಶಾಸಕರ ಸಭಾಂಗಣ, ಶಾಸಕರ ಭವನ, ಬೆಳಿಗ್ಗೆ 11

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಉದ್ಘಾಟನೆ: ಪ್ರಜಾಸ್ನೇಹಿ ಕಾರ್ಯಾಗಾರದ ಉದ್ಘಾಟನೆ: ಲಕ್ಷ್ಮೀ ಹೆಬ್ಬಾಳ್ಕರ್, ಅತಿಥಿಗಳು: ವಿ.ಎಸ್. ಉಗ್ರಪ್ಪ, ಉಪಸ್ಥಿತಿ: ಮೋಟಮ್ಮ, ಅಧ್ಯಕ್ಷತೆ: ರೋಶನಿ ಗೌಡ, ಸಂಘದ ಉದ್ಘಾಟನೆ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಆಯೋಜನೆ: ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ, ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2

ದಿಬ್ಬೂರು ಸಿದ್ಧಲಿಂಗಪ್ಪ ಪುಣ್ಯಸ್ಮರಣೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಸಿ. ಸೋಮಶೇಖರ್, ನುಡಿ ನಮನ: ಗೊ.ರು. ಚನ್ನಬಸಪ್ಪ, ಅರವಿಂದ ಜತ್ತಿ, ಲೀಲಾದೇವಿ ಆರ್. ಪ್ರಸಾದ್, ಬಿ.ಎಸ್. ಪರಮಶಿವಯ್ಯ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಶಿವರಾತ್ರೀಶ್ವರ ವೃತ್ತ, ಜಯನಗರ, ಸಂಜೆ 4

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ:nagaradalli_indu@prajavani.co.in

ಧ್ವನಿಸಾಂದ್ರಿಕೆ ಬಿಡುಗಡೆ, ಪುತ್ತೂರು ನರಸಿಂಹ ನಾಯಕ್ ಅವರಿಗೆ ಅಭಿನಂದನೆ: ಉದ್ಘಾಟನೆ: ಜೆ. ರವಿಶಂಕರ್, ಅಧ್ಯಕ್ಷತೆ: ಮನು ಬಳಿಗಾರ್, ಧ್ವನಿಸಾಂದ್ರಿಕೆ ಬಿಡುಗಡೆ: ಜಾಣಗೆರೆ ವೆಂಕಟರಾಮಯ್ಯ, ಅಭಿನಂದಿತರು: ಪುತ್ತೂರು ನರಸಿಂಹ ನಾಯಕ್, ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಆನಂದ ಮಾದಲಗೆರೆ, ಎಂ. ಕೃಷ್ಣಮೂರ್ತಿ, ಆಯೋಜನೆ: ಇಂಚರ ಸುಗಮಸಂಗೀತ ಸಂಸ್ಥೆ, ಕನ್ನಡ ಅಭಿವೃದ್ಧಿ ಪ್ರತಿಷ್ಠಾನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ನರಸಿಂಹ ನಾಯಕ್

ಹರಿದಾಸ ಉತ್ಸವ: ಗಾಯನ: ಸಂಗೀತ ಶ್ರೀಕಿಷನ್, ಪಿಟೀಲು: ಆದಿತ್ಯ ಮಣಿಕರ್ಣಿಕ, ಮೃದಂಗ: ಪೃಥ್ವಿ ಕೃಷ್ಣ, ಆಯೋಜನೆ: ಸಂಗೀತ ಸಂಭ್ರಮ ಟ್ರಸ್ ಕಾಡುಮಲ್ಲೇಶ್ವರ ಗೆಳೆಯರ ಬಳಗ, ಮಲ್ಲೇಶ್ವರ ಶ್ಯಾಮಲಾ ಕೃಷ್ಣ ಸಂಗೀತ ಸಭಾ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 5ರಿಂದ

ವಾರ್ಷಿಕ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಆರ್.ಎ. ರಮಾಮಣಿ, ಪಿಟೀಲು: ನಳಿನಾ ಮೋಹನ್, ಮೃದಂಗ: ಅರ್ಜುನ್ ಕುಮಾರ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಶಾರದಾ ಸಂಗೀತ ಸಭಾ ಟ್ರಸ್ಟ್, ಸ್ಥಳ: ತ್ಯಾಗೀಶಾನಂದ ಸಭಾಂಗಣ, ಹನುಮಂತನಗರ, ಸಂಜೆ 6ರಿಂದ

'ನೀಲಗಿರಿ ಬೆಟ್ಟಗಳ' ಕುರಿತು ಸಂವಾದ, ಛಾಯಾಚಿತ್ರ ಪ್ರದರ್ಶನ: ಭಾಷಣಕಾರರು: ಶಾರದಾ ಶ್ರೀನಿವಾಸನ್, ಜಾನಕಿಯಮ್ಮ, ಪಿ. ಚಂದ್ರನ್, ರಂಜನಿ ಪ್ರಸಾದ್, ಫೈಸಲ್ ರೆಹಮಾನ್, ತರುಣ್ ಛಾಬ್ರಾ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 7ರಿಂದ

ಹರಿನಾಮ ಸಂಕೀರ್ತನೆ: ಗಾಯನ: ಶ್ರೀಲಕ್ಷ್ಮಿ ಹರೀಶ್, ಕೀ–ಬೋರ್ಡ್: ರಮೇಶ, ತಬಲಾ: ಮೋಹನ್, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪ್ರಕಾಶನಗರ, ಸಂಜೆ 7

4 ಮಸೂದೆಗಳಿಗೆ ಪರಿಷತ್ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನಲ್ಲಿ ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಮಸೂದೆ, ಕರ್ನಾಟಕ ಸ್ಟಾಂಪು ತಿದ್ದುಪಡಿ ಮಸೂದೆ ಮತ್ತು ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆಗಳಿಗೆ ಗುರುವಾರ ಅಂಗೀಕಾರ ನೀಡಲಾಯಿತು.

ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ ಮಂಡಿಸಿ ವಿವರಣೆ ನೀಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ಆಸ್ತಿ ನೋಂದಣಿಗೆ ಇ-ಖಾತಾ ಕಡ್ಡಾಯವಾಗಿ ಹೊಂದಿರಬೇಕು. ಭೂ ಅವ್ಯವಹಾರಕ್ಕೆ ಕಡಿವಾಣ ಹಾಕಲು ಹಾಗೂ ಆನ್ ಲೈನ್ ವ್ಯವಸ್ಥೆಗೆ ಒತ್ತು ಕೊಡಲು ಈ ಮಸೂದೆ ತರಲಾಗುತ್ತಿದೆ' ಎಂದರು.

'ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಡೆದ ತನಿಖೆಯಲ್ಲಿ ಅಕ್ರಮ ನೋಂದಣಿಯಿಂದ ಸುಮಾರು ₹ 300 ಕೋಟಿ ವಂಚನೆಯಾಗಿರುವುದು ಗೊತ್ತಾಗಿತ್ತು. ಈ ಸಂಬಂಧ 28 ಉಪ ನೋಂದಣಾಧಿಕಾರಿಗಳನ್ನು ತನಿಖೆಗೆ ಒಳಪಡಿಸಲಾಗಿತ್ತು. ಆದರೆ, ಇ-ಖಾತಾ ಕಡ್ಡಾಯವಾಗಿ ಹೊಂದಿರಬೇಕೆಂದು ಕಾಯ್ದೆಯಲ್ಲಿ ಇಲ್ಲದೇ ಇದ್ದುದರಿಂದ ಅವರೆಲ್ಲ ಆರೋಪ ಮುಕ್ತರಾಗಿದ್ದರು' ಎಂದರು.

ದೂರು ನೀಡಲು ಸಹಾಯವಾಣಿ: 'ಉಪ ನೋಂದಣಾಧಿಕಾರಿಗಳೂ ಸೇರಿದಂತೆ ಉಪ ನೋಂದಣಿ ಕಚೇರಿಯ ಇತರ ಅಧಿಕಾರಿಗಳ ಹೆಸರಿನಲ್ಲಿ ಸ್ಟಾಂಪ್ ವೆಂಡರ್ಸ್‌ಗಳು ಹಣ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಡೆಯಲು ಸಹಾಯವಾಣಿ (080-68265316) ಆರಂಭಿಸಲಾಗಿದೆ. ಹೆಚ್ಚು ಹಣ ವಸೂಲು ಮಾಡುತ್ತಿರುವ ಬಗ್ಗೆ ಈ ಸಂಖ್ಯೆಗೆ ಕರೆ ಮಾಡಿ ದೂರು ನೀಡಬಹುದು. ಆರೋಪ ಸಾಬೀತಾದ ಸ್ಟಾಂಪ್ ವೆಂಡರ್ಸ್‌ಗಳ ಪರವಾನಗಿಯನ್ನೇ ರದ್ದುಪಡಿಸಲಾಗುವುದು' ಎಂದರು.

ಪೊಲೀಸ್ ವರ್ಗಾವಣೆ ಅವಧಿ ಏರಿಕೆ: ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ ಕುರಿತು ಮಾತನಾಡಿದ ಗೃಹ ಸಚಿವ ಜಿ.ಪರಮೇಶ್ವರ, 'ಪೊಲೀಸ್ ವರ್ಗಾವಣೆ ಅವಧಿಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಏರಿಸುವ ಉದ್ದೇಶದಿಂದ ಈ ಮಸೂದೆ ಮಂಡಿಸಲಾಗಿದೆ. ಇದರಿಂದ ಆಯಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರು ತನಿಖೆಯಲ್ಲಿ ದಕ್ಷತೆ ಜೊತೆ ಪಾರದರ್ಶಕತೆ ಕಾಣಬಹುದು' ಎಂದರು.

ಖಾಸಗಿ ನಿರ್ಣಯ ಮಂಡನೆ: 'ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡುವ ಕುರಿತಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕು' ಎಂದು ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಖಾಸಗಿ ನಿರ್ಣಯ ಮಂಡಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಪರಿಶೀಲಿಸಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದರು.

ಸುಧಾ, ಮಯೂರ ಓದಿರಿ...

ಇ–ಆಡಳಿತ ಕೇಂದ್ರ

(ಇ–ಆಡಳಿತ ಇಲಾಖೆ, DPAR [AR] ಯ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ)
ಕೊಠಡಿ ಸಂಖ್ಯೆ: 141, ಮೊದಲ ಮಹಡಿ, ಎರಡನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001. ದೂರವಾಣಿ ಸಂಖ್ಯೆ: 080–22371090

No: DPAR-CEG0ADM/1/2023-CEG ದಿನಾಂಕ: 22.02.2024

ಅಧಿಸೂಚನೆ

ಇ–ಆಡಳಿತ ಕೇಂದ್ರಕ್ಕೆ ಅಗತ್ಯವಿರುವ **Non-IT** ಮಾನವ ಸಂಪನ್ಮೂಲವನ್ನು ಏಜೆನ್ಸಿಯ **ಮೂಲಕ ಪಡೆಯಲು** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (Tender No: CEG/2023-24/SE0042) ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: **29.02.2024 at 4.00 p.m.** ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ದಯವಿಟ್ಟು ಆಡಳಿತಾಧಿಕಾರಿ, ಇ–ಆಡಳಿತ ಕೇಂದ್ರ, ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಆಡಳಿತಾಧಿಕಾರಿ
ಇ–ಆಡಳಿತ ಕೇಂದ್ರ

ವಾಸಾಸಂಇ/ವಾ.ಪ್ರ/3808ಎಂಎಎ/23–24

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2023–24/3732 ದಿನಾಂಕ:21.02.2024

ಅಡೆಂಡಮ್

ಉಲ್ಲೇಖ: ಈ ಕಚೇರಿ ಪತ್ರ ಸಂ: ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2023–24/3615, ದಿನಾಂಕ: 13.02.2024.

ಉಲ್ಲೇಖಿತ ಟೆಂಡರ್ ನೋಟಿಫಿಕೇಶನ್‌ನಲ್ಲಿ ನಮೂದಿಸಲಾದ ಕಾಮಗಾರಿಯ ಹೆಸರನ್ನು ಈ ಕೆಳಗಿನಂತೆ ಓದಿಕೊಳ್ಳುವುದು. **"Preparation of Land Acquisition proposal for lands coming under submergence of Almatti reservoir from RL 519.600m to 522.00m and 522.00m to 524.256m (2 Stages) - Indent No. KBJNL/2023-24/OW/WORK_INDENT28/Call-3 Rs. 124.76 Lakhs".**
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ:21.02.2024 ರಿಂದ 15.03.2024 ಸಾಯಂಕಾಲ 5.00 ಘಂಟೆಯವರೆಗೆ 2) ಪೂರ್ವಭಾವಿ ಸಭೆ (ಪ್ರೀಬಿಡ್ ಮಿಟಿಂಗ್) ದಿನಾಂಕ: 04.03.2024 ರಂದು ಮುಂಜಾನೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.03.2024 ಮುಂಜಾನೆ 11.00 ಘಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.03.2024 ಮುಂಜಾನೆ 11.00 ಘಂಟೆಗೆ.**

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ,ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/494/ಕೆಎಸ್‌ಎಂಸಿಎ/2023–24

ಕಂದಾಯ ಇಲಾಖೆ
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560001 ದೂರವಾಣಿ ಸಂಖ್ಯೆ: 080–29565353, 29604556
ಇ–ಮೇಲ್: splocaima21@gmail.com

No: SPLOCA/ADM/GEN/54/2023-24 Date: 21-02-2024

NOTIFICATION

Subject: Invitation of EOI for Socio Economic and Behavioral Analysis of Ponzi and Pyramid Financial Frauds.

With reference to the above subject, EOI is invited from interested firms to carry out a survey for Socio Economic and Behavioral Analysis of Ponzi and Pyramid Financial Frauds and submitting a detailed report with regard to the financial scams.

SCHEDULE OF EVENTS:
1) Commencement of download of e-Tender Form from Website: **https://kppp.karnataka.gov.in/#/portal/portal-home from 09-01-2024. 2)** Last Date for Queries on **14-01-2024 before 5.00 PM. 3)** Date and Time of Pre Bid Meeting on **16-01-2024 at 12.00 Noon. 4)** Last Date for Submission of EOI in e-Procurement Platform on **29-02-2024 upto 5.00 PM. 5)** Date of Opening of EOI: **01-03-2024 at 12.00 PM.**
For any query contact: Office of the SPLOCA, IMA & Other KPID Cases, 3rd Floor, Podium Block, V.V. Towers, Bengaluru - 560001. E-mail: **splocaima21@gmail.com**
Details regarding Tender Terms and Conditions are available at **https://kppp.karnataka.gov.in/#/portal/portal-home.**

ಸಹಿ/–
ಸಹಾಯಕ ಆಯುಕ್ತರು
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು),
ಬೆಂಗಳೂರು.

ವಾಸಾಸಂಇ/ವಾ.ಪ್ರ/3792/ಅಡ್ವರ್ಟೋ2023–24

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಾಗಲಕೋಟೆ ಪ್ರಾದೇಶಿಕ ಉಪವಿಭಾಗ, ಬಾಗಲಕೋಟೆ
ದೂರವಾಣಿ ಸಂಖ್ಯೆ: 9481992902 ಇ–ಮೇಲ್: acfbgk@gmail.com

ಟೆಂಡರ್ ಪ್ರಕಟಣೆ

ಸಂಖ್ಯೆ: ಸಅಸಂ/ಬಿಜಿಕೆ/ಹೊ.ಗು./ಟೆಂಡರ್/2023–24/670 ದಿನಾಂಕ: 22–02–2024

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬಾಗಲಕೋಟ ಉಪ ವಿಭಾಗ ವ್ಯಾಪ್ತಿಗೆ ಬರುವ ವಿಭಾಗ ಕಛೇರಿ, ಉಪ ವಿಭಾಗ ಕಛೇರಿ ಮತ್ತು ವಲಯ ಕಛೇರಿಗೆ ಗಣಕಯಂತ್ರ ನಿರ್ವಾಹಕರು, ಇಲಾಖಾ ವಾಹನಗಳಿಗೆ ವಾಹನ ಚಾಲಕರು ಮತ್ತು 'ಡಿ' ಗ್ರೂಪ್ ನೌಕರರು ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪ್ರಕಟಿಸಿದಂತೆ, **ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 05–03–2024 ಮಧ್ಯಾಹ್ನ 13.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–03–2024 ಮಧ್ಯಾಹ್ನ 15.00 ಗಂಟೆಗೆ ಹಾಗೂ ಆರ್ಥಿಕ ಬಿಡ್‌ಗಳನ್ನು ದಿನಾಂಕ: 07–03–2024 ರಂದು ಮಧ್ಯಾಹ್ನ 15–30 ಗಂಟೆಗೆ ತೆರೆಯಲಾಗುವುದು**. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ–ಟೆಂಡರ್‌ಗಾಗಿ ಭಾಗವಹಿಸಬಹುದು. ಸದರಿ ದಿನಾಂಕದಂದು ಯಾವುದೆ ಟೆಂಡರ್ ಬಾರದೇ ಇದ್ದಲ್ಲಿ ಮರು ಟೆಂಡರ್ ದಿನಾಂಕ 3 ದಿನ ವಿಸ್ತರಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಕೊಠಡಿ ಸಂಖ್ಯೆ: 220, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಬಾಗಲಕೋಟೆ ಉಪ ವಿಭಾಗ, ಬಾಗಲಕೋಟೆ

ವಾ.ಸಾ.ಇ./ಬಾಗಲಕೋಟ/394/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ
ಉಪ ಕೃಷಿ ನಿರ್ದೇಶಕರ–1, ಕಛೇರಿ, ಕೃಷಿ ಇಲಾಖೆ, ಗದಗ

ಮ.ನಂ 27, ಕನಕ ಭವನ ಹತ್ತಿರ ಲಕ್ಷ್ಮಣಸಾ ನಗರ, ಮುಳಗುಂದ ರೋಡ, ಗದಗ
ದೂರವಾಣಿ : 08372–236017 ಇ–ಮೇಲ್ : dda1gadag@gmail.com
ಸಂ: ಉಕೃನಿ–1/ಗ/ಹೊ.ಗು.ಸಿ.ಸೇ/ಇ–ಟೆಂಡರ್–24–25/2023–24.
ದಿನಾಂಕ : 20–02–2024

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ದತಿ)

ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಒದಗಿಸುವ ಕುರಿತು ಇ–ಟೆಂಡರ್ ಪ್ರಕಟಣೆ.

2024–25ನೇ ಸಾಲಿಗಾಗಿ ಉಪ ಕೃಷಿ ನಿರ್ದೇಶಕರು–1 ಗದಗ ಕಛೇರಿಗೆ ಅವಶ್ಯವಿರುವ ಅನುಮೋದನೆಗೊಳಪಟ್ಟ ಮಾನವ ಸಂಪನ್ಮೂಲ ಸೇವೆಯನ್ನು ತಾತ್ಕಾಲಿಕವಾಗಿ ಹೊರಮೂಲ ಸಂಸ್ಥೆಯಿಂದ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಕಾರ್ಯವಿಧಾನ ಅನುಸರಿಸಿ ಇ–ಪ್ರೋಕ್ಯರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಇ–ಪ್ರೋಕ್ಯರ್‌ಮೆಂಟ್‌ನಲ್ಲಿ ನೋಂದಾಯಿಸಿದ ಅರ್ಹ ಮಾನವ ಸಂಪನ್ಮೂಲ ಸೇವೆ ಒದಗಿಸುವ ಸಂಸ್ಥೆಗಳು ಅಂಗೀಕೃತ ಏಜೆನ್ಸಿಗಳು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.
ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **21–02–2024** ರಿಂದ website:www.kppp.karnataka.gov.in ಪಡೆಯಬಹುದಾಗಿದೆ e-portal ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ **28–02–2024** ಸಂಜೆ 3.00 ಘಂಟೆಗೆ ನಿಗಧಿಪಡಿಸಿದೆ.

ಸಹಿ/–ಉಪ ಕೃಷಿ ನಿರ್ದೇಶಕರು–1,
ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/568/2023–24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ,
ಡಾ॥ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–01, ದೂರವಾಣಿ:080–22866718
(Email:-dominority401@gmail.com WebSite:-www.gokdom.kar.nic.in.)

ಸಂ:ಅಸಂಇ/ಬೆಂನ/ಆಹಾರ ಟೆಂಡರ್/ಸಿ.ಆರ್–36/2023–24 ದಿನಾಂಕ: 22–02–2024.

ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಹಾಗೂ ಇಲಾಖೆಯ ಇತರೆ ಕಾರ್ಯಕ್ರಮ/ಯೋಜನೆಗಳಿಗೆ ಆಹಾರ, ತರಕಾರಿ ಮತ್ತು ಇತರೆ ಪದಾರ್ಥಗಳನ್ನು ಪೂರೈಕೆಗಾಗಿ ಟೆಂಡರ್ ಅನ್ನು Online System (https://kppp.karnataka.gov.in) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.
(1) ಟೆಂಡರ್‌ಗೆ ಇಟ್ಟ ಮೊತ್ತ ರೂ. 315.00 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 4,72,500/– ಗಳು, (2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 23.02.2024. (3) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.03.2024. (4) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 26.03.2024.
ಹೆಚ್ಚಿನ ವಿವರಗಳಿಗಾಗಿ (https://kppp.karnataka.gov.in) ವೆಬ್ಸೈಟ್‌ನಲ್ಲಿ ಲಭ್ಯವಿದ್ದು ಹಾಗೂ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು–01 (ದೂರವಾಣಿ ಸಂಖ್ಯೆ: 080–22866718) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ\–
ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ

DIPR/CP/3813/Zen/2023-24

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

Azadi Ka Amrit Mahotsav
ಚಂದ್ರಮುಖಿ ನಾರಿಮನ್ ಪಾಯಿಂಟ್ ಮುಂಬೈ–400 021
ಫೋನ್:022-66387680 ಫ್ಯಾಕ್ಸ್: 022-22044336 ವೆಬ್‌ಸೈಟ್: centralbankofindia.co.in

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ 12 ತಿಂಗಳ ಅವಧಿಗೆ ಅಪ್ರೆಂಟಿಸ್‌ಗಳ ನಿಯೋಜನೆ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸಾರ್ವಜನಿಕ ಕ್ಷೇತ್ರ ಬ್ಯಾಂಕ್‌ಗಳಲ್ಲಿನ ಒಂದು ಪ್ರಮುಖ ಬ್ಯಾಂಕ್ ಆಗಿದ್ದು, ಭಾರತದಾದ್ಯಂತ 4500ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿದೆ ಮತ್ತು ಒಟ್ಟಾರೆ ರೂ. 6,00,000 ಕೋಟಿಗೂ ಅಧಿಕ ವ್ಯವಹಾರ ಹೊಂದಿದೆ ಮತ್ತು 31000ಕ್ಕೂ ಅಧಿಕ ಸಮರ್ಪಿತ ಸಿಬ್ಬಂದಿಗಳಿಂದ ಮುನ್ನಡೆಯುತ್ತಿದ್ದು, ಇದೀಗ **ಅಪ್ರೆಂಟಿಸ್ ಆಕ್ಟ್, 1961ರ ಅಡಿಯಲ್ಲಿ ಮತ್ತು ಬ್ಯಾಂಕ್‌ನ ಅಪ್ರೆಂಟೈಸ್‌ಶಿಪ್ ನೀತಿಗಳ ಪ್ರಕಾರ 12 ತಿಂಗಳ ಅವಧಿಗೆ ಅಪ್ರೆಂಟಿಸ್‌ಗಳನ್ನು** ನಿಯೋಜಿಸಿಕೊಳ್ಳಲು ಉದ್ದೇಶಿಸಿರುತ್ತದೆ. ಅಭ್ಯರ್ಥಿಗಳು, ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ https://www.centralbankofindia.co.in ವೆಬ್‌ಸೈಟ್‌ಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.

ಮುಂಬೈ, ದಿನಾಂಕ: 21.02.2024 ಜನರಲ್ ಮ್ಯಾನೇಜರ್ (ಎಚ್‌ಸಿಎಂ)

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501

ನಂ. ಚುನಾವಣೆ:ಸಿಆರ್:352/2023–24 ದಿನಾಂಕ: 21.02.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(ದ್ವಿಲಕೋಟೆ ಪದ್ಧತಿ) (ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ)
ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ಕ್ಕೆ ಸಂಬಂಧಿಸಿದಂತೆ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುತ್ತದೆ.
(1) Commencement of download of e-Tender Form from website- https://kppp.karnataka.gov.in/:-21.02.2024 (2) Last Date for Queries on or before:-23.02.2024 at 11.00 am (3) Pre-bid Meeting:-23.02.2024 at 11.00 am (4) Last Date for Uploading of Tender in e-procurement platform on or before:-28.02.2024 till 5.00 pm (5) Opening of Technical Bid:-29.02.2024 till 5.00 pm (6) Date of Original Document Verification:-Will be done on the uploaded documents at e-portal. (7) Submission of Samples:-Not applicable (8) Opening of Financial Bid:-Will be intimated. (9) Approximate value of tender:-Rs. 26.00 Lakhs ಹೆಚ್ಚಿನ ಮಾಹಿತಿಗಾಗಿ, ಇ–ಪಾವತಿಗಾಗಿ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್– https://kppp.karnataka.gov.in/ ಭೇಟಿ ನೀಡುವುದು. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08194–222176ಕ್ಕೆ ಸಂಪರ್ಕಿಸುವುದು.

DIPR/CTA/KSMCA/600/2023-24
ಸಹಿ/– ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ,
ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22133370
ಸಂಖ್ಯೆ: 25/2023–24 ದಿನಾಂಕ:22.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ದೇವನಹಳ್ಳಿ ಹಾಗೂ ದೊಡ್ಡಬಳ್ಳಾಪುರ ಉಪವಿಭಾಗ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ.50.00 ಲಕ್ಷಗಳು) ಕಾಮಗಾರಿಗೆ** ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಗಳ **ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.** (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಕೆ.ಪಿ.ಪಿ. ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ: 22.02.2024 ರಿಂದ.** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ. ಪೋರ್ಟಲ್: **https://kppp.karnataka.gov.in** ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿ: 01.03.2024 ಸಂಜೆ 4.00 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 02.03.2024 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯದಲ್ಲಿ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,

ವಾಸಾಸಂಇ/ಉನಿ-ಸಿ.ಪಿ/3796/ಕೆಎಸ್‌ಎಂಸಿಎ/2023-24

ಜಿಲ್ಲಾ ನಗರಾಭಿವೃದ್ಧಿ ಕೋಶ,

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.
Ph: 0821-2424070 E.mail: dudc_mys@yahoo.co.in
ಸಂ: ಮುನಿಸಿ(4)/ಘವನಿ/ಎಸ್‌ಬಿಎಂ/05/2023 ದಿನಾಂಕ: 20.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ, ಮೈಸೂರು ಜಿಲ್ಲೆಯಲ್ಲಿ ಹೊಸದಾಗಿ ಮೇಲ್ದರ್ಜೆಗೇರಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಘನತ್ಯಾಜ್ಯ ನಿರ್ವಹಣೆಗಾಗಿ ಅವಶ್ಯವಿರುವ ವಾಹನ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಇಂಡೆಂಟ್‌ಗಳಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು/ಏಜೆನ್ಸಿದಾರರು ಕೆಪಿಪಿಪಿ ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.
1) ಇಂಡೆಂಟ್ ಸಂಖ್ಯೆ: DMA/2023-24/IND1533:ಅಂದಾಜು ಮೊತ್ತ: 208.05 ಲಕ್ಷ 2) ಇಂಡೆಂಟ್ ಸಂಖ್ಯೆ: DMA/2023-24/IND1528 : ಅಂದಾಜು ಮೊತ್ತ: 130.00 ಲಕ್ಷ. 3) ಇಂಡೆಂಟ್ ಸಂಖ್ಯೆ: DMA/2023-24/IND1527:ಅಂದಾಜು ಮೊತ್ತ: 10.88 ಲಕ್ಷ 4) ಇಂಡೆಂಟ್ ಸಂಖ್ಯೆ: DMA/2023-24/IND1526:ಅಂದಾಜು ಮೊತ್ತ: 33.25 ಲಕ್ಷ
ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿ: 27.02.2024 ಸಂಜೆ 5.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿ: 28.02.2024 ಸಂಜೆ 5.00 ಗಂಟೆ ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

DIPR/DDMYS/KSMCA/1138/2023-24 ಸಹಿ/– ಯೋಜನಾ ನಿರ್ದೇಶಕರು

ಕೆನರಾ ಬ್ಯಾಂಕ್ Canara Bank

ಭಾರತ ಸರ್ಕಾರದ ಒಂದು ಉದ್ಯಮ Syndicate Together We Can
ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಛೇರಿ, ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಪ್ರಸ್ತಾವನೆಗಾಗಿ ವಿನಂತಿ ಆಹ್ವಾನ ಸೂಚನೆ (ಆರ್‌ಎಫ್‌ಪಿ)

ಬೆಂಗಳೂರು ವೃತ್ತ ಕಛೇರಿಯ ಅಡಿಯಲ್ಲಿ ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಬ್ಯಾಂಕಿನ ಮಾಲೀಕತ್ವದ ಕಟ್ಟಡಗಳಲ್ಲಿ ಆನ್–ಗ್ರಿಡ್ ರೂಫ್ ಟಾಪ್ ಸೌರ ವಿದ್ಯುತ್ ಉತ್ಪಾದನಾ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವಿಕೆ

ಕೆನರಾ ಬ್ಯಾಂಕ್ ಬೆಂಗಳೂರು ವೃತ್ತ ಕಛೇರಿಯು ಬೆಂಗಳೂರು, ಶ್ರೀರಂಗಪಟ್ಟಣ ಮತ್ತು ಪಟ್ಟನಾಯಕನಹಳ್ಳಿಯಲ್ಲಿರುವ ಬ್ಯಾಂಕಿನ ಮಾಲೀಕತ್ವದ ಕಟ್ಟಡಗಳಲ್ಲಿ ಆನ್–ಗ್ರಿಡ್ ರೂಫ್ ಟಾಪ್ ಸೌರ ವಿದ್ಯುತ್ ಉತ್ಪಾದನಾ ವ್ಯವಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಿದೆ. ಎರಡು ಬಿಡ್ ಪರಿಕಲ್ಪನೆ (ತಾಂತ್ರಿಕ ಬಿಡ್ ಮತ್ತು ಹಣಕಾಸು ಬಿಡ್) ಅಡಿಯಲ್ಲಿ ಬಿಡ್‌ಗಳನ್ನು ಪ್ರತಿಷ್ಠಿತ ಸಂಸ್ಥೆಗಳಿಂದ ಆನ್–ಗ್ರಿಡ್ ರೂಫ್ ಟಾಪ್ ಸೌರ ವಿದ್ಯುತ್ ಉತ್ಪಾದನಾ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಕ್ಕಾಗಿ ಆಹ್ವಾನಿಸಲಾಗಿದೆ.
ಆರ್‌ಎಫ್‌ಪಿ ಮತ್ತು ಇತರ ವಿವರಗಳನ್ನು ನಮ್ಮ ಬ್ಯಾಂಕ್‌ನ ವೆಬ್‌ಸೈಟ್ **https://canarabank.com/tenders.aspx** ಮತ್ತು ಸಿಪಿಪಿ ಪೋರ್ಟಲ್ **www.eprocure.gov.in** ನಿಂದ ಪಡೆದುಕೊಳ್ಳಬಹುದು. ಆರ್‌ಎಫ್‌ಪಿ ಸಲ್ಲಿಸಲು ಕೊನೆಯ ದಿನಾಂಕ **15–03–2024 ಸಂಜೆ 3.00 ಗಂಟೆ**. ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳದ್ದಲ್ಲಿ ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುವುದು.

ಸ್ಥಳ : ಬೆಂಗಳೂರು, ದಿನಾಂಕ : 23–02–2024 ಸಹಿ/– ಉಪ ಮಹಾಪ್ರಬಂಧಕರು, ವೃತ್ತ ಕಛೇರಿ, ಬೆಂಗಳೂರು.

ಉಪನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ.

ದೂರವಾಣಿ ಸಂಖ್ಯೆ : 9448999346
ಇಮೇಲ್– ddpikoppalplanning@gmail.com

ಸಂಖ್ಯೆ:ಯೋವಿ1/ರಿವರ್ಸಿಬಲ್ ಡೆಸ್ಕ್/ಖರೀದಿ:ಟೆಂಡರ್/ಪ್ರಕಟಣೆ/76/2022–23 ದಿನಾಂಕ: 20–02–2024

ಅಲ್ಪಾವಧಿ ಟೆಂಡರ್ ಕರೆ –2

ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಆದೇಶಿಸಿದಂತೆ 2022–23ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಪೀಠೋಪಕರಣಗಳನ್ನು (3, 4 ಮತ್ತು 5 ಸೀಟರ್ ರಿವರ್ಸಿಬಲ್ ಡೆಸ್ಕ್) ಸರಬರಾಜು ಮಾಡಲು ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜು ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ವಿಳಾಸ https://kppp.karnataka.gov.in ನಿಂದ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಃ **27.02.2024 ಸಮಯ ಸಂಜೆ 05.00ಗಂಟೆ ವರೆಗೆ.**

ಸಹಿ/– (ಎಸ್.ಎಸ್.ಬಿರಾದಾರ)
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ.

ವಾ.ಸಾ.ಇ./ಕೊಪ್ಪಳ/475/2023–24/ದೇಶಪಾಂಡೆ ಪಬ್ಲಿಸಿಟಿ

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರ್, ನಂ.1, ಕಟ್ಟಡಗಳ ವಿಭಾಗ,
ಎಸ್.ಜೆ.ಪಿ.ಕ್ಯಾಂಪಸ್, ಬೆಂಗಳೂರು. ದೂರವಾಣಿ: 22255210, ಫ್ಯಾಕ್ಸ್: 22250755
ಇ–ಮೇಲ್: eebld1@kpwd.gov.in, eebld1@yahoo.com

ಐಎಫ್‌ಟಿ ಸಂಖ್ಯೆ: ಲೋಇ/ಕಟ್ಟಡ1/ಎಇ–4/2023–24/39 ದಿನಾಂಕ: 21/02/2024

ಅಲ್ಪಾವಧಿಯ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನಿಯರ್, ನಂ. 1, ಕಟ್ಟಡಗಳ ವಿಭಾಗ, ಬೆಂಗಳೂರು ಇವರು **ಕರ್ನಾಟಕ ಆಡಳಿತ ಸೇವೆಗಳ ಅಧಿಕಾರಿ ಸಂಶೋಧನೆ ಮತ್ತು ತರಬೇತಿ ಕೇಂದ್ರ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ಇಲ್ಲಿ ಒಳಾಂಗಣ ಮತ್ತು ಎತ್ತರದ ಹೆಚ್ಚುವರಿ ನವೀಕರಣದ ಪ್ರಸ್ತಾವಿತ ನಿರ್ಮಾಣ** [ಲೋಇ/2023–24/ಕವಿ/ಕೆಲಸ_ಇಂಡೆಂಟ್7908/ಕರೆ–2] ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸುತ್ತಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಅಂದರೆ **http://kppp.karnataka.gov.in**) ಮೂಲಕ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್‌ಗಿಟ್ಟ ಮೊತ್ತ: **754.11 ಲಕ್ಷಗಳು**, ಟೆಂಡರ್ ಠೇವಣಿ ಮೊತ್ತ: **11.32 ಲಕ್ಷಗಳು**, ಕಾಲಾವಧಿ: **11 ತಿಂಗಳು**. ಆನ್‌ಲೈನ್ ಕೆಪಿಪಿಪಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ: 28.02.2024, 16.00 ಗಂಟೆಗಳವರೆಗೆ** ಡೌನ್‌ಲೋಡ್ ಮಾಡಿಕೊಂಡು, ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 21.02.2024** ರಿಂದ **28.02.2024** ರಂದು **16.00** ಗಂಟೆ. ಪೂರ್ವ ಬಿಡ್ ಸಭೆಯು **ದಿನಾಂಕ: 26.02.2024** ರಂದು ಬೆಳಿಗ್ಗೆ **11 ಗಂಟೆ**. ಇತರೆ ಹೆಚ್ಚಿನ ಮಾಹಿತಿಯನ್ನು ಕೆಪಿಪಿಪಿ ವೆಬ್‌ಸೈಟ್ **http://kppp.karnataka.gov.in** ನಿಂದ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ವಾಸಸಂಇ/ಸಿಪಿ/ಎಎಎ/3798/2023–24

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ಐ.ಎಫ್.ಟಿ. ಸಂ: 08/2023–24 ದಿನಾಂಕ: 19.02.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)–ಕೆ.ಡಬ್ಲ್ಯೂ–3

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ–3 & ಕೆ.ಡಬ್ಲ್ಯೂ–2ರ ಅನ್ವಯ ಶಿವಮೊಗ್ಗ ಉಪವಿಭಾಗ ವ್ಯಾಪ್ತಿಯ 9 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಕನಿಷ್ಠ ಮೊತ್ತ ರೂ. 50.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 100.00 ಲಕ್ಷಗಳಿರುತ್ತದೆ. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: https://kppp.karnataka.gov.in/ ನಲ್ಲಿ ದಿನಾಂಕ 20.02.2024 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ 28.02.2024 ಇನ್ನುಳಿದಂತೆ ವೈಬ್ ಸೈಟ್ ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/167/02/23–24/1343

ಪುರಸಭಾ ಕಾರ್ಯಾಲಯ, ತಿ.ನರಸೀಪುರ, ಮೈಸೂರು ಜಿಲ್ಲೆ

Email: ka.tnarasipura.tmc@gmail.com
Website : www.tnarasipuratown.mrc.gov.in
Phone: 08227-261232

ನಂ:ಪು.ತಿ.ನ/ಆ.ಶಾ/ಪ.ಪ್ರ/10/2023–24 ದಿನಾಂಕ: 17.02.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ನಿಯಮದಂತೆ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https: epro.karnataka. gov.in ಮುಖಾಂತರ ತಿ.ನರಸೀಪುರ ಪುರಸಭೆಯಿಂದ ಈ ಕೆಳಕಂಡ ಕೆಲಸಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಟೆಂಡರ್ ಷೆಡ್ಯೂಲ್ ದಿನಾಂಕಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 08227–261232 ಅನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಕ್ರ.ಸಂ. 1 ಕಾಮಗಾರಿಯ ವಿವರ: 30TPD ಸಾಮಾರ್ಥ್ಯದ 35mm & 4mm ರೋಟರಿ ಯಂತ್ರ ಖರೀದಿಸಲು Indent No: DMA/2023-24/IND 1501 ಸಂಖ್ಯೆ: 01 ಅಂದಾಜು ಮೊತ್ತ (ಲಕ್ಷಗಳಲ್ಲಿ): 65.00 ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):1,30,000/-

ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ

DIPR/DDMYS/KSMCA/1127/2023-24

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ

ಕಾರ್ಯನಿರ್ವಾಹಕ ಇಂಜನೀಯರವರ ಕಾರ್ಯಾಲಯ,
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ವಿಭಾಗ ನಂ. 01, ಬಾಗಲಕೋಟೆ – 587102.
ದೂರವಾಣಿ : 08354–295372, ಇ–ಮೇಲ್ : btdadn1@gmail.com

ಸಂಖ್ಯೆ : ಕಾ.ನಿ.ಇಂ./ಬಾ.ಪ.ಅ.ಪ್ರಾ/ವಿ–1/ಪಿಬಿ–01/ಟೆ.ಪ್ರ. ಸಂಖ್ಯೆ–04/2023–24/3030 ದಿನಾಂಕ : 21–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-04

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ **ಇಂಡೆಂಟ್ ನಂ.: 26, 27, 28, 32, 33, 12, 13, 24, 14, 15, 16, 17, 18, 19 ಮತ್ತು 25 ಕಾಮಗಾರಿಗೆ** ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ **ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ : 02–03–2024 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ : 04–03–2024 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ : 05–03–2024 ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ : 08354 – 295 372 ಸಂಪರ್ಕಿಸಬಹುದಾಗಿದೆ.**
ಸೂಚನೆ : ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು / ಮಾರ್ಪಾಡುಗಳನ್ನು **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ. 01,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/389/ಮಣಿಪಾಲ್/2023–24

ಕರ್ನಾಟಕ ಸರಕಾರ
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com ದೂ.08472–260252

ಸಂಖ್ಯೆ: GIMS/KLB/TENDER/CR-115/2023-24/3060 ದಿನಾಂಕ: 22–02–2024

:: ಟೆಂಡರ ಪ್ರಕಟಣೆ ::

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್ಸಿ ಹಾಗೂ ಎಸ್ಟಿ ವರ್ಗದ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು **"LAPTOP"** ಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ದತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/TENDER/CR-115/2023-24 Date: 21-02-2024 IND. No: DME/2023-24/IND0548, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ–Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **29–02–2024 ಸಾಯಂಕಾಲ 4:30ಕ್ಕೆ**, 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **26–02–2024 ಸಾಯಂಕಾಲ 5.00 ಗಂ ಯವರೆಗೆ**, 4) ಟೆಂಡರ ಪೂರ್ವಭಾವಿ ಸಭೆ: **26–02–2024 ಬೆಳಿಗ್ಗೆ 11:30ಕ್ಕೆ**, 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **01–03–2024 ಸಾಯಂಕಾಲ 5:00ಕ್ಕೆ**, 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : **02–03–2024 ಸಾಯಂಕಾಲ 5:30ಕ್ಕೆ**, 7) ಟೆಂಡರನ ಮೊತ್ತ: ರೂ. **66,50,000=00**, 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ. 1,33,000=00**, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ, ದೂರವಾಣಿ ಸಂಖ್ಯೆ: 08472–260252, Mobile : 9986082242 directorgimsgulbarga@gmail.com

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/879/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು ಜಿಲ್ಲೆ, ರಾಯಚೂರು.–584101

OFFICE OF THE DEPUTY COMMISSIONER,
DC OFFICE RAICHUR DISTRICT, RAICHUR-584101
Telephone No: 08532-229011, 225953
Fax: 08532-229012, Email: deo.raichur@gmail.com

ಸಂಖ್ಯೆ: ಕಂದಾಯ/ಚುನಾವಣೆ/MP/15/2023–24 ದಿನಾಂಕ: 20–02–2024

ಅಲ್ಪವಧಿ ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್ಮೆಂಟ್)

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಸರಬರಾಜು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್ಮೆಂಟ್ ಪದ್ಧತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಸರಬರಾಜುದಾರರು / ಗುತ್ತಿಗೆದಾರರು https://Kppp.karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು.

ಕ್ರಸಂ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	Supply of Videographer and Video Camera for Elections -2024 in Raichur District. Estimate Amount Rs.84,00,000	RD/2023-24/ SE0229
2	Supply of Catering Services for Elections -2024 in Raichur District. Estimate Amount Rs. 14,00,000	RD/2023-24/ SE0228
3	Supply of Hiring of Cars on Monthly Rental Basis for Electiions -2024 in Raichur district. Estimate Amount Rs.56,00,000	RD/2023-24/ SE0230
4	Supply of Elections Items Stationery & Polling Materials Kit for Elections -2024 in Raichur District. Estimate Amount Rs.68,60,000	DMA/2023-24/ IND1517

ಸಹಿ/– ಅಪರ ಜಿಲ್ಲಾಧಿಕಾರಿಗಳು
ರಾಯಚೂರು

DIP/RCR/522/KSMC&A/519/2023-24

ಇದು 'ಸಿದ್ಧನಾಮಿಕ್ಸ್' ಕೊಡುಗೆ • ಪರಿಶಿಷ್ಟರು, ಹಿಂದುಳಿದವರಿಗೆ ಅನುದಾನ ಕಡಿತ: ಅರವಿಂದ ಬೆಲ್ಲದ ಟೀಕಾ ಪ್ರಹಾರ

'ರಾಜ್ಯಕ್ಕೆ ₹1.90 ಲಕ್ಷ ಕೋಟಿ ಹೊರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 16 ನೇ ವಿಧಾನಸಭೆಯ ಎರಡು ಬಜೆಟ್‌ಗಳಿಂದ ₹1.90 ಲಕ್ಷ ಕೋಟಿ ಸಾಲದ ಹೊರೆಯನ್ನು ರಾಜ್ಯದ ಜನರ ಮೇಲೆ ಹೊರಿಸಿದ್ದಾರೆ. ಇದು 'ಸಿದ್ದನಾಮಿಕ್ಸ್‌ನ' ಕೊಡುಗೆ ಎಂದು ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಅಧಿಕಾರಕ್ಕೆ ಬಂದ ಕೇವಲ 9 ತಿಂಗಳಲ್ಲಿ ಇಷ್ಟು ಪ್ರಮಾಣದ ಸಾಲವನ್ನು ಈ ಹಿಂದೆ ಯಾವುದೇ ಮುಖ್ಯಮಂತ್ರಿ ಮಾಡಿರಲಿಲ್ಲ. ಇದನ್ನು ಕೇಳಿ ನಿಮಗೂ ಅಚ್ಚರಿ ಆಗುತ್ತದೆ ಅಲ್ಲವೇ. ಕಳೆದ ಬಜೆಟ್‌ನಲ್ಲಿ ₹85,000 ಕೋಟಿ, ಈ ಬಜೆಟ್‌ನಲ್ಲಿ ₹1,05,246 ಕೋಟಿ ಸಾಲ ಮಾಡಿದ್ದಾರೆ' ಎಂದರು. 'ನೀವು ಸುಳ್ಳು ಮಾಹಿತಿ ನೀಡುತ್ತಿದ್ದೀರಿ' ಎಂದು ಸಚಿವ ಬೈರತಿ ಸುರೇಶ್ ಪ್ರತಿಕ್ರಿಯಿಸಿದರು.

'ಪರಿಶಿಷ್ಟಜಾತಿ, ಪಂಗಡ, ಹಿಂದುಳಿದವರ ನಿಗಮಗಳಿಗೆ ಅನುದಾನವನ್ನು ಕಡಿತಗೊಳಿಸಲಾಗಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನಮ್ಮ ಸರ್ಕಾರ ₹60 ಕೋಟಿ ನೀಡಿತ್ತು, ಈಗಿನ ಸರ್ಕಾರ ₹40 ಕೋಟಿ ಕೊಟ್ಟಿದೆ. ತಾಂಡಾ ಅಭಿವೃದ್ಧಿ ನಿಗಮಕ್ಕೆ ನಮ್ಮ ಸರ್ಕಾರ ₹110 ಕೋಟಿ ನೀಡಿದ್ದರೆ, ಈಗಿನ ಸರ್ಕಾರ ಅದನ್ನು ₹60 ಕೋಟಿಗೆ ಇಳಿಸಿದೆ. ಇದೇ ರೀತಿ ಆದಿಜಾಂಬವ, ಬೋವಿ, ವಿಶ್ವಕರ್ಮ, ಅಂಬಿಗರ ಚೌಡಯ್ಯ, ವೀರಶೈವ-ಲಿಂಗಾಯತ, ಒಕ್ಕಲಿಗರ ಅಭಿವೃದ್ಧಿ ನಿಗಮಗಳಿಗೆ ಭಾರಿ ಪ್ರಮಾಣದಲ್ಲಿ ಅನುದಾನ ಕಡಿತ ಮಾಡಲಾಗಿದೆ. ಈ ರೀತಿ ಕಡಿತ ಮಾಡಿರುವ ಹಣವನ್ನು ಅಲ್ಪಸಂಖ್ಯಾತರಿಗೆ ನೀಡಲಾಗಿದೆ. ಸುಮಾರು ₹3,000 ಕೋಟಿ ನೀಡಲಾಗಿದೆ. ಅವರಿಗೆ ಹಣ ಕೊಡುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ, ಪರಿಶಿಷ್ಟರು ಮತ್ತು ಹಿಂದುಳಿದವರ ಹಣವನ್ನು ಕಡಿತಗೊಳಿಸಿ ನೀಡಿದ್ದು ಸರಿಯಲ್ಲ' ಎಂದು ಅರವಿಂದ ಬೆಲ್ಲದ ಅವರು ಆಕ್ಷೇಪ ವ್ಯಕ್ತಪಡಿಸಿದರು.

'ಅಬಕಾರಿ ತೆರಿಗೆ ಸಂಗ್ರಹದಲ್ಲಿ ಬಡ ವರ್ಗದ ಪಾಲೇ ಹೆಚ್ಚು, ಈ ವರ್ಗದ ಮೇಲೆ ತೆರಿಗೆ ಇನ್ನೂ ಹೆಚ್ಚಿಸುವ ಮೂಲಕ ಪ್ರಹಾರಕ್ಕೆ ಮುಂದಾಗಿದೆ' ಎಂದು ಆರೋಪಿಸಿದರು.

'ಒಟ್ಟು 18 ತೆರಿಗೆ ಸ್ಲ್ಯಾಬ್‌ಗಳಿದ್ದು, ಈ ಪೈಕಿ ಶೇ 85 ರಷ್ಟು ಸ್ಲ್ಯಾಬ್‌ಗಳ ತೆರಿಗೆ ಬಡ ವರ್ಗದವರು ಕುಡಿಯುವ ಮದ್ಯಗಳಿಗೆ ಅನ್ವಯವಾಗುತ್ತಿದೆ' ಎಂದು ವಿವರಿಸಿದರು.

ಅರವಿಂದ ಬೆಲ್ಲದ

ಚರ್ಚೆಗೆ ಬರುವಂತೆ ಸುನಿಲ್ ಸವಾಲು

ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಬಜೆಟ್ ಮೇಲಿನ ಚರ್ಚೆಯಲ್ಲಿ ಹಿಂದೂಗಳಿಗೆ ಅನ್ಯಾಯವಾಗಿದೆ ಎಂದು ಟೀಕಿಸಿದಾಗ ಮಧ್ಯ ಪ್ರವೇಶಿಸಿದ ಸಚಿವ ದಿನೇಶ್ ಗುಂಡೂರಾವ್, 'ಪರಶುರಾಮನಿಗೂ ಅನ್ಯಾಯ ಮಾಡಿದ್ದೀರಿ. ಅದು ಯಾರ ಕ್ಷೇತ್ರ' ಎಂದು ಕೇಳಿದರು.

ಆಗ ಎದ್ದು ನಿಂತ ಬಿಜೆಪಿಯ ವಿ. ಸುನಿಲ್ ಕುಮಾರ್, 'ಆ ಬಗ್ಗೆ ಈಗಾಗಲೇ ತನಿಖೆಗೆ ವಹಿಸಿದ್ದೀರಿ. ಸದನದಲ್ಲಿ ಚರ್ಚೆ ನಡೆಯಬೇಕು ಎಂಬುದು ನಿಮ್ಮ ಬಯಕೆ ಯಾಗಿದ್ದರೆ ನಾನೂ ಸಿದ್ಧನಿದ್ದೇನೆ' ಎಂದು ಸವಾಲು ಹಾಕಿದರು.

ಬಜೆಟ್‌ನಲ್ಲೂ ಹಿಂದೂಗಳಿಗೆ ಅನ್ಯಾಯ: ಆರ್. ಅಶೋಕ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್‌ನಲ್ಲೂ ಹಿಂದೂಗಳಿಗೆ ಅನ್ಯಾಯ ಮಾಡಿದ್ದಾರೆ. ಅಲ್ಪಸಂಖ್ಯಾತರ ಓಲೈಕೆಗಾಗಿ ಹಿಂದೂಗಳನ್ನು ಕಡೆಗಣಿಸಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ವಿಧಾನಸಭೆಯಲ್ಲಿ ಗುರುವಾರ ಟೀಕಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, 'ವಕ್ಫ್ ಮಂಡಳಿಗೆ ₹ 100 ಕೋಟಿ ಅನುದಾನ ಘೋಷಿಸಿರುವ ಮುಖ್ಯಮಂತ್ರಿ, ಹಿಂದೂ ರುದ್ರಭೂಮಿಗಳ ಅಭಿವೃದ್ಧಿಗೆ ಕೇವಲ ₹ 10 ಕೋಟಿ ಒದಗಿಸಿದ್ದಾರೆ. ಧಾರ್ಮಿಕ ದತ್ತಿ ಮತ್ತು ಮುಜರಾಯಿ ಇಲಾಖೆಗೆ ಅನುದಾನ ಹಂಚಿಕೆಯಲ್ಲಿ ಶೇಕಡ 90ರಷ್ಟು ಕಡಿತ ಮಾಡಲಾಗಿದೆ' ಎಂದು ದೂರಿದರು.

'ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯ ಅನುದಾನವನ್ನು ಶೇ 200ರಷ್ಟು ಹೆಚ್ಚಿಸಲಾಗಿದೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ದೇವಾಲಯಗಳ ಅಭಿವೃದ್ಧಿ ₹ 600 ಕೋಟಿ ವಿಶೇಷ ಅನುದಾನ ಒದಗಿಸಿದ್ದರು. ಕಾಂಗ್ರೆಸ್ ಸರ್ಕಾರ ನಯಾ ಪೈಸೆ ನೀಡಿಲ್ಲ. ಇದು ರಾಮಲಿಂಗಾ ರೆಡ್ಡಿ ಅವರ ಬಜೆಟ್ ಅಲ್ಲ, ದಿನೇಶ್ ಗುಂಡೂರಾವ್ ಬಜೆಟ್ಟೂ ಅಲ್ಲ. ಜಮೀರ್ ಬಜೆಟ್' ಎಂದರು.

'ರಾಹುಲ್ ಪ್ರಶ್ನಿಸುತ್ತೀರಾ?'

'ಕೇರಳದ ವಯನಾಡು ಜಿಲ್ಲೆಯಲ್ಲಿ ಆನೆ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ರಾಜ್ಯ ಸರ್ಕಾರ ₹ 15 ಲಕ್ಷ ಪರಿಹಾರ ಕೊಟ್ಟಿದೆ. ಕನಕಪುರದ ಗೇರುಹಳ್ಳಿಯ ಶಿವನಂಜಯ್ಯ ಎಂಬುವವರು ಆನೆ ದಾಳಿಗೆ ಮೃತಪಟ್ಟು 22 ದಿನಗಳಾದರೂ ಪರಿಹಾರ ಕೊಟ್ಟಿಲ್ಲ. ನಮ್ಮ ತೆರಿಗೆ, ನಮ್ಮ ಹಕ್ಕು ಎನ್ನುವ 135 ಶಾಸಕರು ವಯನಾಡಿನ ಸಂಸದ ರಾಹುಲ್ ಗಾಂಧಿ ಎದುರು ಧ್ವನಿ ಎತ್ತುತ್ತೀರಾ' ಎಂದು ಅಶೋಕ ಕೇಳಿದರು.

ಹಟದಿಂದ ನಷ್ಟ: ಸಿದ್ದರಾಮಯ್ಯ ಅವರು ಬಜೆಟ್‌ನಲ್ಲೂ ಕೇಂದ್ರ ಸರ್ಕಾರದ ವಿರುದ್ಧ ಸಂಘರ್ಷಕ್ಕೆ ಇಳಿದಿದ್ದಾರೆ. ಇದು ಒಳ್ಳೆಯ ನಡೆ ಅಲ್ಲ. ತಮಿಳುನಾಡಿನ ಸಂಸ್ಕೃತಿಯನ್ನು ಈ ಸರ್ಕಾರ ಪಾಲಿಸುತ್ತಿದೆ. ಹಟಮಾರಿತನದಿಂದ ರಾಜ್ಯಕ್ಕೆ ನಷ್ಟವಾಗಲಿದೆ ಎಂದು ಹೇಳಿದರು.

'ಮುಂಗಡದ ಅಂಗಡಿಯಲ್ಲಿ ತಳಿರು ತೋರಣದ ಸದ್ದು, ಅಂಗಡಿಯಲ್ಲಿ ಏನಿಲ್ಲ ಏನಿಲ್ಲ, ಖಾಲಿ ಡಬ್ಬ, ಖಾಲಿ ಡಬ್ಬ' ಎಂಬ ಕವನ ವಾಚಿಸಿದ ಅಶೋಕ ಚರ್ಚೆ ಮುಗಿಸಿದರು.

'ಗೃಹಲಕ್ಷ್ಮಿ': ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹೊರಕ್ಕೆ?

ಗ್ಯಾರಂಟಿಯ 'ಗೃಹಲಕ್ಷ್ಮಿ' ಯೋಜನೆಯಿಂದ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಅತಿಥಿ ಶಿಕ್ಷಕಿಯರು, ಹೊರಗುತ್ತಿಗೆ/ ಗುತ್ತಿಗೆ ಕೆಲಸಗಾರರು, ಗ್ರಾಮ ಸಹಾಯಕರನ್ನು ಕೈಬಿಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಅರವಿಂದ ಬೆಲ್ಲದ ಹೇಳಿದರು.

ಇದಕ್ಕೆ ಪೂರಕವಾಗಿ ಆರ್ಥಿಕ ಇಲಾಖೆಯ ಪ್ರಸ್ತಾವನೆಯ ಪತ್ರವನ್ನು ಅವರು ಸದನದಲ್ಲಿ ಪ್ರದರ್ಶಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯರು, ಹಣಕಾಸು ಇಲಾಖೆ ಪತ್ರ ಬರೆದಿದ್ದರೂ, ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಮುಖ್ಯಮಂತ್ರಿಯವರೇ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಅಧಿಕೃತ ವಿರೋಧ ಪಕ್ಷದ ನಾಯಕ ನಾನೇ– ಯತ್ನಾಳ

ಬೆಂಗಳೂರು: 'ಸರ್ವ ಪಕ್ಷದ ಅಧಿಕೃತ ವಿರೋಧ ಪಕ್ಷದ ನಾಯಕ ನಾನೇ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಬಿಜೆಪಿ ಅರವಿಂದ ಬೆಲ್ಲದ ಮಾತನಾಡುವಾಗ ಮಧ್ಯ ಪ್ರವೇಶಿಸಿದ ಯತ್ನಾಳ್ ಅವರು ಪಿಎಸ್‌ಐ ನೇಮಕಾತಿ ಹಗರಣ ಮತ್ತು ಕಾಂಗ್ರೆಸ್ ಅವಧಿಯ ಶೇ 40 ಕಮಿಷನ್ ಆರೋಪವನ್ನು ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, 'ಪಿಎಸ್‌ಐ ತನಿಖೆಗೆ ಸಾಕ್ಷಿ ಕೊಡಿ ಎಂದರೆ ಹೋಗಲೇ ಇಲ್ಲ. ಬಿಜೆಪಿ ಕಾಲದ ಶೇ 40 ರಷ್ಟು ಕಮಿಷನ್ ತನಿಖೆ ನಡೆಯುತ್ತಿದೆ. ಎಷ್ಟು ನುಂಗಿದ್ದಾರೆ ಎಂದರೆ ಅದರ ಆಳ- ಅಗಲವೇ ಗೊತ್ತಾಗುತ್ತಿಲ್ಲ' ಎಂದರು.

'ಪಿಎಸ್‌ಐ ಹಗರಣದ ತನಿಖೆಯನ್ನು ಸಿಬಿಐಗೆ ಕೊಡಿ' ಎಂದು ಯತ್ನಾಳ್ ಸವಾಲು ಹಾಕಿದರು.

'ಪಿಎಸ್‌ಐ, ಶೇ 40 ಕಮಿಷನ್, ಕೊರೊನಾ, ಪರುಶುರಾಮ್ ಥೀಮ್ ಪಾರ್ಕ್‌ನಿಂದ ಹಿಡಿದು ಎಲ್ಲವೂ ತನಿಖೆ ಆಗುತ್ತದೆ. ಯತ್ನಾಳ್ ಸಾಹೇಬ್ರು ಕೋ–ಆಪರೇಟ್ ಮಾಡಿದ್ರೆ ನಾಳೆನೇ ತನಿಖೆ ಮುಗಿದು ಹೋಗುತ್ತದೆ' ಎಂದು ಸಚಿವ ಪ್ರಿಯಾಂಕ್ ಹೇಳಿದರು.

'ಈ ಸರ್ಕಾರ ಬಂದ ಮೇಲೆ ಶೇ 40 ರಷ್ಟು ಕಮಿಷನ್ ಚಾಲೂ ಆಗಿದೆ. ರಾಜ್ಯದಲ್ಲಿ ಸರ್ವ ಪಕ್ಷದ ಅಧಿಕೃತ ವಿರೋಧ ಪಕ್ಷದ ನಾಯಕ ನಾನೇ' ಎಂದು ಯತ್ನಾಳ್ ಹಾಸ್ಯ ಚಟಾಕಿ ಹಾರಿಸಿದರು.

'ಒಬ್ಬೊಬ್ಬರೇ ಕಾಂಗ್ರೆಸ್ ನಾಯಕರು ಬಿಜೆಪಿ ಸೇರುತ್ತಿದ್ದಾರೆ. ಮುಂದೆ ಮಲ್ಲಿಕಾರ್ಜುನ ಖರ್ಗೆ ಬಿಜೆಪಿ ಸೇರಿದರೂ ಅಚ್ಚರಿ ಇಲ್ಲ' ಎಂದು ಯತ್ನಾಳ್ ಹೇಳಿದಾಗ, 'ನಮ್ಮ ಹಣವೂ ಬಿಜೆಪಿ ಕಚೇರಿಗೆ ಹೋಗಲ್ಲ' ಎಂದು ಸಚಿವ ಪ್ರಿಯಾಂಕ್ ಹೇಳಿದರು.

'ದರಪಟ್ಟಿ ಹಾಕದ ಆಸ್ಪತ್ರೆಯ ಪರವಾನಗಿ ರದ್ದು'

ಬೆಂಗಳೂರು: 'ದರ ಪಟ್ಟಿ ಪ್ರಕಟಿಸದ ಖಾಸಗಿ ಆಸ್ಪತ್ರೆಗಳ ಪರವಾನಗಿ ರದ್ದುಪಡಿಸಲು ಚಿಂತನೆ ನಡೆಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಖಾಸಗಿ ಆಸ್ಪತ್ರೆಗಳು ಅಧಿಕ ಹಣ ವಸೂಲಿ ಮಾಡುತ್ತಿವೆ ಎಂಬ ದೂರುಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕೆಪಿಎಂಇ ಕಾಯ್ದೆಯಡಿ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ದರಪಟ್ಟಿಯನ್ನು ಹಾಕಬೇಕು. ಯಾವ ಚಿಕಿತ್ಸೆಗೆ ಎಷ್ಟು ದರ ಎಂದು ನಮೂದಿಸಿ, ಆಸ್ಪತ್ರೆಯ ಮುಂಭಾಗದಲ್ಲಿಯೇ ಪ್ರಕಟಿಸಬೇಕು. ಇಲ್ಲವಾದಲ್ಲಿ ಆಸ್ಪತ್ರೆಗಳಿಗೆ ನೋಟಿಸ್ ನೀಡಿ, ಬೀಗ ಹಾಕುವ ಬಗ್ಗೆಯೂ ಚಿಂತನೆ ಮಾಡಲಾಗಿದೆ' ಎಂದು ಹೇಳಿದರು.

'ಆಸ್ಪತ್ರೆಗಳು ದರಪಟ್ಟಿಯಲ್ಲಿ ನಮೂದಿಸಿದಷ್ಟೇ ಹಣವನ್ನು ಪಡೆಯಬೇಕು. ಹೆಚ್ಚಿನ ಹಣ ಪಡೆದ, ದರಪಟ್ಟಿ ಪ್ರದರ್ಶಿಸದ ಖಾಸಗಿ ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಳ್ಳುವಂತೆ ಇಲಾಖೆ ಅಧಿಕಾರಿಗಳಿಗೂ ಸೂಚಿಸಲಾಗಿದೆ' ಎಂದು ತಿಳಿಸಿದರು.

ಕೆಲವು ಆಸ್ಪತ್ರೆಗಳು ಅಧಿಕ ಚಿಕಿತ್ಸಾ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ದಿನೇಶ್ ಗುಂಡೂರಾವ್ ಅವರಿಗೆ ರೋಗಿಗಳು ದೂರು ನೀಡಿದ್ದರು.

ಕೇಂದ್ರದ ವಿರುದ್ಧ 2 ನಿರ್ಣಯ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಸಂಪನ್ಮೂಲಗಳ ಹಂಚಿಕೆ ವಿಷಯದಲ್ಲಿ ಕೆಲವು ದಿನಗಳಿಂದ ಕೇಂದ್ರ ಸರ್ಕಾರದ ವಿರುದ್ಧ ಸಮರಕ್ಕೆ ಇಳಿದಿದ್ದ ರಾಜ್ಯ ಸರ್ಕಾರ, ತೆರಿಗೆ ಪಾಲಿನ ಸಮಾನ ಹಂಚಿಕೆ ಮತ್ತು ರೈತರ ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸುವ ಕಾನೂನು ಜಾರಿಗೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿ ವಿಧಾನಸಭೆಯಲ್ಲಿ ಗುರುವಾರ ನಿರ್ಣಯಗಳನ್ನು ಅಂಗೀಕರಿಸಿತು.

ಬಜೆಟ್ ಮೇಲಿನ ಚರ್ಚೆ ಗುರುವಾರ ಸಂಜೆ ಮುಕ್ತಾಯವಾದ ಬಳಿಕ ಕಾಂಗ್ರೆಸ್‌ನ ಪ್ರಕಾಶ್ ಕೆ. ಕೋಳಿವಾಡ್ ಅವರು ಮೋಡ ಬಿತ್ತನೆಗೆ ಸಂಬಂಧಿಸಿದ ಖಾಸಗಿ ಮಸೂದೆ ಮಂಡಿಸಿದರು. ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅವರು ಹೆಚ್ಚುವರಿ ಕಾರ್ಯಸೂಚಿಯ ಮೂಲಕ ನಿರ್ಣಯಗಳನ್ನು ಮಂಡಿಸಲು ದಿಢೀರನೆ ಅನುಮತಿ ಕೋರಿದರು.

ಸಭಾಧ್ಯಕ್ಷ ಯು.ಟಿ. ಖಾದರ್ ಅನುಮತಿ ನೀಡಿದರು. ಸಚಿವರು ನಿರ್ಣಯ ಓದಲಾರಂಭಿಸಿದರು. ಮೋಡ ಬಿತ್ತನೆಗೆ ಸಂಬಂಧಿಸಿದ ಖಾಸಗಿ ಮಸೂದೆ ಓದುವುದರಲ್ಲೇ ಮಗ್ನರಾಗಿದ್ದ ಬಿಜೆಪಿ ಸದಸ್ಯರಿಗೆ ಕೆಲಕಾಲ ಈ ವಿಷಯ ತಿಳಿಯಲಿಲ್ಲ. ಕೆಲವು ನಿಮಿಷಗಳ ಬಳಿಕ ವಿಷಯ ತಿಳಿಯುತ್ತಿದ್ದಂತೆ ಎದ್ದು ನಿಂತ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ವಿ. ಸುನಿಲ್ ಕುಮಾರ್, ಎಸ್. ಸುರೇಶ್ ಕುಮಾರ್ ಸೇರಿದಂತೆ ಹಲವರು ವಿರೋಧ ವ್ಯಕ್ತಪಡಿಸಿದರು.

ಸದನದ ಕಾರ್ಯಸೂಚಿಯಲ್ಲಿ ಉಲ್ಲೇಖಿಸದೆ, ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಮಾಹಿತಿ ನೀಡದೇ ದಿಢೀರನೆ ನಿರ್ಣಯ ಮಂಡಿಸಲಾಗಿದೆ ಎಂದು ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ನಿರ್ಣಯ ಮಂಡನೆಗೆ ಅವಕಾಶ ನೀಡಿದ ಸಭಾಧ್ಯಕ್ಷರ ನಿಲುವಿಗೂ ಆಕ್ಷೇಪಿಸಿದರು. ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದ ಬಿಜೆಪಿ ಸದಸ್ಯರನ್ನು ಜೆಡಿಎಸ್ ಸದಸ್ಯರೂ ಬೆಂಬಲಿಸಿದರು.

ಬಿಜೆಪಿ, ಜೆಡಿಎಸ್ ಸದಸ್ಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. 'ಮೋದಿ, ಮೋದಿ' ಎಂಬ ಘೋಷಣೆಯನ್ನೂ ಮೊಳಗಿಸಿದರು. ಸಚಿವರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ ವಿರೋಧ ಪಕ್ಷಗಳ ಸದಸ್ಯರ ವಿರುದ್ಧ ಹರಿಹಾಯ್ದರು. ಭಾರಿ ಗದ್ದಲದಿಂದ ಸದನದಲ್ಲಿ ಕೋಲಾಹಲದ ವಾತಾವರಣ ಸೃಷ್ಟಿಯಾಯಿತು.

ವಿರೋಧ ಲೆಕ್ಕಿಸದೆ ನಿರ್ಣಯಗಳನ್ನು ಮಂಡಿಸಿದ ಪಾಟೀಲ, ಅಂಗೀಕಾರ ಕೋರಿದರು. ಧ್ವನಿಮತದ ಮೂಲಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಬಳಿಕ ಕಲಾಪವನ್ನು ಹತ್ತು ನಿಮಿಷ ಮುಂದೂಡಿದ ಸಭಾಧ್ಯಕ್ಷರು, ತಮ್ಮ ಕೊಠಡಿಯಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಮಧ್ಯೆ ಸಂಧಾನಕ್ಕೆ ಯತ್ನಿಸಿದರು.

ರಾಜ್ಯ ಸರ್ಕಾರದ ನಡೆಯಿಂದ ತೀವ್ರ ಕೆರಳಿದ್ದ ಬಿಜೆಪಿ ಸದಸ್ಯರು, ಸಭಾಧ್ಯಕ್ಷರ ಕೊಠಡಿಯೊಳಗೆ ನಡೆದ ಸಂಧಾನ ಸಭೆಯಲ್ಲೂ ಏರು ದನಿಯಲ್ಲಿ ರೇಗಾಡಿದರು. ಸಂಧಾನ ವಿಫಲವಾಯಿತು. ಪುನಃ ಕಲಾಪ ಆರಂಭವಾದಾಗ ಬಿಜೆಪಿ ಸದಸ್ಯರು ಸದನದೊಳಗೆ ಬರಲಿಲ್ಲ.

'ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಇರುವ ಕಾರಣದಿಂದ ಆ ಪಕ್ಷದ ಸದಸ್ಯರು ಕಲಾಪದಲ್ಲಿ ಭಾಗಿಯಾಗುವುದಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ಕಲಾಪವನ್ನು ಮುಂದೂಡಬೇಕು' ಎಂದು ಕೃಷ್ಣ ಬೈರೇಗೌಡ ಮನವಿ ಮಾಡಿದರು. ಅದನ್ನು ಸ್ಪೀಕರ್ ಮಾನ್ಯ ಮಾಡಿದರು.

ಸಂಪನ್ಮೂಲ ಹಂಚಿಕೆ: ನ್ಯಾಯಕ್ಕೆ ಆಗ್ರಹ

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ತೆರಿಗೆ ಪಾಲು, ಹಣಕಾಸು ಆಯೋಗಗಳು ಶಿಫಾರಸು ಮಾಡಿದ ಅನುದಾನ, ಬರ ಪರಿಹಾರದಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ನೀಡುತ್ತಿಲ್ಲ. 15ನೇ ಹಣಕಾಸು ಆಯೋಗದ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ₹ 62,098 ಕೋಟಿ ವಂಚನೆಯಾಗಿದೆ. ಸರಕು ಮತ್ತು ಸೇವಾ ತೆರಿಗೆ ಪಾಲು ಸೇರಿದಂತೆ ತೆರಿಗೆ ಹಾಗೂ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಒಟ್ಟು ₹ 1.87 ಲಕ್ಷ ಕೋಟಿಯಷ್ಟು ನಷ್ಟವಾಗಿದೆ ಎಂಬ ಉಲ್ಲೇಖ ಮೊದಲ ನಿರ್ಣಯದಲ್ಲಿದೆ.

'ವಿಪತ್ತು ಪರಿಹಾರಕ್ಕೆ ಕಾನೂನಾತ್ಮಕವಾಗಿ ನೀಡಬೇಕಿರುವ ಅನುದಾನವನ್ನೂ ನೀಡುತ್ತಿಲ್ಲ. ಕೇಂದ್ರವು ಕರ್ನಾಟಕದ ಬಗ್ಗೆ ತಾರತಮ್ಯ ಧೋರಣೆ ಅನುಸರಿಸುತ್ತಿದೆ. ರಾಜ್ಯ ಆರ್ಥಿಕ ವ್ಯವಸ್ಥೆಯನ್ನು ಕೇಂದ್ರ ಸರ್ಕಾರವು ಹಾಳು ಮಾಡುತ್ತಿರುವುದನ್ನು ಸದನವು ಒಕ್ಕೊರಲಿನಿಂದ ಖಂಡಿಸುತ್ತದೆ' ಎಂದು ನಿರ್ಣಯದಲ್ಲಿ ಹೇಳಲಾಗಿದೆ.

ರಾಜ್ಯದ ಅಭಿವೃದ್ಧಿ ಮತ್ತು ನಾಗರಿಕರ ಹಿತ ರಕ್ಷಣೆಗಾಗಿ ಆರ್ಥಿಕ ಸಂಪನ್ಮೂಲಗಳ ಸಮಾನ ಹಂಚಿಕೆಯ ನಿಲುವನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕು. ಕರ್ನಾಟಕದ ಜನತೆಯ ಹಿತರಕ್ಷಣೆಯ ವಿಷಯದಲ್ಲಿ ಯಾವುದೇ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ಣಯದಲ್ಲಿ ಆಗ್ರಹಿಸಲಾಗಿದೆ.

ಎಂಎಸ್‌ಪಿ ಕಾನೂನಿಗೆ ಒತ್ತಾಯ

ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡಬೇಕೆಂದು ಆಗ್ರಹಿಸಿ ರೈತರು ನಡೆಸುತ್ತಿರುವ ಹೋರಾಟವನ್ನು ಎರಡನೇ ನಿರ್ಣಯದಲ್ಲಿ ಸಮರ್ಥಿಸಿಕೊಂಡಿದ್ದು, 'ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಕ್ರಮಗಳು ರೈತ ವಿರೋಧಿಯಾಗಿವೆ. ಆ ಕಾರಣಕ್ಕಾಗಿಯೇ ರೈತರಿಗೆ ಎಂಎಸ್‌ಪಿ ದೊರಕುತ್ತಿಲ್ಲ' ಎಂದು ರಾಜ್ಯ ಸರ್ಕಾರ ಹೇಳಿದೆ.

'ರೈತರ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲು ಕೇಂದ್ರ ಸರ್ಕಾರವು ಕಾನೂನು ರೂಪಿಸಬೇಕು. ರೈತರೊಂದಿಗೆ ಸಂಘರ್ಷದ ಹಾದಿ ತುಳಿಯದೇ ಅತ್ಯಂತ ನ್ಯಾಯಯುತವಾದ ಅವರ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ನಿರ್ಣಯದಲ್ಲಿ ಆಗ್ರಹಿಸಲಾಗಿದೆ.

'ಭಯದಿಂದ ನಿರ್ಣಯ'

'ರಾಜ್ಯ ಸರ್ಕಾರವು ಮೋಸದಿಂದ ಕೇಂದ್ರ ಸರ್ಕಾರದ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ. ಲೋಕಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಸದನವನ್ನು ದುರ್ಬಳಕೆ ಮಾಡಿಕೊಂಡಿದೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರದವರು ಕಳ್ಳರಂತೆ ನಿರ್ಣಯ ತಂದಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ಕಟ್ಟುಕತೆ ಹೆಣೆಯಲಾಗಿದೆ. ಬಿಜೆಪಿ ವಿರೋಧಿಸುತ್ತದೆ' ಎಂದರು.

ಕಲಾಪ ವೀಕ್ಷಣೆ ವಿಧಾನಪರಿಷತ್‌ನ ಗ್ಯಾಲರಿಯಲ್ಲಿ ಕುಳಿತು ಸಿದ್ದಿ ಮತ್ತು ಬುಡಕಟ್ಟು ಸಮುದಾಯದ ಜನರು ಗುರುವಾರ ಕಲಾಪ ವೀಕ್ಷಿಸಿದರು - ಪ್ರಜಾವಾಣಿ ಚಿತ್ರ

₹4,078.85 ಕೋಟಿ ಅಂತಿಮ ಪೂರಕ ಅಂದಾಜಿಗೆ ವಿಧಾನಸಭೆ ಒಪ್ಪಿಗೆ

ಸರ್ಕಾರದ ಪ್ರಚಾರಕ್ಕೆ ₹200 ಕೋಟಿ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಪ್ರಚಾರಕ್ಕೆ ₹200 ಕೋಟಿ ಒದಗಿಸಲಾಗಿದೆ.

ಜುಲೈನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಅನುಮೋದನೆ ನೀಡಿದ ಮೊತ್ತಕ್ಕೆ ಹೆಚ್ಚುವರಿಯಾಗಿ ಮಾಡಲಾದ ಮತ್ತು ಮಾರ್ಚ್ ಅಂತ್ಯದವರೆಗೆ ಮಾಡಲಾಗುವ ವೆಚ್ಚಕ್ಕೆ ಅನುಗುಣವಾಗಿ ₹4,078.85 ಕೋಟಿ ಮೊತ್ತದ ಎರಡನೇ ಹಾಗೂ ಅಂತಿಮ ಪೂರಕ ಅಂದಾಜಿಗೆ ವಿಧಾನಸಭೆ ಒಪ್ಪಿಗೆ ನೀಡಿದೆ.

ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮೊದಲನೇ ಪೂರಕ ಅಂದಾಜು ಮಂಡಿಸಲಾಗಿತ್ತು. ಅದಾದ ಬಳಿಕ ಮಾಡಲಾಗುವ ಖರ್ಚುಗಳನ್ನು ಎರಡನೇ ಪೂರಕ ಅಂದಾಜಿನಲ್ಲಿ ಮಂಡಿಸಲಾಗಿದೆ.

ಸರ್ಕಾರಿ ಕಾರ್ಯಕ್ರಮಗಳ ಪ್ರಚಾರ, ಮಾಹಿತಿ ಶಿಕ್ಷಣ ಹಾಗೂ ಸಂವಹನ ವೆಚ್ಚಗಳಿಗಾಗಿ ಎರಡು ಬಾಬ್ತುಗಳಲ್ಲಿ ₹183.30 ಕೋಟಿ ಹಾಗೂ ₹16.70 ಕೋಟಿ ಒದಗಿಸಲಾಗಿದೆ. ಹಂಪಿ ಉತ್ಸವದ ಕಾರ್ಯಕ್ರಮಗಳಿಗಾಗಿ ₹8 ಕೋಟಿ ಒದಗಿಸಲಾಗಿದೆ. ಕರಾವಳಿ ತೀರದ ಮೀನುಗಾರಿಕಾ ಕೊಂಡಿ ರಸ್ತೆಗಳ ಅಭಿವೃದ್ಧಿ, ದುರಸ್ತಿ ಹಾಗೂ ನಿರ್ವಹಣೆಗಾಗಿ ₹23.43 ಕೋಟಿ ನೀಡಲಾಗಿದೆ.

ಶಾಸಕ ಬಸವರಾಜ ಬೊಮ್ಮಾಯಿ ಕ್ಷೇತ್ರ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನಲ್ಲಿ ಹೈಮಾಸ್ಟ್ ದೀಪ ಅಳವಡಿಸಲು ₹2 ಕೋಟಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಪರಿಶಿಷ್ಟ ಜಾತಿ ವಸತಿ ಶಾಲಾ, ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ₹50 ಕೋಟಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ₹5 ಕೋಟಿ, ಪರಿಶಿಷ್ಟ ಜಾತಿಗಳ ಅಭಿವೃದ್ಧಿಗಾಗಿ ₹75 ಕೋಟಿ, ಅಲ್ಪ ಸಂಖ್ಯಾತರ ಆಯೋಗದ ಕಚೇರಿಯ ನಿರ್ವಹಣೆಗಾಗಿ ₹2 ಕೋಟಿ ನಿಗದಿ ಮಾಡಲಾಗಿದೆ.

ವಿಧಾನಸಭಾ ಸದಸ್ಯರಿಗೆ ವಾಹನ ಖರೀದಿಸಲು ₹5 ಕೋಟಿ, ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ಅನುಭವ ಮಂಟಪ ಬಾಕಿ ಬಿಲ್‌ಗಳ ಪಾವತಿಗಾಗಿ ₹50 ಕೋಟಿ, ನೇಕಾರರ ವಿದ್ಯುತ್ ಮಗ್ಗಗಳಿಗೆ ಸರಬರಾಜು ಮಾಡಿದ ವಿದ್ಯುತ್ ಶುಲ್ಕದ ಬಾಕಿ ಪಾವತಿಗೆ ₹80 ಕೋಟಿ ನೀಡಲಾಗಿದೆ. ದೆಹಲಿಯ ಭಾರತ್ ಟೆಕ್ಸ್‌ಗೆ ತೆರಳಲು ₹3.10 ಕೋಟಿ, ಬಿಸಿಜಿ ಸಲಹಾ ಸಂಸ್ಥೆಗೆ ₹2 ಕೋಟಿ, ದಾವೋಸ್ ಸಮ್ಮೇಳನದ ಭೇಟಿಯ ಖರ್ಚಿನ ಬಾಕಿ ಪಾವತಿಗೆ ₹2.75 ಕೋಟಿ ನೀಡಲಾಗಿದೆ.

ಕೃಷಿ, ಉಪಕಸುಬಿಗೆ ₹656 ಕೋಟಿ

ಅಲ್ಪಾವಧಿ ಬೆಳೆಸಾಲ ಮನ್ನಾ ಯೋಜನೆ ಅಡಿ ಬಾಕಿ ಉಳಿದ ಮೊತ್ತ ಬಿಡುಗಡೆ ಮಾಡಲು ₹131.30 ಕೋಟಿ ಹೆಚ್ಚುವರಿಯಾಗಿ ಒದಗಿಸಲಾಗಿದೆ. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಅಡಿ ರಾಜ್ಯ ಸರ್ಕಾರ ಪಾಲಿನ ವಿಮಾ ಕಂತು ಪಾವತಿಗೆ ₹514.44 ಕೋಟಿ ನೀಡಲಾಗಿದೆ.

2023–24ನೇ ಸಾಲಿನಲ್ಲಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯದ ಸರ್ಕಾರದ ಸಹಾಯಧನದ ಶೇ25ರಷ್ಟು ಪಾಲು ನೀಡಲು ₹11.05 ಕೋಟಿ ಒದಗಿಸಲಾಗಿದೆ.

ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರ ಸಭಾತ್ಯಾಗ

'ಪ್ರೀಮಿಯಂ ಎಫ್‌ಎಆರ್' ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸದಸ್ಯರ ವಿರೋಧ, ಸಭಾತ್ಯಾಗದ ನಡುವೆ 'ಪ್ರೀಮಿಯಂ ಎಫ್‌ಎಆರ್' ಖರೀದಿ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸುವ 'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಮಸೂದೆ'ಗೆ ಗುರುವಾರ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ನೀಡಲಾಯಿತು.

ಮಸೂದೆ ಮಂಡಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾರ್ಗಸೂಚಿ ದರದ ಶೇ 40ರಷ್ಟು ಶುಲ್ಕವನ್ನು ಸ್ಥಳೀಯ ಯೋಜನಾ ಪ್ರಾಧಿಕಾರ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಗೆ ಪಾವತಿಸಿ, ಬಹುಮಹಡಿ ಕಟ್ಟಡಗಳಲ್ಲಿ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ಎಫ್‌ಎಆರ್‌ಗಳನ್ನು ಬೇರೆಯವರಿಗೆ ಮಾರಾಟ ಮಾಡುವ ಅವಕಾಶವಿದೆ. ಮಸೂದೆ ಅಂಗೀಕಾರವಾದರೆ ಬೆಂಗಳೂರು, ಮಂಗಳೂರು ಹೊರತುಪಡಿಸಿ ರಾಜ್ಯದ ಇತರೆ ಪ್ರದೇಶಗಳಲ್ಲೂ ಬಹುಮಹಡಿ ಕಟ್ಟಗಳ ನಿರ್ಮಾಣಕ್ಕೆ ಅನುಕೂಲಕರ ವಾತಾವರಣ ನಿರ್ಮಾಣವಾಗಲಿದೆ ಎಂದರು.

ಬಿಜೆಪಿಯ ಕೆ.ಎಸ್.ನವೀನ್ ಮಾತನಾಡಿ, ಸಣ್ಣ ರಸ್ತೆಗಳು ಇರುವ ಕಡೆ ಜನದಟ್ಟಣೆ ಉಂಟಾಗುತ್ತದೆ. ಅಗ್ನಿ ಅವಘಡಗಳು ಎದುರಾದಾಗ ಪರಿಸ್ಥಿತಿ ನಿಭಾಯಿಸುವುದು ಕಷ್ಟವಾಗುತ್ತದೆ. ಈ ಕುರಿತು ಸರ್ಕಾರ ಆಲೋಚಿಸಬೇಕು' ಎಂದು ಸಲಹೆ ನೀಡಿದರು

'ಮಸೂದೆ ಜಾರಿಯಾದರೆ ಎಲ್ಲ ಅಧಿಕಾರ ಅಧಿಕಾರಿಗಳ ಬಳಿ ಕೇಂದ್ರೀಕೃತವಾಗುತ್ತದೆ. ಹಾಗಾಗಿ, ಮಸೂದೆ ಹಿಂಪಡೆಯಬೇಕು. ಎಲ್ಲರ ಜತೆ ಇನ್ನಷ್ಟು ಚರ್ಚಿಸಿದ ಬಳಿಕ ಮತ್ತೊಮ್ಮೆ ಮಂಡನೆ ಮಾಡಬೇಕು' ಎಂದು ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಒತ್ತಾಯಿಸಿದರು.

ಬಿಜೆಪಿಯ ಕೆಲ ಸದಸ್ಯರು ಮಸೂದೆ ಬೆಂಬಲಿಸಿ ಮಾತನಾಡಿದರೆ, ಹಲವರು ವಿರೋಧಿಸಿದರು. ಅವರಲ್ಲೇ ಭಿನ್ನಾಭಿಪ್ರಾಯ ಮೂಡದ ಕಾರಣ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಜತೆ ಚರ್ಚಿಸಿದ ಶ್ರೀನಿವಾಸ ಪೂಜಾರಿ ಸಭಾತ್ಯಾಗ ಮಾಡುವ ನಿರ್ಧಾರ ತೆಗೆದುಕೊಂಡರು. ಆದರೆ, ಮಿತ್ರಪಕ್ಷ ಜೆಡಿಎಸ್ ಸಾಥ್ ನೀಡಲಿಲ್ಲ. ಗದ್ದಲದ ನಡುವೆ ಸಭಾಪತಿ ಮಸೂದೆಯನ್ನು ಧ್ವನಿ ಮತಕ್ಕೆ ಹಾಕಿದರು. ಅಂಗೀಕಾರವಾಗಿದೆ ಎಂದು ಘೋಷಿಸಿದರು.

ಇದಕ್ಕೂ ಮೊದಲು ವಿಧಾನಸಭೆಯಿಂದ ಅಂಗೀಕಾರವಾಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತಿದ್ದುಪಡಿ ಮಸೂದೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗಳ ಕುರಿತು ವಿಸ್ತೃತ ಚರ್ಚೆ ನಡೆದ ನಂತರ ಅಂಗೀಕಾರ ದೊರೆಯಿತು.

ವಿಧಾನ ಪರಿಷತ್ ಕಲಾಪ ನಡೆಯುತ್ತಿದ್ದ ವೇಳೆಯಲ್ಲಿ ಸದನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಬಿಜೆಪಿಯ ಕೆ.ಎಸ್. ನವೀನ್, ಎಚ್.ಎಸ್. ಗೋಪಿನಾಥ್ ಮತ್ತು ಡಿ.ಎಸ್. ಅರುಣ್ ಚರ್ಚೆ ನಡೆಸಿದರು ಪ್ರಜಾವಾಣಿ ಚಿತ್ರ

'ಗಡಿ ಭಾಗದಲ್ಲಿ ಸೇಂದಿ ಬದಲಿಗೆ ಎಂಎಸ್‌ಐಎಲ್ ಮಳಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಲಂಗಾಣ ಮತ್ತು ಆಂಧ್ರಪ್ರದೇಶದ ಗಡಿಯಲ್ಲಿರುವ ಗ್ರಾಮಗಳ ಸ್ಥಳೀಯರು ಸೇಂದಿ ಕುಡಿದು ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ, ಆ ಭಾಗದ ಬೇಡಿಕೆ ಇರುವ ಕಡೆಗಳಲ್ಲಿ ಎಂಎಸ್‌ಐಎಲ್‌ನಿಂದ ಮದ್ಯ ಮಳಿಗೆ ತೆರೆಯಬೇಕು ಎಂದು ವಿಧಾನಮಂಡಲ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ವರದಿ ಶಿಫಾರಸು ಮಾಡಿದೆ.

ಸಮಿತಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಅವರು ವಿಧಾನಸಭೆಯಲ್ಲಿ ಶುಕ್ರವಾರ ವರದಿ ಮಂಡಿಸಿದರು. ಕೆಲವು ಪ್ರದೇಶಗಳಲ್ಲಿ ಊರಿನ ಮಧ್ಯೆ ಎಂಎಸ್‌ಐಎಲ್ ಮಳಿಗೆಗಳು ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಅಂತಹವುಗಳನ್ನು ಸ್ಥಳಾಂತರಿಸಬೇಕು ಎಂದೂ ವರದಿ ಶಿಫಾರಸು ಮಾಡಿದೆ.

ಪರಿಶಿಷ್ಟಜಾತಿ ಮತ್ತು ಪಂಗಡಗಳ ಜನರು ಹೆಚ್ಚು ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಥವಾ ಕೊಳೆಗೇರಿಗಳ ಬಳಿ ಎಂಎಸ್‌ಐಎಲ್ ಮಳಿಗೆಗಳನ್ನು ತೆರೆದಿರುವುದರಿಂದ ಈ ಜನಾಂಗ ಮತ್ತಷ್ಟು ದುಸ್ಥಿತಿಗೆ ಹೋಗುತ್ತಿದೆ ಎಂದೂ ವರದಿ ಹೇಳಿದೆ.

ಪ್ರಮುಖ ಶಿಫಾರಸುಗಳು:

- ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಇಲ್ಲಿಯವರೆಗೆ ಎಂಎಸ್‌ಐಎಲ್ ಅಡಿ ಎಂಪ್ಯಾನಲ್ ಮಾಡಿಸಿಕೊಳ್ಳಲು ಅವಕಾಶ ನೀಡಿಲ್ಲ. ಇದರಿಂದಾಗಿ ಈ ವರ್ಗದ ಜನರು ಮಾರಾಟ ವ್ಯವಹಾರದಲ್ಲಿ ಭಾಗವಹಿಸಲು ಆಗುತ್ತಿಲ್ಲ. ಎಂಪ್ಯಾನಲ್ ಮಾಡಲು ಕಡ್ಡಾಯವಾಗಿ ಮೀಸಲಾತಿ ಅಳವಡಿಸಿಕೊಳ್ಳಬೇಕು.
- ಎಂಎಸ್‌ಐಎಲ್‌ನ ಎಲ್ಲ ಮಳಿಗೆಗಳಲ್ಲಿ ಕಡ್ಡಾಯವಾಗಿ 360 ಡಿಗ್ರಿ ವೀಕ್ಷಣೆ ನಡೆಸುವ ಸಿಸಿ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಿ, ಅಲ್ಲಿ ನಡೆಯುವ ಕಾನೂನು ಬಾಹಿರ ಚಟುವಟಿಕೆ ನಿಯಂತ್ರಿಸಬೇಕು.
- ಎಂಆರ್‌ಪಿ ಮಳಿಗೆಗಳನ್ನು ತೆರೆಯುವ ಮತ್ತು ಸ್ಥಳಾಂತರಿಸುವ ಕುರಿತು ಸ್ಥಳೀಯ ಶಾಸಕರು ನೀಡುವ ಶಿಫಾರಸಿನ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಕೆಐಎಡಿಬಿ ಶಿಫಾರಸುಗಳು:

- ಕೆಐಎಡಿಬಿ ಸ್ಥಾಪನೆಯಾದಾಗಿನಿಂದ 2009 ರವರೆಗೆ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದರಿಗೆ ಕೇವಲ ಶೇ 0.7 ರಷ್ಟು ನಿವೇಶನ ಹಂಚಿಕೆ ಆಗಿದೆ. 2009 ರ ಬಳಿಕ ಶೇ 22.65 ರಷ್ಟು ಮೀಸಲಾತಿ ಅಳವಡಿಸಿಕೊಳ್ಳಲಾಯಿತು. ಈ ಮೀಸಲಾತಿ ಅನ್ವಯ ಶೇ 25 ರಷ್ಟು ನೀಡಬೇಕಾಗಿರುವ ಬ್ಯಾಕ್‌ಲಾಗ್ ನಿವೇಶನಗಳನ್ನು ಮೊದಲು ಹಂಚಿಕೆ ಮಾಡಿ, ನಂತರ ಉಳಿದ ಪ್ರದೇಶದಲ್ಲಿ ನಿಯಮಾವಳಿ ಪ್ರಕಾರ ಹಂಚಿಕೆ ಮಾಡಬೇಕು.
- ಮೀಸಲಾತಿಗೆ ವಿರುದ್ಧವಾಗಿ ಏಕಗವಾಕ್ಷಿ ವ್ಯವಸ್ಥೆಯಲ್ಲಿ ತೀರ್ಮಾನಗಳನ್ನು ತೆಗೆದುಕೊಂಡವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು

ಬಿಬಿಎಂಪಿಯಲ್ಲೂ ಅನ್ಯಾಯ:

- ಬಿಬಿಎಂಪಿಯಲ್ಲಿ ಇತರ ಜಾತಿ–ಜನಾಂಗದವರಿಗೆ ಜಾಹೀರಾತು ಟೆಂಡರ್ ಕೆಲಸಗಳನ್ನು ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ ಜಾಹಿರಾತು ವಲಯದಲ್ಲಿ ತೊಡಗಿಸಿಕೊಳ್ಳಲು ಕಡ್ಡಾಯವಾಗಿ ಶೇ 24.1 ಮೀಸಲಾತಿ ನೀಡಬೇಕು.
- ವಲಯವಾರು ಇರುವ ಮುಖ್ಯ ವಾಣಿಜ್ಯ ಸ್ಥಳಗಳಲ್ಲಿ ಹಾಗೂ ರೋಸ್ಟರ್ ಬಿಂದುಗಳ ರೀತಿಯಲ್ಲಿ ಟೆಂಡರ್ ಕೆಲಸಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಾಂಗದವರಿಗೆ ಮೀಸಲಾತಿ ನೀಡಬೇಕು.
- ಶೌಚಾಲಯ ಟೆಂಡರ್ ಅನ್ನು 5 ವರ್ಷಗಳಿಗೆ ಕೊಟ್ಟಿದ್ದು, ಅವಧಿ ಮುಕ್ತಾಯವಾಗಿದ್ದರೂ, ವಿಸ್ತರಣೆ ಮಾಡದಿದ್ದರೂ ಅವರನ್ನೇ ಮುಂದುವರಿಸಲಾಗುತ್ತಿದೆ. ಈ ಟೆಂಡರ್‌ಗಳನ್ನು ರದ್ದುಪಡಿಸಿ, ಮೀಸಲಾತಿ ಅನ್ವಯ ಕ್ರಮವಹಿಸಬೇಕು.

ಶಾಲೆ ಶೌಚಾಲಯ ನಿರ್ವಹಣೆಗೆ 'ಟಾಯ್ಲೆಟ್ ಫಂಡ್'

ಶಾಲೆಗಳ ನಿರ್ವಹಣೆಗೆ ನೀಡಲಾಗುವ ಅನುದಾನದ ಮೊತ್ತದಲ್ಲಿ ಶೌಚಾಲಯ ನಿರ್ವಹಣೆಗೆ ಉಪಯೋಗ ಮಾಡದೇ ಇತರೆ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳುತ್ತಿರುವುದರಿಂದ, ಟಾಯ್ಲೆಟ್ ಫಂಡ್ ಎಂದು ಪ್ರತ್ಯೇಕವಾಗಿ ಹಣ ನಿಗದಿ ಮಾಡಬೇಕು ಎಂದು ವರದಿ ಶಿಫಾರಸು ಮಾಡಿದೆ.

ಶಾಲೆಗಳ ನಿರ್ವಹಣೆಗೆ ನೀಡಲಾಗುವ ಮೊತ್ತದಲ್ಲಿ ಶೌಚಾಲಯ ನಿರ್ವಹಣೆಗೆ ಉಪಯೋಗ ಮಾಡದೇ ಬಣ್ಣ ಹೊಡೆಯುವುದಕ್ಕೆ, ವಾಟರ್ ಟ್ಯಾಂಕ್ ಇತ್ಯಾದಿಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹೀಗಾಗಿ, ಟಾಯ್ಲೆಟ್ ಫಂಡ್ ನೀಡಬೇಕು ಎಂದು ವರದಿ ಹೇಳಿದೆ.

ರಾಜ್ಯದಲ್ಲಿ 45,757 ಸರ್ಕಾರಿ ಶಾಲೆಗಳಿವೆ. ಇಲ್ಲಿ ಎಸ್‌ಸಿ–ಎಸ್‌ಟಿಗೆ ಸೇರಿದ 45,720 ವಿದ್ಯಾರ್ಥಿಗಳು (ಶೇ.24) ಓದುತ್ತಿದ್ದಾರೆ. ಈ ಪೈಕಿ 8,778 ಸರ್ಕಾರಿ ಶಾಲೆಗಳಲ್ಲಿ ಶೇ 50 ರಷ್ಟು (ಎಸ್‌ಸಿ– ಎಸ್‌ಟಿ) ವಿದ್ಯಾರ್ಥಿಗಳಿದ್ದಾರೆ. ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನದಡಿ ಈ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು ಎಂದು ತಿಳಿಸಿದೆ.

ನಾಲ್ಕು ಅವಧಿಗೆ ಪುನರಾಯ್ಕೆಗೊಂಡ 23 ಸಂಸದರ ಆಸ್ತಿ ವಿಶ್ಲೇಷಿಸಿದ ಎಡಿಆರ್

6 ಸಂಸದರ ಆಸ್ತಿ ಹಲವು ಪಟ್ಟು ಜಿಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಿಂದ ಪುನರಾಯ್ಕೆಯಾಗುತ್ತಿರುವ ಆರು ಸಂಸದರ ಆಸ್ತಿ 15 ವರ್ಷಗಳಲ್ಲೇ ಹಲವು ಪಟ್ಟು ಏರಿಕೆಯಾಗಿದೆ. ಈ ಎಲ್ಲ ಸಂಸದರು ಬಿಜೆಪಿ ಸೇರಿದವರು.

ಈ ಸಂಸದರ ಒಟ್ಟಾರೆ ಆಸ್ತಿಯು ₹35 ಕೋಟಿಯಿಂದ ₹402 ಕೋಟಿಗೆ ಜಿಗಿದಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

ಈ ಸಂಸದರ ಅಪರಾಧ ಹಿನ್ನೆಲೆ, ಹಣಬಲ ಹಾಗೂ ಇತರ ವಿಷಯಗಳ ಬಗ್ಗೆ ವಿಶ್ಲೇಷಣೆ ನಡೆಸಿ ಸಂಸ್ಥೆಯು ಗುರುವಾರ ವರದಿ ಪ್ರಕಟಿಸಿದೆ. ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣಪತ್ರಗಳನ್ನು ವಿಶ್ಲೇಷಣೆ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

ವಿಜಯಪುರದ ಸಂಸದ ರಮೇಶ ಜಿಗಜಿಣಗಿ ಅವರ ಆಸ್ತಿ ₹49.86 ಕೋಟಿ ಹೆಚ್ಚಾಗಿದೆ. ಅಂದರೆ ಶೇ 9,098ರಷ್ಟು ಜಾಸ್ತಿಯಾಗಿದೆ. 23 ಸಂಸದರಲ್ಲಿ ಅತಿ ಹೆಚ್ಚು ಆಸ್ತಿ ಏರಿಕೆ ಆಗಿರುವುದು ಇವರದ್ದೇ.


ರಮೇಶ ಜಿಗಜಿಣಗಿ


ಸದಾನಂದ ಗೌಡ

ಜಿ.ಎಂ. ಸಿದ್ದೇಶ್ವರ

ಪ್ರಲ್ಹಾದ ಜೋಶಿ

ಅನಂತಕುಮಾರ ಹೆಗಡೆ


ಪಿ.ಸಿ.ಗದ್ದಿಗೌಡರ

ದಾವಣಗೆರೆಯ ಜಿ.ಎಂ. ಸಿದ್ದೇಶ್ವರ (ಶೇ 656), ಬೆಂಗಳೂರು ಉತ್ತರದ ಡಿ.ವಿ.ಸದಾನಂದ ಗೌಡ (ಶೇ 4,413), ಧಾರವಾಡದ ಸಂಸದರಾಗಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ (ಶೇ 1,335), ಉತ್ತರ ಕನ್ನಡದ ಅನಂತಕುಮಾರ ಹೆಗಡೆ (ಶೇ 6,928) ಹಾಗೂ ಬಾಗಲಕೋಟೆಯ ಪಿ.ಸಿ.ಗದ್ದಿಗೌಡರ (ಶೇ 718) ಆಸ್ತಿ ಗಣನೀಯವಾಗಿ ಏರಿಕೆಯಾಗಿದೆ ಎಂದು ವರದಿ ಬಹಿರಂಗಪಡಿಸಿದೆ.

ರಾಹುಲ್ ಗಾಂಧಿ ಆಸ್ತಿ 2004ರಲ್ಲಿ ₹55.38 ಲಕ್ಷ ಇತ್ತು. 2009ರಲ್ಲಿ ₹2.32 ಕೋಟಿ, 2014ರಲ್ಲಿ ₹9.4 ಕೋಟಿಗೆ ಹಾಗೂ 2019ರಲ್ಲಿ ₹15.88 ಕೋಟಿಗೆ ಜಿಗಿದಿದೆ. 15 ವರ್ಷಗಳಲ್ಲಿ ಅವರ ಆಸ್ತಿ ಶೇ 2,769 ಏರಿಕೆಯಾಗಿದೆ. ಸೋನಿಯಾ ಗಾಂಧಿ ಆಸ್ತಿ ₹85.68 ಲಕ್ಷದಿಂದ ₹11.82 ಕೋಟಿಗೆ (ಶೇ 1,280 ಹೆಚ್ಚಳ) ಏರಿದೆ.

ದೇಶದಲ್ಲಿ 2004ರಿಂದ 2019ರ ಅವಧಿಯಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮೇನಕಾ ಗಾಂಧಿ ಸೇರಿದಂತೆ 23 ಸಂಸದರು ಪುನರಾಯ್ಕೆಯಾಗಿದ್ದಾರೆ.

ಒಂಬತ್ತು ಸಂಸದರ ವಿರುದ್ಧ ಗಂಭೀರ ಕ್ರಿಮಿನಲ್ ಆರೋಪಗಳಿವೆ. ಅದರಲ್ಲಿ ಸೋನಿಯಾ, ಮೇನಕಾ ಹಾಗೂ ಶಿವಸೇನಾದ ಭಾವನಾ ಗಾವ್ಲಿ ಸೇರಿದ್ದಾರೆ ಎಂದು ವರದಿ ತಿಳಿಸಿದೆ.

ರಾಜ್ಯದ ಸಂಸದರ ಆಸ್ತಿ

ರಮೇಶ ಜಿಗಜಿಣಗಿ	
ವರ್ಷ	ಆಸ್ತಿ (₹ಗಳಲ್ಲಿ)
2004	54.80 ಲಕ್ಷ
2009	1.17 ಕೋಟಿ
2014	8.94 ಕೋಟಿ
2019	50.41 ಕೋಟಿ

ಪ್ರಲ್ಹಾದ ಜೋಶಿ	
ವರ್ಷ	ಆಸ್ತಿ (₹ಗಳಲ್ಲಿ)
2004	77 ಲಕ್ಷ
2009	1.44 ಕೋಟಿ
2014	4.19 ಕೋಟಿ
2019	11.13 ಕೋಟಿ

ಡಿ.ವಿ.ಸದಾನಂದ ಗೌಡ	
2004	46.30 ಲಕ್ಷ
2009	1.43 ಕೋಟಿ
2014	9.88 ಕೋಟಿ
2019	20.93 ಕೋಟಿ

ಅನಂತಕುಮಾರ ಹೆಗಡೆ	
2004	12.06 ಲಕ್ಷ
2009	64.27 ಲಕ್ಷ
2014	3.23 ಕೋಟಿ
2019	8.47 ಕೋಟಿ

ಜಿ.ಎಂ. ಸಿದ್ದೇಶ್ವರ	
2004	5.02 ಕೋಟಿ
2009	14.02 ಕೋಟಿ
2014	23.23 ಕೋಟಿ
2019	38.01 ಕೋಟಿ

ಪಿ.ಸಿ.ಗದ್ದಿಗೌಡರ	
2004	53.75 ಲಕ್ಷ
2009	1.67 ಕೋಟಿ
2014	3.63 ಕೋಟಿ
2019	4.39 ಕೋಟಿ

ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವಕರ್ಮ ಬ್ರಹ್ಮ ರಥೋತ್ಸವ ಹಾಗೂ ವಿಶ್ವಕರ್ಮ ಜನ ಜಾಗೃತಿ ಸಮಾವೇಶದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ವಿಶ್ವಕರ್ಮ ರಾಷ್ಟ್ರಮಟ್ಟದ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಶ್ವಕರ್ಮ ಸೇವಾ ಸಮಿತಿ ಅಧ್ಯಕ್ಷ ಆರ್ ಮಧುಸೂದನ್, ನಿವೃತ್ತ ಐಎಎಸ್ ಅಧಿಕಾರಿಗಳಾದ ಕೆ. ಎಸ್ ಪ್ರಭಾಕರ್, ಪಿ.ಎನ್ ಶ್ರೀನಿವಾಸಾಚಾರಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಶ್ವಕರ್ಮ ಏಕದಂಡಿಗಿಮಠದ ಕಾಳಹಸ್ತೇಂದ್ರ ಸ್ವಾಮೀಜಿ, ಆನೆಗೊಂದಿ ಸಂಸ್ಥಾನದ ಕಾಳಹಸ್ತೇಂದ್ರ ಸರಸ್ವತಿ ಸ್ವಾಮೀಜಿ, ಸ್ವಯಂ ಉದ್ಭವ ಅಭಯ ಹಸ್ತ ಆದಿಲಕ್ಷ್ಮಿ ಸಂಸ್ಥಾನದ ನೀಲಕಂಠಾಚಾರಿ ಸ್ವಾಮೀಜಿ ಮತ್ತು ವಕೀಲ ರುದ್ರಾಚಾರ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ವಿಶ್ವಕರ್ಮ ಹ್ಯಾಂಡಿಕ್ರಾಫ್ಟ್ ವಿ.ವಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಜನಸಂಖ್ಯೆಯಲ್ಲಿ ಕೇವಲ ಶೇ 2ರಷ್ಟು ಇರುವ ವಿಶ್ವಕರ್ಮರು ಮಹಾ ಪ್ರತಿಭಾವಂತರು. ಸಮುದಾಯದವರಲ್ಲಿ ಕಲೆ ರಕ್ತಗತವಾಗಿ ಬಂದಿರುತ್ತದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬಣ್ಣಿಸಿದರು.

ವಿಶ್ವಕರ್ಮ ಸೇವಾ ಸಮಿತಿಯು ಗುರುವಾರ ಹಮ್ಮಿಕೊಂಡಿದ್ದ ವಿಶ್ವಕರ್ಮ ಬ್ರಹ್ಮ ರಥೋತ್ಸವ ಮತ್ತು ಜನಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, 'ವಸತಿ, ನಿವೇಶನ ಒದಗಿಸಬೇಕು ಎಂಬ ಬೇಡಿಕೆಗೆ ಬೆಂಗಳೂರಿನಲ್ಲಿ ಸ್ಪಂದಿಸುವುದು ಕಷ್ಟ. ಇಲ್ಲಿ ಜಾಗದ ಕೊರತೆ ಇದೆ. ಮುಖ್ಯಮಂತ್ರಿಯವರ ಲಕ್ಷ ಮನೆ ಯೋಜನೆಗೆ ವಸತಿ ರಹಿತರು ಅರ್ಜಿ ಸಲ್ಲಿಸಿ ಎಂದು ಸಲಹೆ ನೀಡಿದರು.

ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್. ಪ್ರಭಾಕರ್ ಮಾತನಾಡಿ, 'ಬೇರೆ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ವಿಶ್ವಕರ್ಮ ಹ್ಯಾಂಡಿಕ್ರಾಫ್ಟ್ ವಿಶ್ವವಿದ್ಯಾಲಯ ಮಾಡಬೇಕು. ಕರಕುಶಲಗಳ ಅಧ್ಯಯನ, ಕಲಿಕೆಗೆ ಅವಕಾಶ ನೀಡಬೇಕು. ಸಮುದಾಯ ಭವನ, ತರಬೇತಿ ಕೇಂದ್ರ ನಿರ್ಮಿಸಲು ಜಮೀನು ಒದಗಿಸಬೇಕು' ಎಂದು ಬೇಡಿಕೆ ಸಲ್ಲಿಸಿದರು.

ವಸಂತ ಕುಮಾರ್ ಬಿಡುಗಡೆ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಮೈಸೂರು: ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಹುದ್ದೆಯಿಂದ ಬಿ.ವಿ. ವಸಂತಕುಮಾರ್ ಅವರನ್ನು ಬಿಡುಗಡೆಗೊಳಿಸಿದ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಆದೇಶಕ್ಕೆ ಮಧ್ಯಂತರ ತಡೆ ನೀಡಿರುವ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ); 'ಈ ಆದೇಶದ ಹಿಂದೆ ಮುಖ್ಯಮಂತ್ರಿ ಕಚೇರಿಯ ಒತ್ತಾಸೆಯಿದ್ದಂತೆ ಕಾಣುತ್ತಿದೆ' ಎಂದು ಕಿಡಿ ಕಾರಿದೆ.

ವಸಂತ ಕುಮಾರ್

ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಆದೇಶ ಪ್ರಶ್ನಿಸಿ ಬಿ.ವಿ. ವಸಂತಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ನಾರಾಯಣ ಮತ್ತು ಆಡಳಿತಾತ್ಮಕ ಸದಸ್ಯ ಎನ್.ಶಿವಶೈಲಂ ಅವರಿದ್ದ ವಿಭಾಗೀಯ ಪೀಠವು ಈ ಕುರಿತಂತೆ ಇದೇ 21ರಂದು ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಮಂಡಿಸಿದ ವಾದ ಮನ್ನಿಸಿರುವ ನ್ಯಾಯಪೀಠ, 'ವಸಂತಕುಮಾರ್ ವಿರುದ್ಧ ಇಲಾಖಾ ವಿಚಾರಣೆ ನಡೆಸದೇ ಇಂತಹ ಆದೇಶ ಹೊರಡಿಸಿರುವುದು ಕಾನೂನಿಗೆ ವಿರುದ್ಧವಾಗಿದ್ದು, ಜಂಟಿ ನಿರ್ದೇಶಕರ ಆದೇಶ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಹೇಳಿದೆ.

'ವಸಂತಕುಮಾರ್ ಅವರ ಸ್ಥಾನಕ್ಕೆ ಸಹಾಯಕ ಪ್ರಾಧ್ಯಾಪಕ ಎಚ್‌.ಎಂ.ಬಸವರಾಜು ಅವರನ್ನು ನೇಮಕ ಮಾಡಿರುವುದೂ ಕಾನೂನಿನ ಅಡಿಯಲ್ಲಿ ಅಸಮರ್ಥನೀಯ ಕ್ರಮ. ಹಾಗಾಗಿ, ಈ ಅರ್ಜಿ ಇತ್ಯರ್ಥವಾಗುವ ತನಕ ವಸಂತಕುಮಾರ್ ಅವರನ್ನು ಮೊದಲಿದ್ದ ಸ್ಥಾನದಲ್ಲಿ ಮುಂದುವರಿಸಬೇಕು. ಎಚ್‌.ಎಂ.ಬಸವರಾಜು ಅಧಿಕಾರ ವಹಿಸಿಕೊಂಡ ದಿನದಿಂದ ಅವರು ಯಾವುದಾದರೂ ಆಡಳಿತಾತ್ಮಕ ಕ್ರಮ ಕೈಗೊಂಡಿದ್ದರೆ ಅದನ್ನು ಮರು ಪರಿಶೀಲಿಸಬೇಕು' ಎಂದು ಆದೇಶದಲ್ಲಿ ವಿವರಿಸಿದೆ.

'ಹಾಸ್ಟೆಲ್ ಹಣದ ವಿಚಾರ ಹಾಗೂ ವಿದ್ಯಾರ್ಥಿ ವೇತನದ ಉಳಿಕೆ ವಿಷಯದಲ್ಲಿ ಅರ್ಜಿದಾರರಿಗೆ ಯಾವುದೇ ಸಂಬಂಧವಿಲ್ಲ. ಲೆಕ್ಕ ಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿರುವುದು 2018ರಲ್ಲಿ. ಅರ್ಜಿದಾರ ವಸಂತಕುಮಾರ್ ಪ್ರಾಂಶುಪಾಲರ ಜವಾಬ್ದಾರಿ ವಹಿಸಿಕೊಂಡಿದ್ದು 2023ರ ಮಾರ್ಚ್‌ನಲ್ಲಿ. ಇಲಾಖೆ ಉಲ್ಲೇಖಿಸಿರುವಂತೆ ಅವರು ಯಾವುದೇ ರಾಜಕೀಯ ಭಾಷಣ ಮಾಡಿಲ್ಲ. ಅದೊಂದು ಪತ್ರಿಕೆಗೆ ಬರೆದ ಶಿಕ್ಷಣ ಬಗೆಗಿನ ಲೇಖನ. ಇವರ ವಿರುದ್ಧದ ಆರೋಪಗಳು ನಿರಾಧಾರ' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಪೀಠವು ಮನ್ನಿಸಿದೆ.

ಅಧಿಕಾರ ಸ್ವೀಕಾರ: ಕೆಎಸ್‌ಎಟಿ ಆದೇಶದಂತೆ ವಸಂತಕುಮಾರ್ ಅವರು ಗುರುವಾರ ಮತ್ತೆ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಬಿ.ಆರ್. ಪಾಟೀಲಗೆ ಶಾಂತವೇರಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 'ಶಾಂತವೇರಿ ಗೋಪಾಲಗೌಡ ಸಂಸ್ಕೃತಿ' ಪ್ರಶಸ್ತಿಗೆ ಆಳಂದ ಶಾಸಕ ಹಾಗೂ ಮುಖ್ಯಮಂತ್ರಿ ಸಲಹೆಗಾರ ಬಿ.ಆರ್. ಪಾಟೀಲ ಆಯ್ಕೆಯಾಗಿದ್ದಾರೆ.

ಪಾಟೀಲ

ಪ್ರಶಸ್ತಿಯು ₹25 ಸಾವಿರ, ಪ್ರಶಸ್ತಿ ಪತ್ರ ಹಾಗೂ ಕಂಚಿನ ಫಲಕ ಒಳಗೊಂಡಿದೆ.

ಮಾರ್ಚ್ 14ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ವಿಮರ್ಶಕ ನಟರಾಜ ಹುಳಿಯಾರ್, ವಕೀಲ ಕೆ. ದಿವಾಕರ್, ಶಾಂತವೇರಿ ಗೋಪಾಲಗೌಡ ಪ್ರತಿಷ್ಠಾನದ ಕಾರ್ಯದರ್ಶಿ ರಾಮಮನೋಹರ ಅವರು ಭಾಗ ವಹಿಸಲಿದ್ದಾರೆ ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಲಂಚ ಆರೋಪ: ಸಿ.ಎಂ ವಿರುದ್ಧ ಮರುತನಿಖೆ

ಒಂದನೇ ಪುಟದಿಂದ

'ತನಿಖಾಧಿಕಾರಿ ಸಲ್ಲಿಸಿರುವ ಬಿ ರಿಪೋರ್ಟ್ ಅನ್ನು ತಿರಸ್ಕರಿಸಲಾಗುತ್ತಿದೆ. ತನಿಖಾಧಿಕಾರಿ ಹೊಸದಾಗಿ ಹೆಚ್ಚಿನ ತನಿಖೆ ನಡೆಸಿ ಆರು ತಿಂಗಳ ಒಳಗಾಗಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನ್ಯಾಯಾಧೀಶರು ಆದೇಶಿಸಿದ್ದಾರೆ.

'ಸಿದ್ದರಾಮಯ್ಯ ಅವರು ವಿವೇಕಾನಂದ ಅವರಿಂದ ನಿವೇಶನ ಖರೀದಿಸಲು ಮತ್ತು ಗೃಹ ನಿರ್ಮಾಣಕ್ಕಾಗಿ ₹1.30 ಕೋಟಿ ಪಡೆದ ಬಳಿಕ ವಿವೇಕಾನಂದ ಅವರನ್ನು ಬಿಟಿಸಿಎಲ್ ಸ್ಟೀವರ್ಡ್ ಆಗಿ ನಾಮನಿರ್ದೇಶನ ಮಾಡಿದ್ದಾರೆ ಎಂಬ ಆರೋಪವಿದೆ. ಇಲ್ಲಿ ಭ್ರಷ್ಟಾಚಾರ ನಡೆದಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸದೇ ತನಿಖಾ ಸಂಸ್ಥೆಯು ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದೆ. ಕಾನೂನಿನ ದೃಷ್ಟಿಯಲ್ಲಿ ಇದು ಸರಿಯಲ್ಲ. ಪ್ರಾಥಮಿಕ ತನಿಖೆಯನ್ನಷ್ಟೇ ಆಧರಿಸಿ ಬಿ ರಿಪೋರ್ಟ್ ಸಲ್ಲಿಸಲಾಗಿದೆ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. 'ಹಣ ಅಕ್ರಮವಾಗಿ ಸ್ವೀಕರಿಸಿದ ಆರೋಪವಿದ್ದು, ಪ್ರತಿಫಲಾಪೇಕ್ಷೆಯ ಆರೋಪವನ್ನೂ ಮಾಡಿರುವಾಗ ಇದರಲ್ಲಿ ದುರುದ್ದೇಶ ಇದೆಯೇ? ಜನಪ್ರತಿನಿಧಿಗಳಿಗೆ ಇರುವ ನೀತಿ ಸಂಹಿತೆ ಉಲ್ಲಂಘಿಸಲಾಗಿದೆಯೇ ಎಂಬುದನ್ನೆಲ್ಲಾ ತನಿಖಾ ಸಂಸ್ಥೆ ಪರಿಶೀಲಿಸಬೇಕು. ಇದನ್ನು ಪರಿಗಣಿಸದೇ ಸಲ್ಲಿಸುವ ವರದಿಯನ್ನು ಪೂರ್ಣ ವರದಿ ಎನ್ನಲಾಗದು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ದಳಕ್ಕೆ ಮೂರು ಮತ್ತೊಂದು ಕ್ಷೇತ್ರ

ಒಂದನೇ ಪುಟದಿಂದ

ಇಲ್ಲಿ ಬಿಜೆಪಿ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು ಎಂದು ಸುಮಲತಾ ಬುಧವಾರವಷ್ಟೇ ಹೇಳಿಕೆ ನೀಡಿದ್ದಾರೆ. ಮಂಡ್ಯ ಕ್ಷೇತ್ರದ ಜಟಾಪಟಿ ಕುರಿತು ಕುಮಾರಸ್ವಾಮಿ ಅವರು ಶಾ ಅವರ ಗಮನಕ್ಕೆ ತಂದರು. ಈ ಕ್ಷೇತ್ರವನ್ನು ಬಿಜೆಪಿಗೆ 'ದಾನ' ಮಾಡುವ ಪ್ರಶ್ನೆಯೇ ಇಲ್ಲ ಎಂದೂ ಸ್ಪಷ್ಟಪಡಿಸಿದರು. ಈ ಮಾತಿಗೆ ಶಾ ಒಪ್ಪಿದರು ಎಂದು ಮೂಲಗಳು ತಿಳಿಸಿವೆ.

ಕುಮಾರಸ್ವಾಮಿ ಅವರೇ ಮಂಡ್ಯದಿಂದ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹ ಕೂಡ ಇದೆ. ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಜೆಡಿಎಸ್ ನಾಯಕ ಸ್ಪಷ್ಟಪಡಿಸಿದರು.

ಕೋಲಾರ ಕ್ಷೇತ್ರದಲ್ಲಿ ಪ್ರಬಲ ಸ್ಪರ್ಧೆ ಇರುವುದು ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆಯೇ. ಇಲ್ಲಿ ಕಮಲ ಪಡೆಯ ಹುರಿಯಾಳುವನ್ನು ಕಣಕ್ಕೆ ಇಳಿಸಿದರೆ ಗೆಲುವು ಕಷ್ಟ ಎಂಬ ಬಗ್ಗೆಯೂ ಉಭಯ ನಾಯಕರು ಚರ್ಚೆ ನಡೆಸಿದರು. ಬಿಜೆಪಿಯ ಸಂಸದ ಎಸ್. ಮುನಿಸ್ವಾಮಿ ಅವರಿಗೆ ಆಡಳಿತ ವಿರೋಧಿ ಅಲೆ ಇದೆ. ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಕ್ಷೇತ್ರ ಕೈತಪ್ಪುವ ಸಾಧ್ಯತೆಗಳಿವೆ ಎಂದು ಆಂತರಿಕ ಸಮೀಕ್ಷೆಗಳು ತಿಳಿಸಿವೆ. ಹೀಗಾಗಿ, ಜೆಡಿಎಸ್ ಅಭ್ಯರ್ಥಿಯೇ ಸ್ಪರ್ಧಿಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಉಭಯ ನಾಯಕರು ಬಂದರು ಎಂದು ಮೂಲಗಳು ಹೇಳಿವೆ.

> **ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆದಿದೆ. ಸ್ಥಾನ ಹಂಚಿಕೆ ಕೆಲವೇ ದಿನಗಳಲ್ಲಿ ತೀರ್ಮಾನವಾಗಲಿದೆ. ಮಂಡ್ಯ ಕ್ಷೇತ್ರದಿಂದ ನಾನು ಸ್ಪರ್ಧಿಸುವುದಿಲ್ಲ**
> **ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಈ ತಿಂಗಳ ಅಂತ್ಯದಲ್ಲಿ ಸ್ಥಾನ ಹಂಚಿಕೆಯನ್ನು ಅಂತಿಮಗೊಳಿಸಲು ಎರಡೂ ಪಕ್ಷಗಳ ನಾಯಕರು ಉದ್ದೇಶಿಸಿದ್ದರು. ತಿಂಗಳ ಕೊನೆಯಲ್ಲಿ ಬಿಜೆಪಿ ಜತೆಗೆ ಸಭೆ ನಿಗದಿಯಾಗಿತ್ತು. ಮಂಡ್ಯ ಕ್ಷೇತ್ರಕ್ಕೆ ಬಿಗಿಪಟ್ಟು ಹಿಡಿದು ದಿನಕ್ಕೊಂದು ಹೇಳಿಕೆ ನೀಡುತ್ತಿರುವುದರಿಂದ ಕುಪಿತಗೊಂಡ ಜೆಡಿಎಸ್ ನಾಯಕರು ಶಾ ಅವರನ್ನು ಭೇಟಿ ಮಾಡಿ ಸ್ಥಾನ ಹಂಚಿಕೆಗೆ ಅಂತಿಮ ಸ್ಪರ್ಶ ನೀಡಲು ಹಠಾತ್ ನಿರ್ಣಯ ಕೈಗೊಂಡರು.

ಅಭ್ಯರ್ಥಿ–ಚಿಹ್ನೆ ವಿನಿಮಯ ಸೂತ್ರ

ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರನ್ನು ಮಣಿಸುವ ಕುರಿತು ಅಮಿತ್ ಶಾ ಮತ್ತು ಕುಮಾರಸ್ವಾಮಿ ಸಮಾಲೋಚನೆ ನಡೆಸಿದ್ದಾರೆ.

ಬಿಜೆಪಿಯಿಂದ ಪ್ರಬಲ ಆಕಾಂಕ್ಷಿಯಾಗಿರುವ ಮಾಜಿ ಸಚಿವ ಸಿ.ಪಿ. ಯೋಗೀಶ್ವರ್ ಸ್ಪರ್ಧಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಅವರು ಹುರಿಯಾಳಾದರೆ ಗೆಲುವು ಕಷ್ಟ ಎಂದು ಬಿಜೆಪಿಯ ಎರಡು ಸಮೀಕ್ಷೆಗಳು ತಿಳಿಸಿವೆ.

ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಪ್ರಬಲ ಪೈಪೋಟಿ ನೀಡಬಹುದು. ಕುಟುಂಬ ರಾಜಕಾರಣದ ಕಳಂಕ ತಟ್ಟಬಹುದು ಎಂಬ ಕಾರಣಕ್ಕೆ ಜೆಡಿಎಸ್‌ನಿಂದ ಸ್ಪರ್ಧಿಸಲು ಅವರು ಹೆಚ್ಚು ಉತ್ಸುಕರಾಗಿಲ್ಲ. ಹಾಗಾಗಿ, ಬಿಜೆಪಿ ಚಿಹ್ನೆಯಡಿ ಮಂಜುನಾಥ್ ಅವರನ್ನು ಅಭ್ಯರ್ಥಿಯಾಗಿ ಅಖೈರುಗೊಳಿಸುವ ಸಂಭವವಿದೆ. ಯೋಗೀಶ್ವರ್ ಅವರಿಗೆ ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಅವಕಾಶ ಮಾಡಿಕೊಡುವ ಬಗ್ಗೆ ಚರ್ಚೆಗಳು ನಡೆದಿದೆ ಎಂದು ಗೊತ್ತಾಗಿದೆ.

ತುಮಕೂರಿನಲ್ಲಿ ಜೆಡಿಎಸ್ ಚಿಹ್ನೆಯಡಿ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸುವ ಬಗ್ಗೆಯೂ ಉಭಯ ನಾಯಕರು ಸಮಾಲೋಚನೆ ನಡೆಸಿದರು. ವಿ.ಸೋಮಣ್ಣ ಅವರು ತಿಂಗಳ ಅವಧಿಯಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರನ್ನು ಎರಡು ಬಾರಿ ಭೇಟಿ ಮಾಡಿ ಸಲಹೆ ಹಾಗೂ 'ಆಶೀರ್ವಾದ' ಪಡೆದಿದ್ದರು. ಜತೆಗೆ, ಬಿಜೆಪಿ ವರಿಷ್ಠರನ್ನು ಎರಡು ಬಾರಿ ಭೇಟಿ ಮಾಡಿ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿದ್ದರು. ರಾಜ್ಯಸಭಾ ಅಭ್ಯರ್ಥಿ ಅಥವಾ ಲೋಕಸಭಾ ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದು ಮನವಿ ಮಾಡಿದ್ದರು. ಆದರೆ, ಜೆಡಿಎಸ್ ಚಿಹ್ನೆಯಡಿ ಕಣಕ್ಕಿಳಿಯಲು ಸೋಮಣ್ಣ ಹೆಚ್ಚು ಉತ್ಸುಕರಾಗಿಲ್ಲ ಎಂದು ಗೊತ್ತಾಗಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿದ್ದವು. ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬಳಿಕ ಕಾಂಗ್ರೆಸ್‌ನ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರು ಜೆಡಿಎಸ್‌ಗೆ ವಲಸೆ ಬಂದು ಉಡುಪಿ– ಚಿಕ್ಕಮಗಳೂರು ಕ್ಷೇತ್ರದಲ್ಲಿ ಜೆಡಿಎಸ್ ಚಿಹ್ನೆಯಡಿ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು–560 052

ಸಂ: ಮುಇಂ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/10/2023–24 ದಿನಾಂಕ: 22.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1. ಈ ಕೆಳಗಿನ ಕಾಮಗಾರಿಗಳಿಗೆ ಶುಭ್ರ ಬೆಂಗಳೂರು ಅನುದಾನದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ, ಈ ನಿಟ್ಟಿನಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಇವರ ಪರವಾಗಿ ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಇವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು (ಅಂದರೆ (https://kppp.karnataka.gov.in) ಟೆಂಡರ್‌ಗೆ ಅರ್ಹತೆ ಪಡೆಯಲು ಬಿಡ್‌ದಾರರು ಕೆಡಬ್ಲ್ಯೂ–4 ರ ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ.
2. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
5. ಜಿಎಸ್‌ಟಿ ಯನ್ನು ಅನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ
1	ಬಿಬಿಎಂಪಿ ವ್ಯಾಪ್ತಿಯಲ್ಲಿನ ಆಯ್ದ ಸ್ಥಳಗಳಲ್ಲಿ ಮೂಲಸೌಕರ್ಯಗಳ ಜೊತೆಗೆ ಶ್ರೆಡರ್ಸ್ ಮತ್ತು ಚಾಪರ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾಚರಣೆ ಹಾಗೂ ನಿರ್ವಹಣಾ ಕಾಮಗಾರಿ.	1420.84	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 14,00,000/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.

1. ಬಿಡ್ ಪೂರ್ವ ಸಭೆಯು 28.02.2024 ರಂದು 15:00 ಗಂಟೆಗೆ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಘತ್ಯಾನಿನಿ, ಯುಎನ್‌ಐ ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು 04.03.2024 ರ 16:00 ಗಂಟೆಗಳ ಅಥವಾ ಮೊದಲು ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ನಿಗದಿತ ಸ್ಥಳದಲ್ಲಿ 05.03.2024 ರಂದು 16:30 ಗಂಟೆಗಳ ನಂತರ ಮಾತ್ರ ಕೆಪಿಪಿ–ಪೋರ್ಟಲ್ ಮೂಲಕ ತೆರೆಯಲಾಗುತ್ತದೆ, ಬಿಡ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಇಚ್ಛಿಸುವವರು, ಕಛೇರಿಯ ವೇಳೆ ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಬಿಡ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ತೆರೆಯಲಾಗುತ್ತದೆ.
3. ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಬಿಡ್‌ದಾರರು ತಿಳಿಸಲು ಬೆಂಘತ್ಯಾನಿನಿ ಪ್ರಯತ್ನಿಸಿದರೂ ಸಹ, ಬಿಡ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಬಿಡ್‌ಗಳಿಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಬಿಡ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ hphelpdesk.blr@intarvo.com ಆಗಿದೆ. ಕೆಪಿಪಿ ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಬಿಡ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಬಿಡ್‌ದಾರರು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಮುಖ್ಯ ಇಂಜಿನಿಯರ್ ಮತ್ತು
ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)

ವಾಸಾಸಂಇ/ವಾಪ್ರ/3818/2023–24

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು–560 056

ಸಂ: ಮುಇಂ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/08/2023–24 ದಿನಾಂಕ: 22.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1. ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ 15 ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ.
2. ಈ ನಿಟ್ಟಿನಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಇವರ ಪರವಾಗಿ ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಇವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು (ಅಂದರೆ (https://kppp.karnataka.gov.in) ಟೆಂಡರ್‌ಗೆ ಅರ್ಹತೆ ಪಡೆಯಲು ಬಿಡ್‌ದಾರರು ಕೆಡಬ್ಲ್ಯೂ–4 ರ ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ.
3. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
5. ಜಿಎಸ್‌ಟಿ ಯನ್ನು ಅನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ
1	ಪ್ರಾಥಮಿಕ ಉತ್ಪಾದನೆಯ ಹಂತದಿಂದ ಸಂಸ್ಕರಣಾ ಸೌಲಭ್ಯದವರೆಗೆ ನಿರ್ಮಾಣ ಮತ್ತು ಕೆಡವುವ ತ್ಯಾಜ್ಯವನ್ನು (ಸಿ&ಡಿ ತ್ಯಾಜ್ಯ) ಸಂಗ್ರಹಿಸಲು ಮತ್ತು ಸಾಗಿಸಲು ವ್ಯವಸ್ಥೆಯನ್ನು ರಚಿಸುವುದು.	1672.39	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 15,72,390/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.
2	ಬೆಂಕಿ ಉಂಟಾದಲ್ಲಿ ಅಪಾಯವನ್ನು ಕಡಿಮೆ ಮಾಡಲು ಡಿಡಬ್ಲ್ಯೂಸಿಸಿ ಯಲ್ಲಿ ಅಗ್ನಿಶಾಮಕ ಉಪಕರಣಗಳನ್ನು ಒದಗಿಸುವುದು (ಕರೆ–2)	375.00	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 4,62,500/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.
3	ಎಲ್ಲಾ 198 ವಾರ್ಡ್‌ಗಳಿಗೆ ಶಿಫಾರಸುಗಳೊಂದಿಗೆ ಎಸ್‌ಡಬ್ಲ್ಯೂಎಂ ಅಧ್ಯಯನದ ಸ್ಥಿತಿಯೊಂದಿಗೆ ತ್ಯಾಜ್ಯ ಜನರೇಟರ್‌ನ ಸಮೀಕ್ಷೆಯನ್ನು ನಡೆಸುವುದು (ಬ್ಲಾಕ್‌ಮ್ಯಾಪಿಂಗ್) ಮತ್ತು ಡಿಜಿಟಲ್ ಮ್ಯಾಪಿಂಗ್ ಅನ್ನು ನಡೆಸುವುದು. 1) ಮೇಲಿನ ಅಧ್ಯಯನವನ್ನು ನಡೆಸಲು ತಂತ್ರಾಂಶದ ಸಂಗ್ರಹಣೆ. 2) ಸಮೀಕ್ಷೆಗಾಗಿ ಐಟಿ ಕ್ಷೇತ್ರ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು 3) ಎಸ್‌ಡಬ್ಲ್ಯೂಎಂ ಅಧ್ಯಯನದ ಸ್ಥಿತಿಯನ್ನು ನಡೆಸುವುದು (ಕರೆ–2)	369.00	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 4,53,500/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.
4	ಬಿಬಿಎಂಪಿ ವ್ಯಾಪ್ತಿಯ ಮುಚ್ಚಿದ ಸಂಕೋಚನ ವ್ಯವಸ್ಥೆಯನ್ನು ಹೊಂದಿರುವ ಆಯ್ದ ಸ್ಥಳಗಳಲ್ಲಿ ಕನಿಷ್ಠ 150 ಟಿಪಿಡಿ ಪುರಸಭೆಯ ಘನತ್ಯಾಜ್ಯವನ್ನು ನಿರ್ವಹಿಸಲು ಟರ್ನ್ ಕೀ, ಒಟ್ಟು ಮೊತ್ತ, ಸ್ಥಿರ ಬೆಲೆ, ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದ ಮೇಲೆ ಯಾವುದೇ ವ್ಯತ್ಯಾಸಗಳಿಲ್ಲದ ಟೆಂಡರ್ ವಿನ್ಯಾಸ, ನಿರ್ಮಾಣ, ಪೂರೈಕೆ, ಸ್ಥಾಪನೆ ಮತ್ತು ವರ್ಗಾವಣೆ ಕೇಂದ್ರಗಳ ಸ್ಥಾಪನೆ (ಕರೆ–2)	4036.00	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 39,36,000/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.

1. ಬಿಡ್ ಪೂರ್ವ ಸಭೆಯು 28.02.2024 ರಂದು 15:00 ಗಂಟೆಗೆ ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಘತ್ಯಾನಿನಿ, ಯುಎನ್‌ಐ ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು 04.03.2024 ರ 16:00 ಗಂಟೆಗಳ ಒಳಗೆ ಅಥವಾ ಮೊದಲು ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ಕೆಪಿಪಿ–ಪೋರ್ಟಲ್ ಮೂಲಕ 05.03.2024 ರಂದು 16:30 ಗಂಟೆಗಳ ನಂತರ ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ಬಿಡ್‌ದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ. ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಬಿಡ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ತೆರೆಯಲಾಗುತ್ತದೆ.
3. ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಬಿಡ್‌ದಾರರು ತಿಳಿಸಲು ಬೆಂಘತ್ಯಾನಿನಿ ಪ್ರಯತ್ನಿಸಿದರೂ ಸಹ, ಬಿಡ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಬಿಡ್‌ಗಳಿಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಬಿಡ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ hphelpdesk.blr@intarvo.com ಆಗಿದೆ. ಕೆಪಿಪಿ ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಬಿಡ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಬಿಡ್‌ದಾರರು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಮುಖ್ಯ ಇಂಜಿನಿಯರ್ ಮತ್ತು
ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)

ವಾಸಾಸಂಇ/ವಾಪ್ರ/3816/2023–24

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು–560 052

ಸಂ: ಮುಇಂ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/09/2023–24 ದಿನಾಂಕ: 22.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1. ಬಿಬಿಎಂಪಿ 2023–24 ರ ಅನುಮೋದಿತ ಬಜೆಟ್‌ನಲ್ಲಿ, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ ಘನತ್ಯಾಜ್ಯ ನಿರ್ವಹಣೆ ಕಾರ್ಯಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ ಅನುದಾನವನ್ನು ವರ್ಗಾಯಿಸಲು ಅನುಮೋದಿಸಿದೆ. ಅದರಂತೆ ಬಿಎಸ್‌ಡಬ್ಲ್ಯುಎಂಎಲ್‌ನ ಆಡಳಿತ ಮಂಡಳಿ ಸಭೆಯಲ್ಲಿ ಈ ಅನುದಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ.
2. ಈ ನಿಟ್ಟಿನಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಇವರ ಪರವಾಗಿ ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಇವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು (ಅಂದರೆ (https://kppp.karnataka.gov.in) ಟೆಂಡರ್‌ಗೆ ಅರ್ಹತೆ ಪಡೆಯಲು ಬಿಡ್‌ದಾರರು ಕೆಡಬ್ಲ್ಯೂ–4 ರ ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ.
3. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
5. ಜಿಎಸ್‌ಟಿ ಯನ್ನು ಅನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ
1	ಕೋಗಿಲು ಸರ್ವೆ ನಂ. 99 ಮತ್ತು ಇತರ ಸ್ಥಳಗಳಲ್ಲಿ ಎಸ್‌ಡಬ್ಲ್ಯೂಎಂ ಸೈಟ್‌ನ ರಕ್ಷಣೆಗಾಗಿ ಗಡಿ ಗೋಡೆ ನಿರ್ಮಾಣ ಕಾಮಗಾರಿ.	839.80	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಓಟಿಸಿ ಹಾಗೂ ಉಳಿದ ರೂ. 11,60,000/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.

1. ಬಿಡ್ ಪೂರ್ವ ಸಭೆಯು 28.02.2024 ರಂದು 15:00 ಗಂಟೆಗೆ ಇಂಜಿನಿಯರ್ ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಘತ್ಯಾನಿನಿ, ಯುಎನ್‌ಐ ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು 04.03.2024 ರ 16:00 ಗಂಟೆಗಳ ಒಳಗೆ ಅಥವಾ ಮೊದಲು ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ಕೆಪಿಪಿ–ಪೋರ್ಟಲ್ ಮೂಲಕ 05.03.2024 ರಂದು 16:30 ಗಂಟೆಗಳ ನಂತರ ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ಬಿಡ್‌ದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ. ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಬಿಡ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ತೆರೆಯಲಾಗುತ್ತದೆ.
3. ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಬಿಡ್‌ದಾರರು ತಿಳಿಸಲು ಬೆಂಘತ್ಯಾನಿನಿ ಪ್ರಯತ್ನಿಸಿದರೂ ಸಹ, ಬಿಡ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ. ಬಿಡ್‌ಗಳಿಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಬಿಡ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ hphelpdesk.blr@intarvo.com ಆಗಿದೆ. ಕೆಪಿಪಿ ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಬಿಡ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಬಿಡ್‌ದಾರರು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬೆಂಘತ್ಯಾನಿನಿ ಜವಾಬ್ದಾರನಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಮುಖ್ಯ ಇಂಜಿನಿಯರ್ ಮತ್ತು
ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)

ವಾಸಾಸಂಇ/ವಾಪ್ರ/3817/2023–24

ಪ್ರಜಾವಾಣಿ ನೋಡಿಯೋ
ಸಿನಿಮಾತು
ನೋಡಲು
ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಇದು ಫೆಬ್ರುವರಿ ಚಿತ್ರಗಳು ಹೆಚ್ಚುವರಿ

ಕಳೆದೊಂದು ತಿಂಗಳಿನಲ್ಲಿ 30ಕ್ಕೂ ಅಧಿಕ ಕನ್ನಡ ಸಿನಿಮಾಗಳು ತೆರೆಕಂಡಿವೆ. ಈ ಪೈಕಿ ಚಿತ್ರಮಂದಿರಗಳಲ್ಲಿ ಉಳಿದುಕೊಂಡಿರುವ ಸಿನಿಮಾಗಳ ಸಂಖ್ಯೆ ಬೆರಳೆಣಿಕೆಯಷ್ಟೇ.

ಇಂದು(ಫೆ.23) ಬಿಡುಗಡೆ

- ಪೃಥ್ವಿ ಅಂಬಾರ್ ನಟನೆಯ **'ಮತ್ಸ್ಯಗಂಧ'** ಹಾಗೂ **'ಫಾರ್ ರಿಜಿಸ್ಟ್ರೇಷನ್'**
- ಹರೀಶ್ ರಾಜ್ ನಟಿಸಿ, ನಿರ್ದೇಶಿಸಿರುವ **'ಪ್ರೇತ'**
- ತನುಷ್ ಶಿವಣ್ಣ ಹಾಗೂ ಸೋನಾಲ್ ನಟನೆಯ **'Mr. ನಟ್ವರ್ ಲಾಲ್'**
- ವಸಂತ್ ವಿಷ್ಣು ನಟಿಸಿ, ನಿರ್ದೇಶಿಸಿರುವ **'ಕಪ್ಪು ಬಿಳುಪಿನ ನಡುವೆ'**
- ಎ.ಆರ್.ಸಾಯಿರಾಮ್ ನಿರ್ದೇಶನದ **'ಧೈರ್ಯಂ ಸರ್ವತ್ರ ಸಾಧನಂ'**

ಅಭಿಲಾಷ್ ಪಿ.ಎಸ್.

ಮಾರ್ಚ್, ಏಪ್ರಿಲ್ ಬಂದೇ ಬಿಟ್ಟವು. ಇದು ವಿದ್ಯಾರ್ಥಿಗಳಿಗೆ ಪರೀಕ್ಷೆಯ ಭಯ ಹುಟ್ಟಿಸುವ ಕಾಲ. ಕ್ರಿಕೆಟ್ ಆಟಗಾರರಿಗೆ, ಪ್ರೇಕ್ಷಕರಿಗೆ ಐಪಿಎಲ್ ಜ್ವರದ ಕಾಲ. ರಾಜಕಾರಣಿಗಳಿಗೆ ಚುನಾವಣೆ ಕಾವು ತಟ್ಟುವ ಕಾಲ. ಇವೆಲ್ಲವೂ ಜೊತೆಯಾಗಿ ಫೆಬ್ರುವರಿಯಲ್ಲಿ ಚಂದನವನಕ್ಕೂ ಹೆಚ್ಚು'ವರಿ'ಯಾಗಿ ಚಿತ್ರಗಳನ್ನು ಹರಿಸಿವೆ. ಫೆಬ್ರುವರಿಯಲ್ಲಿ ಕಳೆದ ಶುಕ್ರವಾರದವರೆಗೆ(ಫೆ.16) 15ಕ್ಕೂ ಅಧಿಕ ಕನ್ನಡ ಸಿನಿಮಾಗಳು ತೆರೆಕಂಡಿದ್ದು, ಒಂದೆರಡು ಸಿನಿಮಾಗಳಷ್ಟೇ ಸತತ ಎರಡು ವಾರ ತೆರೆಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ಸು ಪಡೆದಿವೆ. ಬೆನ್ನಲ್ಲೇ ಇಂದು(ಫೆ.23) ಐದಾರು ಸಿನಿಮಾಗಳು ಬಿಡುಗಡೆಯಾಗುತ್ತಿದ್ದು, ಒಟ್ಟಾರೆ 29 ದಿನಗಳಲ್ಲಿ 24ಕ್ಕೂ ಅಧಿಕ ಕನ್ನಡ ಸಿನಿಮಾಗಳು ಚಂದನವನದ ತೆರೆಗಪ್ಪಳಿಸಿವೆ.

ಜ.26ರಿಂದ ಫೆ.23ರವರೆಗೆ ಬಿಡುಗಡೆಯಾದ ಸಿನಿಮಾಗಳ ಸಂಖ್ಯೆ 30 ದಾಟಿವೆ! ಒಂದೇ ದಿನದಲ್ಲಿ ನಾಯಕನೊಬ್ಬನ ಎರಡೆರಡು ಸಿನಿಮಾಗಳು ತೆರೆಕಾಣುವುದು ತೀರಾ ಅಪರೂಪ. ಆದರೆ ಫೆ.23ರಂದು ನಟ ಪೃಥ್ವಿ ಅಂಬಾರ್ ನಾಯಕನಾಗಿ ನಟಿಸಿರುವ 'ಮತ್ಸ್ಯಗಂಧ' ಹಾಗೂ 'ಫಾರ್ ರಿಜಿಸ್ಟ್ರೇಷನ್' ಹೀಗೆ ಎರಡು ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಈ ಬಗ್ಗೆ ಪ್ರಶ್ನಿಸಿದಾಗ, 'ಸಿನಿಮಾಗಳ ನಡುವೆ ಕನಿಷ್ಠ ಒಂದೂವರೆ ತಿಂಗಳು ಸಮಯ ಕೊಡಿ ಎಂದಿದ್ದೆ. ಆದರೆ ಲೋಕಸಭೆ ಚುನಾವಣೆ, ಪರೀಕ್ಷೆಗಳು, ಐಪಿಎಲ್ ಹೀಗೆ ಹಲವು ಕಾರಣಗಳಿಂದಾಗಿ ನಿರ್ಮಾಪಕರು ಸಿನಿಮಾ ಬಿಡುಗಡೆಗೆ ನಿರ್ಧರಿಸಿದ್ದಾರೆ' ಎನ್ನುತ್ತಾರೆ ಪೃಥ್ವಿ.

ಈ ಹೆಚ್ಚುವರಿ ಹರಿವಿನ ಬಗ್ಗೆ ನಿರ್ದೇಶಕ ಸಿಂಪಲ್ ಸುನಿ ಅವರು ತಮ್ಮದೇ ಧಾಟಿಯಲ್ಲಿ ವಿವರಣೆ ನೀಡಿದರು. 'ಅತಿಯಾದರೆ ಅಮೃತವೂ ವಿಷ ಎನ್ನುತ್ತಾರೆ. ಈ ರೀತಿ ಸಿನಿಮಾಗಳು ಬಿಡುಗಡೆಯಾದರೆ ಒಳ್ಳೆಯ ಸಿನಿಮಾಗಳೂ ಮೌಲ್ಯ ಕಳೆದುಕೊಳ್ಳುತ್ತವೆ. ನಿಜ ಹೇಳಬೇಕೆಂದರೆ ನನ್ನ ಸಿನಿಮಾಗೆ ಪೋಸ್ಟರ್ ಅಂಟಿಸಲೂ ಬೆಂಗಳೂರಿನಲ್ಲಿ ಜಾಗ ಸಿಕ್ಕಿಲ್ಲ! ಈ ರೀತಿಯ ಹರಿವು ಇಡೀ ಇಂಡಸ್ಟ್ರಿಗೇ ಮಾರಕ ಆಗುವುದು ಗ್ಯಾರಂಟಿ. ಹೀಗಾದರೆ ಜನ ಯಾವ ಸಿನಿಮಾಗೂ ಹೋಗಲ್ಲ. ಚಿತ್ರಮಂದಿರಗಳ ಸಮಸ್ಯೆ ಎಲ್ಲರಿಗೂ ಕಾಡಿದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರೈಂ ಟೈಮ್‌ಗಳಲ್ಲಿ ಜಾಗವೇ ಸಿಗಲಿಲ್ಲ. ಎರಡನೇ ವಾರ ಬಂದಾಗ ಒಂದು ಪ್ರದರ್ಶನಕ್ಕೆ ಇಳಿಸಿದರು. ಈ ಶುಕ್ರವಾರವೂ ಪ್ರದರ್ಶನಗಳ ಸಂಖ್ಯೆ ಮತ್ತಷ್ಟು ಇಳಿಯಲಿದೆ. ಪ್ರದರ್ಶಕರೂ ಇಂತಹ ಭಾಷೆಗಳ ಚಿತ್ರಕ್ಕೆ ದಿನಕ್ಕೆ ಇಷ್ಟು ಶೋ ಎಂದು ನಿಗದಿಮಾಡಿಕೊಂಡಿರುತ್ತಾರೆ. ಈ ತಿಂಗಳು ಬಿಡುಗಡೆಯಾದ ಎಲ್ಲ ಸಿನಿಮಾಗಳ ನಿರ್ಮಾಪಕರಿಗೂ ಪೆಟ್ಟು ಬಿದ್ದಿದೆ. ಸಿನಿಮಾ ಚೆನ್ನಾಗಿದ್ದರೆ ಒಟಿಟಿಯಲ್ಲಿ ಖಂಡಿತಾ ಬರುತ್ತದಲ್ಲ ಎನ್ನುವ ಪ್ರೇಕ್ಷಕರ ಮನಃಸ್ಥಿತಿ ಒಂದೆಡೆ. ಐಪಿಎಲ್ ಭಯ ಇನ್ನೊಂದೆಡೆ. ಸಿನಿಮಾ ಬಿಡುಗಡೆ ಕುರಿತು ನಿರ್ಮಾಪಕರಲ್ಲಿ ತಿಳಿವಳಿಕೆ ಮೂಡಿಸಬೇಕು. ಅದಕ್ಕೆ ನಿಯಮ ರೂಪಿಸಲು ಸಾಧ್ಯವಿಲ್ಲ' ಎನ್ನುತ್ತಾರೆ.

ಸಿಂಪಲ್ ಸುನಿ

ಎನ್.ಎಂ. ಸುರೇಶ್

'ನಿಯಂತ್ರಣ ಕಷ್ಟಸಾಧ್ಯ': ಈ ರೀತಿಯ ಸಂದರ್ಭಗಳಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಧ್ಯಪ್ರವೇಶ ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆ ಸಾಮಾನ್ಯ. ಈ ಕುರಿತು ಮಂಡಳಿಯ ಅಧ್ಯಕ್ಷ ಎನ್.ಎಂ. ಸುರೇಶ್ ಹೀಗನ್ನುತ್ತಾರೆ, 'ಒಟಿಟಿ ವೇದಿಕೆ ಬಂದ ಬಳಿಕ ಕೆಲವೊಮ್ಮೆ ಅದ್ದೂರಿಯಾದ ಸಿನಿಮಾಗಳೇ ಓಡುತ್ತಿಲ್ಲ. ಹಾಕುವ ಬಂಡವಾಳದ ಮೇಲೆ ನಿರ್ಮಾಪಕರಿಗೆ ಎಚ್ಚರ ಇರಬೇಕು. ಹಣಕ್ಕೆ ಬೆಲೆ ಇದೆ. ಸಿನಿಮಾ ನಿರ್ಮಾಣ ವೇಳೆ ಇತರರ ಮಾತುಗಳನ್ನು ಕೇಳುವುದನ್ನು ನಿಲ್ಲಿಸಿ, ತಮ್ಮದೇ ನಿರ್ಧಾರ ಕೈಗೊಳ್ಳಬೇಕು. ವರ್ಷಕ್ಕೆ 300–400 ಸಿನಿಮಾ ಮಾಡಿದರೂ, ಕಣ್ಣಿಗೆ ಕಾಣುವ ಸಿನಿಮಾಗಳು ಬೆರಳೆಣಿಕೆಯಷ್ಟೇ. ಹಿಂದಿನಂತೆ ಸಿನಿಮಾಗಳು 100 ದಿನ ಓಡುವುದಿಲ್ಲ. ಗರಿಷ್ಠ ನಾಲ್ಕೈದು ವಾರದ ಬಳಿಕ ಸಿನಿಮಾಗಳು ಒಟಿಟಿಯಲ್ಲಿ ಬಿಡುಗಡೆಯಾಗುತ್ತಿವೆ. ಇಂತಹ ಸ್ಪರ್ಧಾತ್ಮಕ ಯುಗದಲ್ಲಿ ಹೆಚ್ಚಿನ ಶ್ರದ್ಧೆವಹಿಸಿ ಸಿನಿಮಾ ಮಾಡುವುದು ಒಳ್ಳೆಯದು. ಹಲವು ವರ್ಷಗಳ ಹಿಂದೆ ಸಿನಿಮಾ ಬಿಡುಗಡೆಗೆ ನಿಯಂತ್ರಣವಿತ್ತು. ಇದನ್ನು ಮತ್ತೆ ಜಾರಿಗೆ ತರುವುದು ಕಷ್ಟವಿದೆ. ಈ ರೀತಿಯ ಸಂದರ್ಭಗಳಲ್ಲಿ ನಿರ್ಮಾಪಕರು ಮಂಡಳಿಯನ್ನು ವೇದಿಕೆಯನ್ನಾಗಿ ಬಳಸಿಕೊಂಡು ಮುನ್ನಡೆದರೆ ಉತ್ತಮ' ಎಂದರು.

'ಬಿಡುಗಡೆಗೆ ನಿಯಂತ್ರಣವಿರಲಿ'

ಕಾರ್ತಿಕ್

'ಸಿನಿಮಾ ಬಿಡುಗಡೆಗೆ ನಿಯಂತ್ರಣದ ಅಗತ್ಯವಿದೆ' ಎನ್ನುವುದು ಕೆ.ಆರ್.ಜಿ ಸ್ಟುಡಿಯೋಸ್ ಸಂಸ್ಥಾಪಕ, ನಿರ್ಮಾಪಕ ಕಾರ್ತಿಕ್ ಗೌಡ ಅಭಿಮತ.

'ಈ ರೀತಿ ವಾರಕ್ಕೆ 8–10 ಸಿನಿಮಾಗಳ ಬಿಡುಗಡೆ ಒಳ್ಳೆಯದಲ್ಲ. ಇಷ್ಟೊಂದು ಸಿನಿಮಾಗಳಿದ್ದಾಗ ಜನ ಯಾವುದು ಎಂದು ನೋಡುತ್ತಾರೆ. ನನ್ನ ಪ್ರಕಾರ, ಬಿಡುಗಡೆಗೆ ಒಂದು ನಿಯಂತ್ರಣ ಅಗತ್ಯ. ಹೀರೊ ಒಬ್ಬರ ಎರಡು ಸಿನಿಮಾಗಳು ಒಂದೇ ದಿನ ಬಿಡುಗಡೆಯಾಗುತ್ತಿವೆ. ನಾಯಕನಾದವನು ಏನು ಮಾಡಲಾದರೂ ಸಾಧ್ಯ. ಈ ಸಂದರ್ಭದಲ್ಲಿ ನಿರ್ಮಾಪಕರೇ ಒಂದು ನಿರ್ಧಾರ ಕೈಗೊಳ್ಳಬೇಕು. ಅಂತ್ಯದಲ್ಲಿ ವಿತರಕರಿಗೆ ವ್ಯವಹಾರವೇ ಅಂತಿಮ. ಕೆಲವೊಮ್ಮೆ ನಾವೂ ಸಲಹೆ ನೀಡುತ್ತೇವೆ. ಆದರೆ ನಿರ್ಮಾಪಕರು ಅಂದೇ ಬಿಡುಗಡೆಯಾಗಲಿ ಎನ್ನುತ್ತಾರೆ. ಒಂದು ರೀತಿ 'End of season sale'ನ ಹಾಗೆ ಸಾಲು ಸಾಲು ಸಿನಿಮಾಗಳು ಬರುವುದು ಚಿತ್ರರಂಗಕ್ಕೆ ಒಳ್ಳೆಯದಲ್ಲ. ಬಿಡುಗಡೆ ನಿಯಂತ್ರಣಕ್ಕೆ ಎಲ್ಲರೂ ಕುಳಿತುಕೊಂಡು ಸಭೆ ಮಾಡಿ, ಯಾರು ಯಾವತ್ತು ಬರಬೇಕು ಎಂದು ನಿರ್ಧರಿಸಬೇಕು. ಅದರಲ್ಲಿ ಯಾರೊಬ್ಬರಾದರೂ ಬಿಟ್ಟುಕೊಡಬೇಕಾಗುತ್ತದೆ. ಒಂದು ಯೋಜನೆ ಇಲ್ಲದೆ ಸಿನಿಮಾಗಳನ್ನು ನಿರ್ಮಾಣ ಮಾಡಿದರೆ ಹೀಗಾಗುತ್ತದೆ. ಹಾಗೆಂದು ನಾನು ಇಲ್ಲಿ ಎಲ್ಲರನ್ನೂ ದೂರುತ್ತಿಲ್ಲ. ಸಿನಿಮಾ ಗೆಲ್ಲಬೇಕು ಎಂದರೆ ಎಲ್ಲ ಆಯ್ಕೆಗಳನ್ನು ನೋಡಬೇಕು. ಈ ರೀತಿ ಸಿನಿಮಾ ಹರಿವಿನಿಂದ ಚಿತ್ರಮಂದಿರಗಳ ಸಮಸ್ಯೆಯೂ ಕಾಡುತ್ತದೆ. ಇನ್ನೊಂದು ಸಿನಿಮಾಗೂ ಹೊಡೆತ ಬೀಳುತ್ತದೆ. 'ಶಾಖಾಹಾರಿ' ಸಿನಿಮಾಗೆ ಒಳ್ಳೆಯ ಅಭಿಪ್ರಾಯ ಬಂದಿದೆ. ಎರಡನೇ ವಾರದಲ್ಲಿ ಹೇಗೆ ಮುಂದುವರಿಯುತ್ತದೆ ನೋಡಬೇಕು' ಎನ್ನುತ್ತಾರೆ ಕಾರ್ತಿಕ್.

'ಕರಾವಳಿ'ಯ ಬೆಡಗಿ ಸಂಪದಾ

ಎ.ಪಿ.ಎಸ್.

ಚಂದನವನದ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಟನೆಯ 40ನೇ ಸಿನಿಮಾ 'ಕರಾವಳಿ' ಮೂಲಕ ಸಂಪದಾ 'ದಕ್ಷಿಣ'ಳಾಗಿ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಿರುತೆರೆ ಮೂಲಕ ಬಣ್ಣದ ಲೋಕ ಪ್ರವೇಶಿಸಿದ್ದ ಸಂಪದಾಗೆ ನಾಯಕಿಯಾಗಿ ಇದು ಎರಡನೇ ಸಿನಿಮಾ. ಸಿನಿಮಾದೊಳಗೆ ಪಶುವೈದ್ಯೆಯಾಗಿ ಕಾಣಿಸಿಕೊಳ್ಳಲಿರುವ ಸಂಪದಾ ಸಿನಿಮಾರಂಗದಲ್ಲೇ ಹೆಜ್ಜೆಗಳನ್ನಿಡುವ ಆಸೆ ಹೊತ್ತಿದ್ದಾರೆ. ಸಿನಿಮಾ ಪುರವಣಿ ಜೊತೆಗೆ ಸಂಪದಾ ಮಾತನಾಡಿದ್ದಾರೆ.

'ತಂದೆ ಮಂಡ್ಯ ಮೂಲದವರು; ತಾಯಿ ದೊಡ್ಡಬಳ್ಳಾಪುರದವರು. ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿಯೇ. ಇಂಟೀರಿಯರ್ ಡಿಸೈನಿಂಗ್ ಪದವಿ ಪಡೆದಿದ್ದೇನೆ. ಬಣ್ಣದ ಲೋಕದತ್ತ ಆಕರ್ಷಣೆ ಹುಟ್ಟಲು ಕಾರಣವಿದೆ. ಸಿನಿಮಾಗಳನ್ನು ನೋಡುವ ಆಸಕ್ತಿ ನಮ್ಮ ಕುಟುಂಬಕ್ಕೆ ಇತ್ತು. ಸಿನಿಮಾ ನೋಡಿ ಹೊರಬಂದಾಗ ಆಗುವಂತಹ ಭಾವನೆಗಳೇ ಈ ಕ್ಷೇತ್ರದತ್ತ ಹೆಜ್ಜೆ ಇಡಲು ನನಗೆ ಸ್ಫೂರ್ತಿಯಾಯಿತು ಎನ್ನಬಹುದು. 16ನೇ ವಯಸ್ಸಿನಲ್ಲೇ 'ಮಿಥುನ ರಾಶಿ' ಎನ್ನುವ ಧಾರಾವಾಹಿಯಲ್ಲಿ ನಟಿಸಿದೆ. ಹಲವರು ನನ್ನನ್ನು ಈಗಲೂ ಅದೇ ಪಾತ್ರದಿಂದ ಗುರುತಿಸುತ್ತಾರೆ' ಎಂದು ಆರಂಭಿಕ ಹೆಜ್ಜೆಗಳನ್ನು ಸಂಪದಾ ಮೆಲುಕು ಹಾಕಿದರು.

'ಕಿರುತೆರೆ ಬಳಿಕ 'ರೈಡರ್' ಸಿನಿಮಾದಲ್ಲಿ ಪಾತ್ರವೊಂದನ್ನು ನಿಭಾಯಿಸಿದ್ದೆ. ಅನೀಶ್ ತೇಜೇಶ್ವರ್ ನಟನೆಯ 'ಬೆಂಕಿ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನದಲ್ಲಿ ನನ್ನ ಪಯಣ ಮುಂದುವರಿಸಿದೆ. ಆ ಸಂದರ್ಭದಲ್ಲಿ ಕೋವಿಡ್ ಚಿತ್ರರಂಗವನ್ನೇ ಸ್ಥಗಿತಗೊಳಿಸಿತ್ತು. ಇದಾದ ಬಳಿಕ ನಾನು ಚಿತ್ರರಂಗಕ್ಕೆ ಮರಳಲಿಲ್ಲ. ಶಿಕ್ಷಣ ನನ್ನ ಮೊದಲ ಆದ್ಯತೆಯಾಗಿದ್ದ ಕಾರಣ ಪದವಿ ಪೂರ್ಣಗೊಳಿಸಿದೆ. ನಂತರದಲ್ಲಿ ಕೆಲ ಪ್ರಾಜೆಕ್ಟ್‌ಗಳು ಬಂದರೂ ನನಗೆ ಇಷ್ಟವಾಗಲಿಲ್ಲ. 'ಕರಾವಳಿ' ನನ್ನನ್ನು ಸೆಳೆದ ಪ್ರಾಜೆಕ್ಟ್. ಇದರಲ್ಲಿ ನಾನು ಪಶುವೈದ್ಯೆಯಾಗಿ ನಟಿಸುತ್ತಿದ್ದೇನೆ. ನಗರ ಪ್ರದೇಶದಿಂದಲೇ ಹಳ್ಳಿಗೆ ಬಂದ ಪಾತ್ರವದು. ಹೀಗಾಗಿ ನಾನು ಈ ಪಾತ್ರವನ್ನು ನಿಭಾಯಿಸಬಲ್ಲೆ ಎನ್ನುವ ಭರವಸೆ ನನಗಿದೆ. ಆ ಭಾಗದ ಕನ್ನಡ ಭಾಷೆಯ ಕಲಿಕೆಗೆ ತರಬೇತಿ ಪಡೆದುಕೊಳ್ಳುತ್ತಿದ್ದೇನೆ. ಅಲ್ಲಿರುವವರ ಜೊತೆ ಕಾಲ ಕಳೆದಾಗ ಆ ಪಾತ್ರವನ್ನು ಇನ್ನಷ್ಟು ಸಮರ್ಥವಾಗಿ ನಿಭಾಯಿಸಬಲ್ಲೆ ಎನ್ನುವ ನಂಬಿಕೆ ಇದೆ' ಎಂದರು.

'ಅನುಭವ ಯಾವುತ್ತೂ ಕಲಾವಿದನ ಬೆನ್ನೆಲುಬು. ಕ್ಯಾಮೆರಾ ಜೊತೆ ಒಡನಾಟ ನನಗಿದೆ. ಆದರೂ 'ಕರಾವಳಿ'ಯಂತಹ ಭಿನ್ನ ಕಥಾಹಂದರ ಹೊಂದಿದ ಸಿನಿಮಾ ಮಾಡುವುದು ಎಂದರೆ ಖಂಡಿತಾ ಸವಾಲಿನ ವಿಷಯವೇ. ಸಿನಿಮಾ ಮೇಲೆ ನಿರೀಕ್ಷೆ ಹೆಚ್ಚಿರುವಾಗ ನಮ್ಮ ಮೇಲಿನ ಜವಾಬ್ದಾರಿಯೂ ಹೆಚ್ಚುತ್ತದೆ. ಇದಕ್ಕೆ ಬೇಕಾಗಿರುವ ತಯಾರಿ ನಡೆದಿದೆ. ಈ ಚಿತ್ರದಲ್ಲಿ ನನಗೆ ಸ್ಕ್ರೀನ್ ಸ್ಪೇಸ್ ಹೆಚ್ಚು ಇದೆ. ಸುಮಾರು 25 ದಿನ ನನ್ನ ಪಾತ್ರದ ಚಿತ್ರೀಕರಣವಿದೆ. 'ದಕ್ಷಿಣ' ಎನ್ನುವುದು ಸರಳವಾದ ಪಾತ್ರವಲ್ಲ. ಕಥೆಯೊಂದಿಗೆ ಆಕೆಯ ಸಂಪರ್ಕ ಹೆಚ್ಚು. ಈ ಪಾತ್ರ ಮುಗ್ಧತೆಯನ್ನು ಬಯಸುತ್ತದೆ. ಈ ಹಿನ್ನೆಲೆಯಲ್ಲಿ ನನ್ನನ್ನು ಆಯ್ಕೆ ಮಾಡಲಾಗಿದೆ ಎಂದು ನಿರ್ದೇಶಕರು ಹೇಳಿದರು. ಚಿತ್ರೀಕರಣ ನಡೆದಂತೆ ಅದನ್ನು ನಾನು ಕಂಡುಕೊಳ್ಳಲು ಸಾಧ್ಯವಾಗಲಿದೆ' ಎನ್ನುತ್ತಾರೆ ಸಂಪದಾ.

'ಶಿಕ್ಷಣ ಪೂರ್ಣಗೊಂಡಿದೆ. ಹೀಗಾಗಿ ಸಿನಿಮಾದತ್ತಲೇ ನನ್ನ ಚಿತ್ತವಿದೆ. 'ಕರಾವಳಿ' ನಂತರ ಇನ್ನೊಂದು ಸಿನಿಮಾ ಮಾಡುತ್ತಿದ್ದೇನೆ. ಆ ಚಿತ್ರತಂಡವೇ ಇದನ್ನು ಶೀಘ್ರದಲ್ಲೇ ಘೋಷಿಸಲಿದೆ' ಎಂದು ಮಾತಿಗೆ ವಿರಾಮವಿತ್ತರು.

'ಪ್ರೀತಿಯ ಹುಚ್ಚ'ನ ದುರಂತ ಕಥೆ

ಕುಂಕುಮ್

ವಿ.ಕುಮಾರ್ ನಿರ್ದೇಶಿಸಿರುವ ಹೊಸ ಸಿನಿಮಾ 'ಪ್ರೀತಿಯ ಹುಚ್ಚ' ಬಿಡುಗಡೆಗೆ ಸಜ್ಜಾಗಿದೆ. ಕುಮಾರ್ ಮೂವೀಸ್ ಬ್ಯಾನರ್ ಅಡಿಯಲ್ಲಿ ಟಿ. ಗೌರಿಕುಮಾರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಈ ಹಿಂದೆ 'ಗಾಯತ್ರಿ' ಎಂಬ ಹಾರರ್ ಚಿತ್ರವನ್ನು ಕುಮಾರ್ ನಿರ್ಮಿಸಿ, ನಿರ್ದೇಶಿಸಿದ್ದರು. '1998-99ರಲ್ಲಿ ಹಾಸನದಲ್ಲಿ ನಡೆದ ನೈಜ ಘಟನೆಯೊಂದು ಈ ಚಿತ್ರಕ್ಕೆ ಪ್ರೇರಣೆ. ಅಮಾಯಕ ಯುವತಿಯೊಬ್ಬಳ ದಾರುಣ ಕಥೆ. ಮದುವೆಯಾದ ಮೊದಲ ರಾತ್ರಿಯೇ ಮುಂಬೈನ ರೆಡ್‌ಲೈಟ್ ಏರಿಯಾಕ್ಕೆ ಮಾರಾಟವಾಗುವ ನಾಯಕಿಯ ಜೀವನ ಮುಂದೆ ಹೇಗೆಲ್ಲ ತಿರುವು ಪಡೆದುಕೊಂಡಿತು ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು' ಎನ್ನುತ್ತಾರೆ ಕುಮಾರ್.

ಬೆಂಗಳೂರು, ಮಂಡ್ಯ, ಚಿಕ್ಕಮಗಳೂರು, ಹಾಸನ, ಶ್ರವಣಬೆಳಗೊಳ ಹಾಗೂ ಮುಂಬೈನಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಸದ್ಯ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ವಿಜಯ್ ನಾಯಕನಾಗಿ ನಟಿಸಿದ್ದು, ಮುಂಬೈ ಮೂಲದ ಕುಂಕುಮ್ ನಾಯಕಿ. ಜೆ.ಎನ್. ರಂಗರಾಜನ್ ಸಂಗೀತ ಸಂಯೋಜನೆ ಮಾಡಿದ್ದಾರೆ.

2023ರಲ್ಲಿ ನಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಚೊಚ್ಚಲ ಆವೃತ್ತಿಯ ಉದ್ಘಾಟನಾ ಕಾರ್ಯಕ್ರಮದ ಝಲಕ್.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ

ಕಳೆದ ವರ್ಷ ಪ್ರಾರಂಭಗೊಂಡು ವ್ಯಾಪಕ ಪ್ರಶಂಸೆ ಪಡೆದ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿಯೊಂದಿಗೆ ಮತ್ತೆ ಬಂದಿದೆ. 2023ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಿದ್ದು, ನಿಮ್ಮ ಸಿನಿಮಾಗಳನ್ನು ನೋಂದಾಯಿಸಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ. 'ಸಿನಿ ಸಮ್ಮಾನ' ಕುರಿತಾದ ಇನ್ನಷ್ಟು ಮಾಹಿತಿಗಾಗಿ https://www.prajavani.net/cinesamman/season2 ನೋಡಿ.

ದೆವ್ವಗಳ 'ಕುಟೀರ'ಕ್ಕೆ ಕೋಮಲ್

ಚಂದನವನದಿಂದ ಕೆಲ ವರ್ಷ ದೂರ ಉಳಿದಿದ್ದ ಸೆನ್ಸೇಷನಲ್ ಸ್ಟಾರ್ ಕೋಮಲ್ ಕುಮಾರ್ ಇದೀಗ ಸಾಲು ಸಾಲು ಸಿನಿಮಾಗಳಿಗೆ ಹಸಿರು ನಿಶಾನೆ ನೀಡುತ್ತಿದ್ದಾರೆ. 'ಕಾಲಾಯ ನಮಃ', 'ಯಲಾಕುನ್ನಿ' ಬಳಿಕ ಇದೀಗ ಕೋಮಲ್ ನಟನೆಯ 'ಕುಟೀರ' ಎನ್ನುವ ಹೊಸ ಪ್ರಾಜೆಕ್ಟ್ ಸೆಟ್ಟೇರಿದೆ.

ಇದು ಕೋಮಲ್ ನಾಯಕರಾಗಿ ನಟಿಸುತ್ತಿರುವ 25ನೇ ಚಿತ್ರವಾಗಿದ್ದು, ಅನೂಪ್ ಆಂಟೊನಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಕಂಸಾಳೆ ಫಿಲಂಸ್ ಲಾಂಛನದಲ್ಲಿ ಮಧು ಮರಿಸ್ವಾಮಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದೆ.

'ನಾನು ಈವರೆಗೆ ನೂರಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದೇನೆ. ಆದರೆ ನಾಯಕನಾಗಿ ನಟಿಸುತ್ತಿರುವ 25ನೇ ಚಿತ್ರವಿದು' ಎಂದು ಮಾತು ಆರಂಭಿಸಿದ ಕೋಮಲ್, 'ಈ ಚಿತ್ರ ಹಾರಾರ್ ಕಾಮಿಡಿ ಫ್ಯಾಂಟಸಿ ಜಾನರ್‌ನಲ್ಲಿದೆ. ಚಿತ್ರದ ಶೀರ್ಷಿಕೆಯೇ ಹೇಳುವಂತೆ, 'ಕುಟೀರ' ಎಂದರೆ ಮನೆ. ಈ ಚಿತ್ರದಲ್ಲೂ ಒಂದು ದೊಡ್ಡ ಮನೆ ಇರುತ್ತದೆ. ಅಲ್ಲಿಗೆ ಬಂದು ಸಿಕ್ಕಿ ಹಾಕಿಕೊಳ್ಳುವ ನನಗೆ ದೆವ್ವಗಳು ಏನು ಮಾಡುತ್ತವೆ ಎಂಬುವುದನ್ನು ನಿರ್ದೇಶಕರು ಹಾಸ್ಯದ ಮುಖಾಂತರ ತೋರಿಸಲಿದ್ದಾರೆ' ಎಂದರು.

'ಮಾರ್ಚ್ ಎರಡನೇ ವಾರದಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಹೆಚ್ಚಿನ ಭಾಗ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆಯಲಿದೆ. 'ಗಣಪ' ಚಿತ್ರದ ಖ್ಯಾತಿಯ ಪ್ರಿಯಾಂಕ ತಿಮ್ಮೇಶ್ ಈ ಚಿತ್ರದ ನಾಯಕಿ. ಆಂಗ್ಲೊ ಇಂಡಿಯನ್ ಹುಡುಗಿಯಾಗಿ ಅವರಿಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಯಶ್ ಶೆಟ್ಟಿ, ಕಾಕ್ರೋಚ್ ಸುಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಬಿ.ಜಿ.ಭರತ್ ಸಂಗೀತ ನಿರ್ದೇಶನ, ಅರುಣ್ ಸುರೇಶ್ ಛಾಯಾಚಿತ್ರಗ್ರಹಣ ಹಾಗೂ ಎನ್. ಎಂ. ವಿಶ್ವ ಅವರ ಸಂಕಲನ ಚಿತ್ರಕ್ಕಿದೆ' ಎಂದು ಅನೂಪ್ ತಿಳಿಸಿದರು.

ಪ್ರಿಯಾಂಕ ತಿಮ್ಮೇಶ್, ಕೋಮಲ್

ಮತ್ತೆ ಬರ್ತಿದ್ದಾನೆ ಗಣಿ!

'ನಮ್ ಗಣಿ ಬಿ.ಕಾಂ ಪಾಸ್' ಚಿತ್ರದ ನಿರ್ದೇಶಕ ಅಭಿಷೇಕ್ ಶೆಟ್ಟಿ ಸದ್ಯ ತಮ್ಮ ಹೊಸ ಚಿತ್ರ 'ಆರಾಮ್ ಅರವಿಂದ ಸ್ವಾಮಿ' ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜೊತೆಗೆ ತಮ್ಮದೇ ಹೊಸ ಚಿತ್ರವೊಂದನ್ನು ಅಭಿಷೇಕ್ ಘೋಷಿಸಿದ್ದಾರೆ. ಅಭಿಷೇಕ್ ಶೆಟ್ಟಿ 'ನಮ್ ಗಣಿ ಬಿ.ಕಾಂ ಪಾಸ್' ಚಿತ್ರದ ಮೂಲಕ ನಟನಾಗಿ ಹಾಗೂ ನಿರ್ದೇಶಕರಾಗಿ ಚಂದನವನಕ್ಕೆ ಕಾಲಿಟ್ಟರು. ಬಳಿಕ 'ಗಜಾನನ ಆ್ಯಂಡ್ ಗ್ಯಾಂಗ್' ಚಿತ್ರ ನಿರ್ದೇಶಿಸಿದರು. ಇದೀಗ 'ನಮ್ ಗಣಿ ಬಿ.ಕಾಂ ಪಾಸ್' ಸೀಕ್ವೆಲ್‌ನಲ್ಲಿ ಮಿಂಚಲು ಅಭಿಷೇಕ್ ಸಜ್ಜಾಗಿದ್ದಾರೆ. ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಸೂಟು ಬೂಟು ತೊಟ್ಟು, ಕೈಯಲ್ಲಿ ಕಾಫಿ ಕಪ್ ಬನ್ ಹಿಡಿದು ದುಬಾರಿ ಕಾರಿನ ಮುಂದೆ ಸ್ಟೈಲಿಷ್ ಆಗಿ ಅಭಿ ಪೋಸ್ ನೀಡಿದ್ದಾರೆ. ಈ ಚಿತ್ರಕ್ಕೆ ಅದ್ವಿ ಕ್ರಿಯೇಷನ್‌ನಡಿ ಪ್ರಶಾಂತ್ ಹಣ ಹೂಡುತ್ತಿದ್ದು, ಸುಮಂತ್ ಆಚಾರ್ಯ ಕ್ಯಾಮೆರಾ ಹಿಡಿಯಲಿದ್ದಾರೆ. ಉಮೇಶ್ ಆರ್. ಬಿ. ಸಂಕಲನ ಈ ಚಿತ್ರಕ್ಕಿದೆ. ಸಿನಿಮಾದ ಕಥೆ ಬರವಣಿಗೆ ಹಂತದಲ್ಲಿದೆ ಎಂದಿದ್ದಾರೆ ಅಭಿಷೇಕ್.

'ಫೋಟೋ' ಚೌಕಟ್ಟಿನಲ್ಲಿ ಪ್ರಕಾಶ್ ರಾಜ್

ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರೇಕ್ಷಕರಿಂದ ಮೆಚ್ಚುಗೆ ಪಡೆದ 'ಫೋಟೋ' ಸಿನಿಮಾ ಮಾರ್ಚ್ 15ರಂದು ತೆರೆಕಾಣಲಿದೆ.

ಉತ್ಸವ್ ಗೋನವಾರ ನಿರ್ದೇಶನದ 'ಫೋಟೋ' ಸಿನಿಮಾವನ್ನು ನಿರ್ದಿಗಂತದ ಮೂಲಕ ನಟ ಪ್ರಕಾಶ್ ರಾಜ್ ಪ್ರಸೆಂಟ್ ಮಾಡುತ್ತಿದ್ದಾರೆ. ಬುಧವಾರ(ಫೆ.21) ಶ್ರೀರಂಗಪಟ್ಟಣ ಸಮೀಪವಿರುವ ಪ್ರಕಾಶ್ ರಾಜ್ ಅವರ ನಿರ್ದಿಗಂತದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಡಾಲಿ ಧನಂಜಯ ಹಾಗೂ 'ಲೂಸಿಯಾ' ಖ್ಯಾತಿಯ ಪವನ್ ಕುಮಾರ್ ಟ್ರೇಲರ್ ಬಿಡುಗಡೆ ಮಾಡಿದರು. 'ನಮ್ಮ ದೇಹಕ್ಕೆ ಆದ ಗಾಯಗಳು ನಾವು ಸುಮ್ಮನಿದ್ದರೂ ವಾಸಿಯಾಗುತ್ತವೆ. ಆದರೆ ಸಮಾಜಕ್ಕೆ ಆಗಿರುವ ಗಾಯ ನಾವು ಸುಮ್ಮನಿದಷ್ಟು ಜಾಸ್ತಿಯಾಗುತ್ತದೆ. ನನಗೆ ಉತ್ಸವ್ ಸಿನಿಮಾವನ್ನು ತೋರಿಸುವ ಆಸೆ ಬಹಳ ದಿನಗಳಿಂದ ಇತ್ತು. ಲಾಕ್‌ಡೌನ್‌ನಲ್ಲಿ ನೋಡಿದ ನೋವುಗಳನ್ನು ದಾಖಲೆ ಮಾಡಬೇಕು ಎಂದು 21 ವರ್ಷದ ಹುಡುಗನಿಗೆ ಅನಿಸಿದೆಯಲ್ಲ ಅದನ್ನು ಮೆಚ್ಚಬೇಕು. 'ಫೋಟೋ' ಪ್ಯಾನ್ ವರ್ಲ್ಡ್ ಸಿನಿಮಾ ಆಗಲಿದೆ' ಎಂದರು ಪ್ರಕಾಶ್ ರಾಜ್.

ಉತ್ಸವ್ ಮಾತನಾಡಿ, 'ಲಾಕ್‌ಡೌನ್‌ಗೂ ಮುನ್ನ ಕೊಡಗಿಗೆ ಹೋಗಿದ್ದೆ. ಆ ಸಮಯದಲ್ಲೊಂದು ಲೇಖನ ಓದಿದ್ದೆ. ಗಂಗಮ್ಮ ಎಂಬ ಗರ್ಭಿಣಿ ಬೆಂಗಳೂರಿನಿಂದ ಊರಿಗೆ ಹೋಗಬೇಕಾದರೆ ಮಧ್ಯದಲ್ಲಿ ಬಹುಅಂಗಾಂಗ ವೈಫಲ್ಯದಿಂದ ನಿಧನ ಹೊಂದುತ್ತಾರೆ. ಇದು ನನ್ನನ್ನು ಬಹಳವಾಗಿ ಕಾಡಿತು. ಈ ವಿಷಯ ದಾಖಲೆಯಾಗಬೇಕು ಎಂದು ಅನಿಸಿತು. ಆಗ ಬರೆಯಲು ಶುರು ಮಾಡಿದೆ. ಆ ನಂತರ ಅದನ್ನು ಸಿನಿಮಾ ಮಾಡಿದೆ' ಎಂದು ಸಿನಿಮಾ ಕಥಾಹಂದರವನ್ನು ತೆರೆದಿಟ್ಟರು.

ಧನಂಜಯ, ಪ್ರಕಾಶ್ ರಾಜ್, ಬಾಲನಟ ವೀರೇಶ್, ಉತ್ಸವ್, ಪವನ್

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಯುವ ಸಮೃದ್ಧಿ ಸಮ್ಮೇಳನ ಬೃಹತ್ ಉದ್ಯೋಗ ಮೇಳ 2024

ಕೌಶಲ್ಯ ಕರ್ನಾಟಕ

KARNATAKA SKILL CONNECT PORTAL

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)

ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶ !

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ-2024 ವನ್ನು ಆಯೋಜಿಸಲಾಗಿದೆ

ಯುವ ಸಮೃದ್ಧಿ ಸಮ್ಮೇಳನ ಬೃಹತ್ ಉದ್ಯೋಗ ಮೇಳ - 2024

ಬೆಂಗಳೂರು

ಡಾ. ಶರಣ್ ಪ್ರಕಾಶ್ ಪಾಟೀಲ್
ಮಾನ್ಯ ಸಚಿವರು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ದಿನಾಂಕ:
26 ಮತ್ತು 27 ಫೆಬ್ರವರಿ 2024

ಸ್ಥಳ:
ಪ್ಯಾಡಾಕ್ ಮೈದಾನ, ಬೆಂಗಳೂರು ಅರಮನೆ ಹಿಂಭಾಗ
ಬೆಂಗಳೂರು - 560052.

ಎಲ್ಲಾ ವಿದ್ಯಾರ್ಹತೆಯ ಉದ್ಯೋಗಾಕಾಂಕ್ಷಿಗಳಿಗೆ ಸುಸ್ವಾಗತ!

ಉದ್ಯೋಗಾಕಾಂಕ್ಷಿಗಳಿಗೆ

(ನೋಂದಣಿಯಾಗಲು ವಿವಿಧ ಹಂತಗಳು)

- ಹಂತ 1: https://skillconnect.kaushalkar.com/ ಗೆ ಭೇಟಿ ನೀಡಿ
- ಹಂತ 2: 'ರಿಜಿಸ್ಟರ್' ಮೇಲೆ ಕ್ಲಿಕ್ ಮಾಡಿ
- ಹಂತ 3: 'ಉದ್ಯೋಗ ಮೇಳ' ಮೇಲೆ ಕ್ಲಿಕ್ ಮಾಡಿ
- ಹಂತ 4: 'ಅಭ್ಯರ್ಥಿ ನೋಂದಣಿ' ಮೇಲೆ ಕ್ಲಿಕ್ ಮಾಡಿ
- ಹಂತ 5: ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಿ

ಉದ್ಯೋಗದಾತರಿಗೆ

(ನೋಂದಣಿಯಾಗಲು ವಿವಿಧ ಹಂತಗಳು)

- ಹಂತ 1: https://skillconnect.kaushalkar.com/ಗೆ ಭೇಟಿ ನೀಡಿ
- ಹಂತ 2: 'ರಿಜಿಸ್ಟರ್' ಮೇಲೆ ಕ್ಲಿಕ್ ಮಾಡಿ
- ಹಂತ 3: 'ಉದ್ಯೋಗ ಮೇಳ' ಮೇಲೆ ಕ್ಲಿಕ್ ಮಾಡಿ
- ಹಂತ 4: 'ಉದ್ಯೋಗದಾತ ನೋಂದಣಿ' ಮೇಲೆ ಕ್ಲಿಕ್ ಮಾಡಿ
- ಹಂತ 5: ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಿ

ಸಹಾಯವಾಣಿ ಸಂಖ್ಯೆ:
1800 599 9918 (ವಿಸ್ತರಣಾ ಸಂಖ್ಯೆ-4)

ಸಾಮಾಜಿಕ ಜಾಲತಾಣದಲ್ಲಿ ನಮ್ಮನ್ನು ಅನುಸರಿಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸೌಂದರ್ಯಕ್ಕೆ ಬಹಳ ಬೇಗ ಮರುಳಾಗಿಬಿಡುತ್ತೇವೆ. ಆದರೆ ನಾವು ಬಾಳಬೇಕಾಗಿರುವುದು ವ್ಯಕ್ತಿತ್ವದ ಜೊತೆಗೆ ಎಂಬ ವಾಸ್ತವದ ಅರಿವು ನಮಗೆ ಇರುವುದಿಲ್ಲ.

-ಸ್ವಾಮಿ ವಿವೇಕಾನಂದ

ಸರ್ಕಾರಿ ಆದೇಶಗಳಲ್ಲಿನ ಗೊಂದಲ ಮುನ್ನೋಟ–ವಿವೇಚನೆಯ ಕೊರತೆ

ನಾಡಗೀತೆ, ಧಾರ್ಮಿಕ ಹಬ್ಬಗಳ ಆಚರಣೆ ಹಾಗೂ ವಸತಿಶಾಲೆಗಳ ಪ್ರವೇಶ ದ್ವಾರದಲ್ಲಿನ ಘೋಷಣಾ ವಾಕ್ಯಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಆದೇಶಗಳಿಂದಾಗಿ ರಾಜ್ಯ ಸರ್ಕಾರ ಮುಜುಗರಕ್ಕೆ ಒಳಗಾಗಿದೆ. ವಾರದ ಅವಧಿಯಲ್ಲಿ ಕೈಗೊಂಡ ಮೂರು ತೀರ್ಮಾನಗಳು, ವ್ಯಾಪಕ ವಿರೋಧದ ನಂತರ ಬದಲಾಗಿರುವುದು ಸರ್ಕಾರಿ ವ್ಯವಸ್ಥೆಯಲ್ಲಿನ ವಿವೇಚನಾರಾಹಿತ್ಯ ಮನಃಸ್ಥಿತಿ ಹಾಗೂ ಗೊಂದಲಗಳನ್ನು ಸೂಚಿಸುವಂತಿದೆ. ಕೊಂಚ ಎಚ್ಚರ ವಹಿಸಿದ್ದರೆ ತಪ್ಪಿಸಿಕೊಳ್ಳಬಹುದಾಗಿದ್ದ ಮುಖಭಂಗದ ಸಂದರ್ಭವನ್ನು ಅತ್ಯುತ್ಸಾಹ ಹಾಗೂ ವಿವೇಚನೆಯ ಕೊರತೆಯಿಂದ ಸರ್ಕಾರವೇ ಸೃಷ್ಟಿಸಿದಂತಿದೆ. ರಾಷ್ಟ್ರೀಯ ದಿನಾಚರಣೆಗಳನ್ನು ಹೊರತುಪಡಿಸಿ ಯುಗಾದಿ, ರಂಜಾನ್, ಕ್ರಿಸ್‌ಮಸ್, ಈದ್‌ಮಿಲಾದ್‌ನಂತಹ ಯಾವುದೇ ಧಾರ್ಮಿಕ ಹಬ್ಬಗಳನ್ನು ವಸತಿಶಾಲೆಗಳಲ್ಲಿ ಆಚರಿಸಬಾರದು ಎಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದರು. ಧಾರ್ಮಿಕ ಹಬ್ಬಗಳನ್ನು ಆಚರಿಸಿದರೆ, ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಮತ್ತು ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಸುತ್ತೋಲೆಯಲ್ಲಿ ಎಚ್ಚರಿಸಲಾಗಿತ್ತು. ಈ ನಿರ್ಬಂಧಕ್ಕೆ ತಕರಾರು ವ್ಯಕ್ತವಾಗುತ್ತಿದ್ದಂತೆಯೇ ಸುತ್ತೋಲೆಯನ್ನು ಹಿಂಪಡೆಯಲಾಗಿದೆ. ಮತ್ತೊಂದು ಪ್ರಕರಣದಲ್ಲಿ, ಖಾಸಗಿ–ಅನುದಾನರಹಿತ ಶಾಲೆಗಳಲ್ಲಿ ನಾಡಗೀತೆ ಹಾಡುವುದು ಕಡ್ಡಾಯವಲ್ಲ ಎಂಬರ್ಥದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ಸರ್ಕಾರ ಮುಜುಗರಕ್ಕೀಡಾಗಿತ್ತು. ಈ ನಿರ್ಧಾರದ ಬಗ್ಗೆ ಅಪಸ್ವರಗಳು ಕೇಳಿಬರುತ್ತಿದ್ದಂತೆಯೇ, ನಾಡಗೀತೆ ಹಾಡುವುದನ್ನು ಎಲ್ಲ ಶಾಲೆಗಳಲ್ಲಿ ಕಡ್ಡಾಯಗೊಳಿಸಿರುವ ತಿದ್ದುಪಡಿ ಆದೇಶ ಹೊರಬಿದ್ದಿದೆ. ವಸತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ದ್ವಾರದಲ್ಲಿ ಬರೆಯಲಾಗಿದ್ದ ‘ಜ್ಞಾನದೇಗುಲವಿದು ಕೈ ಮುಗಿದು ಒಳಗೆ ಬಾ’ ಎಂಬ ಘೋಷವಾಕ್ಯವನ್ನು, ‘ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ’ ಎಂದು ಬದಲಿಸುವ ತನ್ನ ಆದೇಶವನ್ನೂ ಪ್ರತಿಭಟನೆಯ ನಂತರ ಸರ್ಕಾರ ಹಿಂಪಡೆದಿದ್ದು, ಹಳೆಯ ಘೋಷಣೆಯನ್ನೇ ಉಳಿಸಿಕೊಂಡಿದೆ. ಆದೇಶವೊಂದನ್ನು ಹಿಂಪಡೆಯುವುದು ಅಥವಾ ತಿದ್ದುಪಡಿ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸಹಜವೇನೂ ಅಲ್ಲ. ಆದರೆ, ಇಂಥ ಬದಲಾವಣೆಗಳಿಗೆ ಜನಹಿತ ಕಾರಣವಾಗಬೇಕೇ ವಿನಾ ಕಣ್ತಪ್ಪು ಇಲ್ಲವೇ ಜಾಗರೂಕ ಪರಿಶೀಲನೆಯ ಕೊರತೆ ಕಾರಣ ಆಗಬಾರದು.

> ಸೂಕ್ಷ್ಮವಾದ ಸಂಗತಿಗಳ ಕುರಿತು ಚರ್ಚಿಸದೆ, ಅವಸರದಲ್ಲಿ ಜಾರಿಗೆ ತರಲು ಯತ್ನಿಸಿದ ಸರ್ಕಾರದ ಪ್ರಯತ್ನಗಳಲ್ಲಿ ಬೇಜವಾಬ್ದಾರಿ ಧೋರಣೆ ಎದ್ದುಕಾಣುತ್ತದೆ

ಸರ್ಕಾರವನ್ನು ಪೇಚಿಗೆ ಸಿಲುಕಿಸಿದ ಮೂರೂ ಆದೇಶಗಳನ್ನು ಅಧಿಕಾರಿಗಳು ಹೊರಡಿಸಿರುವುದು ಗಮನಾರ್ಹ. ಬಹು ಸೂಕ್ಷ್ಮವಾದ ಸಂಗತಿಗಳನ್ನು ಚರ್ಚಿಸದೆ ಅವಸರದಲ್ಲಿ ಜಾರಿಗೆ ತರಲು ಯತ್ನಿಸಿದ ಸರ್ಕಾರದ ಪ್ರಯತ್ನಗಳಲ್ಲಿ ಬೇಜವಾಬ್ದಾರಿ ಧೋರಣೆ ಎದ್ದು ಕಾಣುತ್ತದೆ. ಸರ್ಕಾರಿ ವಲಯದಲ್ಲಿ ಹಾಗೂ ಸಾರ್ವಜನಿಕವಾಗಿ ಚರ್ಚೆಗಳು ನಡೆಯದೇ ಅಧಿಕಾರಿಗಳು ಅತ್ಯುತ್ಸಾಹದಿಂದ ಕೈಗೊಳ್ಳುವ ನಿರ್ಧಾರವು ಸರ್ಕಾರವನ್ನು ಪೇಚಿಗೆ ಸಿಲುಕಿಸಬಹುದು ಎನ್ನುವುದನ್ನು ಅಧಿಕಾರಸ್ಥರು ಮರೆಯಬಾರದು. ನಾಡಗೀತೆಗೆ ಸಂಬಂಧಪಟ್ಟ ಆದೇಶ ಕಣ್ತಪ್ಪಿನಿಂದಾದ ಪ್ರಮಾದ ಎನ್ನುವ ಕನ್ನಡ ಮತ್ತು ಸಂಸ್ಕೃತಿ ಸಚಿವರ ಸಮಜಾಯಿಷಿಯನ್ನು ಒಪ್ಪುವುದು ಕಷ್ಟ. ನಿರ್ಧಾರವೊಂದನ್ನು ಕೈಗೊಳ್ಳುವ ಮೊದಲು, ಅದರ ಸಾಧಕ– ಬಾಧಕಗಳ ಬಗ್ಗೆ ಸರ್ಕಾರ ಯೋಚಿಸುವುದು ಅಗತ್ಯ. ಪರಿಣಾಮಗಳ ಬಗ್ಗೆ ಸ್ಪಷ್ಟತೆಯಿದ್ದಾಗ ತನ್ನ ನಿಲುವು ಹಾಗೂ ಚಿಂತನೆಯನ್ನು ಸಮರ್ಥಿಸಿಕೊಳ್ಳುವುದು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ವಸತಿಶಾಲೆಗಳಲ್ಲಿನ ಘೋಷವಾಕ್ಯವನ್ನು ಬದಲಿಸಲು ಮುಂದಾಗಿದ್ದ ಸರ್ಕಾರದ ನಿರ್ಧಾರವು ವೈಚಾರಿಕ ನೆಲೆಗಟ್ಟಿನಲ್ಲಿ ಸರಿಯಾದುದೇ ಆಗಿತ್ತು. ಆದರೆ, ಪೂರ್ವಸಿದ್ಧತೆ ಹಾಗೂ ಮುನ್ನೋಟದ ಕೊರತೆಯಿಂದಾಗಿ ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಕಲಿಕೆಯ ಬಗೆಗಿನ ಕುತೂಹಲವನ್ನು ಕಾಪಿಡುವುದಕ್ಕಾಗಿ ಹಾಗೂ ಪ್ರಶ್ನೆ ಕೇಳುವ ಪ್ರವೃತ್ತಿಯನ್ನು ಮಕ್ಕಳಲ್ಲಿ ಹೆಚ್ಚಿಸುವ ಕಾರಣಕ್ಕಾಗಿ, ವಸತಿ ಶಾಲೆಗಳ ಪ್ರವೇಶ ದ್ವಾರದಲ್ಲಿ ‘ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ’ ಎನ್ನುವ ಘೋಷವಾಕ್ಯ ಬರೆಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಇಂಥ ನಿರ್ಧಾರಗಳು ಸಾರ್ವಜನಿಕ ಚರ್ಚೆ–ಸಂವಾದಗಳ ನಂತರ ಜಾರಿಗೊಳ್ಳಬೇಕೇ ಹೊರತು ಏಕಪಕ್ಷೀಯವಾಗಿ ಅಲ್ಲ. ಅಧಿಕಾರಿಯೊಬ್ಬರ ಸಾಮಾಜಿಕ ಜಾಲತಾಣದ ಸಂದೇಶವನ್ನು ಆಧರಿಸಿ, ಬದಲಾವಣೆಯ ಪ್ರಯತ್ನಗಳು ನಡೆದಿದ್ದವು. ಘೋಷವಾಕ್ಯವನ್ನು ಬದಲಿಸಲು ಹೊರಟ ಸರ್ಕಾರದ ಪ್ರಯತ್ನವನ್ನು, ‘ಕವಿ ಕುವೆಂಪು ಅವರಿಗೆ ಸರ್ಕಾರ ಎಸಗಿರುವ ಅವಮಾನ’ ಎಂದು ವಿರೋಧಪಕ್ಷಗಳು ವಿಶ್ಲೇಷಿಸಿದ್ದವು. ವಿದ್ಯಾರ್ಥಿಗಳಲ್ಲಿ ವೈಚಾರಿಕ ಮನೋಭಾವವನ್ನು ಉದ್ದೀಪಿಸುವ ಕುವೆಂಪು ಅವರ ಚಿಂತನೆಗೆ ಸರ್ಕಾರದ ನಿರ್ಧಾರ ಪೂರಕವೇ ಆಗಿತ್ತು ಎಂದು ಹೇಳುವ ಪ್ರಯತ್ನವನ್ನು ಸರ್ಕಾರ ನಡೆಸಲೇ ಇಲ್ಲ. ವಿರೋಧ ಎದುರಾದಾಗ ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನೇ ಮಾಡದೆ, ಯಥಾಸ್ಥಿತಿ ಕಾಪಾಡಲು ಮುಂದಾದ ರಕ್ಷಣಾತ್ಮಕ ನಿಲುವು ಆಡಳಿತ ನಡೆಸುವವರ ವಿವೇಚನಾಶಕ್ತಿಯ ಬಗ್ಗೆ ಅನುಮಾನ ಮೂಡಿಸುವಂತಹದ್ದು; ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸರ್ಕಾರದ ನೀತಿನಿರೂಪಕರಿಗೂ ವೈಚಾರಿಕತೆಯ ಅಗತ್ಯವಿದೆ ಎನ್ನುವುದನ್ನು ಸೂಚಿಸುವಂತಹದ್ದು. ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳುವ ಸ್ಥಿತಿಯನ್ನು ಸರ್ಕಾರ ತಂದುಕೊಳ್ಳಬಾರದು.

ಅವಘಡದಿಂದ ಯಾವ ಪಾಠ ಕಲಿಯಲಾಗಿದೆ ಎಂಬ ಪ್ರಶ್ನೆಗೆ ಸೂಕ್ತ ಉತ್ತರ ಮಾತ್ರ ಸಿಕ್ಕಿಲ್ಲ

ಸಿಲ್ಕ್ಯಾರಾ: ಮತ್ತೆ ಶುರು ಕಾಮಗಾರಿ

ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ-ಬಡಕೋಟ್ ಸುರಂಗದ ಭಾಗವೊಂದು ಹೋದ ವರ್ಷದ ನವೆಂಬರ್ 12ರಂದು ಕುಸಿದು, ಹದಿನೇಳು ದಿನಗಳ ಕಾಲ ಅಲ್ಲಿ ಸಿಕ್ಕಿಬಿದ್ದಿದ್ದ 41 ಕಾರ್ಮಿಕರನ್ನು ಅಸಾಧಾರಣ ಸಂಘಟಿತ ಕಾರ್ಯಾಚರಣೆಯಿಂದ ರಕ್ಷಿಸಿ ಹೊರತಂದ ಎರಡೂವರೆ ತಿಂಗಳ ನಂತರ, ಸ್ಥಗಿತಗೊಂಡಿದ್ದ ಸುರಂಗದ ಕಾಮಗಾರಿ ಇದೀಗ ಮತ್ತೆ ಪ್ರಾರಂಭವಾಗಿದೆ.

4.5 ಕಿ.ಮೀ. ಉದ್ದದ ಸಿಲ್ಕ್ಯಾರಾ- ಬಡಕೋಟ್ ಸುರಂಗ, ಪ್ರತಿಷ್ಠಿತ ಚಾರ್‌ಧಾಮ್ ಯೋಜನೆಯ ಒಂದು ಭಾಗ. ಈ ಯೋಜನೆಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ನೇಮಿಸಿದ್ದ ಉನ್ನತಾಧಿಕಾರ ಸಮಿತಿಯು 2021ರಲ್ಲಿ ನೀಡಿದ ವರದಿಯಲ್ಲಿ, ‘ಚಾರ್‌ಧಾಮ್ ಯೋಜನೆ ಸಂಪೂರ್ಣವಾಗಿ ಎಂಜಿನಿಯರಿಂಗ್ ಯೋಜನೆಯಾಗಿದೆಯೇ ವಿನಾ, ಪರ್ವತ ಪ್ರದೇಶದ ಹಸಿರು ಹೊದಿಕೆಯ ನಾಶದ ಬಗ್ಗೆ ಅದಕ್ಕೆ ಯಾವ ಕಾಳಜಿಯೂ ಇಲ್ಲ’ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು. ನವೆಂಬರ್ 12ರ ಅವಘಡವು ಎಂಜಿನಿಯರಿಂಗ್ ಯೋಜನೆಯಾದರೂ ಸಂಪೂರ್ಣವಾಗಿ ದೋಷಮುಕ್ತವಾಗಿದೆಯೇ ಎಂಬ ಪ್ರಶ್ನೆಯನ್ನೆತ್ತಿದೆ.

ಈ ಅವಘಡದ ನಂತರ, ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಬಾರ್ಡರ್ ರೋಡ್ ಆರ್ಗನೈಸೇಷನ್‌ನ ಹೆಚ್ಚುವರಿ ಮಹಾನಿರ್ದೇಶಕ ಆರ್.ಕೆ.ಧಿಮಾನ್ ಅವರ ನೇತೃತ್ವದಲ್ಲಿ ಐವರು ಪರಿಣತರನ್ನು ಒಳಗೊಂಡ ಸಮಿತಿಯನ್ನು ನೇಮಿಸಿತು. ಐಐಟಿ ದೆಹಲಿ, ದೆಹಲಿಯ ತಾಂತ್ರಿಕ ವಿಶ್ವವಿದ್ಯಾಲಯ, ರೈಲ್ವೆ ಇಲಾಖೆಯ ಪರಿಣತರನ್ನು ಒಳಗೊಂಡ ಈ ತಂಡವು ಡಿಸೆಂಬರ್ 13- 15ರ ನಡುವೆ ಸುರಂಗಕ್ಕೆ ಭೇಟಿ ಕೊಟ್ಟು, ಅಧ್ಯಯನ ನಡೆಸಿ, ಮುಖ್ಯ ಅಂಶಗಳನ್ನು ಒಳಗೊಂಡ ಪ್ರಾಥಮಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಸಿಲ್ಕ್ಯಾರಾ- ಬಡಕೋಟ್ ಸುರಂಗವು ಪರ್ವತ ಪ್ರದೇಶದ ಮೂಲಕ ಹಾದುಹೋಗುವಾಗ ಪ್ರಬಲವಾದ ‘ಅನುರೂಪಣಾ ವಲಯ’ (ಶಿಯರ್ ಜೋನ್) ಎದುರಾಗುತ್ತದೆ. ಈ ವಲಯದಲ್ಲಿ ಬಲವಾದ ತುಯ್ತಕ್ಕೆ ಒಳಗಾದ ಬಂಡೆಗಳು ತಮ್ಮ ಆಕಾರದಲ್ಲಿನ ಬದಲಾವಣೆಯಿಂದಾಗಿ ವಿರೂಪಗೊಂಡಿವೆ. ಸಿಲ್ಕ್ಯಾರಾ ಭಾಗದ ಶಿಲೆಯು ಬಡಕೋಟ್ ಭಾಗದ ಶಿಲೆಗೆ ಹೋಲಿಸಿದರೆ ದುರ್ಬಲವಾಗಿದ್ದು, ‘ಸ್ಲಿಪ್ ಸರ್ಕ್ಯುಲರ್ ಫೇಲ್ಯೂರ್’ ಆಗುವ ಸಾಧ್ಯತೆಯ ಬಗ್ಗೆ ಯೋಜನೆಯ ಹಂತದಲ್ಲೇ ಎಚ್ಚರಿಕೆ ನೀಡಲಾಗಿತ್ತು. ಇಂತಹ ವಲಯದ ಮೂಲಕ ಸುರಂಗ ಕೊರೆಯುವಾಗ ಅತಿಮುಖ್ಯವಾದ ‘ಸಾಲುಗೂಡಿಕೆ’ಯಲ್ಲಿ (ಅಲೈನ್‌ಮೆಂಟ್) ದೋಷವಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ದುರ್ಬಲ ಶಿಲೆಗಳಿರುವ ವಲಯದಲ್ಲಿ ಕೊರೆದ ಸುರಂಗಕ್ಕೆ ವಿಶೇಷವಾದ, ಬಲವಾದ ಆಧಾರವನ್ನು ಒದಗಿಸಿ ಭದ್ರಗೊಳಿಸಬೇಕು. ಇದರಲ್ಲಿ ಹಲವಾರು ವಿಧಾನಗಳಿವೆ. ಇವು ಸುರಂಗಕ್ಕೆ ಮತ್ತು ಕಾರ್ಮಿಕರಿಗೆ ರಕ್ಷಣೆಯನ್ನು ಒದಗಿಸುತ್ತವೆ. ಈ ಕೆಲಸದಲ್ಲಿ ನ್ಯೂನತೆಗಳಿವೆ ಎಂಬುದು ಪರಿಣತರ ತಂಡ ಗಮನಿಸಿರುವ ಎರಡನೆಯ ಮುಖ್ಯ ಅಂಶ. ಸುರಂಗವನ್ನು ಕೊರೆಯುವಾಗ ಅಲ್ಲಲ್ಲಿ ಸಣ್ಣ ಪ್ರಮಾಣದ ಕುಸಿತಗಳಾಗುವುದು ಸಹಜ. ಆದರೆ ಹಿಂದಿನ ಐದು ವರ್ಷಗಳಲ್ಲಿ 4.5 ಕಿ.ಮೀ. ಉದ್ದದ ಈ ಸುರಂಗದ ಕಾಮಗಾರಿಯಲ್ಲಿ 20 ಬಾರಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕುಸಿತಗಳು ಉಂಟಾಗಿದ್ದರೂ ಅವುಗಳಿಂದ ಯಾವ ಪಾಠವನ್ನೂ ಕಲಿತಿಲ್ಲವೆಂಬ ಟೀಕೆಯೂ ವರದಿಯಲ್ಲಿದೆ. ನ್ಯಾಷನಲ್ ಹೈವೇಸ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ (ಎನ್‌ಎಚ್‌ಐಡಿಸಿಎಲ್) ನೇಮಿಸಿದ್ದ ಪರಿಣತ ಎಂಜಿನಿಯರ್‌ರಿಂದ ಒಪ್ಪಿಗೆ ಪಡೆಯದೇ ಕಾಮಗಾರಿಯ ಪ್ರಕ್ರಿಯೆಯಲ್ಲಿ ಬದಲಾವಣೆ ಮಾಡಿರುವುದು ಮತ್ತು ಎನ್‌ಎಚ್‌ಐಡಿಸಿಎಲ್ ಅಧಿಕಾರಿಗಳ ನಿಗಾವಣೆ ಮತ್ತು ಮೇಲುಸ್ತುವಾರಿಯಲ್ಲಿನ ಕೊರತೆಯನ್ನೂ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಹಿಮಾಚಲ ಪ್ರದೇಶದಲ್ಲಿನ 9.02 ಕಿ.ಮೀ. ಉದ್ದದ ಅಟಲ್ ಸುರಂಗದಲ್ಲಿ, ಮುಖ್ಯ ಸುರಂಗದ ಕೆಳಭಾಗದಲ್ಲಿ ಅಪಾಯದ ಸಂದರ್ಭದಲ್ಲಿ ಪಾರಾಗುವ ಎಸ್ಕೇಪ್ ಸುರಂಗವಿದ್ದು, ಪ್ರತಿ 400 ಮೀಟರ್‌ಗಳಿಗೆ, ಮುಖ್ಯ ಸುರಂಗದಿಂದ ಅದರೊಳಗೆ ಪ್ರವೇಶಿಸುವ ದ್ವಾರವಿದೆ. ಸಿಲ್ಕ್ಯಾರಾ ಸುರಂಗದ ಯೋಜನೆಯ ಹಂತದಲ್ಲಿ ಸರ್ಕಾರಕ್ಕೆ ನೀಡಿದ ‘ಪರಿಸರ ಪರಿಣಾಮ ಮೌಲ್ಯಮಾಪನ’ ವರದಿಯಲ್ಲಿ, 3.5 ಮೀಟರ್ ವ್ಯಾಸದ ‘ಎಸ್ಕೇಪ್ ಟನಲ್’ ನಿರ್ಮಿಸುವಂತೆ ಸೂಚಿಸಲಾಗಿತ್ತು. ಆದರೆ ಅದಕ್ಕೆ ತಗಲುವ ವೆಚ್ಚ ಮತ್ತು ಸಮಯದ ದೃಷ್ಟಿಯಿಂದ ಅದನ್ನು ಕಾರ್ಯಗತಗೊಳಿಸಿಲ್ಲವೆಂಬ ಅಭಿಪ್ರಾಯವಿದೆ.

ಕೇಂದ್ರ ಸರ್ಕಾರ ನೇಮಿಸಿದ್ದ ಪರಿಣತರ ತಂಡವು ರಸ್ತೆ ಮತ್ತು ರೈಲು ಯೋಜನೆಗಳಲ್ಲಿ ಎದುರಾಗುವ ಸುರಂಗ ನಿರ್ಮಾಣದ ಸಮಸ್ಯೆ ಮತ್ತು ಸವಾಲುಗಳನ್ನು ನಿರ್ವಹಿಸಲು ಪ್ರತ್ಯೇಕ ‘ಸುರಂಗ ಕೇಂದ್ರ’ವೊಂದನ್ನು ಸ್ಥಾಪಿಸಬೇಕೆಂಬ ಸಲಹೆ ನೀಡಿದೆ. ‘ಸುರಂಗ ಸುರಕ್ಷತೆ’ ಮತ್ತು ರಕ್ಷಣಾ ಕಾರ್ಯಾಚರಣೆಗೆ ಸಂಬಂಧಿಸಿದಂತೆ ‘ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್’ ಅನ್ನು ರೂಪಿಸಿ ಜಾರಿಗೆ ತರುವಂತೆ ಸೂಚನೆ ನೀಡುವುದರೊಡನೆ, ಹಿಮಾಲಯ ಪರ್ವತ ಶ್ರೇಣಿಯ ಸುರಂಗಗಳ ವಿನ್ಯಾಸ, ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಎಲ್ಲ ಸಂಬಂಧಿತ ಕ್ಷೇತ್ರಗಳ ಪರಿಣತರನ್ನು ಒಳಗೊಂಡ ‘ಕೊಲಾಬೊರೇಟಿವ್ ಜಿಯೊಲಾಜಿಕಲ್ ಪ್ಲಾಟ್‌ಫಾರ್ಮ್’ವೊಂದನ್ನು ಸಂಘಟಿಸಲು ಸಲಹೆ ನೀಡಿದೆ.



ಸಿಲ್ಕ್ಯಾರಾ- ಬಡಕೋಟ್ ಅವಘಡದ ನಂತರ, ಕರ್ನಾಟಕದ 23.6 ಕಿ.ಮೀ. ಉದ್ದದ ಶಿರಾಡಿಘಾಟ್ ಸುರಂಗವೂ ಸೇರಿದಂತೆ ದೇಶದ ಒಂಬತ್ತು ರಾಜ್ಯಗಳಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿರುವ 29 ಸುರಂಗಗಳ ‘ಸುರಕ್ಷತಾ ಪರಿಶೋಧನೆ’ಯ (ಸೇಫ್ಟಿ ಆಡಿಟ್) ಕೆಲಸವನ್ನು ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಪ್ರಾರಂಭಿಸಿದೆ. ಈ ಸುರಂಗಗಳಲ್ಲಿ ಗರಿಷ್ಠ 12 ಸುರಂಗಗಳು ಹಿಮಾಚಲ ಪ್ರದೇಶದಲ್ಲಿದ್ದು ಜಮ್ಮು ಮತ್ತು ಕಾಶ್ಮೀರದಲ್ಲಿ 6 ಸುರಂಗಗಳಿವೆ. ಉಳಿದಂತೆ ಮಹಾರಾಷ್ಟ್ರ, ಒಡಿಶಾ, ರಾಜಸ್ಥಾನದಲ್ಲಿ ತಲಾ 2 ಮತ್ತು ಮಧ್ಯಪ್ರದೇಶ, ಕರ್ನಾಟಕ, ಛತ್ತೀಸಗಢ, ಉತ್ತರಾಖಂಡ ಮತ್ತು ದೆಹಲಿಯ ವ್ಯಾಪ್ತಿಯಲ್ಲಿ ತಲಾ ಒಂದು ಸುರಂಗಗಳಿವೆ. ಈ ನಡುವೆ ಕಟ್ಟಡಗಳ ನಿರ್ಮಾಣಕ್ಕೆ ಮಾನಕ ಅಥವಾ ಪ್ರಮಾಣಕಗಳನ್ನು ರೂಪಿಸುವ ಜವಾಬ್ದಾರಿ ಹೊತ್ತಿರುವ ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್, ಸುರಂಗ ಮತ್ತು ಇನ್ನಿತರ ನೆಲದಾಳದ ಕಾಮಗಾರಿಗಳ ಭಾಗವಾಗಿ, ಅಪಾಯದಿಂದ ತಪ್ಪಿಸಿಕೊಳ್ಳಲು ನೆರವಾಗುವ ‘ಪಾರಾಗುವ ಮಾರ್ಗ’ವನ್ನು ಕಡ್ಡಾಯವಾಗಿ ಸೇರಿಸುವ ದಿಕ್ಕಿನಲ್ಲಿ ಕೆಲಸ ಪ್ರಾರಂಭಿಸಿದೆ. ಸುರಂಗಗಳಿಗೆ ಸಂಬಂಧಿಸಿದಂತೆ ರೂಪುಗೊಳ್ಳುತ್ತಿರುವ ಹೊಸ ಮಾನಕದಲ್ಲಿ, ಮುಖ್ಯ ಸುರಂಗಕ್ಕೆ ಸಮಾನಾಂತರವಾಗಿ ಸಣ್ಣ ವ್ಯಾಸದ ಎಸ್ಕೇಪ್ ಸುರಂಗ ಇರಲಿದ್ದು, ಪ್ರತಿ ಎರಡು ಕಿ.ಮೀಗೆ ಈ ಸುರಂಗಕ್ಕೆ ಪ್ರವೇಶ ಕಲ್ಪಿಸುವ ವ್ಯವಸ್ಥೆಯಿರುವುದು ಕಡ್ಡಾಯವಾಗಲಿದೆ ಎಂಬ ಮಾಹಿತಿಯಿದೆ.

ಸಿಲ್ಕ್ಯಾರಾ ಅನಾಹುತದ ನಂತರ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ದೇಶದಲ್ಲಿ ಮೊದಲ ಬಾರಿಗೆ ‘ನ್ಯಾಷನಲ್ ಟನಲ್ ರೆಸ್ಕ್ಯೂ ಗೈಡ್‌ಲೈನ್ಸ್’ ರೂಪಿಸಲು ಪ್ರಾರಂಭಿಸಿದೆ. ಎಲ್ಲ ಸಂಬಂಧಿತ ಸಂಸ್ಥೆಗಳ ಸಹಯೋಗದಲ್ಲಿ ರೂಪುಗೊಳ್ಳುತ್ತಿರುವ ಮಾರ್ಗದರ್ಶಿ ಸೂತ್ರಗಳ ಕರಡನ್ನು ಚರ್ಚೆ, ಸಲಹೆಗಳಿಗೆ ಬಿಡುಗಡೆ ಮಾಡಿ, ಆನಂತರ ಅಂತಿಮ ರೂಪ ನೀಡುವುದಾಗಿ ಪ್ರಾಧಿಕಾರ ತಿಳಿಸಿದೆ.

ಕೇಂದ್ರ ಸರ್ಕಾರ ನೇಮಿಸಿದ ತಜ್ಞರ ಸಮಿತಿ ವರದಿ ನೀಡಿದ ಒಂದೇ ತಿಂಗಳ ಒಳಗಾಗಿ ಸುರಂಗದ ಕೆಲಸ ಮತ್ತೆ ಪ್ರಾರಂಭವಾಗಿದೆ! ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅನುಮತಿಯ ನಂತರ ಪ್ರಾರಂಭ ಆಗಿರುವ ಈ ಕಾಮಗಾರಿ ಸದ್ಯದಲ್ಲಿ ಸಂಪೂರ್ಣವಾಗಿ ರಕ್ಷಣಾ ಸ್ವರೂಪದಲ್ಲಿ ಇರುವುದಾಗಿ ಎನ್‌ಎಚ್‌ಐಡಿಸಿಎಲ್ ಹಿರಿಯ ಅಧಿಕಾರಿ ಕರ್ನಲ್ ದೀಪಕ್ ಪಾಟೀಲ್ ತಿಳಿಸಿದ್ದಾರೆ.

ಕಾರ್ಮಿಕರ ಸುರಕ್ಷತೆಯ ದೃಷ್ಟಿಯಿಂದ ಅಪಾಯದಿಂದ ಪಾರಾಗುವ ವ್ಯವಸ್ಥೆ ಮಾಡಿ, ಆನಂತರ ಸುರಂಗದಲ್ಲಿರುವ ಮಣ್ಣು, ಕಲ್ಲುಗಳನ್ನು ಹೊರಕ್ಕೆ ಸಾಗಿಸಿ, ನೀರನ್ನು ಹೊರಹರಿಸಿ, ಗೋಡೆ, ಚಾವಣಿಗಳಲ್ಲಿ ಉಂಟಾಗಿರುವ ಟೊಳ್ಳು ಕುಳಿಗಳನ್ನು ಮುಚ್ಚಿ, ಸಂಸ್ಕರಿಸಿದ ನಂತರ ಸುರಂಗ ಕೊರೆಯುವ ಕೆಲಸ ಮುಂದುವರಿಯಲಿದೆ ಎಂದು ಹೇಳಲಾಗಿದೆ. ಈ ಎಲ್ಲ ಬೆಳವಣಿಗೆಗಳ ನಡುವೆ ಸಿಲ್ಕ್ಯಾರ- ಬಡಕೋಟ್ ಅವಘಡದಿಂದ ಯಾವ ಪಾಠವನ್ನು ಕಲಿಯಲಾಗಿದೆ, ಸಂಭವಿಸಿದ ಅನಾಹುತಕ್ಕೆ ಯಾರು ಹೊಣೆ, ಕಾರ್ಮಿಕರ ಸುರಕ್ಷತೆ ಎಷ್ಟರಮಟ್ಟಿಗೆ ಉತ್ತಮಗೊಂಡಿದೆ, ಸುರಕ್ಷತೆಯ ಭರವಸೆಯನ್ನು ಯಾರು ನೀಡಿದ್ದಾರೆ ಎಂಬಂತಹ ಪ್ರಶ್ನೆಗಳಿಗೆ ಸೂಕ್ತ ಉತ್ತರ ದೊರೆತಿಲ್ಲ ಎಂಬುದು ಅನೇಕ ಪರಿಣತರು, ನಾಗರಿಕ ಸಂಘಟನೆಗಳ ಅಭಿಪ್ರಾಯ.

ಚುರುಮುರಿ



ಏನಿಲ್ಲ... ಏನಿಲ್ಲ

• ಬಿ.ಎನ್. ಮಲ್ಲೇಶ್

‘ಏನೋ ಗುಡ್ಡೆ, ಗಡ್ಡ ಬಿಟ್ಟಿದೀಯ, ಏನಸಮಾಚಾರ?’ ದುಬ್ಬೀರ ನಗುತ್ತ ಕೇಳಿದ.

‘ಏನಿಲ್ಲ ಕಣಲೆ... ಸುಮ್ನೆ, ಏನಿಲ್ಲ’ ಎಂದ ಗುಡ್ಡೆ.

‘ಲೇಯ್, ಏನಿಲ್ಲ ಏನಿಲ್ಲ ಅನ್ನಾಕೆ ಇದು ಅಸೆಂಬ್ಲಿ ಅಲ್ಲ, ಹರಟೆಕಟ್ಟೆ. ಸರಿಯಾಗಿ ಮಾತಾಡು...’

‘ಅಲೆ ಇವ್ನ, ನಾನು ಸರಿಯಾಗೇ ಮಾತಾಡ್ತಿರಾದು. ಅಸೆಂಬ್ಲಿ ಆಗಿದ್ರೆ ಬಾಯಿಗೆ ಬಂದಂಗೆ ಮಾತಾಡ್ತಿದ್ದೆ’ ಗುಡ್ಡೆಗೆ ಸಿಟ್ಟು ಬಂತು.

‘ಅಂದ್ರೆ ಅಸೆಂಬ್ಲೀಲಿ ಏನು ಬೇಕಾದ್ರು ಮಾತಾಡ್ಬೋದಾ?’ ತೆಪರೇಸಿ ಪ್ರಶ್ನೆ.

‘ಏನೋಪ್ಪ, ಅಸೆಂಬ್ಲೀಲಿ ಯಕ್ಕಾಮಕ್ಕಾ ಬೈದಾಡ್ತಾರೆ, ಹೊರಗೆ ಹೆಗಲ ಮೇಲೆ ಕೈ ಹಾಕ್ಕಂಡು ನಗ್ತಾ ನಗ್ತಾ ಓಡಾಡ್ತಾರೆ. ಕೇಳಿದ್ರೆ ಏನಿಲ್ಲ ಏನಿಲ್ಲ ಅಂತಾರೆ...’ ಕೊಟ್ರ ನಕ್ಕ.

‘ಲೇಯ್ ರಾಜಕೀಯ ಅಂದ್ರೆ ಹಂಗೇ... ರಾತ್ರೋರಾತ್ರಿ ಬೇರೆ ಪಕ್ಷದೋರ ಜತಿಗೆ ಡೆಲ್ಲಿಗೆ ಹಾರ್ತಾರೆ, ಕೇಳಿದ್ರೆ ಕಾಫಿ ಕುಡಿಯಾಕೋಗಿದ್ವಿ ಅಂತಾರೆ... ಬೇರೆ ಪಕ್ಷದೋರ ಜತಿ ಮೀಟಿಂಗ್ ಮಾಡ್ತಾರೆ, ಕೇಳಿದ್ರೆ ಏನಿಲ್ಲ, ಉಣ್ಣಾಕೆ ಕರೆದಿದ್ರು ಹೋಗಿದ್ವಿ ಅಂತಾರೆ... ಟೀವಿಯೋರು ಬಾಯಿ ಬಿಡಿಸೋಕೆ ತಿಪ್ಪರಲಾಗ ಹಾಕಿದ್ರೂ ಒಂದೇ ಮಾತು... ಏನಿಲ್ಲ, ಏನಿಲ್ಲ...’ ದುಬ್ಬೀರ ಅನುಭವದ ಮಾತಾಡಿದ.

‘ಈ ರಾಜಕಾರಣಿಗಳು ಎಲ್ಲಿ ಏನಿಲ್ಲ ಅಂತಾರೋ ಅಲ್ಲಿ ಏನೋ ಐತಿ ಅಂತ ಅರ್ಥ...’ ಮಂಜಮ್ಮ ನಕ್ಕಳು.

‘ಏನಿಲ್ಲ ಏನಿಲ್ಲ ಅಂತ ಯಾರಾದ್ರೂ ಅನ್ನಿ, ನಿಮ್ ಹೆಂಡ್ತಿದೀರು ಮಾತ್ರ ‘ಏನಿಲ್ಲ, ಏನಿಲ್ಲ... ಕರಿಮಣಿ ಮಾಲೀಕ ನೀನಲ್ಲ’ ಅಂತ ಅನ್ನದಂಗೆ ನೋಡ್ಕಳಿ ಸಾಕು’ ಕೊಟ್ರ ಕಿಸಕ್ಕೆಂದ.

‘ಲೇ ತಗಡು, ಅವರು ಯಾಕೆ ಹಂಗಂತಾರಲೆ, ಸುಮ್ನೆ ಗುಮ್ಮಿಸ್ಕಾಬೇಡ ನನ್ನತ್ರ...’ ತೆಪರೇಸಿ ರಾಂಗಾದ.

‘ಏನು? ನನ್ನೇ ತಗಡು ಅಂತೀಯ, ಯಾಕಲೆ?’ ಕೊಟ್ರನೂ ಸಿಟ್ಟಿಗೆದ್ದ.

‘ತಕ್ಷಣ ಮಧ್ಯಪ್ರವೇಶಿಸಿದ ದುಬ್ಬೀರ ‘ಏಯ್, ಶಾಂತಿ ಶಾಂತಿ... ತಗಡು ಅಂದ್ರೆ ಚಿನ್ನದ್ದು ಕಣಲೆ, ಅದಕ್ಯಾಕ್ ಸಿಟ್ ಮಾಡ್ಕಂತಿ’ ಅಂದ. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ಆರ್‌ಟಿಐ ದುರ್ಬಲವಾಗದಿರಲಿ

ಆರ್‌ಟಿಐನಿಂದ ಬಹಿರಂಗಗೊಂಡಿದೆ– ಮುಂಬೈನ ಓಶಿವಾರದಲ್ಲಿ 2,000 ಚದರ ಮೀಟರ್ ವಿಸ್ತೀರ್ಣದ, ₹ 70 ಕೋಟಿ ಮೌಲ್ಯದ ಜಾಗವನ್ನು ನೃತ್ಯ ಅಕಾಡೆಮಿ ಸ್ಥಾಪಿಸುವ ಸಲುವಾಗಿ ಕೇವಲ ₹ 1.75 ಲಕ್ಷಕ್ಕೆ ಹೇಮಾಮಾಲಿನಿ ಅವರಿಗೆ ಮಂಜೂರು ಮಾಡಲಾಗಿದೆ. ಆರ್‌ಟಿಐ ಅನ್ನು ಕ್ರಮೇಣ ದುರ್ಬಲಗೊಳಿಸುತ್ತಿರುವುದೇಕೆ ಎಂಬುದು ನಿಮಗೆ ಈಗ ಗೊತ್ತಾಗಬಹುದು!

ಸಂದೀಪ್ ಮನುಧಾನೆ, ಉದ್ಯಮಿ

ಕಿಡಿನುಡಿ



ಕಾಂಗ್ರೆಸ್ ಪ್ರಕಾರ ರಾಜ್ಯದಲ್ಲಿ ಬರ ಪರಿಸ್ಥಿತಿ ಇಲ್ಲ. ಮುಖ್ಯಮಂತ್ರಿಯೂ ಅದೇ ಭ್ರಮೆಯಲ್ಲಿ ಇದ್ದಾರೆ. ಹೀಗಾಗಿಯೇ ಪರಿಹಾರ ಕಾಮಗಾರಿ ಕೈಗೊಳ್ಳುತ್ತಿಲ್ಲ. ಲೋಕಸಭಾ ಚುನಾವಣೆ ಬಗ್ಗೆಯೂ ಆತಂಕವಿದ್ದು, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ವ್ಯರ್ಥ ಪ್ರಯತ್ನ ನಡೆಯುತ್ತಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಮಂಗಳವಾರ, 23-2-1999

• **ಬಿಹಾರ: ರಾಷ್ಟ್ರಪತಿ ಆಳ್ವಿಕೆ ಜಾರಿ ನಿರ್ಣಯಕ್ಕೆ ಕಾಂಗ್ರೆಸ್ ವಿರೋಧ**

ನವದೆಹಲಿ, ಫೆ. 22– ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತಂದ ಕ್ರಮವನ್ನು ದೃಢೀಕರಿಸುವ ಗೊತ್ತುವಳಿಯನ್ನು ಸಂಸತ್ತಿನಲ್ಲಿ ವಿರೋಧಿಸಲು ಕಾಂಗ್ರೆಸ್ ಪಕ್ಷ ಇಂದು ನಿರ್ಧರಿಸಿದ್ದು, ‘ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಅಳಿವು- ಉಳಿವಿನ ಚಿಂತೆ ನಮಗಿಲ್ಲ’ ಎಂದು ಸ್ಪಷ್ಟಪಡಿಸಿದೆ.

ವಾಜಪೇಯಿ ನೇತೃತ್ವದ ಸರ್ಕಾರ ಅಲ್ಪ ಬಹುಮತ ಹೊಂದಿರುವುದರಿಂದ, ಕಾಂಗ್ರೆಸ್ ನಿರ್ಧಾರವು 11 ತಿಂಗಳ ಸರ್ಕಾರವನ್ನು ಗಂಭೀರ ರಾಜಕೀಯ ಬಿಕ್ಕಟ್ಟಿಗೆ ತಳ್ಳಿದೆ.

• **ಸಹಪಾಠಿ ಸಾವು: ಮಕ್ಕಳ ಪ್ರತಿಭಟನೆ**

ಹುಬ್ಬಳ್ಳಿ, ಫೆ. 22– ಶಾಲಾ ಮಕ್ಕಳು ಒಂದೂವರೆ ಗಂಟೆ ಕಾಲ ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಧರಣಿ ಕುಳಿತು ರಸ್ತೆತಡೆ ನಡೆಸಿ ವಾಹನ ಸಂಚಾರ ಅಸ್ತವ್ಯಸ್ತಗೊಳಿಸಿದ ಘಟನೆ ಇಂದು ಹುಬ್ಬಳ್ಳಿಯ ವಿದ್ಯಾನಗರದಲ್ಲಿ ನಡೆಯಿತು.

ಮಹಿಳೆಯರ ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿರುವ ಕಿರಿಯ ತಾಂತ್ರಿಕ ಶಾಲೆಯ 8ನೇ ತರಗತಿ ವಿದ್ಯಾರ್ಥಿ, ಅಯೋಧ್ಯಾನಗರ ನಿವಾಸಿ ಯಲ್ಲಪ್ಪ ಅವರ ಏಕೈಕ ಪುತ್ರ ಶ್ಯಾಮ ಕುಮಾರ ಹುಕ್ಕೇರಿ (14) ತನ್ನ ಶಾಲೆಯ ಎದುರಲ್ಲೇ, ವೇಗವಾಗಿ ಹೊರಟಿದ್ದ ಟೆಂಪೊದ ಅಡಿಗೆ ಸಿಲುಕಿ ಮೃತಪಟ್ಟ. ಅದನ್ನು ಕಂಡು ತಲ್ಲಣಿಸಿದ ಎರಡೂ ಸಂಸ್ಥೆಗಳ ವಿದ್ಯಾರ್ಥಿಗಳು ಅಧ್ಯಾಪಕರ ಮನವಿಯನ್ನೂ ಲೆಕ್ಕಿಸದೆ ರಸ್ತೆಗಿಳಿದು ಧರಣಿ ಕುಳಿತುಬಿಟ್ಟರು.

ಹೆದ್ದಾರಿಯಲ್ಲಿ ಜೀಬ್ರಾ ಕ್ರಾಸಿಂಗ್ ಹಾಕಿಸಿ, ವಾಹನ ನಿಯಂತ್ರಣಕ್ಕಾಗಿ ಟ್ರಾಫಿಕ್ ಪೊಲೀಸ್ ಕಾನ್‌ಸ್ಟೆಬಲ್ ವ್ಯವಸ್ಥೆ ಮಾಡುವುದಾಗಿ ಡಿಸಿಪಿ ಸುರೇಶ ಅವರು ಭರವಸೆ ನೀಡಿದ ಬಳಿಕ ಮಕ್ಕಳು ತಮ್ಮ ಧರಣಿ ತೆರವುಗೊಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 23-2-1974

• **ಬಾಂಗ್ಲಾದೇಶಕ್ಕೆ ಪಾಕ್ ಮಾನ್ಯತೆ ಅಧಿಕೃತ ಪ್ರಕಟಣೆ**

ಲಾಹೋರ್, ಫೆ. 22– ಬಾಂಗ್ಲಾದೇಶಕ್ಕೆ ಪಾಕಿಸ್ತಾನವು ರಾಜತಾಂತ್ರಿಕ ಮನ್ನಣೆ ನೀಡಿದೆಯೆಂದು ಇಂದು ಇಲ್ಲಿ ಅಧಿಕೃತವಾಗಿ ಪ್ರಕಟಿಸಲಾಯಿತು.

ಪಾಕಿಸ್ತಾನದ ಹಿತಾಸಕ್ತಿ ಹಾಗೂ ಇಸ್ಲಾಂ ರಾಷ್ಟ್ರಗಳ ಐಕಮತ್ಯ ರಕ್ಷಣೆ ದೃಷ್ಟಿಯಿಂದ ನೀಡಲಾಗಿರುವ ಈ ಮನ್ನಣೆ ಇಂದಿನಿಂದಲೇ ಜಾರಿಗೆ ಬರುವುದೆಂದು ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೊ ಹೇಳಿದರು.

ಪಾಕಿಸ್ತಾನದಿಂದ ಒಡೆದುಹೋಗಿ, ಸ್ವತಂತ್ರ ರಾಷ್ಟ್ರವಾಗಿ ಉದಯಿಸಿದ 26 ತಿಂಗಳ ಬಳಿಕ ಅಪಾರ ರಾಜಕೀಯ ಚೌಕಾಸಿಯ ನಂತರ ನೀಡಲಾದ ಮಾನ್ಯತೆಯನ್ನು ಗೌರ್ನರ್‌ಗಳು, ಮುಖ್ಯಮಂತ್ರಿಗಳು ಹಾಗೂ ರಾಷ್ಟ್ರೀಯ ಅಸೆಂಬ್ಲಿ ಸದಸ್ಯರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಭುಟ್ಟೊ ಪ್ರಕಟಿಸಿದರು.

ಸಂಗತ

ಅನರ್ಹರಿಗೆ ಒರತೆ, ಅರ್ಹರಿಗೆ ಕೊರತೆ!

ನಕಲಿ ಫಲಾನುಭವಿಗಳ ಹಾವಳಿಯಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತದೆ ಮಾತ್ರವಲ್ಲ, ಬಡವರಿಗೆ ನೆರವಾಗಬೇಕೆನ್ನುವ ಘನವಾದ ಉದ್ದೇಶಕ್ಕೆ ಹಿನ್ನಡೆಯಾಗುತ್ತದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಬೆಳಗಲಿ ಗ್ರಾಮದ ಪೀರ್ ಸಾಬ್‌ಗೆ ಐವರು ಬುದ್ಧಿಮಾಂದ್ಯ ಮಕ್ಕಳಿದ್ದಾರೆ. ಅವರ ಪೋಷಣೆಗಾಗಿ ಪೀರ್ ಸಾಬ್, ಸರ್ಕಾರದಿಂದ ಯಾವ ಸಹಾಯವನ್ನೂ ಪಡೆಯುವುದಿಲ್ಲ. ಮಕ್ಕಳಿಗೆ ಸಹಾಯಧನ ಪಡೆಯಲು ಹಿತೈಷಿಗಳು ಎಷ್ಟೇ ಒತ್ತಾಯ ಮಾಡಿದರೂ ಅವರು ಅರ್ಜಿ ಸಲ್ಲಿಸಿಲ್ಲ. ‘ಸರ್ಕಾರಿ ಸಹಾಯ ಬೇಡ ಎಂಬ ಗಟ್ಟಿ ನಿಲುವು ಯಾಕೆ ನಿಮಗೆ?’ ಎಂದು ಈಚೆಗೆ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಕೇಳಿದೆ. ಅವರು ಕೊಟ್ಟ ಉತ್ತರವು ಲೋಕದ ಕಣ್ಣು ತೆರೆಸುವಂತೆ ಇತ್ತು. ‘ನನಗೆ ಸ್ವಲ್ಪ ಭೂಮಿ ಇದೆ. ಕಬ್ಬು ಬೆಳೆಯುತ್ತೇನೆ. ಎಮ್ಮೆ, ಆಕಳು, ಕುರಿ, ಕೋಳಿ ಸಾಕಿರುವೆ. ಮಕ್ಕಳು ನನ್ನೊಂದಿಗೆ ಅಲ್ಪಸ್ವಲ್ಪ ಕೆಲಸ ಮಾಡುತ್ತಾರೆ. ಹಜ್ ಯಾತ್ರೆಗೆ ಹೋಗಿ ಬಂದಿದ್ದೇನೆ. ಹಜ್ ಯಾತ್ರೆ ಮಾಡಿದವರು ಪರರ ದುಡ್ಡಿಗೆ ಆಸೆಪಡಬಾರದು. ನನಗೆ ಹರಾಮಿ ದುಡ್ಡು ಬೇಡ’ ಎಂದು ಹೇಳಿದರು.

ಸರ್ಕಾರದ ಸೌಲಭ್ಯಗಳನ್ನು ಗಿಟ್ಟಿಸಲು ಹವಣಿಸುತ್ತಿರುವವರ ನಡುವೆ ಪೀರ್ ಸಾಬ್ ಒಂದು ಬೆಳ್ಳಿ ಗೆರೆಯ ಹಾಗೆ ಕಾಣುತ್ತಾರೆ.

‘ಬಡವರಿಗಾಗಿ ಜಾರಿಯಲ್ಲಿರುವ ಬಗರ್‌ಹುಕುಂ ಯೋಜನೆಯನ್ನು ಬಲಾಢ್ಯರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. 18 ವರ್ಷ ವಯಸ್ಸಾಗದವರೂ 18 ವರ್ಷ ಸಾಗುವಳಿ ಮಾಡಿರುವುದಾಗಿ ಅರ್ಜಿ ಸಲ್ಲಿಸಿದ್ದಾರೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸದನದಲ್ಲಿ ಹೇಳಿರುವುದನ್ನು ಓದಿದಾಗ (ಪ್ರ.ವಾ., ಫೆ. 20) ಪೀರ್ ಸಾಬ್ ಕಣ್ಣ ಮುಂದೆ ಬಂದರು.

ಸರ್ಕಾರದ ಐದು ಗ್ಯಾರಂಟಿಗಳು ಸೇರಿದಂತೆ ವೃದ್ಧಾಪ್ಯ ವೇತನ, ಪರಿಶಿಷ್ಟ ಜಾತಿ, ಪಂಗಡದವರಿಗೆ ನೀಡುವ ಸೌಲಭ್ಯ, ಬಡ ಮಹಿಳೆಯರಿಗೆ ಕೊಡುವ ವಿಶೇಷ ನೆರವು, ಅಂಗವಿಕಲರಿಗೆ ಕೊಡುವ ಸಹಾಯಧನದಂತಹ ಸೌಲಭ್ಯಗಳನ್ನು ನಕಲಿ ದಾಖಲೆ ಸೃಷ್ಟಿಸಿ ಪಡೆದುಕೊಳ್ಳುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಡುವ ಏಜೆಂಟರು ಗಲ್ಲಿ ಗಲ್ಲಿಗಳಲ್ಲಿ ಹುಟ್ಟಿಕೊಂಡಿದ್ದಾರೆ. ನಕಲಿ ಫಲಾನುಭವಿಗಳ ಹಾವಳಿಯಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತದೆ ಮಾತ್ರವಲ್ಲ, ಬಡವರಿಗೆ ನೆರವಾಗಬೇಕೆನ್ನುವ ಘನವಾದ ಉದ್ದೇಶಕ್ಕೆ ಹಿನ್ನಡೆಯಾಗುತ್ತದೆ.

‘ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ರಾಜ್ಯ ಕಾರ್ಮಿಕರ ಕಲ್ಯಾಣ ಮಂಡಳಿ ನೀಡುವ ಕಾರ್ಮಿಕರ ಕಾರ್ಡುಗಳನ್ನು ನಕಲಿ ದಾಖಲೆ ಸೃಷ್ಟಿಸಿ ಅತಿ ಹೆಚ್ಚು ಜನ ಪಡೆದಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ 3 ಲಕ್ಷ ಕಾರ್ಡ್‌ಗಳನ್ನು ವಿತರಿಸಲಾಗಿತ್ತು. ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಿದಾಗ, ಇದರಲ್ಲಿ 2.70 ಲಕ್ಷ ಅನರ್ಹ ಫಲಾನುಭವಿಗಳು ಪತ್ತೆಯಾಗಿದ್ದಾರೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಕೂಡ ಅಧಿವೇಶನದಲ್ಲಿ (ಪ್ರ.ವಾ., ಫೆ. 14) ಹೇಳಿದ್ದಾರೆ. ನಕಲಿ ಫಲಾನುಭವಿಗಳ ಪ್ರಮಾಣ ಶೇ 90ರಷ್ಟಿದೆ ಎಂಬುದು ನಿಜಕ್ಕೂ ಗಂಭೀರವಾದ ಸಮಸ್ಯೆ.

ಯೋಜನೆಗಳನ್ನು ಜಾರಿಗೆ ತರುವ ಸರ್ಕಾರಿ ಸಿಬ್ಬಂದಿ ಕೂಡ ನಕಲಿ ಫಲಾನುಭವಿಗಳಾಗಿರುವುದು ಬೇಲಿಯೇ ಎದ್ದು ಹೊಲ ಮೇಯುತ್ತಿರುವಂತೆ ಕಾಣುತ್ತಿದೆ.

ನಿವೃತ್ತ ಮುಖ್ಯ ಅಧ್ಯಾಪಕರೊಬ್ಬರು ಅಪಘಾತದಲ್ಲಿ ಕಾಲು ಮುರಿದುಕೊಂಡಿದ್ದರು. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಮಗೆ ₹ 3 ಲಕ್ಷ ಕೊಡಿಸಬೇಕು ಎಂದು ಸ್ಥಳೀಯ ಶಾಸಕರಿಗೆ ಮನವಿ ಸಲ್ಲಿಸಿದ್ದರು. ‘ತುಂಬಾ ಸ್ಥಿತಿವಂತರು. ಊರ ತುಂಬಾ ಬಡ್ಡಿಗೆ ಹಣ ಹೂಡಿದ್ದೀರಿ. ಪಿಂಚಣಿ ಬರುತ್ತಿದೆ. ಮುಖ್ಯಮಂತ್ರಿಯವರ ಪರಿಹಾರ ನಿಧಿ ಪಡೆಯುವುದು ಬೇಡ’ ಎಂದು ಶಾಸಕರು ಸ್ವಲ್ಪ ಖಾರವಾಗಿ ಹೇಳಿ ಕಳಿಸಿದ್ದರು. ಪಟ್ಟು ಬಿಡದ ಅವರು ತಮಗೆ ಆಪ್ತರಾಗಿರುವ ವಿಧಾನಪರಿಷತ್ ಸದಸ್ಯರೊಬ್ಬರನ್ನು ಹಿಡಿದು ಪರಿಹಾರ ನಿಧಿ ಪಡೆದುಕೊಂಡಿದ್ದಾರೆ. ಇದು ಸಾಧನೆ ಎಂದು ಅವರು ಹೇಳಿಕೊಳ್ಳುವುದನ್ನು ಕೇಳಿದರೆ ಬೇಸರವಾಗುತ್ತದೆ.

ಉಳ್ಳವರೇ ಎಲ್ಲ ಸವಲತ್ತುಗಳನ್ನು ಸುಲಭವಾಗಿ ಪಡೆದುಕೊಳ್ಳುತ್ತಾರೆ, ಬಡವರಿಗೆ ಸೂಕ್ತ ದಾಖಲೆಗಳನ್ನು ಒದಗಿಸುವುದು ಆಗುವುದಿಲ್ಲ ಎಂದು ಹೇಳುತ್ತದೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿಯ ದತ್ತಾಂಶ. ಬಡವರಿಗೆ ಅರ್ಜಿ ಸಲ್ಲಿಸುವುದಕ್ಕೆ ಬೇಕಾಗುವ ಹಣ, ಮಾಹಿತಿಯ ಕೊರತೆ, ಕೀಳರಿಮೆಯಿಂದಾಗಿ ಪೂರ್ಣ ಪ್ರಮಾಣದಲ್ಲಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಈ ವರದಿ ವಿಶ್ಲೇಷಣೆ ಮಾಡಿದೆ.

ಅನರ್ಹರಿಗೆ ಶಿಕ್ಷೆಯಾಗುವುದಿಲ್ಲ. ಅವರಿಗೆ ಪಡೆದ ಸೌಲಭ್ಯದ ಮೊತ್ತವನ್ನು ಅವರಿಂದ ವಾಪಸ್ ಪಡೆಯುವುದಿಲ್ಲ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿ ಅನರ್ಹರಿಗೆ ಸೌಲಭ್ಯ ದೊರಕಿಸಿಕೊಟ್ಟಿರುತ್ತಾರೆ. ಹೀಗಾಗಿ, ಯಾವುದೇ ಕ್ರಮ ಜರುಗುವುದಿಲ್ಲ. ಇದರಿಂದಾಗಿ, ಅಕ್ರಮ ಬಳಕೆ ವಿಪರೀತವಾಗಿ ಬೆಳೆದಿದೆ ಎಂದು ತಜ್ಞರು ಹೇಳುತ್ತಾರೆ.

ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿಕೊಂಡು ಅನರ್ಹರಿಗೆ ಸೌಲಭ್ಯ ದೊರಕಿಸಿಕೊಡುವುದು ಸಾಂಸ್ಥಿಕ ಸ್ವರೂಪದ ಕಳ್ಳತನವೇ ಆಗಿದೆ ಎಂದು ವಕೀಲ ರವೀಂದ್ರ ಹಳಿಂಗಳಿ ಅವರು ‘ಸಂಪತ್ತಿನ ಸ್ವರೂಪ’ ಗ್ರಂಥದಲ್ಲಿ ಹೇಳಿರುವ ಸಂಗತಿ ಗಮನಾರ್ಹವಾಗಿದೆ. ನಕಲಿ ಸೌಲಭ್ಯ ಪಡೆಯುವ ಕೃತ್ಯದಲ್ಲಿ ಶಾಮೀಲಾದವರಿಗೆಲ್ಲ ಶಿಕ್ಷೆ ಆಗಬೇಕು.

ವಿಜ್ಞಾನ, ತಂತ್ರಜ್ಞಾನ ಬಹಳಷ್ಟು ಬೆಳೆದಿದೆ. ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಇನ್ನು ಕೆಲವು ದಾಖಲೆಗಳ ಮೂಲಕ ನಕಲಿ ಅರ್ಜಿಗಳನ್ನು ಸುಲಭವಾಗಿ ಗುರುತಿಸಿ ತಿರಸ್ಕರಿಸಬಹುದು. ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಬದ್ಧತೆಯಿಂದ ಕೆಲಸ ಮಾಡಿದರೆ ಮಾತ್ರ ನಕಲಿ ಹಾವಳಿ ತಡೆಯಬಹುದು. ಇದೊಂದು ಜಾಗೃತಿ ಅಭಿಯಾನವಾಗಿ ನಡೆಯಬೇಕು.

ವಾಚಕರ ವಾಣಿ

ತಿರಸ್ಕೃತ ಮತ: ಅರಿವಿನ ಕೊರತೆ?

ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಯಲ್ಲಿ ಚಲಾಯಿತವಾದ 16,541 ಮತಗಳಲ್ಲಿ 1,239 ಮತಗಳು ತಿರಸ್ಕೃತಗೊಂಡಿವೆ ಎಂಬ ವರದಿ ನೋಡಿ ಅಚ್ಚರಿಯಾಯಿತು. ಶಿಕ್ಷಕರು ಅಂದರೆ ಗುರುಗಳು, ಇತರರಿಗೆ ಮಾರ್ಗದರ್ಶನ ನೀಡುವವರು, ಬಲ್ಲವರು ಎಂಬ ನಂಬಿಕೆ ಇದೆ. ಆದರೆ ಅಂತಹ ಶಿಕ್ಷಕರೇ ಮತದಾರರಾಗಿರುವ ಈ ಚುನಾವಣೆಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಮತಗಳು ತಿರಸ್ಕೃತಗೊಂಡಿವೆಯೆಂದರೆ, ಇದಕ್ಕೆ ಅವರ ಬೇಜವಾಬ್ದಾರಿತನ ಅಥವಾ ತಿಳಿವಳಿಕೆಯ ಕೊರತೆ ಈ ಎರಡರಲ್ಲಿ ಯಾವುದಾದರೊಂದು ಕಾರಣವಾಗಿರುತ್ತದೆ ಎಂಬುದು ದಿಟ. ಶಿಕ್ಷಕರಿಂದಲೇ ಈ ರೀತಿಯಾದರೆ ಉಳಿದವರ ಪಾಡೇನು?

ಶಿಕ್ಷಕರು ಚುನಾವಣೆಯನ್ನು ಲಘುವಾಗಿ ಪರಿಗಣಿಸದೆ ತಮ್ಮ ಮೂಲಭೂತ ಹಕ್ಕನ್ನು ಜವಾಬ್ದಾರಿಯುತವಾಗಿ ಚಲಾಯಿಸುವಂತೆ ಆಗಲಿ. ಮತದಾನ ಮಾಡುವಾಗ ಪ್ರಬುದ್ಧತೆ ತೋರಿ ಇತರರಿಗೆ ಮಾದರಿಯಾಗಲಿ.

ಸಲೀಮ್ ಬೋಳಂಗಡಿ, ಮಂಗಳೂರು

ಪ್ರಜ್ಞಾವಂತರಿಗೂ ಆಮಿಷ!

ವಿಧಾನ ಪರಿಷತ್ ಶಿಕ್ಷಕರ ಕ್ಷೇತ್ರದ ಉಪಚುನಾವಣೆಯಲ್ಲಿ ಕೆಲವರು ಶಿಕ್ಷಕರಿಗೆ ಹಣ, ಬೆಳ್ಳಿ ಬಟ್ಟಲಿನ ಅಮಿಷ ಒಡ್ಡಿ ಮತ ಕೇಳಿದ್ದಾರೆ ಎನ್ನಲಾಗಿದ್ದು, ಇದು ಚರ್ಚಾರ್ಹವಾದ ವಿಷಯವಾಗಿದೆ. ಶಿಕ್ಷಕರಿಗೇ ಆಸೆ- ಆಮಿಷ ಒಡ್ಡುತ್ತಾರೆ ಎಂದ ಮೇಲೆ ಇನ್ನು ಜನಸಾಮಾನ್ಯರನ್ನು ಬಿಡುವರೇ?

ಉತ್ತಮ ವ್ಯಕ್ತಿಗಳು ಚುನಾವಣೆಗೆ ನಿಂತು ಸೋಲುಂಡ ಅನೇಕ ಉದಾಹರಣೆಗಳಿವೆ. ಚುನಾವಣೆಯಲ್ಲಿ ಗೆಲ್ಲಲು ಕೆಲವು ಬಾರಿ ವಾಮಮಾರ್ಗ ಅನುಸರಿಸಿ ಅದು ಬೆಳಕಿಗೆ ಬಾರದೇ ಮುಚ್ಚಿಹೋಗುವುದೂ ಇದೆ. ಒಳ್ಳೆಯವರು ಆಯ್ಕೆಯಾಗಬೇಕು ಎಂದು ಬಹಿರಂಗವಾಗಿ ಹೇಳಿದರೆ ಸಾಲದು, ಅಂತಹದ್ದೊಂದು ನಿರ್ಧಾರ ಜನರ ಅಂತರಂಗದಲ್ಲಿ ಆದಾಗಷ್ಟೇ ಅದು ಕಾರ್ಯರೂಪಕ್ಕೆ ಬರಲು ಸಾಧ್ಯ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಜಾತ್ರೆಯ ಸಂಭ್ರಮಕ್ಕೆ ಕಪ್ಪುಚುಕ್ಕೆ

ಮಾರ್ಚ್– ಏಪ್ರಿಲ್ ತಿಂಗಳುಗಳೆಂದರೆ ನಾಡಿನಾದ್ಯಂತ ಊರದೇವರ ಜಾತ್ರೆಗಳ ಸಂಭ್ರಮ. ಯುವಕರು ಮಜ್ಜಿಗೆ, ಪಾನಕ, ಪ್ರಸಾದವನ್ನು ಸಂಭ್ರಮದಿಂದ ಹಂಚುತ್ತಾರೆ. ಇದು ನಿಜಕ್ಕೂ ಸಂತೋಷದ ವಿಚಾರ. ಆದರೆ ಅದಕ್ಕಾಗಿ ಯಥೇಚ್ಛವಾಗಿ ಏಕಬಳಕೆಯ ಪ್ಲಾಸ್ಟಿಕ್ ತಟ್ಟೆ, ಲೋಟಗಳನ್ನು ಬಳಸುವುದು ಮಾತ್ರ ಆತಂಕಕಾರಿ. ಜಾತ್ರೆಯ ಸಂಭ್ರಮ ಮುಗಿದ ನಂತರ ಊರಿನ ಮುಂದೆ ಗುಡ್ಡೆಯಾಗಿ ಬೀಳುವ ಈ ಪ್ಲಾಸ್ಟಿಕ್, ಬಹಳ ದಿನಗಳವರೆಗೆ ಹಾಗೇ ಬಿದ್ದಿರುತ್ತದೆ. ಸ್ವಚ್ಛತಾ ಕಾರ್ಯ ಕೈಗೊಂಡರೂ ಅದನ್ನು ಊರಿನ ಮತ್ತೊಂದು ಮೂಲೆಯಲ್ಲಿ ಎಸೆಯಲಾಗುತ್ತದೆ.

ಏಕಬಳಕೆಯ ಪ್ಲಾಸ್ಟಿಕ್ ಮಣ್ಣಿನಲ್ಲಿ ಮಣ್ಣಾಗಲು ಹಲವಾರು ವರ್ಷಗಳೇ ಬೇಕು. ಪ್ರತಿವರ್ಷ ಹೀಗೆ ಪ್ಲಾಸ್ಟಿಕ್ ಸಂಗ್ರಹವಾದರೆ, ಅದು ಮಣ್ಣಿನೊಳಗೆ ಸೇರಿಕೊಳ್ಳುತ್ತದೆ. ಪರಿಸರಕ್ಕೆ ಹಾನಿ ಮಾಡುತ್ತದೆ. ಈ ವಿಚಾರ ತಿಳಿದಿದ್ದರೂ ನಮ್ಮ ಯುವಕರು ಪ್ರತಿಷ್ಠೆಗಾಗಿ ಪ್ಲಾಸ್ಟಿಕ್ ತಟ್ಟೆ, ಲೋಟಗಳನ್ನು ಬಳಸುವುದು ತರವಲ್ಲ. ಮರುಬಳಕೆ ಮಾಡುವ ಸ್ಟೀಲ್ ವಸ್ತುಗಳನ್ನು ಬಳಸಿ ಊರಿನ ಮಣ್ಣಿನ ಫಲವತ್ತತೆ ಮತ್ತು ನೈರ್ಮಲ್ಯವನ್ನು ಕಾಪಾಡಬೇಕು. ಸ್ಥಳೀಯ ಪಂಚಾಯಿತಿಗಳು, ಪ್ರಾಧಿಕಾರಗಳು ಈ ಬಗ್ಗೆ ಜಾಗೃತಿ ಮೂಡಿಸಿ, ನಿಗಾ ವಹಿಸುವ ಅವಶ್ಯಕತೆ ಇದೆ.

ಎಸ್.ರವಿ, ಮೈಸೂರು

ಕೊಳವೆಬಾವಿ: ಬೇಕಾಗಿದೆ ಜಾಗೃತಿ

ರಾಜ್ಯದಲ್ಲಿ ಬರದಿಂದ ಕುಡಿಯುವ ನೀರಿನ ಸಮಸ್ಯೆ ಹಾಗೂ ಕೃಷಿಗೆ ನೀರಿನ ಕೊರತೆ ಎದುರಾಗಿದೆ. ಇದಕ್ಕೆ ಶಾಸಕರು, ಅಧಿಕಾರಿಶಾಹಿ, ರೈತರು ಕಂಡುಕೊಂಡ ಪರಿಹಾರವೆಂದರೆ ಕೊಳವೆಬಾವಿ ಕೊರೆಸುವುದು. ಈ ಕ್ರಮದಿಂದ ಅಂತರ್ಜಲ ನಾಶವಾಗುತ್ತದೆಯಲ್ಲದೆ ಅತಿಯಾದ ವಿದ್ಯುತ್ ಬಳಸಬೇಕಾಗಿ ಬರುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಹೀಗಾಗಿ, ಕೊಳವೆಬಾವಿಗಳಿಂದ ಆಗುವ ಅನಾಹುತಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ.

ಕೊಳವೆಬಾವಿ ಹೆಚ್ಚುಹೆಚ್ಚು ಆಳಕ್ಕೆ ಹೋದಂತೆಲ್ಲಾ ವಿಷಪೂರಿತ ಲವಣ ಹೊರಬರುತ್ತದೆ. ಇಂತಹ ನೀರನ್ನು ಬಳಸಲು ಶುದ್ಧ ನೀರಿನ ಘಟಕವನ್ನು ಸ್ಥಾಪಿಸಬೇಕಾಗುತ್ತದೆ. ಇಲ್ಲವಾದರೆ, ನೀರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಲವಣಗಳಿಂದ ಜನರ ಆರೋಗ್ಯ ಹಾಳಾಗುತ್ತದೆ. ಈ ಬಗೆಯ ಸಮಸ್ಯೆಗಳನ್ನು ತಡೆಗಟ್ಟಲು ಮಳೆನೀರಿನ ಸಂಗ್ರಹ, ಕೃಷಿ ಹೊಂಡ, ಕೆರೆಗಳಲ್ಲಿ ಮಳೆನೀರಿನ ಸಂರಕ್ಷಣೆ, ಹನಿ ನೀರಾವರಿಯಂತಹ ಕ್ರಮಗಳು ಸೂಕ್ತ ಪರಿಹಾರ ಮಾರ್ಗಗಳಾಗಿವೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಸರ್ಕಾರದ ಕೆಲಸ... ಧೈರ್ಯವಾಗಿ ಪ್ರಶ್ನಿಸಿ!

ರಾಜ್ಯದ ಕೆಲವು ವಸತಿ ಶಾಲೆಗಳಲ್ಲಿನ ಪ್ರವೇಶದ್ವಾರದ ಘೋಷವಾಕ್ಯವನ್ನು ಬದಲಿಸಲು ಹೊರಟ ಸರ್ಕಾರ, ಅದಕ್ಕೆ ವಿರೋಧ ವ್ಯಕ್ತವಾದ ಬಳಿಕ ಯಥಾಸ್ಥಿತಿ ಕಾಯ್ದುಕೊಳ್ಳಲು ಮುಂದಾಗಿದ್ದು ಸರಿಯಷ್ಟೆ. ಆದರೆ ಇಂತಹದ್ದೊಂದು ಬದಲಾವಣೆಯು ಸರ್ಕಾರಿ ಕಚೇರಿಗಳಲ್ಲಿ ಅಗತ್ಯವಾಗಿ ಆಗಬೇಕಾಗಿದೆ. ಏಕೆಂದರೆ, ‘ಜನ ಸೇವೆಯೇ ಜನಾರ್ದನನ ಸೇವೆ’, ‘ಸರ್ಕಾರಿ ಕೆಲಸ ದೇವರ ಕೆಲಸ’ ಎಂಬಂತಹ ಘೋಷವಾಕ್ಯಗಳು ಈಗ ಸವಕಲಾಗಿ ಹೋಗಿವೆ. ರಾಜಕಾರಣಿಗಳು ಮತ್ತು ಸರ್ಕಾರಿ ನೌಕರರಲ್ಲಿ ನೈತಿಕ ಮೌಲ್ಯವನ್ನು ಹೆಚ್ಚಿಸುವ ಉದ್ದೇಶ ಈ ವಾಕ್ಯಗಳದ್ದಾಗಿದ್ದರೂ ಈಗ ಈ ಎರಡೂ ವರ್ಗದವರು ಪ್ರಶ್ನಾತೀತರಾಗಿದ್ದಾರೆ. ಹೀಗಾಗಿ, ಈ ವಾಕ್ಯಗಳ ಬದಲಿಗೆ ‘ಸರ್ಕಾರದ ಕೆಲಸ ಸಾರ್ವಜನಿಕರ ಕೆಲಸ, ಧೈರ್ಯವಾಗಿ ಪ್ರಶ್ನಿಸಿ’ ಎಂದು ಎಲ್ಲಾ ಸರ್ಕಾರಿ ಕಚೇರಿ ಮತ್ತು ರಾಜಕೀಯ ಪಕ್ಷಗಳ ಕಚೇರಿಗಳ ಪ್ರವೇಶ ದ್ವಾರದಲ್ಲಿ ಬರೆಸುವುದನ್ನು ಕಡ್ಡಾಯ ಮಾಡಬೇಕಾಗಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಾಕೌಟ್ 'ಗುಮ್ಮ'ನ ಭಯ ದಾಟುವುದೇ ಕರ್ನಾಟಕ?

ಮಯಾಂಕ್ ಅಗರವಾಲ್

ಮಯಂಕ್ ಪಡೆಗೆ ಪದಾರ್ಪಣೆಯ ಪ್ರತಿಭೆಗಳೊಂದಿಗೆ ಪ್ರಶಸ್ತಿ ಜಯದ ಕನಸು

• ಗಿರೀಶ ದೊಡ್ಡಮನಿ

ಕರ್ನಾಟಕ ರಾಜ್ಯ ಕ್ರಿಕೆಟ್ ತಂಡವು ರಣಜಿ ಟ್ರೋಫಿಯನ್ನು ಗೆದ್ದು ಒಂದು ದಶಕವಾಗಿದೆ. ಎಂಟು ಬಾರಿಯ ಚಾಂಪಿಯನ್ ತಂಡಕ್ಕೆ ಒಂಬತ್ತನೇ ಪ್ರಶಸ್ತಿ ಜಯಿಸುವ ಅವಕಾಶ ಈಗ ಮತ್ತೆ ಬಂದಿದೆ.

ಆದರೆ ಕಳೆದ ಹತ್ತು ವರ್ಷಗಳಲ್ಲಿ ಪ್ರಮುಖ ಘಟ್ಟಗಳಲ್ಲಿಯೇ ಎಡವುತ್ತ ಬಂದಿರುವ ತಂಡವು ಈ ಸಲವಾದರೂ 'ನಾಕೌಟ್ ಗುಮ್ಮ'ನ ಭಯದಿಂದ ಹೊರಬರುವುದೇ ಎಂಬ ಕುತೂಹಲ ಗರಿಗೆದರಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ನಾಲ್ಕು ಬಾರಿ ಸೆಮಿಫೈನಲ್ ಮತ್ತು ಎರಡು ಬಾರಿ ಎಂಟರ ಘಟ್ಟದಲ್ಲಿ ಕರ್ನಾಟಕ ತಂಡವು ಎಡವಿದೆ. ಅದರಲ್ಲೂ 2014–15ರಲ್ಲಿ ಚಾಂಪಿಯನ್ ಆದ ಮರುವರ್ಷವೇ ಲೀಗ್ ಹಂತದಲ್ಲಿಯೇ ಹೊರಬಿದ್ದಿತ್ತು. ಆಗ ಅನುಭವಿ ಆಟಗಾರರು ತಂಡದಲ್ಲಿದ್ದರೂ ವೈಫಲ್ಯ ಎದುರಾಗಿತ್ತು.

ಆದರೆ ಈ ಬಾರಿ ಹೊಸಬರೇ ಹೆಚ್ಚಿನ ಸಂಖ್ಯೆಯಲ್ಲಿರುವ ಆಟಗಾರರ ದಂಡು ಕಟ್ಟಿಕೊಂಡು ಪ್ರಶಸ್ತಿ ಗೆಲ್ಲುವ ಸವಾಲು ನಾಯಕ ಮಯಂಕ್ ಅಗರವಾಲ್ ಮತ್ತು ಕೋಚ್ ಪಿ.ವಿ. ಶಶಿಕಾಂತ್ ಅವರ ಮುಂದಿದೆ. ಶುಕ್ರವಾರದಿಂದ ನಾಗ್ಪುರದಲ್ಲಿ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡವು ವಿದರ್ಭ ತಂಡವನ್ನು ಎದುರಿಸಲಿದೆ. ಈ ಬಾರಿ ರಾಜ್ಯ ತಂಡಕ್ಕೆ ನಾಕೌಟ್ ಹಾದಿ ಸುಗಮವೇನೂ ಆಗಿರಲಿಲ್ಲ. ಸಿ ಗುಂಪಿನಿಂದ ಎಂಟರ ಘಟ್ಟಕ್ಕೆ ಪ್ರವೇಶಿಸುವ ಮುನ್ನ ಗೆಲುವು, ಸೋಲು, ಡ್ರಾ ಮತ್ತು ಆಘಾತಕಾರಿ ಘಟನೆಗಳನ್ನು ದಾಟಿ ಬಂದಿದೆ. ಆದರೆ ಈಗ ಮುಂದಿರುವ ಕಠಿಣ ಸವಾಲುಗಳನ್ನು ದಾಟುವುದು ಅಷ್ಟೇನೂ ಸುಲಭವಲ್ಲ. ಉತ್ತಮ ಮತ್ತು ದುರ್ಬಲ ಅಂಶಗಳು ಈ ಪ್ರಯಾಣದಲ್ಲಿವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಆಡುವ ಅನಿವಾರ್ಯ ಮಯಂಕ್ ಬಳಗದ ಮುಂದಿದೆ.

ವೇಗದ ತಾಕತ್ತು

ಕರ್ನಾಟಕದ ಮಟ್ಟಿಗೆ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಸ್ಥಿರ ಪ್ರದರ್ಶನ ನೀಡುತ್ತಿರುವ ಏಕೈಕ ವಿಭಾಗವೆಂದರೆ ವೇಗದ ಬೌಲರ್‌ಗಳದ್ದು. ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಮತ್ತು ವಿ. ಕೌಶಿಕ್ ಅವರು ಸತತವಾಗಿ ಪ್ರತಿಭೆ ಮೆರೆಯುತ್ತಿದ್ದಾರೆ.

ಯಾವುದೇ ಪಿಚ್ ಇರಲಿ, ತಮ್ಮ ಕೈಚಳಕ ತೋರಿದ್ದಾರೆ. ಈ ಬಾರಿಯೂ ಈ ವೇಗಿತ್ರಯರು ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅದರಲ್ಲಿ ವಿದ್ವತ್ ಕಾವೇರಪ್ಪ ಈ ಋತುವಿನ ಮಧ್ಯ ಭಾರತ ಎ ತಂಡದಲ್ಲಿಯೂ ಆಡಿ ಮರಳಿದ್ದಾರೆ. ಕೌಶಿಕ್ ತಮ್ಮ ಹದವಾದ ಸ್ವಿಂಗ್ ಮತ್ತು ಕಟರ್‌ಗಳಿಂದ ಎದುರಾಳಿಗಳಿಗೆ ನಡುಕ ಮೂಡಿಸಿದ್ದಾರೆ.

ಕರ್ನಾಟಕದ ಪರವಾಗಿ ಅತಿ ಹೆಚ್ಚು ವಿಕೆಟ್ ಗಳಿಸಿರುವ ವೈಶಾಖ ಅವರು ಬ್ಯಾಟಿಂಗ್‌ನಲ್ಲಿಯೂ ಮಿಂಚುತ್ತಿದ್ದಾರೆ. ನಾಕೌಟ್ ಹಂತದಲ್ಲಿಯೂ ಈ ಮೂವರನ್ನು ಎದುರಿಸಲು ಎದುರಾಳಿ ತಂಡಗಳು ವಿಶೇಷ ತಂತ್ರಗಾರಿಕೆ ರೂಪಿಸುವುದು ಬಹುತೇಕ ಖಚಿತ.

ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಮತ್ತು ವಾಸುಕಿ ಕೌಶಿಕ್

ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ (ರಣಜಿ)

ವರ್ಷ	ಫಲಿತಾಂಶ
2014-15	ಚಾಂಪಿಯನ್
2015-16	ಲೀಗ್ ಹಂತದಲ್ಲಿ ನಿರ್ಗಮನ
2016-17	ಕ್ವಾರ್ಟರ್ ಫೈನಲ್ (ತಮಿಳುನಾಡು ಎದುರು ಸೋಲು)
2017-18	ಸೆಮಿ ಫೈನಲ್ (ವಿದರ್ಭ ಎದುರು ಸೋಲು)
2018-19	ಸೆಮಿ ಫೈನಲ್ (ಸೌರಾಷ್ಟ್ರ ಎದುರು ಸೋಲು)
2019-20	ಸೆಮಿ ಫೈನಲ್ (ಬಂಗಾಳ ಎದುರು ಸೋಲು)
2020-21	ಕೋವಿಡ್‌ನಿಂದಾಗಿ ಟೂರ್ನಿ ರದ್ದು
2022	ಕ್ವಾರ್ಟರ್ ಫೈನಲ್ (ಉತ್ತರ ಪ್ರದೇಶ ಎದುರು ಸೋಲು)
2022-23	ಸೆಮಿಫೈನಲ್ (ಸೌರಾಷ್ಟ್ರ ಎದುರು ಸೋಲು)

ಕರ್ನಾಟಕದ ಬ್ಯಾಟರ್‌ಗಳ ಸಾಧನೆ

ಬ್ಯಾಟರ್	ಪಂದ್ಯ	ರನ್	ಶತಕ	ಅರ್ಧಶತಕ
ದೇವದತ್ತ ಪಡಿಕ್ಕಲ್	4	556	3	0
ಮನೀಷ್ ಪಾಂಡೆ	6	464	2	2
ಶರತ್ ಶ್ರೀನಿವಾಸ್	6	429	1	1
ಮಯಂಕ್ ಅಗರವಾಲ್	6	398	2	2
ಆರ್.ಸಮರ್ಥ್	6	242	-	2

ಬ್ಯಾಟಿಂಗ್ ಅನಿಶ್ಚಿತತೆ

ಈ ಋತುವಿನಲ್ಲಿ ಮೂರು ಶತಕ ಬಾರಿಸಿ ತಂಡಕ್ಕೆ ಆಸರೆಯಾಗಿದ್ದ ದೇವದತ್ತ ಪಡಿಕ್ಕಲ್ ಅವರು ಭಾರತ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಅವರು ರಾಷ್ಟ್ರೀಯ ತಂಡದಲ್ಲಿದ್ದಾರೆ.

ಆರಂಭಿಕ ಬ್ಯಾಟರ್ ಆರ್. ಸಮರ್ಥ್ ಅವರು ತಮ್ಮ ನೈಜ ಸಾಮರ್ಥ್ಯವನ್ನು ತೋರುತ್ತಿಲ್ಲ. ಇದು ತಂಡಕ್ಕೆ ಚಿಂತೆಯ ವಿಷಯವಾಗಿದೆ. ಇದುವರೆಗೆ ಅವರಿಂದ ಒಂದೂ ಶತಕ ಮೂಡಿಬಂದಿಲ್ಲ. ಮಯಂಕ್ ಅಗರವಾಲ್ ಅವರು ಇದುವರೆಗೆ 398 ರನ್ ಗಳಿಸಿದ್ದಾರೆ. ಆದರೆ ಅವರೊಂದಿಗೆ ಉತ್ತಮ ಆರಂಭ ನೀಡುವಲ್ಲಿ ಸಮರ್ಥ್ ಯಶಸ್ವಿಯಾಗಿಲ್ಲ.

ನಿಕಿನ್ ಜೋಸ್ ಕೂಡ ಮೈಸೂರು ಪಂದ್ಯದಲ್ಲಿ ಶತಕ ಹೊಡೆದಿದ್ದು ಬಿಟ್ಟರೆ ಮತ್ತೆ ಮಿಂಚಿಲ್ಲ. ಇದರಿಂದಾಗಿ ಮಧ್ಯಮ ಕ್ರಮಾಂಕದ ಸಂಪೂರ್ಣ ಜವಾಬ್ದಾರಿ ಅನುಭವಿ ಮನೀಷ್ ಪಾಂಡೆ ಮೇಲೆ ಬಿದ್ದಿದೆ. ಸೂರತ್ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಸೋಲಿನ ದವಡೆಯಿಂದ ತಪ್ಪಿಸಿದ್ದ ಮನೀಷ್ ತಮ್ಮಲ್ಲಿ ಇನ್ನೂ ಆಟ ಬಾಕಿ ಇದೆ ಎಂಬುದನ್ನು ಸಾಬೀತು ಮಾಡಿದ್ದರು. ಎರಡು ಶತಕ ಕೂಡ ದಾಖಲಿಸಿದ್ದಾರೆ. ವೈಶಾಖ, ಹೊಸ ಹುಡುಗ ಹಾರ್ದಿಕ್ ರಾಜ್ ಮತ್ತು ವಿಕೆಟ್ ಕೀಪರ್ ಶರತ್ ಶ್ರೀನಿವಾಸ್ ಅವರು ಹುಬ್ಬಳ್ಳಿಯಲ್ಲಿ ಚಂಡೀಗಢ ವಿರುದ್ಧ ಮಿಂಚಿದ್ದರು. ಅವರು ತಮ್ಮ ಲಯವನ್ನು ಕ್ವಾರ್ಟರ್ ಫೈನಲ್‌ನಲ್ಲಿಯೂ ಮುಂದುವರಿಸಿದರೆ ತಂಡಕ್ಕೆ ಲಾಭ.

ಮನೀಷ್ ಪಾಂಡೆ

ಸ್ಪಿನ್ ವಿಭಾಗದ ಅನುಭವ ಕೊರತೆ

ಈ ಬಾರಿಯ ತಂಡದಲ್ಲಿ ದುರ್ಬಲವಾಗಿರುವುದು ಸ್ಪಿನ್ ವಿಭಾಗ. ಅದಕ್ಕೆ ಕಾರಣ ಅನುಭವವಿಲ್ಲದಬೌಲರ್‌ಗಳು ಇರುವುದು. ಹೋದ ಋತುವಿನಲ್ಲಿ ಆಡಿದ್ದ ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು ಈ ವರ್ಷ ಕೇರಳ ತಂಡಕ್ಕೆ ವಲಸೆ ಹೋಗಿದ್ದಾರೆ. ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಅವರನ್ನು ಈ ಬಾರಿ ಆಯ್ಕೆಗೆ ಪರಿಗಣಿಸಿಲ್ಲ. ಈ ಕೊರತೆಯು ತಂಡವನ್ನು ಕಾಡದಂತೆ ನೋಡಿಕೊಳ್ಳುವ ಹೊಣೆ ಹೊಸ ಹುಡುಗರ ಮೇಲೆ ಇದೆ.


ಹಾರ್ದಿಕ್ ರಾಜ್

ಕರ್ನಾಟಕದ ಬೌಲರ್‌ಗಳ ಸಾಧನೆ

ಬೌಲರ್	ಪಂದ್ಯ	ವಿಕೆಟ್
ವೈಶಾಖ ವಿಜಯಕುಮಾರ್	7	34
ವಿ.ಕೌಶಿಕ್	6	27
ವಿದ್ವತ್ ಕಾವೇರಪ್ಪ	4	15
ರೋಹಿತ್ ಕುಮಾರ್	3	14
ಹಾರ್ದಿಕ್ ರಾಜ್	4	13

ರೋಹಿತ್ ಕುಮಾರ್, ಶಶಿಕುಮಾರ್ ಮತ್ತು ಹಾರ್ದಿಕ್ ರಾಜ್ ಅವರು ಕೆಲವು ಪಂದ್ಯಗಳಲ್ಲಿ ಭರವಸೆ ಮೂಡಿಸಿದ್ದಾರೆ. ಆದರೆ ನಾಕೌಟ್ ಹಂತದ ಸ್ಪರ್ಧೆ ಮತ್ತು ಒತ್ತಡಗಳೇ ಬೇರೆ. ಆ ಸವಾಲನ್ನು ಗೆದ್ದು ತಾವು ರಾಜ್ಯ ತಂಡದ ಭವಿಷ್ಯದ ತಾರೆಗಳು ಎಂಬುದನ್ನು ತೋರ್ಪಡಿಸುವ ಅವಕಾಶ ಕೂಡ ಈ ಯುವ ಆಟಗಾರರ ಮುಂದಿದೆ. ತಂಡವು ಕೊನೆಯ ಬಾರಿ ರಣಜಿ ಟ್ರೋಫಿ ಜಯಿಸಿದಾಗ ತಂಡದಲ್ಲಿದ್ದವರು ಮಯಂಕ್. ಆಗ ಬ್ಯಾಟರ್ ಆಗಿ ಮಿಂಚಿದ್ದರು. ಈಗ ನಾಯಕರಾಗಿದ್ದಾರೆ. ಯರಪಳ್ಳಿ ಪ್ರಸನ್ನ, ಬ್ರಿಜೇಶ್ ಪಟೇಲ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಸುನಿಲ್ ಜೋಶಿ, ಆರ್. ವಿನಯಕುಮಾರ್ ಅವರ ಸಾಲಿಗೆ ಸೇರುವ ಅವಕಾಶ ಮಯಂಕ್ ಮುಂದಿದೆ.

ಸೌರಾಷ್ಟ್ರ ಸವಾಲು ತಪ್ಪಿಸಿಕೊಂಡರೇ?

ಹುಬ್ಬಳ್ಳಿಯಲ್ಲಿ ನಡೆದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಚಂಡೀಗಢ ಎದುರು ಗೆಲ್ಲುವ ಅವಕಾಶ ಕರ್ನಾಟಕಕ್ಕೆ ಇತ್ತು. ಆದರೂ ವಿಭಿನ್ನ ತಂತ್ರಗಾರಿಕೆಯನ್ನು ಅನುಸರಿಸಿದ್ದರಿಂದ ಪಂದ್ಯ ಡ್ರಾದತ್ತ ವಾಲಿತ್ತು.

ಇದರಿಂದಾಗಿ ಸಿ ಗುಂಪಿನಲ್ಲಿ ಅಗ್ರಸ್ಥಾನ ಕರ್ನಾಟಕದ ಕೈತಪ್ಪಿತ್ತು. ಒಂದೊಮ್ಮೆ ಮೊದಲ ಸ್ಥಾನ ಪಡೆದಿದ್ದರೆ, ಎಂಟರ ಘಟ್ಟದಲ್ಲಿ ಸೌರಾಷ್ಟ್ರವನ್ನು ಎದುರಿಸಬೇಕಿತ್ತು. ಆದರೆ ಕಳೆದ ಆರೇಳು ವರ್ಷಗಳಲ್ಲಿ ಎರಡು ಬಾರಿ ಸೌರಾಷ್ಟ್ರದ ಎದುರು ನಾಕೌಟ್‌ನಲ್ಲಿ ಕರ್ನಾಟಕ ತಂಡವು ಸೋತಿತ್ತು. ಇದೀಗ ಆ 'ಕಂಟಕ'ದಿಂದ ಕರ್ನಾಟಕ ಪಾರಾಗಿದೆ. ಆದರೆ ವಿದರ್ಭ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಅಕ್ಷಯ್ ವಾಡಕರ್, ಉಮೇಶ್ ಯಾದವ್ ಅವರಂತಹ ಉತ್ತಮ ಆಟಗಾರರು ಕಠಿಣ ಸವಾಲೊಡ್ಡಬಲ್ಲರು.

'ತಂಡದ ಹೋರಾಟ ಮನೋಭಾವವೇ ಶಕ್ತಿ'

ಈ ಬಾರಿ ನಮ್ಮದು ಏರಿಳಿತಗಳ ಪಯಣವಾಗಿದೆ. ಬೇರೆ ಬೇರೆ ತಾಣಗಳಲ್ಲಿ ಆಡಿದ್ದೇವೆ. ಅಚ್ಚರಿ ಮತ್ತು ಆಘಾತಗಳನ್ನೂ ಕಂಡಿದ್ದೇವೆ. ಮಯಂಕ್ ಅಗರವಾಲ್ ಅವರು ಆಕಸ್ಮಿಕವಾಗಿ ಅಸ್ವಸ್ಥರಾಗಿದ್ದ ಘಟನೆಯು ಆಟಗಾರರಲ್ಲಿ ಆಘಾತ ಮೂಡಿಸಿತ್ತು. ಅದನ್ನು ಮೀರಿ ನಿಂತು ತಂಡವು ಈ ಹಂತಕ್ಕೆ ಬಂದಿರುವುದು ಸಮಾಧಾನ ತಂದಿದೆ. ತಂಡದ ಹೋರಾಟದ ಮನೋಭಾವವೇ ಸಾಮರ್ಥ್ಯವಾಗಿದೆ.

ಮಯಂಕ್ ಅಗರವಾಲ್, ಮನೀಷ್ ಪಾಂಡೆ ಅವರು ತಮ್ಮ ಅನುಭವಕ್ಕೆ ತಕ್ಕಂತೆ ಉತ್ತಮವಾಗಿ ಆಡುತ್ತಿದ್ದಾರೆ. ತಂಡಕ್ಕೆ ಅಗತ್ಯವಾದ ಸಂದರ್ಭದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಹೊಸದಾಗಿ ತಂಡಕ್ಕೆ ಬಂದಿರುವ ಹಾರ್ದಿಕ್ ರಾಜ್ ತಮ್ಮ ಆಲ್‌ರೌಂಡ್ ಆಟದಿಂದ ಭರವಸೆ ಮೂಡಿಸಿದ್ದಾರೆ. ವೇಗಿ ವೈಶಾಖ ವಿಜಯಕುಮಾರ್ ಬೌಲಿಂಗ್ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಮಿಂಚುತ್ತಿದ್ದಾರೆ. ಹೊಸ ಮತ್ತು ಹಳೆಯ ಆಟಗಾರರಲ್ಲಿ ಉತ್ತಮ ಹೊಂದಾಣಿಕೆ ಇದೆ. ಇದರಿಂದಾಗಿ ಈ ಬಾರಿ ಫೈನಲ್‌ಗೆ ಹೋಗುವ ವಿಶ್ವಾಸವಿದೆ.

ಪಿ.ವಿ. ಶಶಿಕಾಂತ್, ಕೋಚ್, ಕರ್ನಾಟಕ ತಂಡ

ಸಿನಿ ಬಿಟ್ಸ್

ಇದು 'ಪುರುಷೋತ್ತಮ'ನ ಪ್ರಸಂಗ

ತುಳುನಾಡಿನ ಜನಪ್ರಿಯ ನಟ, ನಿರ್ದೇಶಕ ತೆಲಿಕೆದ ಬೊಳ್ಳಿ ದೇವದಾಸ್ ಕಾಪಿಕಾಡ್ ನಿರ್ದೇಶನದ 'ಪುರುಷೋತ್ತಮನ ಪ್ರಸಂಗ' ಚಿತ್ರ ಮಾರ್ಚ್ 1 ರಂದು ತೆರೆ ಕಾಣುತ್ತಿದೆ. ನಟ ಶರಣ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ.ರವಿಕುಮಾರ್ ನಿರ್ಮಿಸಿರುವ ಚಿತ್ರದಲ್ಲಿ ಅವರ ಪುತ್ರ ಅಜಯ್, ರಿಷಿಕಾ ನಾಯಕ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ.

'ಚಿತ್ರದ ಶೀರ್ಷಿಕೆಯೇ ಮನಮುಟ್ಟುವಂತಿದೆ. ಪುರುಷೋತ್ತಮ ಎಂದರೆ ರಾಮ. ಆತನ ಹೆಸರಿನಲ್ಲೇ ಜಯವಿದೆ. ಚಿತ್ರದ ಟ್ರೇಲರ್‌ಗೆ ಮಂಗಳೂರಿನ ಭಾಷೆಯಲ್ಲಿ ಧ್ವನಿ ನೀಡಿದ್ದೇನೆ. ಅಲ್ಲಿನ ಸೊಗಡಿನ ಚಿತ್ರದಲ್ಲಿ ನಟಿಸುವ ಆಸೆಯಿದೆ' ಎಂದರು ಶರಣ್.

'ದುಬೈಗೆ ಹೋಗಲು ಪುರುಷೋತ್ತಮ ಏನೆಲ್ಲಾ ಮಾಡುತ್ತಾನೆ ಎಂಬುದನ್ನು ನಿರ್ದೇಶಕರು ಈ ಚಿತ್ರದಲ್ಲಿ ಹಾಸ್ಯದ ಮೂಲಕ ತೋರಿಸಿದ್ದಾರೆ. ನನಗೆ ಮೊದಲಿನಿಂದಲೂ ರಂಗಭೂಮಿಯ ನಂಟು. ಟೊರಾಂಟೊ ಯೂನಿವರ್ಸಿಟಿಯಲ್ಲಿ ನಟನೆ ಕುರಿತು ಅಭ್ಯಾಸ ಮಾಡಿ, ಕೆಲ ಚಿತ್ರಗಳಲ್ಲಿ ಕೆಲಸ ಮಾಡಿ ನಾಯಕನಾಗಿದ್ದೇನೆ' ಎಂದು ಅಜಯ್ ತಿಳಿಸಿದರು.

ರಿಷಿಕಾ ನಾಯಕ್

'ನಾನೇ ಹೀರೋ' ಎಂದ ಉಪ್ಪಿ ಅಭಿಮಾನಿ

ಇಲ್ಲೊಬ್ಬರು 'ನಾನೇ ಹೀರೋ' ಎಂದುಕೊಂಡು, ಉಪೇಂದ್ರ ರೀತಿಯದ್ದೇ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಉಪೇಂದ್ರ ಅವರ ಅಭಿಮಾನಿಯಾಗಿರುವ ಹಗದೂರು ಅಶೋಕ್ ರೆಡ್ಡಿ ನಟನೆಯ ಈ ಸಿನಿಮಾ ಇತ್ತೀಚೆಗಷ್ಟೇ ಸೆಟ್ಟೇರಿದೆ. ಆರ್.ಕೆ.ಗಾಂಧಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾವನ್ನು ಬೃಂದಾ ವಿದ್ಯಾ ಪಿಕ್ಚರ್ಸ್ ನಿರ್ಮಿಸುತ್ತಿದೆ.

'ಹಾಸ್ಯಪ್ರಧಾನ ಕಥಾಹಂದರ ಹೊಂದಿರುವ ಚಿತ್ರವಿದು. ಉಪ್ಪಿ ಅಭಿಮಾನಿಯೊಬ್ಬ ಚಿತ್ರರಂಗದಲ್ಲಿ ನಾಯಕನಾಗಬೇಕೆಂದು ಹೊರಟು, ಅದಕ್ಕಾಗಿ ಏನೇನೆಲ್ಲ ಸಾಹಸ ಮಾಡುತ್ತಾನೆ ಎಂಬ ಕಥಾಹಂದರ ಈ ಚಿತ್ರದಲ್ಲಿದೆ' ಎಂದರು ನಿರ್ದೇಶಕರು.

ಶೋಭ ಈ ಚಿತ್ರದ ನಾಯಕಿ. ಶೋಭರಾಜ್, ಶಶಿಕುಮಾರ್ ಮುಂತಾದವರು ನಟಿಸುತ್ತಿದ್ದಾರೆ. ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ, ಎಂ. ಎಲ್. ರಾಜ ಸಂಗೀತ, ವಿನಯ್ ಸಂಕಲನ ಈ ಚಿತ್ರಕ್ಕಿದೆ. ಹೊಸಕೋಟೆ, ಚಿಂತಾಮಣಿ ಮತ್ತು ಗಾಂಧಿನಗರಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ.

ಅಶೋಕ್ ರೆಡ್ಡಿ, ಶೋಭ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್‌ನ ಸ್ಕ್ರೀನ್‌ಶಾಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ನಾನೂ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದೆ. ಆದರೆ, ಕಾಂಗ್ರೆಸ್ ಪಕ್ಷ ಮಾತ್ರ ನನ್ನ ಅಪೇಕ್ಷೆಗೆ ತಕ್ಕಂತೆ ಕೆಲಸ ಮಾಡುವ ಅವಕಾಶವನ್ನೇ ಕೊಡಲಿಲ್ಲ. ನರೇಂದ್ರ ಮೋದಿ ಅವರು ತಮ್ಮ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುತ್ತಾರೆ. ಅದಕ್ಕಾಗಿಯೇ ದೇಶ ಪ್ರಗತಿ ಸಾಧಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ಸ್ಕ್ರೀನ್‌ಶಾಟ್‌ನಲ್ಲಿ ಬರೆದುಕೊಳ್ಳಲಾಗಿದೆ. ಮತ್ತೊಂದು ಟ್ವೀಟ್ ಅನ್ನು ಕೂಡ ಇದೇ ಸ್ಕ್ರೀನ್‌ಶಾಟ್‌ಗೆ ಸೇರಿಸಲಾಗಿದೆ. 'ಮೋದಿ ಅವರಂತೆ ಒಬ್ಬ ನಾಯಕ, ಒಬ್ಬ ಪ್ರಧಾನಿ ಇಡೀ ಜಗತ್ತಿನಲ್ಲಿಯೇ ಮತ್ತೆಂದೂ ಹುಟ್ಟುವುದಿಲ್ಲ. ಇದನ್ನು ನಾನಿಂದು ಬಹಿರಂಗವಾಗಿಯೇ ಹೇಳುತ್ತಿದ್ದೇನೆ' ಎಂದು ಮತ್ತೊಂದು ಟ್ವೀಟ್‌ನಲ್ಲಿ ಇದೆ. 'ಕೊನೆಗೂ ಸರ್ದಾರರ ಆತ್ಮಸಾಕ್ಷಿ ಜಾಗರೂಕವಾಗಿದೆ' ಎಂದೂ ಸ್ಕ್ರೀನ್‌ಶಾಟ್‌ನಲ್ಲಿ ಬರೆಯಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.

ಮನಮೋಹನ್ ಸಿಂಗ್ ಅವರು ಮಾಡಿದ್ದಾರೆ ಎನ್ನಲಾದ ಎರಡು ಟ್ವೀಟ್‌ಗಳನ್ನು ಕೊಲಾಜ್ ಮಾಡಿ, ನಂತರ ಸ್ಕ್ರೀನ್‌ಶಾಟ್ ತೆಗೆದುಕೊಳ್ಳಲಾಗಿದೆ. ಈ ಎರಡೂ ಟ್ವೀಟ್‌ಗಳನ್ನು '@manmohan_5' ಎನ್ನುವ ಖಾತೆಯಿಂದ ಮಾಡಲಾಗಿದೆ. ಹಿಂದಿ ಹಾಗೂ ಇಂಗ್ಲಿಷ್ ಎರಡರಲ್ಲಿಯೂ ಟ್ವೀಟ್ ಇರುವ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಳ್ಳಲಾಗುತ್ತಿದೆ. ಹಲವು ವರ್ಷಗಳಿಂದ ಇದೇ ಸ್ಕ್ರೀನ್‌ಶಾಟ್ ಅನ್ನು ಬಳಸಿಕೊಂಡು ತಪ್ಪು ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ. ನಿಜದಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಟ್ವಿಟರ್ ಖಾತೆಯೇ ಇಲ್ಲ. '@manmohan_5' ಈ ಖಾತೆಯನ್ನು ಹುಡುಕಿದರೆ, 'ಈ ಖಾತೆ ನಿಷ್ಕ್ರಿಯವಾಗಿದೆ' ಎಂದು ಬರುತ್ತಿದೆ. 'ಸೋನಿಯಾ ಹಾಗೂ ಮನಮೋಹನ್ ಸಿಂಗ್ ಅವರು ಟ್ವಿಟರ್‌ಗೆ ಬರಬೇಕು ಅನ್ನಿಸಿದರೆ, ಅವರು ವೆರಿಫೈಡ್ ಖಾತೆಯೊಂದಿಗೆ ಬರುತ್ತಾರೆ' ಎಂದು ಕಾಂಗ್ರೆಸ್ ನಾಯಕ ಸರಲ್ ಪಟೇಲ್ ಅವರು 2020ರಲ್ಲಿಯೇ ಟ್ವೀಟ್ ಮಾಡಿದ್ದರು. ಆದ್ದರಿಂದ, ಮನಮೋಹನ್ ಸಿಂಗ್ ಅವರು ಪ್ರಧಾನಿ ಮೋದಿ ಅವರನ್ನು ಈ ರೀತಿ ಎಲ್ಲಿಯೂ ಹೊಗಳಲಿಲ್ಲ ಮತ್ತು ಇದೊಂದು ಸುಳ್ಳು ಸುದ್ದಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಇರಬೇಕಾದವರು ಇಲ್ಲದಂತಾದರೆ...

ನುಡಿ ಬೆಳಗು

ಪ್ರೊ.ಎಂ.ಕೃಷ್ಣೇಗೌಡ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಒಂದು ಸಣ್ಣ ಹಳ್ಳಿಯ ಸಾಧಾರಣ ಕುಟುಂಬದ ಸಣ್ಣ ಹುಡುಗ ಆತ. ಒಂಬತ್ತನೇ ತರಗತಿ ಓದುತ್ತಿದ್ದ. ಶಾಲೆಗೆ ಹೋಗುವ ಮೊದಲು ಅವನು ಕೊಟ್ಟಿಗೆಯ ಕಸ ಗುಡಿಸಿ ತೋಟಕ್ಕೆ ಹಾಕಬೇಕಿತ್ತು. ಅದೊಂದು ದಿನ ಕಸದ ಕುಕ್ಕೆ ತಲೆಯ ಮೇಲೆ ಹೊತ್ತು ಹೋಗುತ್ತಿದ್ದಾಗ ಕತ್ತರಿಸಿ ಬಿದ್ದಿದ್ದ ಕರೆಂಟಿನ ತಂತಿ ಅವನ ಕೈಗಳಿಗೆ ತಾಕಿ ರಪ್ಪನೆ ಕೆಳಕ್ಕೆ ಬಿದ್ದ. ಎರಡೂ ಕೈ ಸುಟ್ಟು ಇದ್ದಿಲಿನಷ್ಟು ಕರಕಾಗಿದ್ದವು. ಹುಡುಗನನ್ನು ಆಸ್ಪತ್ರೆಗೆ ಸಾಗಿಸಿದರು. ಡಾಕ್ಟರು, ಬಲಗೈಯನ್ನು ಈಗಲೇ ಕತ್ತರಿಸಬೇಕು ಅಂದರು. ಹಾಗೇ ಮಾಡಿದರು. ಅದೃಷ್ಟವಶಾತ್ ಎಡಗೈ ಉಳಿದುಕೊಂಡಿತು.

ಹುಡುಗ ಬಹಳ ಛಲಗಾರ. ಎಡಗೈಯಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿದ. ಕೃಷಿ ವಿಜ್ಞಾನದಲ್ಲಿ ಎಂ.ಎಸ್ ಸಿ ಓದಿದ. ಆ ಸಾಹಸಿಯ ಸಾಧನೆ ಅಲ್ಲಿಗೂ ಮುಗಿಯಲಿಲ್ಲ. ಈಗ ಆತ ಆಂಧ್ರಪ್ರದೇಶದಲ್ಲಿ ಐಎಎಸ್ ಅಧಿಕಾರಿ. ಆ ಅದ್ಭುತ ವ್ಯಕ್ತಿಯ ಹೆಸರು, ಗಿರೀಶ್. ಅವರನ್ನೊಮ್ಮೆ ಭೇಟಿಯಾದಾಗ ಅವರ ನೋವಿನ ಕತೆಯನ್ನು ವಿವರವಾಗಿ ಹೇಳಿದರು. ಕೇಳಿ ತತ್ತರಿಸಿಹೋಗಿದ್ದೆ.

ಮಾತಿನ ಮಧ್ಯೆ ಅವರು ಒಂದು ರೀತಿಯ ನೋವಿನ ಬಗ್ಗೆ ಹೇಳಿದರು. ಅದನ್ನು ಇಂಗ್ಲಿಷ್‌ನಲ್ಲಿ ಫ್ಯಾಂಟಮ್ ಪೆಯ್ನ್ (Phantom Pain) ಅನ್ನುತ್ತಾರಂತೆ. ಕನ್ನಡದಲ್ಲಿ ಅದನ್ನು ಮಾಯಾ ನೋವು ಅಂತಲೋ ಭ್ರಾಂತಿಯ ನೋವು ಅಂತಲೋ ಅನ್ನೋಣ. ಹಾಗೆಂದರೆ, ದೇಹದ ಒಂದು ಅಂಗವನ್ನು ಕತ್ತರಿಸಿದ ನಂತರ ಆ ಗಾಯ ಸಂಪೂರ್ಣ ವಾಸಿಯಾದ ಮೇಲೂ ಈ ನೋವು ಇರುತ್ತದೆ. ಅದನ್ನು ಹೀಗೆ ಹೇಳುತ್ತೇನೆ. ರಾತ್ರಿ ಮಲಗಿದ್ದಾಗ ಒಂದಿಷ್ಟು ಚಳಿ ಆಯಿತು ಅನ್ನಿ. ಆಗ ಕಂಬಳಿಯನ್ನು ಮೈಮೇಲೆ ಎಳೆದುಕೊಳ್ಳಲು ಬಲಗೈಯನ್ನು ಚಾಚಬೇಕೆಂದು ಮಿದುಳು ಆದೇಶ ಹೊರಡಿಸುತ್ತದೆ, ಆದರೆ ಬಲಗೈ ಇಲ್ಲ. ಆಗ ಭುಜದ ಮೂಲದಲ್ಲಿ ಗಾಯವಿಲ್ಲದಿದ್ದರೂ ಅಸಾಧ್ಯ ನೋವಾಗುತ್ತದೆಯಂತೆ. ಅದೇ ಈ ಮಾಯಾ ನೋವು.

ಇದು ಶರೀರದಲ್ಲಿ ಮಾತ್ರವಲ್ಲ, ಸಮಾಜದಲ್ಲೂ ಆಗುತ್ತದೆ. ಯಾರೋ ಇದ್ದಾರೆಂದು ನಾವು ಕ್ರಿಯೆಗೆ ತೊಡಗುತ್ತೇವೆ, ಆದರೆ ಅವರು ಆಗಲೇ ಮಾಯವಾಗಿರುತ್ತಾರೆ. ಇರುವವರು ಇಲ್ಲದಿರುವಾಗ ಅಥವಾ ಇಲ್ಲದಂತಾದಾಗ ಸಮಾಜದಲ್ಲೂ ಈ ಮಾಯಾ ನೋವು ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಇರಬೇಕಾದವರು ನಾವಿದ್ದೇವೆ ಎಂದು ಇರಬೇಕು. ಅಗತ್ಯವಿದ್ದಾಗ 'ಕೈ ಕೊಡಬಾರದು'.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಫೆಬ್ರುವರಿ 23, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ದಶಿ ಗಂ. 15-34 ನಕ್ಷತ್ರ: ಆಶ್ಲೇಷ ಗಂ. 19-26 ಯೋಗ: ಶೋಭನಾ ಗಂ. 12-48 ಕರಣ: ವಣಿಜ ಗಂ. 15-34, ಕುಂಭ ಮಾಸದ 10 ನೇ ದಿನ, ಮಳೆನಕ್ಷತ್ರ: ಶತಭಿಷ 2.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 06-53 **ಸೂರ್ಯಾಸ್ತ :** 06-34

ಮುಸ್ಲಿಂ ದಿನಾಂಕ : 12 ಶಬನ್

ಅದೃಷ್ಟ ಸಂಖ್ಯೆ : 5, 9

ಮೇಷ: ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ. ವೈವಾಹಿಕ ಜೀವನದಲ್ಲಿ ಪರಸ್ಪರ ಹೊಂದಾಣಿಕೆಯಿದ್ದು ಸಂತೋಷದಿಂದಿರುವಿರಿ. ಮಾರಾಟದ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.

ವೃಷಭ: ಗೋವಿನ ಸೇವೆ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ತಾನಾಗಿಯೇ ಗೋಚರಿಸಲಿದೆ. ಉತ್ಸಾಹ ಹೆಚ್ಚಿಸುವ ಪ್ರೋತ್ಸಾಹಕರ ಸುದ್ದಿ ಕೇಳುತ್ತೀರಿ. ಸಾರಿಗೆ ಉದ್ಯೋಗದವರಿಗೆ ಉತ್ತಮ ದಿನ.

ಮಿಥುನ: ಕುಟುಂಬದಲ್ಲಿ ಆಸ್ತಿಯ ಸಂಬಂಧಿತ ಎದುರಾದ ಸಮಸ್ಯೆಗಳು ನಿರಾತಂಕವಾಗಿ ಮುಗಿಯಲಿದೆ. ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ಉಂಟಾಗಲಿದೆ. ಆಸ್ತಿ ಸಂಬಂಧ ಮಾತುಕತೆ ನಡೆಯುವುದು.

ಕರ್ಕಾಟಕ: ಸವಿತೃ ಸೂರ್ಯ ನಾರಾಯಣನಿಗೆ ನಮಸ್ಕರಿಸುವುದರಿಂದ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದಗಳಿರುವುದಿಲ್ಲ. ಅನವಶ್ಯಕ ಚಿಂತೆ ಮಾಡುವುದರಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ.

ಸಿಂಹ: ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ಪಿತ್ತ ಉಷ್ಣ ಪ್ರಕೋಪದಿಂದಾಗಿ ಆರೋಗ್ಯ ಅತ್ಯಂತ ಸೂಕ್ಷ್ಮವಾಗುವುದು. ವಿವಾಹ ಪ್ರಸ್ತಾಪವು ಬಲಗೊಳ್ಳಲಿದೆ.

ಕನ್ಯಾ: ಬೇರೆಯವರ ಬಗ್ಗೆ ಅನುಕಂಪ ತೋರುವ ನೀವು ನಿಮ್ಮ ಬಗ್ಗೆ ಗಮನ ಹರಿಸುವುದನ್ನು ಮರೆಯದಿರಿ. ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯ ಕಳೆದುಕೊಳ್ಳಬೇಡಿ. ತಾಂತ್ರಿಕ ವಿದ್ಯಾರ್ಥಿಗಳಿಗೆ ಶುಭವಾಗುವುದು.

ತುಲಾ: ಬಹಳ ದಿನಗಳ ನಂತರ ಸೋದರನ ಆಗಮನದಿಂದ ಮನೆಯಲ್ಲಿ ಹೆಚ್ಚಿನ ಸಂಭ್ರಮವಿರುವುದು. ಕಠಿಣ ಪರಿಶ್ರಮದಿಂದ ಆರ್ಥಿಕವಾಗಿ ಅಲ್ಪ ಚೇತರಿಕೆ ಕಾಣುವುದು. ನಿಮ್ಮ ಗೌರವ , ಪ್ರತಿಷ್ಠೆ ಹೆಚ್ಚಲು ಸಮಯ ಬೇಕಿದೆ.

ವೃಶ್ಚಿಕ: ಇನ್ನೊಬ್ಬರಿಗೆ ಹಣವನ್ನು ಕೊಡುವ ಅಥವಾ ಸ್ವೀಕರಿಸುವ ವಿಚಾರದಲ್ಲಿ ಅತ್ಯಂತ ಎಚ್ಚರಿಕೆಯಲ್ಲಿರಬೇಕಾಗುತ್ತದೆ. ದಿಟ್ಟತನ ಸಾಧಿಸಲೇ ಬೇಕೆಂಬ ಛಲದಿಂದಾಗಿ ಕಾರ್ಯ ಕೈಗೂಡುವುದು.

ಧನು: ನೂತನ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿಬ್ಬಂದಿವರ್ಗ ಆನಂದದಿಂದ ಸಹಕರಿಸಲಿದ್ದಾರೆ. ಕೆಲಸ ಕಾರ್ಯಗಳಲ್ಲಿ ಅತಿ ಉತ್ಸಾಹವನ್ನು ಕಾಣುವಿರಿ. ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ.

ಮಕರ: ಆತ್ಮ ವಿಶ್ವಾಸದಿಂದ ಕೆಲಸಕಾರ್ಯಗಳಲ್ಲಿ ಯಶಸ್ಸು ಹೊಂದುವಿರಿ. ಹಣ ಸಂಪಾದನೆಗಾಗಿ ಯಾವುದೇ ಅಡ್ಡ ಮಾರ್ಗವನ್ನು ಆರಿಸಿಕೊಳ್ಳುವುದು ಸರಿಯಲ್ಲ. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿರುವುದು.

ಕುಂಭ: ವೃತ್ತಿ ಪರವಾಗಿ ಸ್ಥಳ ಬದಲಾವಣೆಯಾದರೆ ಕಷ್ಟವಾಗಬಹುದು ಎಂಬ ಶಂಕೆ ಬೇಡ, ಅಲ್ಲಿಯೂ ಬದುಕು ಹಸನಾಗಲಿದೆ. ವಿದ್ಯಾರ್ಥಿಗಳಿಗೆ ತಮ್ಮ ಸಾಧನೆಗೆ ಬೇಕಾದ ವಾತಾವರಣ ಮತ್ತು ಪ್ರೋತ್ಸಾಹ ಲಭಿಸಲಿದೆ.

ಮೀನ: ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸುವಂತೆ ತಿಳಿ ಹೇಳಬೇಕಾದ ಪರಿಸ್ಥಿತಿ ಇರಲಿದೆ. ನಿಮ್ಮೆಲ್ಲಾ ಪ್ರಮುಖ ಗುರಿ ಸಾಧನೆಗಳಿಗೆ ಇಂದಿನಿಂದ ಒಳ್ಳೆಯ ಚಾಲನೆ ಸಿಗುವುದು. ಮನೆಯ ಕೆಲಸಗಳು ಸರಾಗವಾಗಿ ನೆರವೇರುವುದು.

ಪದಬಂಧ 5600

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮೊದಲು ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
3.ಮೇಜವಾನಿ ಮಾಡಲು ಅಡುಗೆಗೆ ಬೇಕಾದ ಸಾಮಗ್ರಿ (4)
5.ಹೆಂಡತಿಯನ್ನು ಕಳೆದು ಕೊಂಡವನು (3)
6.ಪದ ಹೇಳಿ ಗಳಿಸಿರುವ ಡಿಗ್ರಿ (3)
7.ಈ ಜನುಮದಲ್ಲೇ ರಾಕ್ಷಸನನ್ನು ಹುಡುಕಿ! (3)
9.ಮನವಿಟ್ಟು ಸಾಧಿಸಿದ ಹತೋಟಿ! (3)
11.ನೊಸಲು ಇಲ್ಲಿ ಕಾಣುತ್ತಿದೆ (3)
12.ಆ ಪಾತ್ರದಲ್ಲಿ ನಟಿಸುವ ಅಯೋಗ್ಯ! (3)
13.ಮಂಗಳಗ್ರಹಕ್ಕಿರುವ ಇನ್ನೊಂದು ಹೆಸರು (4)
15.ಯೋಗವಿದ್ದುದಕ್ಕೇ ಈ ಹಂಚಿಕೆ! (4)

ಮೇಲಿಂದ ಕೆಳಕ್ಕೆ

1.ಈತ ಚರ್ಮದ ಕೆಲಸಗಾರ (3)
2.ತಿಕ್ಕಲ ಹಿಡಿದಿರುವ ಎಳ್ಳು (2)
4.ವಾದದಲ್ಲಿರುವಾತ ಮಾತಿನಲ್ಲಿ ನಿಪುಣ (4)
5.ವಿಷಯ ತಿಳಿಸಿದಾಗ ಆಗಿರುವ ದುಃಖ (3)
6.ಪಟದಲ್ಲಿ ಅವ್ಯವಸ್ಥೆ! (3)
8.ನೀರಿನಲ್ಲಿ ವಾಸಿಸುವ ಪ್ರಾಣಿ (4)
10.ತಾರೆ ಇಲ್ಲಿ ಕಾಣುತ್ತಿದೆ (3)
12.ಅಂಗ ಹೀನನಿವನು (3)
14.ವಿದೂಷಕನಲ್ಲಿರುವ ಕಬ್ಬಿಗ ಕಾಣಿಸಿಹನೇ? (2)



5599ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವಕ್ರದೃಷ್ಟಿ 4.ಕಮಠ
5.ಏಮಾರು 6.ಕದನ
8.ವ್ಯವಕಲನ 10.ಗುಲಾಬಿ
12.ಮರಣ 13.ಜರಡಿ
15.ಅಹವಾಲು

ಮೇಲಿಂದ ಕೆಳಕ್ಕೆ:
1.ಶುಕ್ರ 2.ನಾಮ
3.ವರ್ತಕ 4.ಕರು
5.ಏಕೀಕರಣ 7.ನವ್ಯ
9.ನಗು 11.ಬಿಸಿಲು
12.ಮಡಿ 14.ರತ್ನ
16.ವಾಗ್ಮಿ

ಸುಡೊಕು 5985

	6		8				1	
2							7	
	1	4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5984 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

₹13,000 ಕೋಟಿ ವೆಚ್ಚದ 680 ಕಿ.ಮೀ. ಉದ್ದದ 36 ರಾಷ್ಟ್ರೀಯ ಹೆದ್ದಾರಿ ಉದ್ಘಾಟಿಸಿದ ನಿತಿನ್ ಗಡ್ಕರಿ

ರಾಜ್ಯದಲ್ಲಿ ಹೆದ್ದಾರಿ ಅಭಿವೃದ್ಧಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ದೇಶದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸುವ ಗ್ರೀನ್ ಕಾರಿಡಾರ್ ನಿರ್ಮಾಣ ನಮ್ಮ ಆದ್ಯತೆ. ಇದರಿಂದ ಪ್ರಯಾಣದ ಸಮಯ, ವೆಚ್ಚ ಕಡಿಮೆ ಆಗುತ್ತದೆ. ಅಭಿವೃದ್ಧಿಗೂ ಪೂರಕವಾಗುತ್ತದೆ' ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು.

ನಗರದಲ್ಲಿ ಗುರುವಾರ ವಿವಿಧ 36 ರಾಷ್ಟ್ರೀಯ ಹೆದ್ದಾರಿಗಳ ಉದ್ಘಾಟನೆ ಹಾಗೂ 18 ಹೊಸ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು,'ರಾಜ್ಯದಲ್ಲಿ 8,200 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಇದೆ. ಇದನ್ನು ₹3 ಲಕ್ಷ ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಉದ್ದೇಶವಿದೆ. ಶೇ 90ರಷ್ಟು ಕಾಮಗಾರಿ ಮುಗಿದಿದೆ' ಎಂದರು.

'ಬೆಳಗಾವಿ- ಹುನಗುಂದ- ರಾಯಚೂರು ಮಾರ್ಗದಲ್ಲಿ ₹ 9 ಸಾವಿರ ಕೋಟಿ ವೆಚ್ಚದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪ್ರಗತಿಯಲ್ಲಿದೆ. ಬೆಳಗಾವಿ- ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಮಾಡಿ ಷಟ್ಪಥ, ಬೆಳಗಾವಿ ರಿಂಗ್ ರಸ್ತೆ ನಿರ್ಮಾಣಕ್ಕೆ ಸರ್ಕಾರ ಬದ್ಧವಾಗಿದೆ' ಎಂದರು. 'ಬೆಂಗಳೂರಿಗೆ ₹17 ಸಾವಿರ ಕೋಟಿ ವೆಚ್ಚದ ರಿಂಗ್ ರಸ್ತೆ ನಿರ್ಮಿಸಲಾಗುತ್ತಿದೆ. 2025ರ ಜನವರಿ ಒಳಗಾಗಿ ಕಾಮಗಾರಿ ಪೂರ್ಣಗೊಳ್ಳಲಿದೆ. ಇದರಿಂದ ಬೆಂಗಳೂರಿಗೆ ಅಲ್ಲದೇ ಇಡೀ ರಾಜ್ಯದ ಜನರಿಗೆ ಅನುಕೂಲವಾಗಲಿದೆ' ಎಂದರು.

'ಬೆಳಗಾವಿ- ಗೋವಾ ಬೈಪಾಸ್ ರಸ್ತೆಗೆ ₹3,400 ಕೋಟಿ ನೀಡಲಾಗಿದೆ. ಲೋಕೋಪಯೋಗಿ ಇಲಾಖೆಯಿಂದ 17 ಯೋಜನೆಗಳ ಬೇಡಿಕೆ ಸಲ್ಲಿಸಲಾಗಿದೆ. ಈಗಾಗಲೇ ಸಿಆರ್‌ಎಫ್ ಅಡಿ ₹2 ಸಾವಿರ ಕೋಟಿ ವೆಚ್ಚದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಕ್ಕೆ ಮಂಜೂರು ಮಾಡಲಾಗಿದೆ' ಎಂದರು.

ಎಥೆನಾಲ್‌ಗೆ ಪ್ರೋತ್ಸಾಹ: 'ನಾನು ಎಥೆನಾಲ್ ಇಂಧನದ ಕಾರನ್ನೇ ಓಡಿಸುತ್ತೇನೆ. ಭವಿಷ್ಯದಲ್ಲಿ ಎಥೆನಾಲ್ ಅತ್ಯಂತ ಮಹತ್ವ ಪಡೆಯಲಿದೆ. ಬೆಳಗಾವಿ ಜಿಲ್ಲೆ ಸೇರಿ ರಾಜ್ಯದಲ್ಲಿ ಹೆಚ್ಚು ಕಬ್ಬು ಬೆಳೆಯಲಾಗುತ್ತದೆ. ಅತಿ ಹೆಚ್ಚು ಕಾರ್ಖಾನೆಗಳೂ ಇವೆ. ನಿರಾತಂಕವಾಗಿ ಎಲ್ಲೆಡೆ ಎಥೆನಾಲ್ ಉತ್ಪಾದನೆಗೆ ಮುಂದಾಗಬೇಕು' ಎಂದು ಸಲಹೆ ನೀಡಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಮಂಗಲಾ ಅಂಗಡಿ, ಪಿ.ಸಿ.ಗದ್ದಿಗೌಡರ, ಸಂಗಣ್ಣ ಕರಡಿ, ರಾಜಾ ಅಮರೇಶ್ವರ ನಾಯಕ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ, ಶಾಸಕರಾದ ಅಭಯ ಪಾಟೀಲ, ವಿಠ್ಠಲ ಹಲಗೇಕರ, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ–2 ಪ್ರಕಾಶ ಹುಕ್ಕೇರಿ ಇದ್ದರು.

ಬೆಳಗಾವಿಯಲ್ಲಿ ಗುರುವಾರ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ದೀಪ ಬೆಳಗಿದರು. ವಿಠ್ಠಲ ಹಲಗೇಕರ, ಈರಣ್ಣ ಕಡಾಡಿ, ಸತೀಶ ಜಾರಕಿಹೊಳಿ, ಪ್ರಕಾಶ ಹುಕ್ಕೇರಿ, ಅಭಯ ಪಾಟೀಲ, ಅಣ್ಣಾಸಾಹೇಬ ಜೊಲ್ಲೆ, ಮಂಗಲಾ ಅಂಗಡಿ, ಪಿ.ಸಿ.ಗದ್ದಿಗೌಡರ, ಸಂಗಣ್ಣ ಕರಡಿ, ರಾಜಾ ಅಮರೇಶ್ವರ ನಾಯಕ ಪಾಲ್ಗೊಂಡರು – ಪ್ರಜಾವಾಣಿ ಚಿತ್ರ

'ಗಡ್ಕರಿ ಹೆದ್ದಾರಿಗಳ ಮಹಾರಾಜ'

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು 'ಹೆದ್ದಾರಿಗಳ ಮಹಾರಾಜ' ಎಂದು ಶ್ಲಾಘಿಸಿದರು.

'ನಿತಿನ್ ಗಡ್ಕರಿ ಅವರು ಹೆದ್ದಾರಿ ಸಚಿವರಾದ ಮೇಲೆ ಹೆದ್ದಾರಿಗಳ ಅಭಿವೃದ್ಧಿ ಪರ್ವ ಶುರುವಾಗಿದೆ. ಪಕ್ಷಾತೀತವಾಗಿ ಅವರು ಕೆಲಸ ಮಾಡುತ್ತಾರೆ. ಕೇಂದ್ರ ಹಾಗೂ ರಾಜ್ಯದಲ್ಲಿ ಬೇರೆಬೇರೆ ಸರ್ಕಾರಗಳು ಇವೆ ಎಂದು ನನಗೆ ಅನ್ನಿಸಿಯೇ ಇಲ್ಲ. ಕೇಂದ್ರದಲ್ಲೂ ನಮ್ಮದೇ ಸರ್ಕಾರವಿದೆ ಎಂಬಷ್ಟು ಪ್ರೋತ್ಸಾಹ ನೀಡಿದ್ದಾರೆ' ಎಂದು ಸತೀಶ ಜಾರಕಿಹೊಳಿ ಹೊಗಳಿದರು.

'ಗಡ್ಕರಿ ಅವರ ಕಚೇರಿಗೆ ಯಾವಾಗ ಹೋದರೂ ನನಗೆ ಭೇದದ ಅನುಭವ ಆಗಿಲ್ಲ. 12 ವರ್ಷಗಳಿಂದ ರಾಜ್ಯದಲ್ಲಿ ಬಾಕಿ ಇದ್ದ ಕಾಮಗಾರಿಗಳನ್ನು ಅವರೇ ಆಸಕ್ತಿ ವಹಿಸಿ ಮಾಡಿಕೊಟ್ಟಿದ್ದಾರೆ. ಬೆಳಗಾವಿ ನಗರದಲ್ಲಿ ಮೇಲ್ಸೇತುವೆ, ರಿಂಗ್ ರಸ್ತೆ, ಗೋಕಾಕ ಜಲಪಾತವನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣ ಮಾಡುವ ಭರವಸೆ ನೀಡಿದ್ದಾರೆ' ಎಂದರು.

ಲೋಕಾರ್ಪಣೆ ಆದ ಪ್ರಮುಖ ರಸ್ತೆಗಳು

- ₹1,622 ಕೋಟಿ ವೆಚ್ಚದ ಹೊನಗಾ- ಝಾಡಶಹಾಪುರ ಚತುಷ್ಪಥ ರಿಂಗ್ ರಸ್ತ
- ₹941 ಕೋಟಿ ವೆಚ್ಚದ ಚಿಕ್ಕೋಡಿ ಬೈಪಾಸ್‌ನಿಂದ- ಗೋಟೂರವರೆಗಿನ ಚತುಷ್ಪಥ
- ₹887 ಕೋಟಿ ವೆಚ್ಚದ ಶಿರಗುಪ್ಪಿಯಿಂದ ಅಂಕಲವರೆಗಿನ ರಸ್ತೆ ವಿಸ್ತರಣೆ
- ₹7,300 ಕೋಟಿ; ಶಂಕುಸ್ಥಾಪನೆ ನೆರವೇರಿಸಿದ 18 ಕಾಮಗಾರಿಗಳ ಅಂದಾಜು ವೆಚ್ಚ

ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿ ಡಿಸೆಂಬರ್‌ಗೆ ಸಿದ್ಧ

ಶಿವಮೊಗ್ಗ: 'ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳಲಿವೆ' ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಘೋಷಿಸಿದರು.

ಶಿವಮೊಗ್ಗ ಸೇರಿದಂತೆ ಏಳು ಜಿಲ್ಲೆಗಳ (ಬಳ್ಳಾರಿ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ) ವ್ಯಾಪ್ತಿಯಲ್ಲಿ ₹ 6,168.41 ಕೋಟಿ ಅಂದಾಜು ವೆಚ್ಚದ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಉದ್ಘಾಟಿಸಿ ಮಾತನಾಡಿದರು.

ಬಿ.ಎಚ್.ರಸ್ತೆ ವಿಸ್ತರಣೆ; ಜನವರಿಗೆ ಪೂರ್ಣ

ತುಮಕೂರು–ಶಿವಮೊಗ್ಗ ನಡುವಿನ ರಾಷ್ಟ್ರೀಯ ಹೆದ್ದಾರಿ- 206 (ಬಿ.ಎಚ್. ರಸ್ತೆ) ವಿಸ್ತರಣೆ ಕಾಮಗಾರಿ 2025ರ ಜನವರಿಗೆ ಪೂರ್ಣಗೊಳ್ಳಲಿದೆ ಎಂದು ಹೇಳಿದ ನಿತಿನ್ ಗಡ್ಕರಿ, ಆಗುಂಬೆ ಘಾಟಿಯಲ್ಲಿ ಟನೆಲ್ (ಸುರಂಗ ಮಾರ್ಗ) ನಿರ್ಮಾಣಕ್ಕೆ ಸ್ಥಳ ಪರಿಶೀಲಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಂಡೀಪುರ ಮೂಲಕ ಹಾಯ್ದು ಹೋಗುವ ಮೈಸೂರು- ವಯನಾಡು ಸಂಪರ್ಕ ಹೆದ್ದಾರಿಗೆ ಪರ್ಯಾಯವಾಗಿ ಮೈಸೂರು- ಮಲಪ್ಪುರಂ ನಡುವೆ ₹ 2500 ಕೋಟಿ ವೆಚ್ಚದಲ್ಲಿ ಹೆದ್ದಾರಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಕರ್ನಾಟಕದಲ್ಲಿ ಹೊಸದಾಗಿ 17 ರೋಪ್‌ವೇ ನಿರ್ಮಿಸಲಾಗುತ್ತಿದೆ ಎಂದು ಹೇಳಿದ ಸಚಿವ ಗಡ್ಕರಿ, ಉಡುಪಿ ಜಿಲ್ಲೆ ಕೊಲ್ಲೂರಿನಿಂದ– ಕೊಡಚಾದ್ರಿ ಬೆಟ್ಟಕ್ಕೆ ಹಾಗೂ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲು ಮಂಜೂರಾತಿ ನೀಡಿದರು. ಬೈಂದೂರು–ರಾಣೆಬೆನ್ನೂರು, ಸಾಗರ–ಆವಿನಹಳ್ಳಿ–ಮರಕುಟಗ ನಡುವಿನ ಹೆದ್ದಾರಿ ವಿಸ್ತರಣೆ ಕಾಮಗಾರಿಗೆ ಅನುಮತಿ ನೀಡಿದರು.

ದೇಶದಲ್ಲಿಯೇ ಅತ್ಯುತ್ತಮ ನಾಡಗೀತೆ: 'ಕರ್ನಾಟಕದ ನಾಡಗೀತೆ ಆಲಿಸಲು ನನಗೆ ಬಹಳ ಖುಷಿ ಆಗುತ್ತದೆ. ಇದು ಇಡೀ ದೇಶದಲ್ಲಿಯೇ ಸುಶ್ರಾವ್ಯವಾದ ಅತ್ಯುತ್ತಮ ನಾಡಗೀತೆಯಾಗಿದೆ. ಅದನ್ನು ರಚಿಸಿದವರಿಗೆ ಹಾಗೂ ಸಂಗೀತ ನೀಡಿದವರಿಗೆ ಧನ್ಯವಾದ ಹೇಳುವೆ' ಎಂದು ಗಡ್ಕರಿ ಹೇಳಿದರು.

ವಿಧಾನಸೌಧದ ಎದುರು ಸರ್ಕಾರ ಹುಂಡಿ ಇಡಲಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ಸರ್ಕಾರವು ಶ್ರೀಮಂತ ದೇವಾಲಯಗಳಿಗೆ ಕನ್ನ ಹಾಕುವ ಬದಲಿಗೆ ವಿಧಾನಸೌಧದ ಮುಂದೆ ಹುಂಡಿ ಇಡಲಿ, ದಾನಿಗಳು ಅಲ್ಲಿಗೇ ಬಂದು ದಾನ ಮಾಡುತ್ತಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, 'ಸರ್ಕಾರದ ದುರಾಡಳಿತದಿಂದಾಗಿ ಸರ್ಕಾರಿ ನೌಕರರಿಗೆ ಸಂಬಳ ಕೊಡಲೂ ಕಷ್ಟವಾಗುವ ಸ್ಥಿತಿ ಬಂದಿದೆ. 224 ವಿಧಾನಸಭಾ ಕ್ಷೇತ್ರಗಳಿಗೂ ಅನುದಾನ ಕೊಟ್ಟಿಲ್ಲ' ಎಂದು ದೂರಿದರು.

'ನಾಡಗೀತೆ ವಿಚಾರದಲ್ಲೂ ಎಡವಟ್ಟುಗಳನ್ನು ಮಾಡಿರುವ ಸರ್ಕಾರದ ಕಾರ್ಯಸೂಚಿ ಏನೆಂಬುದು ಆದೇಶಗಳಿಂದಲೇ ಗೊತ್ತಾಗುತ್ತದೆ. ಕನ್ನಡ ವಿರೋಧಿ ಸರ್ಕಾರವಿದು. ಕನ್ನಡ ನಾಡು–ನುಡಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಧಕ್ಕೆ ತರುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಲೋಕಸಭಾ ಚುನಾವಣೆ ಸೀಟು ಹಂಚಿಕೆ ವಿಷಯದಲ್ಲಿ ಜೆಡಿಎಸ್–ಬಿಜೆಪಿ ನಡುವೆ ಗೊಂದಲವಿಲ್ಲ. ಮುಂದೆಯೂ ಉದ್ಭವವಾಗುವುದಿಲ್ಲ. ಮಾರ್ಚ್ ಮೊದಲ ವಾರ ದೆಹಲಿಗೆ ತೆರಳಿ ಹೈಕಮಾಂಡ್ ಜೊತೆ ಚರ್ಚಿಸಲಿದ್ದೇನೆ. ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ, ಕಮಲದ ಚಿಹ್ನೆ ಮಾತ್ರವೇ ಅಭ್ಯರ್ಥಿ. ಬೇರ್‍ಯಾವ ಭಿನ್ನಾಭಿಪ್ರಾಯವೂ ಇಲ್ಲ' ಎಂದರು.

'ಮಂಗಳೂರಿನ ಮುಖಂಡ ಅರುಣ್‌ಕುಮಾರ್ ಪುತ್ತಿಲ್ ನನ್ನನ್ನು ಭೇಟಿ ಮಾಡಿದ್ದು ಸತ್ಯ. ಬೇಷರತ್ ಆಗಿ ಪಕ್ಷ ಸೇರುವಂತೆ ಹೇಳಿದ್ದೇನೆ. ಸ್ಥಳೀಯ ಮುಖಂಡರೊಂದಿಗೂ ಚರ್ಚಿಸುತ್ತೇನೆ. ನರೇಂದ್ರ ಮೋದಿ ನಾಯಕತ್ವಕ್ಕಾಗಿ ಎಲ್ಲರೂ ಒಂದಾಗಬೇಕು' ಎಂದರು.

'ಶಿಕ್ಷಕರ ಕ್ಷೇತ್ರದ ಚುನಾವಣೆ ಫಲಿತಾಂಶ ಮುಂದಿನ ದಿಕ್ಸೂಚಿಯಲ್ಲ. ನಂಜನಗೂಡು ಉಪ ಚುನಾವಣೆ ಬಳಿಕ ಸಿದ್ದರಾಮಯ್ಯ ಸರ್ಕಾರ ಏನಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಆಯಾ ಪಕ್ಷದ ಸರ್ಕಾರವಿದ್ದಾಗ ಉಪ ಚುನಾವಣೆಗಳು ಹೇಗೆ ನಡೆಯುತ್ತವೆ ಎಂಬುದೂ ಜನರಿಗೆ ಗೊತ್ತಿದೆ' ಎಂದರು.

ಬಿಜೆಪಿ ನಾಯಕರು ಮೊದಲು ನಿಯಮ ಓದಲಿ: ರಾಮಲಿಂಗಾರೆಡ್ಡಿ

ಬೆಂಗಳೂರು: ಮುಜರಾಯಿ ದೇವಸ್ಥಾನಗಳ ಆದಾಯವನ್ನು ಬೇರೆ ಧರ್ಮಗಳ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಗೆ ಬಳಕೆ ಮಾಡಲಾಗುತ್ತದೆ ಎಂದು ಆರೋಪಿಸುವ ಬಿಜೆಪಿ ನಾಯಕರು ಮೊದಲು ನಿಯಮಗಳನ್ನು ಓದಿ ತಿಳಿದುಕೊಳ್ಳಲಿ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

ಅಧಿಕ ಆದಾಯ ಇರುವ ದೇವಸ್ಥಾನಗಳಿಂದ ಸಂಗ್ರಹಿಸಲು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಗೆ 2011ರಲ್ಲಿ ತಿದ್ದುಪಡಿ ಮಾಡಲಾಗಿತ್ತು. ಈ ನಿಧಿಯನ್ನು ಯಾವುದಕ್ಕೆ ಬಳಸಬೇಕು ಎಂಬುದರ ಬಗ್ಗೆ ಸ್ಪಷ್ಟ ನಿಯಮಗಳಿವೆ ಎಂದು ಅವರು ಹೇಳಿದ್ದಾರೆ.

ಆದಾಯ ಕಡಿಮೆ ಇರುವ ಹಿಂದೂ ಧಾರ್ಮಿಕ ಸಂಸ್ಥೆಗಳಿಗೆ ಸಹಾಯಧನ ನೀಡಲು, ವೇದಪಾಠ ಶಾಲೆ, ಆಗಮ ಪಾಠಶಾಲೆಗಳಿಗೆ, ಅರ್ಚಕರಿಗೆ ತರಬೇತಿ ನೀಡಲು ಬಳಸಬಹುದು. ಹಿಂದೂ ಧರ್ಮ ತತ್ವಶಾಸ್ತ್ರ ಅಥವಾ ಶಾಸ್ತ್ರಗಳ ಅಧ್ಯಯನಕ್ಕೆ, ದೇವಸ್ಥಾನಗಳ ವಾಸ್ತುಶಿಲ್ಪ ಶಿಕ್ಷಣ ನೀಡುವ ವಿದ್ಯಾಸಂಸ್ಥೆಗಳ ನಿರ್ವಹಣೆಗೆ ಹೀಗೆ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ಉದ್ದೇಶಗಳಿಗೆ ಸಂಬಂಧಿಸಿದಂತೆ ಮಾತ್ರ ಬಳಸಬೇಕು ಎಂದೂ ನಿಯಮ ಇದೆ ಎಂದು ವಿವರಿಸಿದ್ದಾರೆ.

ಮಹಾಮಸ್ತಕಾಭಿಷೇಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ವೇಣೂರು (ದಕ್ಷಿಣ ಕನ್ನಡ): ಮುಸ್ಸಂಜೆಯಲ್ಲೂ ಇಲ್ಲಿನ 'ಬಾಹುಬಲಿ ಬೆಟ್ಟ' ಬೆಳಗುತ್ತಿತ್ತು. ಭಗವಾನ್ ಬಾಹುಬಲಿಯ ಮುಗುಳುನಗೆಯ ಮೋಹಕ ಮೂರ್ತಿಗೆ ಮಹಾ ಮಜ್ಜನ ಶುರುವಾಗುತ್ತಿದ್ದಂತೆ ನೆರೆದಿದ್ದ ಶ್ರಾವಕ- ಶ್ರಾವಕಿಯರ ಹರ್ಷೋದ್ಗಾರ ಮುಗಿಲುಮುಟ್ಟಿತು.

ವೇಣೂರಿನ ಬಾಹುಬಲಿ ಮೂರ್ತಿಗೆ ಈ ಶತಮಾನದ ಮೂರನೇ ಮಹಾಮಸ್ತಕಾಭಿಷೇಕ ಒಂಬತ್ತು ದಿನ ನಡೆಯಲಿದ್ದು, ಗುರುವಾರ ಚಾಲನೆ ದೊರೆಯಿತು. ಮಸ್ತಕಾಭಿಷೇಕ ಸಮಿತಿ ಕಾರ್ಯಾಧ್ಯಕ್ಷ, ಅಳದಂಗಡಿ ಅರಮನೆಯ ತಿಮ್ಮಣ್ಣರಸ ಡಾ. ಪದ್ಮಪ್ರಸಾದ ಅಜಿಲ ಮತ್ತು ಅವರ ಪರಿವಾರದವರು ಮೊದಲ ಸೇವಾಕರ್ತರಾಗಿ ಅಭಿಷೇಕ ನೆರವೇರಿಸಿದರು.

ಏಕಶಿಲೆಯಲ್ಲಿ ರೂಪುಗೊಂಡಿರುವ 35 ಅಡಿ ಎತ್ತರದ ಈ ವಿರಾಗಿಯ ಮೂರ್ತಿಗೆ ಮೊದಲು ಜಲಾಭಿಷೇಕವಾಯಿತು. ನಂತರ ಸೀಯಾಳ (ಎಳನೀರು), ಇಕ್ಷುರಸ (ಕಬ್ಬಿನ ಹಾಲು), ಅರಿಶಿಣ, ಗಂಧ, ಚಂದನ, ಕಷಾಯ ಮೊದಲಾದ ಮಂಗಳ ದ್ರವ್ಯಗಳಿಂದ ಅಭಿಷೇಕ ನಡೆಸಲಾಯಿತು. ಯುಗಳ ಮುನಿಗಳಾದ ಅಮೋಘಕೀರ್ತಿ ಮುನಿಮಹಾರಾಜರು ಮತ್ತು ಅಮರಕೀರ್ತಿ ಮುನಿಮಹಾರಾಜರ ಉಪಸ್ಥಿತಿಯಲ್ಲಿ, ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನ ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ಮಹಾಮಸ್ತಕಾಭಿಷೇಕ ನಡೆಯುತ್ತಿದೆ.

ಮಹಾಮಸ್ತಕಾಭಿಷೇಕ ಸಂಭ್ರಮದಲ್ಲಿರುವ ವೇಣೂರಿನ ಬಾಹುಬಲಿ ಮೂರ್ತಿ ಹಾಲಿನ ಅಭಿಷೇಕದಲ್ಲಿ ಕಂಗೊಳಿಸಿದ ಪರಿ –ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್

ಮಂಗನ ಕಾಯಿಲೆಗೆ ವೃದ್ಧೆ ಸಾವು

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಕೊರ್ಲಕೈ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಜಿಡ್ಡಿ ಎಂಬಲ್ಲಿ ಮಂಗನ ಕಾಯಿಲೆಗೆ ತುತ್ತಾಗಿದ್ದ 65 ವರ್ಷದ ಮಹಿಳೆಯೊಬ್ಬರು ಗುರುವಾರ ಮೃತಪಟ್ಟಿದ್ದಾರೆ.

'ಅನಾರೋಗ್ಯಕ್ಕೆ ತುತ್ತಾಗಿದ್ದ ಮಹಿಳೆಗೆ ಮಂಗನ ಕಾಯಿಲೆ ಸೋಂಕು ತಗುಲಿದ್ದು ದೃಢಪಟ್ಟಿತ್ತು. ಮಣಿಪಾಲ, ಸಾಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಮನೆಗೆ ಕರೆತರಲಾಗಿತ್ತು. ಆದರೆ, ಏಕಾಏಕಿ ಅಸ್ವಸ್ಥಗೊಂಡು ಅವರು ಮೃತಪಟ್ಟಿದ್ದಾರೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಒಂದೂವರೆ ತಿಂಗಳಲ್ಲಿ 43 ಮಂಗನ ಕಾಯಿಲೆ ಪ್ರಕರಣ ವರದಿಯಾಗಿದೆ. ಮೃತ ಮಹಿಳೆಯ ಮನೆಗೆ ಭೇಟಿ ನೀಡಿ, ಮಾಹಿತಿ ಪಡೆಯಲಾಗಿದೆ. ಕೊರ್ಲಕೈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿ ಸಿಬ್ಬಂದಿ, ಸೌಲಭ್ಯ ಒದಗಿಸಿ ತಕ್ಷಣ ಹೆಚ್ಚಿನ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ಅಧಿಕಾರಿ ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆಗೆ ಝಡ್ ಪ್ಲಸ್ ಭದ್ರತೆ

ನವದೆಹಲಿ(ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೇಂದ್ರ ಗೃಹ ಸಚಿವಾಲಯವು ಝಡ್ ಪ್ಲಸ್ ಭದ್ರತೆಯನ್ನು ಒದಗಿಸಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಸಿಆರ್‌ಪಿಎಫ್ ಕಮಾಂಡೊಗಳು ದೇಶದಾದ್ಯಂತ ಖರ್ಗೆ ಅವರಿಗೆ ಝಡ್ ಪ್ಲಸ್ ಭದ್ರತೆ ಒದಗಿಸುವರು. 30 ಕಮಾಂಡೊಗಳು ಮೂರು ಪಾಳಿಗಳಲ್ಲಿ ಭದ್ರತೆ ಒದಗಿಸುವ ಈ ವ್ಯವಸ್ಥೆಯು ಗುಂಡು ನಿರೋಧಕ ವಾಹನ, ಬೆಂಗಾವಲು ವಾಹನಗಳನ್ನು ಸಹ ಒಳಗೊಂಡಿದೆ.

ಕೆಲಸದ ಸ್ಥಳಗಳಲ್ಲಿ 'ಜೆಂಡರ್ ಆಡಿಟ್'

ಕೊಚ್ಚಿ (ಪಿಟಿಐ): ಕೆಲಸದ ಸ್ಥಳಗಳಲ್ಲಿ 'ಜೆಂಡರ್ ಆಡಿಟ್' (ಕಾರ್ಯಸ್ಥಳದಲ್ಲಿ ಇರುವ ಗಂಡಸರು ಹಾಗೂ ಮಹಿಳೆಯರ ಸಂಖ್ಯೆ ಹಾಗೂ ಕಾರ್ಯಕ್ಷಮತೆಯ ಪರಿಶೀಲನೆ) ನಡೆಸಲಾಗುವುದು. ಅಲ್ಲದೆ ಪುರುಷರಿಗೆ ತಕ್ಕಂತೆ ಮಹಿಳೆಯರಿಗೆ ಸಮಾನ ವೇತನ ನೀಡುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗುರುವಾರ ತಿಳಿಸಿದರು.

ರಾಜ್ಯದ ಮಹಿಳೆಯರೊಂದಿಗೆ ನಡೆದ ಮುಖಾಮುಖಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಉದ್ಯೋಗಗಳು ಮಹಿಳೆಯರಿಗೆ ಹೆಚ್ಚು ಅನುಕೂಲಕರವಾಗಿರಬೇಕು' ಎಂದರು.

ತಮ್ಮ ಸರ್ಕಾರದ ಮಹಿಳಾಸ್ನೇಹಿ ನೀತಿಗಳ ಕುರಿತು ವಿವರಿಸಿದ ಅವರು, 'ರಾಜ್ಯ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ ಎಲ್ಲ ವಿಶ್ವವಿದ್ಯಾಲಯಗಳ ವಿದ್ಯಾರ್ಥಿನಿಯರಿಗೆ ಋತುಚಕ್ರದ ರಜೆ ನೀಡುವ ಮೂಲಕ ಕೇರಳವು ದೇಶಕ್ಕೆ ಮಾದರಿಯಾಗಿದೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ರಾಷ್ಟ್ರೀಯ ಸಮೀಕ್ಷೆಯ ಪ್ರಕಾರವೂ ರಾಜ್ಯದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ಯುವತಿಯರ ಸಂಖ್ಯೆ ಹೆಚ್ಚಿದೆ' ಎಂದರು. 1997ರಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ 'ಜೆಂಡರ್ ಬಜೆಟ್' ಜಾರಿಗೊಳಿಸಿದ ಮೊದಲ ರಾಜ್ಯ ಎಂಬ ಹಿರಿಮೆಯೂ ಕೇರಳಕ್ಕಿದೆ ಎಂದು ತಿಳಿಸಿದರು.

ಕೇಂದ್ರ ಹೆಸರಿಗೆ ಮಾತ್ರ 'ಜೆಂಡರ್ ಬಜೆಟ್' ಅನುಸರಿಸತ್ತದೆ. ಆದರೆ ಇದರ ಅಂಕಿ ಅಂಶಗಳು ಒಮ್ಮೆಯೂ ಶೇ 6 ದಾಟಿಲ್ಲ ಎಂದು ಟೀಕಿಸಿದ ಪಿಣರಾಯಿ ವಿಜಯನ್, ಕೇರಳದಲ್ಲಿ ಈ ವರ್ಷದ ಒಟ್ಟು ಬಜೆಟ್‌ನಲ್ಲಿ ಶೇ 21.5ರಷ್ಟು 'ಜೆಂಡರ್ ಬಜೆಟ್' ಆಗಿದೆ ಎಂದರು.

ವರ್ಷಾಂತ್ಯಕ್ಕೆ ತೆರೆದ ಪುಸ್ತಕ ಪರೀಕ್ಷೆ ಪ್ರಯೋಗ

ನವದೆಹಲಿ (ಪಿಟಿಐ): ಸಿಬಿಎಸ್‌ಇ ಈ ವರ್ಷದ ಕೊನೆಯಲ್ಲಿ 9ರಿಂದ 12ನೇ ತರಗತಿಗಳಿಗೆ ಆಯ್ದ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ತೆರೆದ ಪುಸ್ತಕ ಪರೀಕ್ಷೆ ನಡೆಸಲು ಯೋಜಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2023ರ ಡಿಸೆಂಬರ್‌ನಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲಾಗಿತ್ತು. 10 ಮತ್ತು 12ನೇ ತರಗತಿಯ ಅಂತಿಮ ಪರೀಕ್ಷೆಗಳಲ್ಲಿ ಈ ಸ್ವರೂಪದ ಪರೀಕ್ಷಾ ಪದ್ಧತಿಯನ್ನು ಅಳವಡಿಸಿಕೊಳ್ಳುವ ಯೋಜನೆಯಿಲ್ಲ ಎಂದರು.

55ನೇ ಯತಿಗಳಾಗಿ ಆನಂದ ಬೋಧೇಂದ್ರ ಸರಸ್ವತಿ ಸ್ವಾಮೀಜಿ

ಸ್ವರ್ಣವಲ್ಲಿ: ಉತ್ತರಾಧಿಕಾರಿ ನಿಯೋಜನೆ

ಪ್ರಜಾವಾಣಿ ವಾರ್ತೆ

ಶಿರಸಿ: ಶಂಕರಾಚಾರ್ಯರ ಪರಂಪರೆಯ 1,300 ವರ್ಷಗಳ ಇತಿಹಾಸವುಳ್ಳ ಇಲ್ಲಿನ ಸ್ವರ್ಣವಲ್ಲಿ ಮಹಾಸಂಸ್ಥಾನದ ಉತ್ತರಾಧಿಕಾರಿ, 55ನೇ ಯತಿಗಳಾಗಿ ಆನಂದ ಬೋಧೇಂದ್ರ ಸರಸ್ವತಿ ಸ್ವಾಮೀಜಿ ಗುರುವಾರ ನಿಯೋಜನೆಗೊಂಡರು.

ಫೆಬ್ರುವರಿ 18ರಿಂದ ನಡೆಯುತ್ತಿರುವ ಶಿಷ್ಯ ಸ್ವೀಕಾರ ಕಾರ್ಯಕ್ರಮದ ಕೊನೆಯ ದಿನ ನಿಯೋಜಿತ ಯತಿಗಳು ಬೆಳಿಗ್ಗೆ ಶಾಲ್ಮಲಾ ನದಿಯಲ್ಲಿ ಜಲಾಶಯಗಮನ, ಸ್ನಾನ, ಸಾವಿತ್ರಿಪ್ರವೇಶ, ಪ್ರೇಷೋಚ್ಚಾರಣೆ ಮಾಡಿದರು. ನಂತರ ಕಾಷಾಯ ವಸ್ತ್ರ, ಬ್ರಹ್ಮದಂಡ ಧಾರಣೆ ಮಾಡಿದರು. ನದಿ ತಟದಿಂದ ಪಂಚವಾದ್ಯಗಳ ವಾದನ, ಮಾತೆಯರಿಂದ ಪೂರ್ಣಕುಂಭ ಸ್ವಾಗತ, ವೈದಿಕರ ವೇದಘೋಷಗಳ ಮೂಲಕ ಮೆರವಣಿಗೆಯಲ್ಲಿ ಯತಿಗಳನ್ನು ಮಠಕ್ಕೆ ಬರಮಾಡಿಕೊಳ್ಳಲಾಯಿತು.

ರಾಜ್ಯದ ವಿವಿಧ ಭಾಗದ ಯತಿಗಳ ಸಮ್ಮುಖದಲ್ಲಿ ಪ್ರಣವ ಮಹಾವಾಕ್ಯೋಪದೇಶ ಮಾಡಿ ಸ್ವರ್ಣವಲ್ಲಿ ಪೀಠದ 54ನೇ ಯತಿಗಳಾದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅವರು ನೂತನ ಯತಿಗಳಿಗೆ 'ಆನಂದ ಬೋಧೇಂದ್ರ ಸರಸ್ವತಿ ಸ್ವಾಮೀಜಿ' (ಮೂಲ ಹೆಸರು ನಾಗರಾಜ ಭಟ್ಟ ಗಂಗೆಮನೆ) ಎಂದು ಮೂರು ಬಾರಿ ಹೆಸರು ಘೋಷಿಸಿ ನಾಮಕರಣ ಮಾಡಿದರು.

ಮೂವತ್ತು ಸಾವಿರಕ್ಕೂ ಹೆಚ್ಚು ಭಕ್ತರು ಹರ್ಷೋದ್ಗಾರದ ಮೂಲಕ ಸ್ವಾಗತಿಸಿದರು. ನಂತರ ಧಾರ್ಮಿಕ ಕಾರ್ಯಕ್ರಮದ ಪ್ರಯುಕ್ತ ಪರ್ಯಂಕಶೌಚ, ಮಠದಲ್ಲಿ ಯೋಗ ಪಟ್ಟ, ಬ್ರಹ್ಮವಿದಾಶೀರ್ವಚನ ನಡೆಯಿತು.

ಕಾಂಚೀಪುರಂನ ಆತ್ಮಬೋಧ ತೀರ್ಥ ಸ್ವಾಮೀಜಿ, ಸಹಜಾನಂದ ತೀರ್ಥ ಸ್ವಾಮೀಜಿ, ಅಂಜನಾನಂದ ತೀರ್ಥ ಸ್ವಾಮೀಜಿ, ಯಡತೊರೆ ಶಂಕರ ಭಾರತಿ ಸ್ವಾಮೀಜಿ, ಹರಿಹರ ಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸ್ವರೂಪಿ ಸ್ವಾಮೀಜಿ, ಬೆಂಗಳೂರಿನ ಕೂಡ್ಲಿ ಶೃಂಗೇರಿ ಮಠದ ವಿದ್ಯಾ ವಿಶ್ವೇಶ್ವರ ಭಾರತಿ ಸ್ವಾಮೀಜಿ, ಹೊಳೆನರಸೀಪುರದ ಪ್ರಕಾಶಾನಂದೇಂದ್ರ ಸ್ವಾಮೀಜಿ, ನೆಲಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ, ತುರುವೇಕೆರೆ ಪ್ರಣವಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಸ್ವರ್ಣವಲ್ಲಿ ಮಹಾಸಂಸ್ಥಾನದ 55ನೇ ಯತಿಗಳಾಗಿ 'ಆನಂದ ಬೋಧೇಂದ್ರ ಸರಸ್ವತಿ ಸ್ವಾಮೀಜಿ' ಅವರನ್ನು ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಗುರುವಾರ ಮಠದಲ್ಲಿ ನಡೆದ ಧಾರ್ಮಿಕ ವಿಧಿವಿಧಾನಗಳ ಮೂಲಕ ನಿಯೋಜಿಸಿದರು

'ಸುಪ್ರೀಂ' ತೀರ್ಪಿಗೆ 'ಪ್ರತೀಕಾರ'ವಾಗಿ ಸಮನ್ಸ್ –ಎಎಪಿ

ನವದೆಹಲಿ (ಪಿಟಿಐ): ಚಂಡೀಗಢ ಮೇಯರ್ ಚುನಾವಣೆ ಕುರಿತ ಸುಪ್ರೀಂ ಕೋರ್ಟ್‌ನ ತೀರ್ಪಿಗೆ 'ಪ್ರತೀಕಾರ'ವಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಇ.ಡಿ ಮತ್ತೆ ಸಮನ್ಸ್ ನೀಡಿದೆ ಎಂದು ಎಎಪಿ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕಿ ಆತಿಶಿ, 'ಕೇಜ್ರಿವಾಲ್ ಮತ್ತು ಎಎಪಿ ಅನ್ನು ಹೆದರಿಸುವುದು ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿರುವುದರ ಉದ್ದೇಶ' ಎಂದು ಟೀಕಿಸಿದರು.

'ಸಮನ್ಸ್ ನೀಡುವುದರ ಮೂಲಕ ಕೇಜ್ರಿವಾಲ್ ಅವರನ್ನು ಎದುರಿಸಲಾಗದು. ಪ್ರಜಾಪ್ರಭುತ್ವ ರಕ್ಷಿಸುವುದರ ಕ್ರಮವಾಗಿ ಬಿಜೆಪಿ ವಿರುದ್ಧದ ಹೋರಾಟ ಮುಂದುವರಿಯಲಿದೆ' ಎಂದು ಆತಿಶಿ ಹೇಳಿದರು.

'ಸಮನ್ಸ್ ಜಾರಿ ಮಾಡಿದರೂ ಕೇಜ್ರಿವಾಲ್ ವಿಚಾರಣೆಗೆ ಹಾಜರಾಗುತ್ತಿಲ್ಲ ಎಂದು ಇ.ಡಿ ಸ್ವತಃ ಕೋರ್ಟ್ ಮೆಟ್ಟಿಲೇರಿದೆ. ಕೋರ್ಟ್ ಆದೇಶ ಬರುವವರೆಗೂ ಇ.ಡಿ ಏಕೆ ಕಾಯುತ್ತಿಲ್ಲ' ಎಂದು ಆತಿಶಿ ಪ್ರಶ್ನಿಸಿದರು. ಇ.ಡಿ ಅರ್ಜಿಗೆ ಸಂಬಂಧಿಸಿದಂತೆ ಮಾರ್ಚ್ 16ರಂದು ವಿಚಾರಣೆಗೆ ಹಾಜರಾಗುವಂತೆ ಕೇಜ್ರಿವಾಲ್ ಅವರಿಗೆ ಕೋರ್ಟ್ ಆದೇಶಿಸಿದೆ.

ಆತಿಶಿ ಆರೋಪ ಕುರಿತಂತೆ ಇ.ಡಿ ಅಥವಾ ಬಿಜೆಪಿ ಪ್ರತಿಕ್ರಿಯಿಸಿಲ್ಲ. ದೆಹಲಿ ಅಬಕಾರಿ ಹಗರಣದ ಸಂಬಂಧ ಹಣ ಅಕ್ರಮ ವರ್ಗಾವಣೆ ಪ್ರಕರಣ ಕುರಿತಂತೆ 7ನೇ ಬಾರಿಗೆ ಸಮನ್ಸ್ ಜಾರಿ ಮಾಡಿದೆ ಅಧಿಕೃತ ಮೂಲಗಳು ಗುರುವಾರ ತಿಳಿಸಿವೆ. ಇ.ಡಿ ಸಮನ್ಸ್ 'ನಿಯಮಬಾಹಿರ' ಎಂದು ಪ್ರತಿಪಾದಿಸಿರುವ ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜರಾಗಿಲ್ಲ.

ಕೇಜ್ರಿವಾಲ್‌ಗೆ ಏಳನೇ ಸಮನ್ಸ್ ಜಾರಿ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಫೆಬ್ರುವರಿ 26ರಂದು ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ), ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಮನ್ಸ್ ಜಾರಿಗೆ ಮಾಡಿದೆ.

ಇದು, ಕೇಜ್ರಿವಾಲ್ ಅವರಿಗೆ ಜಾರಿ ಮಾಡಿರುವ ಏಳನೇ ಸಮನ್ಸ್. ಆದರೆ, ಈ ಸಮನ್ಸ್‌ಗಳು 'ಕಾನೂನುಬಾಹಿರ' ಎಂದು ಪ್ರತಿಪಾದಿಸಿರುವ ಕೇಜ್ರಿವಾಲ್ ವಿಚಾರಣೆಗೆ ಹಾಜರಾಗಿಲ್ಲ. ಸಮನ್ಸ್ ಹಿಂಪಡೆಯುವಂತೆ ಇ.ಡಿಗೆ ಪತ್ರ ಬರೆದಿದ್ದಾರೆ.

'ಪರಂಪರೆ, ಅಭಿವೃದ್ಧಿ ನಡುವೆ ಶತ್ರುತ್ವ ಸೃಷ್ಟಿಸಿದ ಕಾಂಗ್ರೆಸ್'

ಗುಜರಾತ್‌ನ ತಾರಭ್‌ನಲ್ಲಿರುವ ವಾಲಿನಾಥ ಮಹಾದೇವ ದೇವಸ್ಥಾನದಲ್ಲಿ ಪ್ರಧಾನಿ ಮೋದಿ ಗುರುವಾರ ಪೂಜೆ ನೆರವೇರಿಸಿದರು ಪಿಟಿಐ ಚಿತ್ರ

ಮೆಹ್ಸಾಣಾ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾದ ನಂತ ರವೂ ಕಾಂಗ್ರೆಸ್ ನಕಾರಾತ್ಮಕತೆಯಲ್ಲಿ ಬದುಕುವುದನ್ನು ಮುಂದುವರಿಸುತ್ತಿದ್ದು, ದ್ವೇಷದ ದಾರಿಯನ್ನು ಬಿಡಲು ಸಿದ್ಧವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷವನ್ನು ಗುರುವಾರ ಟೀಕಿಸಿದರು.

ಗುಜರಾತ್‌ನ ಮೆಹ್ಸಾಣಾ ಜಿಲ್ಲೆ ಯಲ್ಲಿ ವಾಲಿನಾಥ ಮಹಾದೇವ ದೇವ ಸ್ಥಾನ ಉದ್ಘಾಟಿಸಿದ ನಂತರ ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಪ್ರಧಾನಿ ₹8,350 ಕೋಟಿ ಮೊತ್ತದ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

'ಸ್ವತಂತ್ರ ಭಾರತದಲ್ಲಿ ದೀರ್ಘಕಾಲದಿಂದಲೂ ಕಾಂಗ್ರೆಸ್ ಪಕ್ಷವು ಪರಂಪರೆ ಮತ್ತು ಅಭಿವೃದ್ಧಿಯ ನಡುವೆ ಬಿಕ್ಕಟ್ಟು ಹಾಗೂ ಶತ್ರುತ್ವವನ್ನು ಸೃಷ್ಟಿಸಿದೆ' ಎಂದು ಅವರು ಹೇಳಿದರು.

'ದೇಶವನ್ನು ದಶಕಗಳ ಕಾಲ ಆಳಿದ ಕಾಂಗ್ರೆಸ್ ಇದಕ್ಕೆಲ್ಲ ಕಾರಣ. ಸೋಮನಾಥ ದೇವಾಲಯವನ್ನೂ ವಿವಾದದ ಕೇಂದ್ರವಾಗಿ ಮಾಡಿದವರು ಇವರು' ಎಂದು ಮೋದಿ ವಾಗ್ದಾಳಿ ನಡೆಸಿದರು.

ಹಿಮಕುಸಿತ: ವಿದೇಶಿ ಸ್ಕೀಯರ್ ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನ ಜನಪ್ರಿಯ ಸ್ಕೀಯಿಂಗ್ ತಾಣದ ಇಳಿಜಾರುಗಳಲ್ಲಿ ಗುರುವಾರ ಹಿಮಕುಸಿತ ಸಂಭವಿಸಿದೆ. ಇದರಲ್ಲಿ ಸಿಲುಕಿ ಒಬ್ಬ ವಿದೇಶಿ ಸ್ಕೀಯರ್ ಮೃತಪಟ್ಟಿದ್ದು, ಮತ್ತೊಬ್ಬರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐವರು ಸ್ಕೀಯರ್‌ಗಳನ್ನು ರಕ್ಷಿಸಲಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಕಾಂಗ್‌ದೂರಿ ಇಳಿಜಾರುಗಳಲ್ಲಿ ಹಿಮಕುಸಿತ ಉಂಟಾಗಿ, ಹಲವು ಮಂದಿ ಸ್ಕೀಯರ್‌ಗಳು ಸಿಕ್ಕಿಬಿದ್ದಿದ್ದರು. ವಿದೇಶೀಯರು ಸ್ಥಳೀಯ ಮಾರ್ಗದರ್ಶಕರಿಲ್ಲದೇ ಇಳಿಜಾರುಗಳಿಗೆ ಹೋಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾ ಸಿಬ್ಬಂದಿ, ಜಮ್ಮು ಮತ್ತು ಕಾಶ್ಮೀರ ಆಡಳಿತದ ಗಸ್ತು ತಂಡ ಶೋಧ ಕಾರ್ಯಾಚರಣೆ ನಡೆಸುತ್ತಿದೆ.

80 ವಿದ್ಯಾರ್ಥಿಗಳ ರಕ್ಷಣೆ: ಜಮ್ಮುವಿನಲ್ಲಿ ಸಂಭವಿಸಿದ ಭಾರಿ ಹಿಮಪಾತ ಮತ್ತು ಭೂಕುಸಿತದಿಂದಾಗಿ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿಲುಕಿ ಆತಂಕಗೊಂಡಿದ್ದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ಸಿಬ್ಬಂದಿಯನ್ನು ಸೇನಾ ಪಡೆಗಳು ರಕ್ಷಿಸಿವೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಬುಧವಾರ ಭಾರಿ ಹಿಮಪಾತ ಮತ್ತು ಭೂಕುಸಿತದಿಂದ ರಸ್ತೆಯಲ್ಲಿ ಸಂಚಾರ ಅಸಾಧ್ಯವಾಗಿ ಅನೇಕ ಪ್ರಯಾಣಿಕರು ಜಮ್ಮು-ಶ್ರೀನಗರ ಹೆದ್ದಾರಿಯಲ್ಲಿ ಸಿಲುಕಿದ್ದರು. ಇದರಲ್ಲಿ ರಾಜಸ್ಥಾನದ ಕಾನೂನು ಕಾಲೇಜಿನ 74 ವಿದ್ಯಾರ್ಥಿಗಳು ಮತ್ತು ಏಳು ಸಿಬ್ಬಂದಿ ಕೂಡ ಇದ್ದರು. ಸೇನಾ ಪಡೆಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯನ್ನು ರಕ್ಷಣೆ ಮಾಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರಕ್ಕೆ ಪ್ರವಾಸ ಬಂದಿದ್ದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ರಾಷ್ಟ್ರೀಯ ಹೆದ್ದಾರಿ ಬಂದ್ ಆಗಿದ್ದರಿಂದ ಮೂರು ದಿನಗಳ ಕಾಲ ಖಾಜಿಗುಂಡ್‌ನಲ್ಲಿ ಸಿಲುಕಿಕೊಂಡಿದ್ದರು.

ಕೀರು ಜಲವಿದ್ಯುತ್ ಯೋಜನೆಯಲ್ಲಿ ಭ್ರಷ್ಟಾಚಾರ

ಮಲಿಕ್ ಮನೆ ಸೇರಿ 30 ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): ಕೀರು ಜಲವಿದ್ಯುತ್ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರ ಮನೆ ಸೇರಿದಂತೆ 30 ಕಡೆಗಳಲ್ಲಿ ಸಿಬಿಐ ಅಧಿಕಾರಿಗಳು ಗುರುವಾರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಬಿಹಾರ, ದೆಹಲಿ ಮತ್ತು ಮುಂಬೈನಲ್ಲಿ ಏಕಕಾಲಕ್ಕೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಲಿಕ್ ಅವರಿಗೆ ನಂಟಿರುವ ದೆಹಲಿಯ ಆರ್.ಕೆ. ಪುರಂ, ದ್ವಾರಕಾ ಮತ್ತು ಏಷ್ಯನ್ ಗೇಮ್ಸ್ ವಿಲೇಜ್‌ನ ವಿವಿಧೆಡೆ ಹಾಗೂ ಗುರುಗ್ರಾಮ ಮತ್ತು ಬಾಗ್‌ಪತ್‌ನಲ್ಲೂ ಶೋಧ ನಡೆದಿದೆ ಎಂದು ಮೂಲಗಳು ವಿವರಿಸಿವೆ.

ಸತ್ಯಪಾಲ್ ಮಲಿಕ್

ಚೆನಾಬ್ ವ್ಯಾಲಿ ಪವರ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ನವೀನ್ ಕುಮಾರ್ ಚೌಧರಿ ಹಾಗೂ ಪಟೇಲ್ ಎಂಜಿನಿಯರಿಂಗ್ ಲಿಮಿಟೆಡ್‌ನ ಅಧಿಕಾರಿಗಳಿಗೆ ಸೇರಿದ ಸ್ಥಳಗಳಲ್ಲೂ ಶೋಧ ನಡೆದಿದೆ ಎಂದಿವೆ.

'ಅನಾರೋಗ್ಯದ ಕಾರಣ ನಾನು ಆಸ್ಪತ್ರೆಗೆ ದಾಖಲಾಗಿದ್ದೇನೆ. ಸರ್ವಾಧಿಕಾರಿಗಳು ತನಿಖಾ ಸಂಸ್ಥೆಗಳನ್ನು ಬಳಸಿ ನನ್ನ ಮನೆಯಲ್ಲಿ ಶೋಧ ನಡೆಸಿದ್ದಾರೆ. ನನ್ನ ಚಾಲಕ ಮತ್ತು ಸಹಾಯಕನ ಮನೆಯಲ್ಲೂ ಶೋಧ ನಡೆದಿದೆ ಮತ್ತು ಅವರಿಗೆ ಅನಗತ್ಯವಾಗಿ ಕಿರುಕುಳ ನೀಡಲಾಗಿದೆ. ನಾನು ರೈತನ ಮಗ. ಇಂತಹ ಶೋಧಕಾರ್ಯಗಳಿಗೆ ಹೆದರುವುದಿಲ್ಲ. ನಾನು ರೈತರ ಜೊತೆಗಿದ್ದೇನೆ' ಎಂದು ಸತ್ಯಪಾಲ್ ಮಲಿಕ್ ಅವರು ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

₹2,200 ಕೋಟಿ ಮೌಲ್ಯದ ಕೀರು ಜಲವಿದ್ಯುತ್ ಯೋಜನೆಯ ಕೆಲಸವನ್ನು ಗುತ್ತಿಗೆಗೆ ನೀಡುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿವೆ ಎಂದು ಅಧಿಕಾರಿಗಳು ತಿಳಿಸಿದರು.

ಮಲಿಕ್ ಅವರು 2018ರ ಆಗಸ್ಟ್ 23ರಿಂದ 2019 ರ ಅಕ್ಟೋಬರ್ 30ರ ವರೆಗೆ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು. ಈ ಅವಧಿಯಲ್ಲಿ ಎರಡು ಯೋಜನೆಗಳ ಕಡತವನ್ನು ವಿಲೇವಾರಿ ಮಾಡಲು ₹300 ಕೋಟಿ ಲಂಚದ ಆಮಿಷವೊಡ್ಡಲಾಗಿತ್ತು ಎಂದು ಈ ಹಿಂದೆ ಅವರು ಆರೋಪಿಸಿದ್ದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಅಗತ್ಯವಿಲ್ಲ'

ವಯನಾಡ್ (ಪಿಟಿಐ): ವನ್ಯಜೀವಿ ಸಂರಕ್ಷಣಾ ಕಾಯ್ದೆ– 1972ರ ಸೆಕ್ಷನ್ 11ರ ಅಡಿ ಕಾಡುಹಂದಿಗಳನ್ನು 'ಉಪದ್ರವಿ' ಪ್ರಾಣಿ ಎಂದು ಘೋಷಿಸಲು ಮುಖ್ಯ ವನ್ಯಜೀವಿ ರಕ್ಷಕರಿಗೆ (ಸಿಡಬ್ಲ್ಯುಡಬ್ಲ್ಯು) ಅಧಿಕಾರವಿದೆ. ಅದಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿಲ್ಲ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರು ಗುರುವಾರ ಹೇಳಿದರು.

ಕೇರಳದಲ್ಲಿ ಜನರ ಮೇಲೆ ವನ್ಯಜೀವಿಗಳು ದಾಳಿ ನಡೆಸಿದ ಪ್ರಕರಣಗಳು ವರದಿಯಾದ ಕಾರಣ ಯಾದವ್ ಅವರು ಬುಧವಾರ ವಯನಾಡ್‌ಗೆ ಭೇಟಿ ನೀಡಿದರು. ಅಲ್ಲಿಯ ಸ್ಥಳೀಯ ಆಡಳಿತ ಮತ್ತು ಅರಣ್ಯಾಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಅವರು ಮಾಧ್ಯಮಗಳ ಎದುರು ಹೀಗೆ ಹೇಳಿದರು.

ಮಾನವ ಮತ್ತು ವನ್ಯಜೀವಿ ನಡುವಿನ ಸಂಘರ್ಷ ತಡೆಯುವ ಸಲುವಾಗಿ ವನ್ಯಜೀವಿ ಸಂರಕ್ಷಣೆ ಕಾಯ್ದೆಗೆ ತಿದ್ದುಪಡಿ ತರುವಂತೆ ಕೇರಳ ವಿಧಾನಸಭೆಯು ಈಚೆಗಷ್ಟೇ ನಿರ್ಣಯ ಕೈಗೊಂಡಿದೆ. ಕಾಡಿನಿಂದ ಹೊರಬಂದು ಮಾನವ ವಸತಿ ಪ್ರದೇಶಗಳಲ್ಲಿ ತಮ್ಮ ಸಂತತಿ ಹೆಚ್ಚಿಸಿಕೊಳ್ಳುತ್ತಿರುವ ಕಾಡುಹಂದಿಗಳನ್ನು 'ಉಪದ್ರವಿ' (ಬೆಳೆ, ಮಾನವ ಮತ್ತು ಸಾಕು ಪ್ರಾಣಿಗಳಿಗೆ ಅಪಾಯ ತಂದೊಡ್ಡುವ ಪ್ರಾಣಿಗಳು) ಜೀವಿಗಳು ಎಂದು ಘೋಷಿಸುವಂತೆಯೂ ನಿರ್ಣಯದಲ್ಲಿ ಹೇಳಲಾಗಿತ್ತು. ಈ ಹಿನ್ನೆಲೆಯಲ್ಲಿ ಸಚಿವರ ಹೇಳಿಕೆ ಮಹತ್ವ ಪಡೆದಿದೆ.

'ಸಮಸ್ಯೆ ಉಂಟುಮಾಡುವ ಪ್ರಾಣಿಗಳನ್ನು ಬಲೆಗೆ ಬೀಳಿಸಲು, ಸೆರೆ ಹಿಡಿಯಲು ಮತ್ತು ಕೊಲ್ಲಲು ಸಿಡಬ್ಲ್ಯುಡಬ್ಲ್ಯುಗೆ ಅಧಿಕಾರವಿದೆ. ಆದರೆ, ಈ ಕೆಲಸವನ್ನು ಎಚ್ಚರದಿಂದ ನಿರ್ವಹಿಸಿ, ಕೃಷಿ ಸಮುದಾಯ ಮತ್ತು ಅವರ ಬೆಳೆಗಳನ್ನು ರಕ್ಷಿಸುವಂತೆ ನಾನು ಕೇರಳ ಸರ್ಕಾರವನ್ನು ಒತ್ತಾಯಿಸುತ್ತೇನೆ' ಎಂದರು.

'ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ನೀಡುವ ಪರಿಹಾರವನ್ನು ₹5 ಲಕ್ಷದಿಂದ ₹10 ಲಕ್ಷಕ್ಕೆ ಏರಿಸಲಾಗಿದೆ. ಸಂತ್ರಸ್ತರ ಕುಟುಂಬಗಳಿಗೆ ರಾಜ್ಯ ಸರ್ಕಾರವು ಕೂಡಲೇ ಪರಿಹಾರ ಮೊತ್ತ ನೀಡಬೇಕು ಮತ್ತು ಇದು ಪಾರದರ್ಶಕ ವಾಗಿ ನಡೆಯಬೇಕು. ರಾಜ್ಯ ಸರ್ಕಾ ರವು ವಾರ್ಷಿಕ ಕಾರ್ಯಾಚರಣೆ ಯೋಜನೆಯನ್ನು (ಎಪಿಒ) ಕೇಂದ್ರ ಸರ್ಕಾರದ ಮುಂದಿಟ್ಟಾಗಲೆಲ್ಲಾ ನಾವು ಹಣ ಬಿಡುಗಡೆ ಮಾಡಿದ್ದೇವೆ. 2023–24ರ ಆರ್ಥಿಕ ವರ್ಷದಲ್ಲಿ ಹಲವಾರು ಯೋಜನೆಗಳ ಅಡಿ ಕೇರಳಕ್ಕೆ ಕೇಂದ್ರವು ₹15.82 ಕೋಟಿ ಹಣ ನೀಡಿದೆ' ಎಂದರು.

ಮೃತ ರೈತನನ್ನು 'ಹುತಾತ್ಮ' ಎಂದು ಘೋಷಿಸಲು ರೈತ ಮುಖಂಡರ ಒತ್ತಾಯ

ಕೊಲೆ ಪ್ರಕರಣ ದಾಖಲಿಸಲು ಆಗ್ರಹ

ಚಂಡೀಗಢ (ಪಿಟಿಐ): ಪಂಜಾಬ್–ಹರಿಯಾಣದ ಖನೌರಿ ಗಡಿಯಲ್ಲಿ ಪ್ರತಿಭಟನೆ ನಿರತ ರೈತನ ಸಾವಿಗೆ ಕಾರಣರಾದವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಬೇಕು ಹಾಗೂ ಮೃತ ರೈತನನ್ನು 'ಹುತಾತ್ಮ' ಎಂದು ಘೋಷಿಸಬೇಕು ಎಂದು ರೈತ ಮುಖಂಡರು ಗುರುವಾರ ಒತ್ತಾಯಿಸಿದ್ದಾರೆ.

ಈ ಸಂಬಂಧ ಪಂಜಾಬ್ ಸರ್ಕಾರ ಐಪಿಸಿ ಕಲಂ 302ರ ಅಡಿಯಲ್ಲಿ ಕೊಲೆ ಪ್ರಕರಣ ದಾಖಲಿಸಬೇಕು. ಅಲ್ಲದೆ ಪಂಜಾಬ್ ಗಡಿ ಪ್ರವೇಶಿಸಿ 25–30 ಟ್ರ್ಯಾಕ್ಟರ್‌– ಟ್ರಾಲಿಗಳನ್ನು ಹಾನಿಗೊಳಿಸಿದ ಆರೋಪದ ಮೇಲೆ ಅರೆಸೈನಿಕ ಪಡೆಯ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ರೈತ ಮುಖಂಡ ಸರವಣ ಸಿಂಗ್ ಪಂಢೇರ್ ಆಗ್ರಹಿಸಿದರು.

ಖನೌರಿ ಗಡಿಯಲ್ಲಿ ಬುಧವಾರ ಪ್ರತಿಭಟನೆನಿರತ ರೈತರು ಮತ್ತು ಪೊಲೀಸರ ನಡುವೆ ನಡೆದ ಘರ್ಷಣೆಯಲ್ಲಿ ಯುವ ರೈತ ಶುಭಕರನ್ ಸಿಂಗ್ (21) ಮೃತಪಟ್ಟಿದ್ದರು. ಈ ವೇಳೆ 12 ಪೊಲೀಸರಿಗೂ ಗಾಯಗಳಾಗಿದ್ದವು. ರೈತನ ಸಾವಿನ ಬೆನ್ನಲ್ಲೇ ರೈತ ಮುಖಂಡರು 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆಗೆ ಎರಡು ದಿನಗಳ ಮಟ್ಟಿಗೆ ವಿರಾಮ ಘೋಷಿಸಿದ್ದರು.

ಪಟಿಯಾಲದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಪಂಢೇರ್, 'ಹರಿಯಾಣದ ಭದ್ರತಾ ಸಿಬ್ಬಂದಿ ಪಂಜಾಬ್ ವ್ಯಾಪ್ತಿಯೊಳಗೆ ಪ್ರವೇಶಿಸಿ ಖನೌರಿ ಗಡಿಯಲ್ಲಿ ರೈತರ ಮೇಲೆ ಬಲ ಪ್ರಯೋಗ ನಡೆಸಿದ್ದಾರೆ' ಎಂದು ದೂರಿದರು.

'ಪಂಜಾಬ್ ಸರ್ಕಾರವು ಶುಭಕರನ್ ಸಿಂಗ್‌ಗೆ ಹುತಾತ್ಮರ ಸ್ಥಾನಮಾನ ನೀಡಬೇಕು' ಎಂದು ಎಸ್‌ಕೆಎಂ (ರಾಜಕೀಯೇತರ) ನಾಯಕ ಜಗಜೀತ್ ಸಿಂಗ್ ಡಲ್ಲೆವಾಲ್ ಆಗ್ರಹಿಸಿದರು.

ಶಂಭು ಗಡಿಯಲ್ಲಿ ರಸ್ತೆಯಲ್ಲಿ ರೈತರು ಗುರುವಾರ ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

ಕಪ್ಪು ದಿನ, ಟ್ರ್ಯಾಕ್ಟರ್ ಮೆರವಣಿಗೆ

ರೈತನ ಸಾವಿಗೆ ಸಂತಾಪ ಸೂಚಿಸಲು ಶುಕ್ರವಾರ 'ಕಪ್ಪು ದಿನ' ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಗುರುವಾರ ನಿರ್ಧರಿಸಿತು.

ರೈತನ ಸಾವಿನ ಕುರಿತು ಕೊಲೆ ಪ್ರಕರಣ ದಾಖಲಿಸಬೇಕು ಎಂದೂ ಒತ್ತಾಯಿಸಿರುವ ಎಸ್‌ಕೆಎಂ, ರೈತರು ಹೆದ್ದಾರಿಗಳಲ್ಲಿ ಇದೇ 26ರಂದು ಟ್ರ್ಯಾಕ್ಟರ್ ಮೆರವಣಿಗೆ ನಡೆಸುವಂತೆ ಕರೆ ನೀಡಿದೆ. ಅಲ್ಲದೆ ಮಾರ್ಚ್ 14ರಂದು ದೆಹಲಿಯಲ್ಲಿ ಮಹಾ ಪಂಚಾಯತ್ ನಡೆಸಲಾಗುವುದು ಎಂದೂ ಅದು ಹೇಳಿದೆ.

ಕೃಷಿ ಕಾನೂನುಗಳನ್ನು ವಿರೋಧಿಸಿ 2020–21ರಲ್ಲಿ ನಡೆದ ರೈತರ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಎಸ್‌ಕೆಎಂ ಮುಖಂಡರು ಗುರುವಾರ ಸಭೆ ನಡೆಸಿ ಈ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ.

ಈ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಎಸ್‌ಕೆಎಂ ಮುಖಂಡ ಬಲ್ಬೀರ್ ಸಿಂಗ್ ರಾಜೇವಾಲ್, ಮೃತ ರೈತನ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ರೈತನ ಸಾವನ್ನು ಖಂಡಿಸಿ ಖನೌರಿ ಗಡಿ ಭಾಗದಲ್ಲಿನ ಮನೆಗಳು ಮತ್ತು ವಾಹನಗಳ ಮೇಲೆ ಕಪ್ಪು ಬಾವುಟಗಳನ್ನು ಹಾರಿಸುವಂತೆ ರೈತ ಮುಖಂಡರು ಇದೇ ವೇಳೆ ಕರೆ ನೀಡಿದರು.

ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ಕೇಂದ್ರ ಸರ್ಕಾರ ತಕ್ಷಣವೇ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಬೇಕು ಎಂದು ಹರಿಯಾಣದ ವಿರೋಧ ಪಕ್ಷವಾದ ಕಾಂಗ್ರೆಸ್ ನಾಯಕರೂ ಆದ, ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಆಗ್ರಹಿಸಿದರು.

ದೆಹಲಿ ವಿಧಾನಸಭೆ ಸಂತಾಪ: ಖನೌರಿ ಗಡಿಯಲ್ಲಿ ಯುವ ರೈತ ಶುಭಕರನ್ ಸಿಂಗ್ ಸಾವಿಗೆ ದೆಹಲಿ ವಿಧಾನ ಸಭೆ ಗುರುವಾರ ಸಂತಾಪ ಸೂಚಿಸಿತು. ಸಂತಾಪ ಸಂದೇಶ ಓದಿದ ಸ್ಪೀಕರ್ ರಾಮ್ ನಿವಾಸ್ ಗೋಯಲ್ ಅವರು, 'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವ ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದರು.

> **ರೈತನ ಸಾವಿನಿಂದ ದುಃಖಿತನಾಗಿದ್ದೇನೆ. ಇದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು**
> **ಭಗವಂತ್ ಮಾನ್**
> ಪಂಜಾಬ್ ಮುಖ್ಯಮಂತ್ರಿ

ವಿಶೇಷ ಅಧಿವೇಶನಕ್ಕೆ ಕಾಂಗ್ರೆಸ್ ಒತ್ತಾಯ

ನವದೆಹಲಿ (ಪಿಟಿಐ): ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ತೀವ್ರಗೊಳಿಸಿರುವ ಕಾಂಗ್ರೆಸ್, ರೈತರ ಬೇಡಿಕೆಗಳ ಚರ್ಚೆಗೆ ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಇದೇ ರೀತಿ ಪಂಜಾಬ್ ಸರ್ಕಾರವು ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನ ಕರೆದು ರೈತರ ವಿಷಯಗಳನ್ನು ಚರ್ಚಿಸುವಂತೆ ಕಾಂಗ್ರೆಸ್ ಒತ್ತಾಯಿಸಿದೆ.

'ರೈತರು ಎಂಎಸ್‌ಪಿ ಗ್ಯಾರಂಟಿಗಾಗಿ ಆಗ್ರಹಿಸುತ್ತಿದ್ದರೆ, ಪ್ರಧಾನಿ ನರೇಂದ್ರ ಮೋದಿ ಅವರು 'ಗುಂಡು ಗ್ಯಾರಂಟಿ' ನೀಡುತ್ತಿದ್ದಾರೆ. ರೈತರ ಮೇಲೆ ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸುತ್ತಿರುವುದು ಮತ್ತು ಗುಂಡುಗಳನ್ನು ಹಾರಿಸುತ್ತಿರುವುದು ಅನ್ಯಾಯದ ಪರಮಾವಧಿ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕುಟುಂಬಕ್ಕೆ ಆಧಾರವಾಗಿದ್ದ ಶುಭಕರನ್

ರೈತರು ಮತ್ತು ಪೊಲೀಸರ ಘರ್ಷಣೆ ವೇಳೆ ಮೃತಪಟ್ಟ ಪಂಜಾಬಿನ ಬಠಿಂಡಾ ಜಿಲ್ಲೆಯ ಬಾಲೋಕೆ ಗ್ರಾಮದ ನಿವಾಸಿ ಶುಭಕರನ್ ಸಿಂಗ್ (21) ಕುಟುಂಬಕ್ಕಿರುವುದು ಕೇವಲ ಎರಡು ಎಕರೆ ಜಮೀನು ಎಂದು ಅವರ ನೆರೆಯವರು ತಿಳಿಸಿದ್ದಾರೆ.

ಶುಭಕರನ್ ತಾಯಿ ಮೃತಪಟ್ಟಿದ್ದು, ತಂದೆ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇಬ್ಬರು ಸಹೋದರಿಯರ ಪೈಕಿ ಒಬ್ಬರ ವಿವಾಹವಾಗಿದ್ದು, ಇನ್ನೊಬ್ಬರು ಓದುತ್ತಿದ್ದಾರೆ. ತನ್ನ ಸಹೋದರಿಯ ಮದುವೆಗಾಗಿ ಯುವ ರೈತ ಸಾಲ ಮಾಡಿದ್ದ. ಕುಟುಂಬಕ್ಕೆ ತಾನೇ ಆಧಾರವಾಗಿದ್ದ ಎಂದು ಅವರು ಹೇಳಿದ್ದಾರೆ.

'ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ'

ನವದೆಹಲಿ (ರಾಯಿಟರ್ಸ್/ಪಿಟಿಐ): 'ಭಾರತ ಸರ್ಕಾರದ ಆದೇಶದ ಬಳಿಕ ಕೆಲವು ಖಾತೆಗಳು ಮತ್ತು ಪೋಸ್ಟ್‌ಗಳನ್ನು ತೆಗೆದುಹಾಕಲಾಗಿದೆ' ಎಂದು ಸಾಮಾಜಿಕ ಮಾಧ್ಯಮ ವೇದಿಕೆ 'ಎಕ್ಸ್' ಗುರುವಾರ ತಿಳಿಸಿದೆ.

ಗೃಹ ಸಚಿವಾಲಯದ ಕೋರಿಕೆಯ ಮೇರೆಗೆ ರೈತ ಪ್ರತಿಭಟನೆಗೆ ಸಂಬಂಧಿಸಿದ 177 ಖಾತೆಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು 'ಎಕ್ಸ್'ಗೆ ಆದೇಶಿಸಿದೆ ಎಂದು ಮೂಲಗಳು ತಿಳಿಸಿವೆ.

ಅದಾಗ್ಯೂ, ಯಾರ ಖಾತೆಗಳು ಮತ್ತು ಪೋಸ್ಟ್‌ಗಳನ್ನು ತೆಗೆದುಹಾಕಲಾಗಿದೆ ಎಂಬುದರ ವಿವರಗಳನ್ನು 'ಎಕ್ಸ್' ನೀಡಿಲ್ಲ. 'ಆದರೆ, ಈ ಕಾರ್ಯವನ್ನು ನಾವು ಒಪ್ಪುವುದಿಲ್ಲ ಮತ್ತು ಈ ಕ್ರಮವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ' ಎಂದು ಅದು ಹೇಳಿದೆ.

'ಭಾರತ ಸರ್ಕಾರವು 'ಎಕ್ಸ್'ನ ನಿರ್ದಿಷ್ಟ ಖಾತೆಗಳು ಮತ್ತು ಪೋಸ್ಟ್‌ಗಳ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಿದೆ. ತಪ್ಪಿದಲ್ಲಿ ದಂಡ ಮತ್ತು ಜೈಲು ಶಿಕ್ಷೆಯ ಎಚ್ಚರಿಕೆ ನೀಡಿದೆ. ನಾವು ಭಾರತದಲ್ಲಿ ಮಾತ್ರ ಈ ಖಾತೆಗಳು ಮತ್ತು ಪೋಸ್ಟ್‌ಗಳನ್ನು ನಿರ್ಬಂಧಿಸು ತ್ತೇವೆ. ಆದರೆ ಈ ಕ್ರಮಗಳನ್ನು ಒಪ್ಪುವುದಿಲ್ಲ ಮತ್ತು ಈ ಪೋಸ್ಟ್‌ಗಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮುಂದುವರಿಸಬೇಕು ಎಂಬುದನ್ನು ಸಮರ್ಥಿಸುತ್ತೇವೆ' ಎಂದು 'ಎಕ್ಸ್'ನ 'ಗ್ಲೋಬಲ್ ಗವರ್ನ್‌ಮೆಂಟ್ ಅಫೇರ್ಸ್' ತನ್ನ ಪೋಸ್ಟ್‌ನಲ್ಲಿ ತಿಳಿಸಿದೆ.

ಈ ಕುರಿತು ಗೃಹ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪ್ರಜಾಪ್ರಭುತ್ವದ ಕೊಲೆ: ಕಾಂಗ್ರೆಸ್

ನವದೆಹಲಿ (ಪಿಟಿಐ): ಪ್ರಸ್ತುತ ನಡೆಯುತ್ತಿರುವ ರೈತರ ಪ್ರತಿಭಟನೆಗೆ ಸಂಬಂಧಿಸಿದ ಪೋಸ್ಟ್‌ಗಳನ್ನು 'ಎಕ್ಸ್'ನಿಂದ ತೆಗೆಯುವಂತೆ ಕೇಂದ್ರ ಸರ್ಕಾರ ಕೇಳಿಕೊಂಡಿರುವುದು ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ ಎನ್ನುವುದಕ್ಕೆ ನಿದರ್ಶನ ಎಂದು ಕಾಂಗ್ರೆಸ್ ಗುರುವಾರ ಟೀಕಿಸಿದೆ.

'ರೈತರು ಕನಿಷ್ಠ ಬೆಂಬಲ ಬೆಲೆ ಕೇಳಿದರೆ ಗುಂಡು ಹಾರಿಸುತ್ತಾರೆ. ಉದ್ಯೋಗ ಕೊಡಿ ಎಂದು ಕೇಳಲು ಹೋದರೆ ನಿರಾಕರಿಸುವ ಮಾತು ಹಾಗಿರಲಿ, ಕೇಳಿಸಿಕೊಳ್ಳಲೂ ತಯಾರಿಲ್ಲ. ಮಾಜಿ ರಾಜ್ಯಪಾಲರು ಸತ್ಯ ಹೇಳಿದರೆ, ಅವರ ಮನೆಗೆ ಸಿಬಿಐ ಕಳಿಸುತ್ತಾರೆ– ಇವೆಲ್ಲ ಪ್ರಜಾಪ್ರಭುತ್ವದ ತಾಯಿ ಮಾಡುವ ಕೆಲಸವೇ?' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

'ದೇಶದ ಪ್ರಮುಖ ವಿರೋಧ ಪಕ್ಷದ ಬ್ಯಾಂಕ್ ಖಾತೆಗಳ ವಹಿವಾಟನ್ನೇ ಸ್ಥಗಿತಗೊಳಿಸುತ್ತಾರೆ. ಅಶ್ರುವಾಯು ಶೆಲ್ ದಾಳಿ, ನಿಷೇಧಾಜ್ಞೆ ಹೇರಿಕೆ, ಇಂಟರ್‌ನೆಟ್ ಸ್ಥಗಿತ, ಮಾಧ್ಯಮ–ಸಾಮಾಜಿಕ ಮಾಧ್ಯಮ ಹತ್ತಿಕ್ಕುವುದು... ಹೀಗೆ ಸತ್ಯದ ಧ್ವನಿಯನ್ನು ಉಡುಗಿಸುವ ಕೆಲಸಗಳನ್ನು ಪ್ರಜಾಪ್ರಭುತ್ವದ ತಾಯಿ ಮಾಡುತ್ತಾಳೆಯೇ' ಎಂದೂ ಕೇಳಿದ್ದಾರೆ.

'ಎಕ್ಸ್'ನ ಜಾಗತಿಕ ಸರ್ಕಾರಿ ವ್ಯವಹಾರಗಳ ತಂಡವು ರೈತರ ಪ್ರತಿಭಟನೆ ಸಂಬಂಧದ ಪೋಸ್ಟ್‌ಗಳನ್ನು ಭಾರತದ ಹೊರಾಗಿ ಬೇರೆಡೆ ತೆಗೆಯಲು ಸಾಧ್ಯವಿಲ್ಲ ಎಂದು ಪ್ರತಿಕ್ರಿಯಿಸಿ ನೀಡಿರುವ ಹೇಳಿಕೆಯನ್ನು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಟ್ಯಾಗ್' ಮಾಡಿ, 'ಇದು ಪ್ರಜಾಪ್ರಭುತ್ವದ ಕೊಲೆ ನಡೆಯುತ್ತಿದೆ ಎನ್ನುವುದನ್ನು ಹೇಳುತ್ತದೆ' ಎಂದಿದ್ದಾರೆ.

ಸೀಟು ಹಂಚಿಕೆ: 27ಕ್ಕೆ ಮೈತ್ರಿಪಕ್ಷಗಳ ಸಭೆ

ಮುಂಬೈ (ಪಿಟಿಐ): ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತು ಮಹಾವಿಕಾಸ ಅಘಾಡಿ (ಎಂವಿಎ) ಮೈತ್ರಿ ಪಕ್ಷಗಳ ನಡುವೆ ಚರ್ಚೆ ಅಂತಿಮ ಹಂತದಲ್ಲಿದೆ ಎಂದು ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ರಮೇಶ್ ಚೆನ್ನಿತ್ತಲ ಹೇಳಿದರು.

ಮಾಸಾಂತ್ಯದ ವೇಳೆಗೆ ಅಂತಿಮ ನಿರ್ಧಾರ ಪ್ರಕಟಿಸಲಾಗುವುದು. ಸೀಟು ಹೊಂದಾಣಿಕೆ ಕುರಿತಂತೆ ಮೈತ್ರಿಪಕ್ಷಗಳ ನಡುವೆ ಯಾವುದೇ ಭಿನ್ನಮತವಿಲ್ಲ ಎಂದು ಇಲ್ಲಿ ಹೇಳಿದರು.

ಎಂವಿಎ ಮೈತ್ರಿಪಕ್ಷಗಳಾದ ಎನ್‌ಸಿಪಿಯ ಶರದ್ ಪವಾರ್ ಬಣ, ಶಿವಸೇನೆ (ಉದ್ಧವ್ ಬಣ), ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ ಬಹುಜನ ಅಘಾಡಿ ಮುಖಂಡರ ಜೊತೆ ಫೆ.27, 28ರಂದು ಮಾತುಕತೆ ನಡೆಯಲಿದೆ ಎಂದರು. ಕಾಂಗ್ರೆಸ್ ಪಕ್ಷದ ಇಲ್ಲಿನ ಕಚೇರಿಯಲ್ಲಿ ನಡೆದ ಚುನಾವಣಾ ಸಮಿತಿ ಸಭೆಯ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಚೆನ್ನಿತ್ತಲ, 'ಎಂವಿಎ ಸದೃಢವಾಗಿದೆ. ಗರಿಷ್ಠ ಸಂಖ್ಯೆಯ ಸ್ಥಾನಗಳನ್ನು ಗೆಲ್ಲಲು ಮೈತ್ರಿಯ ಎಲ್ಲ ಪಕ್ಷಗಳು ಒಟ್ಟಾಗಿ ಚುನಾವಣೆ ಎದುರಿಸಲಿದ್ದೇವೆ. ಸೀಟು ಹಂಚಿಕೆ ಕುರಿತು ಮುಖಂಡರ ನಡುವೆ ಮಾತುಕತೆ ನಡೆದಿದೆ' ಎಂದು ಹೇಳಿದರು.

ನಾಲ್ಕರಲ್ಲಿ ಎಎಪಿ, ಮೂರರಲ್ಲಿ 'ಕೈ' ಸ್ಪರ್ಧೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಚುನಾವಣೆಗೆ ದೆಹಲಿ ಮತ್ತು ಇತರ ಕೆಲವು ರಾಜ್ಯಗಳಲ್ಲಿ ಸೀಟು ಹಂಚಿಕೆ ಕುರಿತು ಎಎಪಿ ಮತ್ತು ಕಾಂಗ್ರೆಸ್ ನಡುವಿನ ಮಾತುಕತೆ ಅಂತಿಮ ಹಂತದಲ್ಲಿದ್ದು, ಎರಡೂ ಪಕ್ಷಗಳು ಶೀಘ್ರದಲ್ಲೇ ಮೈತ್ರಿಯನ್ನು ಘೋಷಿಸುವ ಸಾಧ್ಯತೆಯಿದೆ.

ರಾಷ್ಟ್ರ ರಾಜಧಾನಿಯಲ್ಲಿ ಏಳು ಕ್ಷೇತ್ರಗಳಿವೆ. ಕಳೆದ ಚುನಾವಣೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಮೂರು ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲು ಎಎಪಿ ಒಪ್ಪಿದೆ. ಎಎಪಿ ದಕ್ಷಿಣ ದೆಹಲಿ, ಪಶ್ಚಿಮ ದೆಹಲಿ, ವಾಯವ್ಯ ದೆಹಲಿ ಮತ್ತು ನವದೆಹಲಿ ಸ್ಥಾನಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಮತ್ತು ಕಾಂಗ್ರೆಸ್ ಚಾಂದಿನಿ ಚೌಕ್, ಪೂರ್ವ ದೆಹಲಿ ಮತ್ತು ಈಶಾನ್ಯ ದೆಹಲಿ ಕ್ಷೇತ್ರಗಳಿಂದ ಸ್ಪರ್ಧಿಸಲಿದೆ ಎಂದು ಎಎಪಿ ಮೂಲಗಳು ತಿಳಿಸಿವೆ.

ಹರಿಯಾಣದಲ್ಲಿ ಎಎಪಿಗೆ ಒಂದು ಮತ್ತು ಗುಜರಾತ್‌ನಲ್ಲಿ ಎರಡು ಸ್ಥಾನಗಳನ್ನು ನೀಡಲು ಕಾಂಗ್ರೆಸ್ ನಿರ್ಧರಿಸಿದೆ. ಹರಿಯಾಣದಲ್ಲಿ ಗುರುಗ್ರಾಮ ಅಥವಾ ಫರೀದಾಬಾದ್ ಎಎಪಿ ಪಾಲಾಗುವ ಸಾಧ್ಯತೆ ಇದೆ. ಗುಜರಾತ್‌ನಲ್ಲಿ ಭರೂಚ್ ಮತ್ತು ಭಾವನಗರ ಕ್ಷೇತ್ರದ ಮೇಲೆ ಎಎಪಿ ಕಣ್ಣಿಟ್ಟಿದೆ. ಕಾಂಗ್ರೆಸ್‌ನ ಮಾಜಿ ನಾಯಕ ಅಹ್ಮದ್ ಪಟೇಲ್ ಅವರ ಪುತ್ರ ಮತ್ತು ಪುತ್ರಿ ಅವರು ಭರೂಚ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಕ್ಷೇತ್ರವನ್ನು ಎಎಪಿಗೆ ಬಿಟ್ಟುಕೊಡುವ ಪ್ರಸ್ತಾವಕ್ಕೆ ಪಟೇಲ್ ಪುತ್ರ ಫೈಸಲ್ ವಿರೋಧ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಎಎಪಿ ಮತ್ತು ಕಾಂಗ್ರೆಸ್ ನಡುವಿನ ಮೈತ್ರಿ ಅಂತಿಮ ಹಂತದಲ್ಲಿದೆ. ಎರಡು ಪಕ್ಷಗಳು ಒಂದೆರಡು ದಿನದಲ್ಲಿ ಅಧಿಕೃತ ಘೋಷಣೆ ಮಾಡಲಿವೆ ಎಂದು ದೆಹಲಿಯ ಸಚಿವೆ ಅತಿಶಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಒಪ್ಪಿಗೆ

ನವದೆಹಲಿ(ಪಿಟಿಐ): ಮಹತ್ವದ ಬೆಳವಣಿಗೆಯೊಂದರಲ್ಲಿ, ನೌಕಾಪಡೆಗಾಗಿ ₹ 19 ಸಾವಿರ ಕೋಟಿ ವೆಚ್ಚದಲ್ಲಿ 200ಕ್ಕೂ ಹೆಚ್ಚು ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಗಳು ಹಾಗೂ ಸಂಬಂಧಿಸಿದ ಸಾಧನಗಳನ್ನು ಖರೀದಿ ಮಾಡಲು ಭದ್ರತೆ ಕುರಿತ ಸಂಪುಟ ಸಮಿತಿ ಒಪ್ಪಿಗೆ ನೀಡಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ವಿವಿಧ ಯುದ್ಧನೌಕೆಗಳಲ್ಲಿ ಈ ಕ್ಷಿಪಣಿಗಳನ್ನು ನಿಯೋಜನೆ ಮಾಡುವ ಮೂಲಕ ನೌಕಾಪಡೆಯ ದಾಳಿ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದೂ ಹೇಳಿವೆ.

ಕೆಲ ಕ್ಷಿಪಣಿಗಳು 290 ಕಿ.ಮೀ. ವ್ಯಾಪ್ತಿವರೆಗಿನ ಗುರಿಗಳನ್ನು ನಾಶ ಮಾಡುವ ಸಾಮರ್ಥ್ಯ ಹೊಂದಿದ್ದರೆ, ಇನ್ನೂ ಕೆಲವು ಕ್ಷಿಪಣಿಗಳ ಸಾಮರ್ಥ್ಯ 450 ಕಿ.ಮೀ. ವ್ಯಾಪ್ತಿಯಷ್ಟಿದೆ ಎಂದು ಮೂಲಗಳು ಹೇಳಿವೆ.

ಭಾರತ ಮತ್ತು ರಷ್ಯಾ ಸಹಭಾಗಿತ್ವದ ಬ್ರಹ್ಮೋಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಈ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳನ್ನು ಉತ್ಪಾದಿಸಲಿದೆ. ಇವುಗಳನ್ನು ಜಲಾಂತರ್ಗಾಮಿಗಳು, ಯುದ್ಧನೌಕೆಗಳು ಹಾಗೂ ಯುದ್ಧವಿಮಾನಗಳಿಂದ ಉಡಾವಣೆ ಮಾಡಬಹುದಾಗಿದೆ.

ಟಿಎಂಸಿ ನಾಯಕ ಶಹಜಹಾನ್ ಶೇಖ್ ವಿರುದ್ಧ ಜನರ ಆಕ್ರೋಶ

ಸಂದೇಶ್‌ಖಾಲಿಯಲ್ಲಿ ಮತ್ತೆ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಹಿಂಸಾಚಾರ ಪೀಡಿತ ಸಂದೇಶ್‌ಖಾಲಿಯಲ್ಲಿ ಟಿಎಂಸಿ ನಾಯಕ ಶಹಜಹಾನ್ ಶೇಖ್ ಮತ್ತು ಸಹೋದರ ಸಿರಾಜ್ ವಿರುದ್ಧ ಗ್ರಾಮಸ್ಥರು ಗುರುವಾರ ಮತ್ತೆ ಪ್ರತಿಭಟನೆ ನಡೆಸಿದ್ದಾರೆ.

ಶೇಖ್ ಹಾಗೂ ಬೆಂಬಲಿಗರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಭೂಮಿ ಕಬಳಿಸಿದ್ದಾರೆ ಎಂದು ಆರೋಪಿಸಿರುವ ಪ್ರತಿಭಟನೆಕಾರರು, ಸಿರಾಜ್ ಅವರಿಗೆ ಸೇರಿದ ಗುಡಿಸಲಿಗೆ ಬೆಂಕಿ ಹಚ್ಚಿದರು.

ಆರೋಪಿಗಳು ಕಬಳಿಸಿರುವ ಭೂಮಿಯನ್ನು ವಾಪಸ್ ನೀಡಿ ಎಂದು ಒತ್ತಾಯಿಸಿದರು.

ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಂದೇಶ್‌ಖಾಲಿಗೆ ಬುಧವಾರ ಭೇಟಿ ನೀಡಿದ್ದ ಡಿಜಿಪಿ ರಾಜೀವ್ ಕುಮಾರ್ ಅವರು ಭರವಸೆ ನೀಡಿದ್ದರು. ದೂರು ದಾಖಲಿಸಿ, ಸೂಕ್ತ ದಾಖಲೆಗಳನ್ನು ಸಲ್ಲಿಸಿ ಎಂದು ಗ್ರಾಮಸ್ಥರಿಗೆ ಸೂಚಿಸಿದ್ದರು.

ಹಿಂಸಾಚಾರಪೀಡಿತ ಪ್ರದೇಶದಲ್ಲಿ ಬುಧವಾರ ವಾಸ್ತವ್ಯ ಹೂಡಿದ್ದ ಅವರು, ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದ್ದರು.

ಹಿಂಸಾಚಾರಪೀಡಿತ ಪ್ರದೇಶಕ್ಕೆ ಭೇಟಿ ನೀಡಿದ ಉತ್ತರ 24 ಪರಗಣ ಜಿಲ್ಲೆಯ ಟಿಎಂಸಿ ನಾಯಕರು, ಸ್ಥಳೀಯರ ಆಕ್ರೋಶಕ್ಕೆ ಗುರಿಯಾದರು.

'ಸಂದೇಶ್‌ಖಾಲಿಯಲ್ಲಿ ತಪ್ಪು ನಡೆದಿದೆ. ಆದರೂ ಅಲ್ಲಿನ ಜನರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮೇಲೆ ಸಂಪೂರ್ಣ ವಿಶ್ವಾಸ ಇರಿಸಿದ್ದಾರೆ. ಎಲ್ಲಾ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲಾಗುವುದು' ಎಂದು ಟಿಎಂಸಿ ಮುಖಂಡ ಹಾಗೂ ಸಂದೇಶ್‌ಖಾಲಿ ಶಾಸಕ ಸುಕುಮಾರ್ ಮಹತೊ ಹೇಳಿದರು.

ಮಾ.6ರಂದು ಪ್ರಧಾನಿ ರ್‍ಯಾಲಿ: ಉತ್ತರ 24 ಪರಗಣ ಜಿಲ್ಲೆಯ ಬಾರಾಸಾತ್‌ನಲ್ಲಿ ಮಾರ್ಚ್ 6ರಂದು ಹಮ್ಮಿಕೊಂಡಿರುವ ಮಹಿಳಾ ರ್‍ಯಾಲಿಯನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡುವರು ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ತಿಳಿಸಿದರು.

ಸಂದೇಶಖಾಲಿಯಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರು ಮೋದಿ ಅವರನ್ನು ಭೇಟಿಯಾಗಲು ಬಯಸಿದರೆ, ಅದಕ್ಕೆ ಬೇಕಾದ ಏರ್ಪಾಡು ಮಾಡಲಾಗುವುದು ಎಂದರು.

ಸುದ್ದಿವಾಹಿನಿ ಪತ್ರಕರ್ತನಿಗೆ ಜಾಮೀನು

ಕೋಲ್ಕತ್ತ/ನವದೆಹಲಿ: ಸಂದೇಶ್‌ಖಾಲಿಯಲ್ಲಿ ಪೊಲೀಸರು ಬಂಧಿಸಿದ್ದ 'ರಿಪಬ್ಲಿಕ್ ಬಾಂಗ್ಲಾ' ಸುದ್ದಿವಾಹಿನಿ ಪತ್ರಕರ್ತ ಸಂತು ಪಾನ್ ಅವರಿಗೆ ಕಲ್ಕತ್ತ ಹೈಕೋರ್ಟ್ ಜಾಮೀನು ನೀಡಿದೆ.

ನ್ಯಾಯಮೂರ್ತಿ ಕೌಶಿಕ್ ಚಂದಾ ಅವರು ಜಾಮೀನು ಮಂಜೂರು ಮಾಡಿದ್ದಾರೆ.

ಸಂತು ಅವರ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಮುಂದಿನ ಪ್ರಕ್ರಿಯೆ ಕೈಗೊಳ್ಳುವುದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಮಾಧ್ಯಮವನ್ನು ಹತ್ತಿಕ್ಕದಂತೆ ನೋಡಿಕೊಳ್ಳಿ: ಪತ್ರಕರ್ತ ಸಂತು ಪಾನ್ ಅವರನ್ನು ಬಂಧಿಸಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, 'ರಾಜ್ಯದಲ್ಲಿ ಮಾಧ್ಯಮವನ್ನು ಹತ್ತಿಕ್ಕದಂತೆ ನೋಡಿಕೊಳ್ಳಿ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪತ್ರಿಕಾ ಸ್ವಾತಂತ್ರ್ಯವು ಮಾಧ್ಯಮದ ಹಕ್ಕು. ಅದನ್ನು ಧಮನಿಸುವ ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳಿ' ಎಂದಿದ್ದಾರೆ.

ನಿಯೋಗ ಭೇಟಿ

ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗದ (ಎನ್‌ಸಿಎಸ್‌ಟಿ) ನಿಯೋಗವು ಗುರುವಾರ ಸಂದೇಶ್‌ಖಾಲಿಗೆ ಭೇಟಿ ನೀಡಿ ಜನರ ಅಹವಾಲು ಆಲಿಸಿತು.

ದೌರ್ಜನ್ಯ, ಭೂಮಿ ಕಬಳಿಸಿರುವುದಕ್ಕೆ ಸಂಬಂಧಿಸಿರುವ 23 ದೂರುಗಳನ್ನು ಸ್ವೀಕರಿಸಿದ್ದೇವೆ. ರಾಜಕೀಯ ಮುಖಂಡರೊಬ್ಬರ ವಿರುದ್ಧವೂ ದೂರು ಲಭಿಸಿದೆ. ಅದನ್ನು ನಾವು ವರದಿಯಲ್ಲಿ ಉಲ್ಲೇಖಿಸಲಿದ್ದೇವೆ ಮತ್ತು ಅದನ್ನು ರಾಷ್ಟ್ರಪತಿಗೆ ಸಮರ್ಪಿಸಲಿದ್ದೇವೆ ಎಂದು ಎನ್‌ಸಿಎಸ್‌ಟಿ ಉಪಾಧ್ಯಕ್ಷ ಅನಂತ ನಾಯಕ್ ಹೇಳಿದರು.

ದೇವಬಂದ್ ವಿರುದ್ಧ ಎಫ್‌ಐಆರ್‌ಗೆ ಸೂಚನೆ

ನವದೆಹಲಿ (ಪಿಟಿಐ): ದಾರುಲ್ ಉಲೂಮ್ ದೇವಬಂದ್ ತನ್ನ ವೆಬ್ ಸೈಟ್‌ನಲ್ಲಿ ಆಕ್ಷೇಪಾರ್ಹ ವಿಷಯಗಳನ್ನು ಪ್ರಕಟಿಸಿರುವುದು ಕಂಡುಬಂದಿದೆ ಎಂಬ ಆರೋಪ ಇದ್ದು, ಆ ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಮಕ್ಕಳ ಹಕ್ಕುಗಳ ರಕ್ಷಣೆಗಾಗಿನ ರಾಷ್ಟ್ರೀಯ ಆಯೋಗವು (ಎನ್‌ಸಿಪಿಸಿಆರ್) ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿದೆ. ದೇಶದ ಖ್ಯಾತ ಇಸ್ಲಾಮಿಕ್ ಶಿಕ್ಷಣ ಸಂಸ್ಥೆಗಳ ಪೈಕಿ ದೇವಬಂದ್ ಕೂಡ ಒಂದು.

ಉತ್ತರ ಪ್ರದೇಶದ ಸಹರಾನಪುರ ಜಿಲ್ಲೆಯ ಹಿರಿಯ ಪೊಲೀಸ್ ಸೂಪರಿಂಟೆಂಡೆಂಟ್ (ಎಸ್‌ಎಸ್‌ಪಿ) ಅವರಿಗೆ ಪತ್ರವೊಂದನ್ನು ಬರೆದಿರುವ ಆಯೋಗದ ಅಧ್ಯಕ್ಷ ಪ್ರಿಯಾಂಕ್ ಕನುಂಗೊ, ದೇವಬಂದ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಫತ್ವಾ ಒಂದರ ಬಗ್ಗೆ ಆಯೋಗದ ಕಳವಳವನ್ನು ವಿವರಿಸಿದ್ದಾರೆ.

ಈ ಫತ್ವಾ, 'ಗಜ್ವಾ ಎ ಹಿಂದ್' ಪರಿಕಲ್ಪನೆ ಬಗ್ಗೆ ಇದೆ, ಇದು 'ಭಾರತದ ಮೇಲಿನ ಆಕ್ರಮಣದ ಸಂದರ್ಭದಲ್ಲಿ ಹುತಾತ್ಮ ಆಗುವುದನ್ನು' ವೈಭವೀಕರಿಸುತ್ತದೆ ಎಂಬ ಆರೋಪ ಇದೆ. 'ಈ ಫತ್ವಾ ಮಕ್ಕಳನ್ನು ತಮ್ಮದೇ ದೇಶದ ವಿರುದ್ಧ ದ್ವೇಷಕ್ಕೆ ಒಡ್ಡುತ್ತಿದೆ, ಅವರಿಗೆ ಅನಗತ್ಯವಾಗಿ ಮಾನಸಿಕ ಹಾಗೂ ದೈಹಿಕ ತೊಂದರೆ ಉಂಟುಮಾಡುತ್ತಿದೆ' ಎಂದು ಕನುಂಗೊ ಅವರು ಪತ್ರದಲ್ಲಿ ಹೇಳಿದ್ದಾರೆ.

ಭಾರತೀಯ ದಂಡ ಸಂಹಿತೆ ಹಾಗೂ ಬಾಲನ್ಯಾಯ ಕಾಯ್ದೆ 2015ರ ಅಡಿಯಲ್ಲಿ ದೇವಬಂದ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಅವರು ಸೂಚಿಸಿದ್ದಾರೆ. ಕೈಗೊಂಡ ಕ್ರಮ ಏನು ಎಂಬ ಬಗ್ಗೆ ಮೂರು ದಿನಗಳಲ್ಲಿ ವರದಿ ಸಲ್ಲಿಸಬೇಕು ಎಂದು ಆಯೋಗವು ಹೇಳಿದೆ.

ವಿದ್ಯುತ್ ಬಿಲ್ ಶಾಕ್: ಅನಾಥ ಮಕ್ಕಳಿಗೆ ಊಟ ಪೂರೈಸುವ ಶಿಕ್ಷೆ

ಲಖನೌ (ಪಿಟಿಐ): ಮನೆಯ ವಿದ್ಯುತ್ ಶುಲ್ಕ 1,911ರಿಂದಲೂ ಬಾಕಿ ಉಳಿದಿದೆ ಎಂದು ಕಾರಣ ನೀಡಿ ₹2.24 ಲಕ್ಷ ಮೊತ್ತದ ವಿದ್ಯುತ್ ಬಿಲ್ ನೀಡಿದ್ದ ನಾಲ್ವರು ಅಧಿಕಾರಿಗಳಿಗೆ ದಂಡನೆಯ ರೂಪದಲ್ಲಿ ಎರಡು ಅನಾಥಾಶ್ರಮದ ಮಕ್ಕಳಿಗೆ ಊಟ ಒದಗಿಸಬೇಕು ಎಂದು ಆದೇಶಿಸಲಾಗಿದೆ.

ಉತ್ತರ ಪ್ರದೇಶ ವಿದ್ಯುತ್ ನಿಗಮದ ನಾಲ್ವರು ಅಧಿಕಾರಿಗಳು ತಪ್ಪಿತಸ್ಥರು ಎಂದು ಮಾಹಿತಿ ಹಕ್ಕು ಆಯೋಗ ತೀರ್ಮಾನಿಸಿತು. ವಿದ್ಯುತ್ ಬಿಲ್‌ನ ಶುಲ್ಕವನ್ನು ₹3,998ಕ್ಕೆ ಇಳಿಸಲಾಗಿದೆ ಎಂದು ಅಧಿಕಾರಿಗಳು ಬಳಿಕ ಆಯೋಗಕ್ಕೆ ತಿಳಿಸಿದರು.

ವಾರಾಣಸಿಯ ನಿವಾಸಿ ಉಮಾಶಂಕರ ಯಾದವ್ ಅವರ ಮನೆಯ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿ ₹2.24 ಲಕ್ಷದ ಬಿಲ್ ನೀಡಲಾಗಿತ್ತು. ಇದರ ಮಾಹಿತಿ ಕೋರಿ ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಿದ್ದ ಅರ್ಜಿಗೂ ಉತ್ತರ ಸಿಕ್ಕಿರಲಿಲ್ಲ. ಹೀಗಾಗಿ, 2023ರಲ್ಲಿ ಅವರು ಮಾಹಿತಿ ಹಕ್ಕು ಆಯೋಗಕ್ಕೆ ದೂರು ನೀಡಿದ್ದರು.

ಉತ್ತರ ಪ್ರದೇಶ ವಿದ್ಯುತ್ ನಿಗಮದ ಸೂಪರಿಂಟೆಂಡೆಂಟ್ ಎಂಜಿನಿಯರ್ ಅನಿಲ್ ವರ್ಮಾ, ಕಾರ್ಯಕಾರಿ ಎಂಜಿನಿಯರ್ ಆರ್. ಕೆ.ಗೌತಮ್, ಉಪ ವಿಭಾಗೀಯ ಅಧಿಕಾರಿಗಳಾದ ಸರ್ವೇಶ್ ಯಾದವ್, ರವಿ ಅನಂದ್ ಅವರೇ ಶಿಕ್ಷೆಗೊಳಗಾದ ಅಧಿಕಾರಿಗಳು.

ಆಯೋಗವು ನೀಡಿದ್ದ ಹಲವು ಸಮನ್ಸ್‌ಗಳಿಗೆ ಅಧಿಕಾರಿಗಳು ಸ್ಪಂದಿಸದಿದ್ದಾಗ ಅವರ ವಿರುದ್ಧ ಬಂಧನ ವಾರಂಟ್ ಜಾರಿಮಾಡಲಾಗಿತ್ತು. ಪರಿಣಾಮ, ಅದಂಪುರ ಪೊಲೀಸ್ ಠಾಣೆಯಲ್ಲಿ ₹10 ಸಾವಿರ ಠೇವಣಿ ಇರಿಸಿದ್ದ ನಾಲ್ವರು ಅಧಿಕಾರಿಗಳು ವಿಚಾರಣೆಗೆ ಹಾಜರಾಗಿದ್ದರು.

ಅನಾಥಾಶ್ರಮದ ಮಕ್ಕಳಿಗೆ ಊಟ ಒದಗಿಸುವುದರ ವೆಚ್ಚ ₹25,000 ಮೀರಬಾರದು. ಈ ಆದೇಶವು ಜಾರಿಯಾದ ಕುರಿತು ವರದಿಯನ್ನು ಸಲ್ಲಿಸಬೇಕು ಎಂದು ಆಯೋಗವು ಆದೇಶಿಸಿತು. ಆರ್‌ಟಿಐ ಕಾಯ್ದೆಯ ಪ್ರಕಾರ, ದಂಡದ ಮೊತ್ತ ₹25,000 ಮೀರುವಂತಿಲ್ಲ.

ಸಂಕ್ಷಿಪ್ತ ಸುದ್ದಿ

ಮದ್ಯ ಸೇವನೆ ತಪಾಸಣೆ ಉಪಕರಣ ಅಭಿವೃದ್ಧಿ

ನವದೆಹಲಿ (ಪಿಟಿಐ): ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)– ಜೋಧಪುರವು ಕಡಿಮೆ ವೆಚ್ಚದ ಮದ್ಯ ಸೇವನೆ ತಪಾಸಣೆ ಉಪಕರಣವನ್ನು ಅಭಿವೃದ್ಧಿಪಡಿಸಿದೆ. ಇದು ಮದ್ಯ ಸೇವಿಸಿ ವಾಹನ ಚಾಲನೆ ಮಾಡುವ ಪ್ರಕರಣಗಳಲ್ಲಿ, ಚಾಲಕ ಸೇವಿಸಿರುವ ಮದ್ಯದ ಪ್ರಮಾಣವನ್ನು ಪತ್ತೆ ಮಾಡುವುದರಲ್ಲದೆ ಗಂಭೀರ ಕಾಯಿಲೆಗಳನ್ನು ಪತ್ತೆಮಾಡಲೂ ಸಹಕಾರಿಯಾಗಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಕೊಠಡಿ ಉಷ್ಣಾಂಶದಲ್ಲಿ ಆಮ್ಲೀಯ ಲೋಹಗಳು ಮತ್ತು ನ್ಯಾನೊ ಸಿಲಿಕಾನ್‌ಗಳನ್ನು ಬಳಸಿಕೊಂಡು ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ.

ಆಸ್ತಮಾ, ಡಯಾಬಿಟಿಕ್ ಕಿಟೊ ಆ್ಯಸಿಡೋಸಿಸ್, ನಿದ್ರೆ ವೇಳೆ ಉಸಿರಾಟದ ಸಮಸ್ಯೆ, ಹೃದಯ ಸ್ತಂಭನದಂಥ ಕಾಯಿಲೆಗಳನ್ನು ಈ ಉಪಕರಣ ಪತ್ತೆ ಮಾಡಲಿದೆ. ಇದಕ್ಕಾಗಿ ಉಪಕರಣದ ಸೆನ್ಸರ್‌ನಲ್ಲಿ ಕೆಲ ಬದಲಾವಣೆಗಳನ್ನು ತರಲಾಗಿದೆ. ಎಲೆಕ್ಟ್ರಾನಿಕ್ ನೋಸ್ ಅಥವಾ ಆರ್ಟಿಫೀಷಿಯಲ್ ನೋಸ್‌ನಂಥ ಸೆನ್ಸರ್‌ಗಳು ಮತ್ತು ಡೇಟಾ ಅನಾಲಿಟಿಕ್ಸ್‌ಗಳನ್ನು ಇದಕ್ಕೆ ಅಳವಡಿಸಲಾಗಿದೆ ಎಂದು ಐಐಟಿ ಜೋಧಪುರದ ಎಲೆಕ್ಟ್ರಾನಿಕಲ್ ಎಂಜಿನಿಯರಿಂಗ್‌ನ ಸಹ ಪ್ರಾಧ್ಯಾಪಕಿ ಸಾಕ್ಷಿ ದಾಂಡೇಕರ್ ಅವರು ಹೇಳಿದ್ದಾರೆ.

ಸದ್ಯ ಚಾಲ್ತಿಯಲ್ಲಿರುವ ಇಂಧನ ಆಧಾರಿತ ಸೆಲ್ ಚಾಲಿತ ಮದ್ಯ ತಪಾಸಣೆ ಉಪಕರಣಗಳಿಗಿಂತ ಈ ಉಪಕರಣಗಳ ವೆಚ್ಚ ಕಡಿಮೆ ಇರಲಿದೆ ಎಂದು ಹೇಳಿದ್ದಾರೆ.

ಅಂಕ ಸಾಮಾನ್ಯೀಕರಣ ಪ್ರಕ್ರಿಯೆ: ಕೊಕ್?

ನವದೆಹಲಿ(ಪಿಟಿಐ): ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ), ಈ ವರ್ಷದಿಂದ ಪದವಿ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಸಂಬಂಧಿಸಿ, ಅಂಕಗಳ ಸಾಮಾನ್ಯೀಕರಣ ಪ್ರಕ್ರಿಯೆಯನ್ನು ಕೈಬಿಡುವ ಸಾಧ್ಯತೆ ಇದೆ ಎಂದು ಉನ್ನತ ಅಧಿಕಾರಿಗಳು ಹೇಳಿದ್ದಾರೆ.

ಜೊತೆಗೆ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಕೂಡ ಪರೀಕ್ಷಾ ವಿಧಾನದಲ್ಲಿ ಬದಲಾವಣೆ ತರಲು ಯೋಜಿಸಿದೆ. ಒಂದು ತಿಂಗಳು ನಡೆಯುವ ಈ ಪರೀಕ್ಷೆಯನ್ನು ಹೈಬ್ರಿಡ್ ವಿಧಾನದಲ್ಲಿ ನಡೆಸುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಅಭ್ಯರ್ಥಿಗಳ ಅನುಕೂಲಕ್ಕಾಗಿ ಒಎಂಆರ್ ಶೀಟ್‌ಗಳನ್ನು ಬಳಸಿ ಹಾಗೂ ಕಂಪ್ಯೂಟರ್ ಆಧರಿತ ವಿಧಾನದಲ್ಲಿ ಪರೀಕ್ಷೆ ನಡೆಸುವುದು ಎನ್‌ಟಿಎ ಆಲೋಚನೆಯಾಗಿದೆ. ಹೈಬ್ರಿಡ್ ವಿಧಾನದಲ್ಲಿ ಪರೀಕ್ಷೆ ನಡೆಸುವುದರಿಂದ, ಅಭ್ಯರ್ಥಿಗಳು ತಮ್ಮ ಆಯ್ಕೆಯ ನಗರದಲ್ಲಿಯೇ ಪರೀಕ್ಷೆ ಬರೆಯುವ ಅವಕಾಶ ಪಡೆಯಲಿದ್ದಾರೆ.

ಅತ್ಯಾಚಾರ: ಅಪರಾಧಿಗೆ 45 ವರ್ಷ ಸಜೆ

ಇಡುಕ್ಕಿ, ಕೇರಳ (ಪಿಟಿಐ): 14 ವರ್ಷ ವಯಸ್ಸಿನ ಬಾಲಕಿಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ್ದ 80 ವರ್ಷ ವಯಸ್ಸಿನ ಅಪರಾಧಿಗೆ ಸ್ಥಳೀಯ ತ್ವರಿತ ವಿಚಾರಣೆಯ ವಿಶೇಷ ನ್ಯಾಯಾಲಯವು ಒಟ್ಟು 45 ವರ್ಷ ಅವಧಿ ಸಜೆ ವಿಧಿಸಿದೆ.

ನ್ಯಾಯಾಧೀಶರಾದ ಟಿ.ಜಿ. ವರ್ಗೀಸ್ ಅವರು, ಅಪರಾಧಿಗೆ ಪೋಕ್ಸೊ ಕಾಯ್ದೆಯಡಿ ಸಜೆ ವಿಧಿಸಿ ಆದೇಶ ಹೊರಡಿಸಿದರು ಎಂದು ವಿಶೇಷ ಅಭಿಯೋಜಕ (ಎಸ್‌ಪಿಪಿ) ಶಿಜೊ ಮೊನ್ ಜೋಸೆಫ್ ಅವರು ಇಲ್ಲಿ ತಿಳಿಸಿದರು.

ಜೈಲು ಶಿಕ್ಷೆಯನ್ನು ಏಕಕಾಲದಲ್ಲಿ ಅನುಭವಿಸಬೇಕಾದ ಕಾರಣ ಅಪರಾಧಿ ಅನುಭವಿಸಲಿರುವ ಗರಿಷ್ಠ ಸಜೆ ಅವಧಿಯು 20 ವರ್ಷಗಳಾಗಿವೆ. ಅಂದರೆ, ಆತನು 20 ವರ್ಷ ಜೈಲಿನಲ್ಲಿಯೇ ಕಳೆಯಬೇಕಾಗಿದೆ ಎಂದು ಎಸ್‌ಪಿಪಿ ವಿವರಿಸಿದರು.

ಅಲ್ಲದೆ, ಅಪರಾಧಿಗೆ ₹ 60 ಸಾವಿರ ದಂಡವನ್ನು ಕೋರ್ಟ್ ವಿಧಿಸಿದೆ. ಈ ಮೊತ್ತವನ್ನು ವಸೂಲು ಮಾಡಿ, ಸಂತ್ರಸ್ತೆಗೆ ನೀಡಬೇಕು ಎಂದು ತಿಳಿಸಿದೆ. ಕೃತ್ಯ 2021ರಲ್ಲಿ ನಡೆದಿದ್ದು, ಅಂಗಡಿ ಬಳಿಯೇ ವಾಸವಿದ್ದ ಬಾಲಕಿ ಮನೆಯಲ್ಲಿ ಏಕಾಂಗಿಯಾಗಿದ್ದಾಗ ಕೃತ್ಯ ಎಸಗಿದ್ದನು.

ಬಜೆಟ್ ಅಧಿವೇಶನ: ಹೇಮಂತ್ ಸೊರೇನ್‌ಗೆ ಅನುಮತಿ ನಿರಾಕರಣೆ

ರಾಂಚಿ (ಪಿಟಿಐ): ಜಾರ್ಖಂಡ್‌ನಲ್ಲಿ ಶುಕ್ರವಾರದಿಂದ ಆರಂಭವಾಗುವ ರಾಜ್ಯ ಬಜೆಟ್ ಅಧಿವೇಶನದಲ್ಲಿ ಭಾಗವಹಿಸಲು ಅನುಮತಿ ಕೋರಿದ್ದ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಇಲ್ಲಿನ ವಿಶೇಷ ಪಿಎಂಎಲ್‌ಎ ನ್ಯಾಯಾಲಯ ಗುರುವಾರ ಅನುಮತಿ ನಿರಾಕರಿಸಿದೆ.

ಹೇಮಂತ್ ಸೊರೇನ್

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜನವರಿ 31ರಂದು ಬಂಧಿಸಿತ್ತು. ಇ.ಡಿ ಕಸ್ಟಡಿ ಅವಧಿ ಮುಗಿದ ಬಳಿಕ ಫೆಬ್ರುವರಿ 15ರಿಂದ ಸೊರೇನ್ ಅವರನ್ನು ಬಿರ್ಸಾ ಮುಂಡಾ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ.

ವಿಧಾನಸಭೆಯಲ್ಲಿ ಫೆಬ್ರುವರಿ 5ರಂದು ನಡೆದಿದ್ದ ವಿಶ್ವಾಸಮತ ಯಾಚನೆ ವೇಳೆ ಭಾಗವಹಿಸಲು ಸೊರೇನ್ ಅವರಿಗೆ ಈ ಹಿಂದೆ ನ್ಯಾಯಾಲಯ ಅವಕಾಶ ನೀಡಿತ್ತು.

ಮೈತೇಯಿ ಸಮುದಾಯ ಎಸ್‌ಟಿ ಪಟ್ಟಿಗೆ

ಮಣಿಪುರ: ಸೂಚನೆ ಕೈಬಿಟ್ಟ ಹೈಕೋರ್ಟ್

ಇಂಫಾಲ್ (ಪಿಟಿಐ): ಮೈತೇಯಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದನ್ನು ಪರಿಗಣಿಸಿ ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿ 2023ರ ಮಾರ್ಚ್‌ನಲ್ಲಿ ನೀಡಿದ್ದ ಆದೇಶದ ಪ್ಯಾರಾವನ್ನು ಅಳಿಸಿ ಹಾಕಲು ಮಣಿಪುರ ಹೈಕೋರ್ಟ್ ಆದೇಶಿಸಿದೆ. ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದ ನಿಲುವಿಗೆ ಈ ಪ್ಯಾರಾವು ವ್ಯತಿರಿಕ್ತವಾಗಿದೆ ಎಂದೂ ಹೈಕೋರ್ಟ್ ಹೇಳಿದೆ.

ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಸಂಘರ್ಷ ನಡೆಯಲು ಹೈಕೋರ್ಟ್‌ನ 2023ರ ಆದೇಶವೇ ಕಾರಣ ಎನ್ನಲಾಗಿದೆ. ಈ ಸಂಘರ್ಷದಲ್ಲಿ 200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. 2023ರ ಆದೇಶದ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಗೋಲ್ಮೇಯಿ ಗೈಫುಲ್‌ಶಿಲು ಅವರ ಏಕಸದಸ್ಯ ಪೀಠವು ಈ ಆದೇಶ ನೀಡಿದೆ.

ಭಾರತ ಸರ್ಕಾರದ ಪರಿಶಿಷ್ಟ ಪಂಗಡ ಪಟ್ಟಿ ತಿದ್ದುಪಡಿಯ ನಿಗದಿತ ಪ್ರಕ್ರಿಯೆಯನ್ನು ಉಲ್ಲೇಖಿಸಿರುವ ನ್ಯಾಯಮೂರ್ತಿ ಗೋಲ್ಮೇಯೀ ಗೈಫುಲ್‌ಶಿಲು ಅವರ ಆದೇಶವು, ಹೈಕೋರ್ಟ್‌ನ ಹಿಂದಿನ ನಿರ್ದೇಶನವನ್ನು ರದ್ದುಪಡಿಸುವುದರ ಅಗತ್ಯವನ್ನು ಒತ್ತಿಹೇಳಿದೆ.

ಪರಿಶಿಷ್ಟ ಪಟ್ಟಿಗೆ ಸೇರಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳು ಏನು ಎಂಬುದನ್ನು 2013–14ರಲ್ಲಿ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಸಿದ್ಧಪಡಿಸಿದ್ದ ವರದಿಯಲ್ಲಿ ವಿವರಿಸಲಾಗಿದೆ. ಜೊತೆಗೆ, ಸುಪ್ರೀಂ ಕೋರ್ಟ್ ನೀಡಿರುವ ಸಂವಿಧಾನದ ವ್ಯಾಖ್ಯೆಗೂ ಅನುಗುಣವಾಗಿ ಇರಬೇಕಾಗಿದೆ ಎಂದು ನ್ಯಾಯಮೂರ್ತಿ ಹೇಳಿದರು.

ಪರಿಶಿಷ್ಟ ಪಂಗಡಗಳ ವರ್ಗೀಕರಣಕ್ಕೆ ಸಂಬಂಧಿಸಿ ನ್ಯಾಯಾಂಗದ ಹಸ್ತಕ್ಷೇಪಕ್ಕೆ ಮಿತಿಗಳಿವೆ ಎಂದು ಸಂವಿಧಾನ ಪೀಠವು 2000ದ ನವೆಂಬರ್‌ನಲ್ಲಿ ಹೇಳಿರುವುದನ್ನು ನ್ಯಾಯಮೂರ್ತಿ ಗೋಲ್ಮೇಯಿ ಉಲ್ಲೇಖಿಸಿದ್ದಾರೆ.

'ರಾಷ್ಟ್ರಪತಿಯವರು ಸಂವಿಧಾನದ 341 ಮತ್ತು 342ನೇ ವಿಧಿಯ ಅನ್ವಯ ನೀಡಿದ ಆದೇಶದಲ್ಲಿ ನಿರ್ದಿಷ್ಟವಾದ ಜಾತಿ, ಉಪಜಾತಿ, ಗುಂಪು ಅಥವಾ ಬುಡಕಟ್ಟೊಂದರ ಒಂದು ವರ್ಗ ಅಥವಾ ಬುಡಕಟ್ಟು ಉಪವರ್ಗವನ್ನು ಸೇರಿಸುವುದಕ್ಕೆ ಸಂಬಂಧಿಸಿ ಆದೇಶ ನೀಡಲು ನ್ಯಾಯಾಂಗವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಾರದು. ಸಂಸತ್ತಿನಲ್ಲಿ ಕಾನೂನು ರೂಪಿಸುವ ಮೂಲಕ ಮಾತ್ರ ಈ ಆದೇಶಗಳಿಗೆ ತಿದ್ದುಪಡಿ ಮಾಡಲು ಅಥವಾ ಬದಲಾಯಿಸಲು ಅವಕಾಶ ಇದೆ' ಎಂದು ಸುಪ್ರೀಂ ಕೋರ್ಟ್ 2000ದ ನವೆಂಬರ್‌ನಲ್ಲಿ ನೀಡಿದ ಆದೇಶದಲ್ಲಿ ಹೇಳಿತ್ತು.

ಜಾತಿ ವರ್ಗೀಕರಣಗಳ ವಿಚಾರದಲ್ಲಿ ನ್ಯಾಯಾಂಗವು ತನ್ನ ವ್ಯಾಪ್ತಿಯನ್ನು ಮೀರಬಾರದು ಎಂದು ಸಂವಿಧಾನ ಪೀಠವು ಸ್ಪಷ್ಟಪಡಿಸಿತ್ತು.

ಜನಾಂಗೀಯ ಹಿಂಸಾಚಾರದ ಸಂಬಂಧ ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಇಂಫಾಲದ ಮನೆಯ ಬಳಿ ಟೈರ್ ಸುಟ್ಟು ಪ್ರತಿಭಟನೆ ನಡೆಸಲಾಗಿತ್ತು ಎಎಫ್‌ಪಿ ಚಿತ್ರ (ಸಂಗ್ರಹ ಚಿತ್ರ)

ಆದೇಶ ಸರಿ ಇಲ್ಲ ಎಂದಿದ್ದ 'ಸುಪ್ರೀಂ'

2023ರಲ್ಲಿ ಹೈಕೋರ್ಟ್ ಆದೇಶ ನೀಡಿದ ಬಳಿಕ, ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ದಾಖಲಾಗಿದ್ದವು. ಹೈಕೋರ್ಟ್‌ನ ಆದೇಶಕ್ಕೆ ಅದೇ ವರ್ಷ ಮೇ 17ರಂದು ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿತ್ತು. ಆದೇಶದಲ್ಲಿ ಇದ್ದ ಲೋಪದ ಕಾರಣಕ್ಕೆ ತಡೆಯಾಜ್ಞೆಯನ್ನೂ ನೀಡಿತ್ತು.

'ನಾನು ಹೇಳುವ ವಿಚಾರ ಏನೆಂದರೆ, ಹೈಕೋರ್ಟ್‌ನ ಆದೇಶವು ಲೋಪದಿಂದ ಕೂಡಿದೆ. ನಾವು ಈ ಆದೇಶಕ್ಕೆ ತಡೆ ನೀಡಬೇಕಿದೆ. ಹೈಕೋರ್ಟ್‌ನ ಆದೇಶವು ಸಂಪೂರ್ಣವಾಗಿ ತಪ್ಪಾಗಿದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠವು ಹೇಳಿತ್ತು.

'ಸಿಂಹಗಳಿಗೆ ಸೀತಾ, ಅಕ್ಬರ್ ಹೆಸರು ಇಡಬಾರದಿತ್ತು'

ಕೋಲ್ಕತ್ತ (ಪಿಟಿಐ): ಸಿಂಹಗಳಿಗೆ ಅಕ್ಬರ್, ಸೀತಾ ಎಂದು ನಾಮಕರಣ ಮಾಡಬಾರದಿತ್ತು, ಇದರಿಂದ ವಿವಾದಗಳು ಉಂಟಾಗುವ ಸಾಧ್ಯತೆಗಳಿವೆ ಎಂದು ಕಲ್ಕತ್ತ ಹೈಕೋರ್ಟ್‌ನ ಜಲಪಾಯಿಗುಡಿ ಪೀಠ ಅಭಿಪ್ರಾಯಪಟ್ಟಿದೆ.

ಅಕ್ಬರ್ ಎಂಬ ಹೆಸರಿರುವ ಗಂಡು ಸಿಂಹ ಮತ್ತು ಸೀತಾ ಎಂಬ ಸಿಂಹಿಣಿಯನ್ನು ಫೆಬ್ರುವರಿ 12ರಂದು ತ್ರಿಪುರದ ಸಿಪಾಹಿಜಲ ಅಭಯಾರಣ್ಯದಿಂದ ಬಂಗಾಳ ಸಫಾರಿ ಪಾರ್ಕ್‌ಗೆ ತರಲಾಗಿತ್ತು. ಈ ಸಿಂಹಗಳ ಹೆಸರು ಜನರ ಧಾರ್ಮಿಕ ಭಾವನೆಗೆ ಧಕ್ಕೆ ಉಂಟುಮಾಡುವುದರಿಂದ ಅವನ್ನು ಬದಲಾಯಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಕೋರ್ಟ್‌ಗೆ ಮನವಿ ಮಾಡಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಭಟ್ಟಾಚಾರ್ಯ, 'ಪ್ರಾಣಿಗಳಿಗೆ ಇಡುವ ಹೆಸರಿನಿಂದ ವಿವಾದಗಳು ಸೃಷ್ಟಿಯಾಗಬಾರದು. ಸಿಂಹಗಳಿಗೆ ಬೇರೆ ಹೆಸರು ಇಡುವಂತೆ ಅಭಯಾರಣ್ಯದ ಅಧಿಕಾರಿಗಳಿಗೆ ಸರ್ಕಾರ ಸೂಚನೆ ನೀಡಬೇಕು' ಎಂದು ಸರ್ಕಾರಿ ವಕೀಲರಿಗೆ ಸೂಚಿಸಿದರು.

'ಸಿಂಹಗಳು ತ್ರಿಪುರದಲ್ಲಿ ಇದ್ದಾಗಲೇ ಅವುಗಳಿಗೆ ಹೆಸರನ್ನು ಇಡಲಾಗಿತ್ತು. ಆಗ ಇಲ್ಲದ ವಿವಾದ ಪಶ್ಚಿಮ ಬಂಗಾಳಕ್ಕೆ ಬಂದಾಗ ಉಂಟಾಗಿದೆ' ಎಂದು ಸರ್ಕಾರಿ ವಕೀಲರು ಕೋರ್ಟ್‌ಗೆ ತಿಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,055
ಇಂದಿನ ಅಂತ್ಯ	22,217
▲	162
ದಿನದ ಗರಿಷ್ಠ	22,252

ವಿನಿಮಯ ದರ

$ ಡಾಲರ್	82.85
£ ಪೌಂಡ್	105.00
€ ಯುರೊ	89.90
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹580
12 ಕ್ಕೆ ₹78
ಮೈಸೂರು
100ಕ್ಕೆ ₹580

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹905 (900)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹860 (860)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹320-465
ದ್ವಿತಳಿ (ಬಿ.ವಿ) ₹150-542

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹161.50
ಆರ್‌ಎಸ್‌ಎಸ್-5 ₹156.50
ಗುಡ್ ಲಾಟ್ ₹140
(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹6000-6000
ತಿಪಟೂರು	₹8200-9300

ಬೈಜುಸ್ ಷೇರುದಾರರ ಸಭೆ ಇಂದು

ರವೀಂದ್ರನ್, ಕುಟುಂಬಸ್ಥರ ಪದಚ್ಯುತಿಗೆ ನಿರ್ಣಯ ಸಾಧ್ಯತೆ?

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್ ಆಡಳಿತ ಮಂಡಳಿಯಿಂದ ಸಿಇಒ ಬೈಜು ರವೀಂದ್ರನ್ ಹಾಗೂ ಅವರ ಕುಟುಂಬದ ಸದಸ್ಯರನ್ನು ಪದಚ್ಯುತಿಗೊಳಿಸುವ ಸಂಬಂಧ ಫೆಬ್ರುವರಿ 23ರಂದು ಷೇರುದಾರರ ವಿಶೇಷ ಸಾಮಾನ್ಯ ಸಭೆ (ಇಜಿಎಂ) ನಡೆಯಲಿದೆ.

ರವೀಂದ್ರನ್ ಹಾಗೂ ಕುಟುಂಬಸ್ಥರು ಕಂಪನಿಯ ನಿರ್ವಹಣೆಯಲ್ಲಿ ವೈಫಲ್ಯ ಕಂಡಿದ್ದಾರೆ ಎಂದು ಆರೋಪಿಸಿ ಕೆಲವು ಹೂಡಿಕೆದಾರರು ಸಭೆಯಲ್ಲಿ ನಿರ್ಣಯ ಮಂಡಿಸಲಿದ್ದಾರೆ. ಇದರ ಪರವಾಗಿ ಷೇರುದಾರರು ಮತ ಚಲಾಯಿಸಲಿದ್ದಾರೆ ಎಂದು ಹೇಳಲಾಗಿದೆ.

ಆಡಳಿತ ಮಂಡಳಿಯಲ್ಲಿ ರವೀಂದ್ರನ್, ಅವರ ಪತ್ನಿ ಹಾಗೂ ಸಹ ಸಂಸ್ಥಾಪಕಿ ದಿವ್ಯಾ ಗೋಕುಲನಾಥ್, ಸಹೋದರ ರಿಜು ರವೀಂದ್ರನ್ ಇದ್ದಾರೆ.

ಕಂಪನಿಯಲ್ಲಿ ಶೇ 32ರಷ್ಟು ಷೇರು ಹೊಂದಿರುವ ಹೂಡಿಕೆದಾರರು ಕರೆದಿರುವ ಈ ಸಭೆಯ ಸಿಂಧುತ್ವ ಪ್ರಶ್ನಿಸಿ ರವೀಂದ್ರನ್ ಅವರು ಕರ್ನಾಟಕ ಹೈಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ಆದರೆ, ಈ ಸಭೆಗೆ ತಡೆಯಾಜ್ಞೆ ನೀಡಲು ಹೈಕೋರ್ಟ್ ನಿರಾಕರಿಸಿದ್ದು, ಮಾರ್ಚ್ 13ಕ್ಕೆ ವಿಚಾರಣೆಯನ್ನು ಮುಂದೂಡಿದೆ. ಸಭೆಯಲ್ಲಿ ಯಾವುದೇ ತೀರ್ಮಾನ ಕೈಗೊಂಡರೂ ಅದು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಕಂಪನಿಯಲ್ಲಿ ಶೇ 30ರಷ್ಟು ಷೇರುಗಳನ್ನು ಹೊಂದಿರುವ ಪ್ರಮುಖ ಆರು ಮಂದಿ ಹೂಡಿಕೆದಾರರು ಕೂಡ ಸಭೆಗೆ .ಬೆಂಬಲ ಘೋಷಿಸಿದ್ದಾರೆ ಎಂದು ಹೇಳಲಾಗಿದೆ. ರವೀಂದ್ರನ್ ಹಾಗೂ ಕುಟುಂಬವು ಶೇ 26.3ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದೆ.

2022ರಲ್ಲಿ ₹1.82 ಲಕ್ಷ ಕೋಟಿಗೆ ತಲುಪಿದ್ದ ಬೈಜುಸ್ ಮಾರುಕಟ್ಟೆ ಮೌಲ್ಯವು ಈಗ ₹1,657 ಕೋಟಿಗೆ ಇಳಿಕೆಯಾಗಿದೆ.

ನೋಟಿಸ್‌ನಲ್ಲಿ ಏನಿದೆ?

ಕಂಪನಿಯಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ರವೀಂದ್ರನ್ ಅವರಿಗೆ ಷೋಕಾಸ್ ನೋಟಿಸ್ ನೀಡಿದೆ. ಇದಕ್ಕೆ ಅವರು ಸರಿಯಾಗಿ ಉತ್ತರ ನೀಡಿಲ್ಲ. ಸಾಲದಾತರಿಗೆ ಸಕಾಲದಲ್ಲಿ ಸಾಲ ಮರುಪಾವತಿ ಮಾಡುವಲ್ಲಿ ವಿಫಲವಾಗಿದ್ದಾರೆ ಎಂದು ಸಭೆ ಕರೆದಿರುವ ಸಂಬಂಧ ಹೂಡಿಕೆದಾರರು ನೀಡಿರುವ ನೋಟಿಸ್‌ನಲ್ಲಿ ದೂರಿದ್ದಾರೆ.

ಬಿಸಿಸಿಐ ಜೊತೆಗಿನ ಪ್ರಾಯೋಜಕತ್ವ ಹಾಗೂ ಕಂಪನಿ ಪಡೆದಿರುವ ಸಾಲದ ಬಗ್ಗೆ ಷೇರುದಾರರನ್ನು ತಪ್ಪುದಾರಿಗೆ ಎಳೆಯಲಾಗಿದೆ ಎಂದು ಆರೋಪಿಸಿದ್ದಾರೆ.

ಬೆಳೆಗಾರರಿಗೆ ‘ಹುಳಿ’ಯಾದ ದ್ರಾಕ್ಷಿ

ರಾಜ್ಯದಲ್ಲಿ ಅಂದಾಜು 35 ಸಾವಿರ ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದ್ದು, ವಾರ್ಷಿಕ ₹5 ಸಾವಿರ ಕೋಟಿ ವಹಿವಾಟು ಇದೆ. ವಿಜಯಪುರ, ಬೆಳಗಾವಿ, ಬಾಗಲಕೋಟೆ, ಕಲಬುರಗಿ ಜಿಲ್ಲೆಗಳಲ್ಲಿ ಬೆಳೆಯುವ ದ್ರಾಕ್ಷಿಯಲ್ಲಿ ಶೇ 80ರಷ್ಟು ಒಣದ್ರಾಕ್ಷಿ ಮಾಡಲಾಗುತ್ತದೆ. ಉಳಿದ ಹಸಿ ದ್ರಾಕ್ಷಿ ತಿನ್ನಲು ಬಳಕೆಯಾಗುತ್ತದೆ. ಧಾರಣೆ ಕುಸಿದು ಸಂಕಷ್ಟದಲ್ಲಿರುವ ಬೆಳೆಗಾರರ ನೆರವಿಗೆ ಸರ್ಕಾರ ಮುಂದಾಗಬೇಕು. ದ್ರಾಕ್ಷಿಗೆ ಬೆಂಬಲ ಬೆಲೆ ಘೋಷಿಸಬೇಕು ಎಂಬುದು ರೈತರ ಒತ್ತಾಯ

ಉತ್ತಮ ಫಸಲು ಬಂದಿಲ್ಲ...

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ‘ಬರ ಪರಿಸ್ಥಿತಿಯಿಂದ ಈ ಬಾರಿ ಉತ್ತಮ ಫಸಲು ಬಂದಿಲ್ಲ. ಮಾರುಕಟ್ಟೆಯಲ್ಲಿ ದ್ರಾಕ್ಷಿಗೆ ಹೇಳಿಕೊಳ್ಳುವಂತಹ ದರವೂ ಇಲ್ಲ. ಒಣದ್ರಾಕ್ಷಿಗೂ ಬೇಡಿಕೆ ಕುಸಿದಿದೆ. ನಾವು ಸಂಕಷ್ಟಕ್ಕೆ ಸಿಲುಕಿದ್ದೇವೆ’.

ಕಾಗವಾಡ ತಾಲ್ಲೂಕಿನ ಮಂಗಸೂಳಿಯ ರೈತ ಸಂಗ್ರಾಮ ಸಾವಂತ ಅವರು ಅಳಲು ತೋಡಿಕೊಂಡಿದ್ದು ಹೀಗೆ. ಇದು ಜಿಲ್ಲೆಯ ಬಹುತೇಕ ದ್ರಾಕ್ಷಿ ಬೆಳೆಗಾರರ ಸ್ಥಿತಿಯೂ ಆಗಿದೆ.

ಜಿಲ್ಲೆಯಲ್ಲಿ 2022ರ ಏಪ್ರಿಲ್‌ನಿಂದ 2023ರ ಮಾರ್ಚ್ ಅವಧಿಯಲ್ಲಿ 6,268 ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗಿತ್ತು. 2023ರ ಏಪ್ರಿಲ್‌ನಿಂದ ಪ್ರಸಕ್ತ ವರ್ಷದ ಫೆಬ್ರುವರಿ ಅವಧಿವರೆಗೆ ದ್ರಾಕ್ಷಿ ಬೆಳೆಯುವ ಪ್ರದೇಶವು 6,585 ಹೆಕ್ಟೇರ್‌ಗೆ ಏರಿಕೆ ಆಗಿದೆ. ಈ ಪೈಕಿ ಅಥಣಿ, ಕಾಗವಾಡ ತಾಲ್ಲೂಕಿನಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ಇಲ್ಲಿ ಬೆಳೆಯುವ ದ್ರಾಕ್ಷಿ ಬೆಂಗಳೂರು, ನವದೆಹಲಿ, ಹೈದರಾಬಾದ್ ಮತ್ತು ಮಹಾರಾಷ್ಟ್ರದ ಮಾರುಕಟ್ಟೆಗೆ ಪೂರೈಕೆಯಾಗುತ್ತದೆ.

‘ಎರಡು ಎಕರೆಯಲ್ಲಿ ದ್ರಾಕ್ಷಿ ಬೆಳೆದಿರುವೆ. ಕಳೆದ ವರ್ಷ ಪ್ರತಿ 4 ಕೆ.ಜಿಗೆ ₹200 ದರದಲ್ಲಿ ಮಾರಾಟ ಮಾಡಿದ್ದೆ. ಈ ಬಾರಿ ₹110ಕ್ಕೆ 4 ಕೆ.ಜಿ ದ್ರಾಕ್ಷಿ ಮಾರಾಟ ವಾಗುತ್ತಿದೆ. ಮೂರು ತಿಂಗಳ ಹಿಂದೆ ಅಕಾಲಿಕ ಮಳೆಯಿಂದ ಒಂದಿಷ್ಟು ಬೆಳೆ ಹಾನಿಯಾಯಿತು. ಕಳೆದ ಬಾರಿಗಿಂತ ಈ ಬಾರಿ ಶೇ 40ರಷ್ಟು ಉತ್ಪಾದನೆ ಕುಸಿದಿದೆ. ಆದರೆ, ತೋಟಗಾರಿಕೆ ಇಲಾಖೆಯವರು ಸರಿಯಾಗಿ ಬೆಳೆಹಾನಿ ಸಮೀಕ್ಷೆ ನಡೆಸಿಲ್ಲ’ ಎಂದು ಸಂಗ್ರಾಮ ಸಾವಂತ ದೂರಿದರು.

‘ಒಣದ್ರಾಕ್ಷಿಯನ್ನು ಕೊಳ್ಳುವವರಿಲ್ಲ. ಜೊತೆಗೆ ಅದಕ್ಕೂ ಉತ್ತಮ ಬೆಲೆ ಇಲ್ಲ. ಬೆಳೆಗಾರರ ಕಷ್ಟ ಹೇಳತೀರದಾಗಿದೆ. ಸರ್ಕಾರ ತ್ವರಿತವಾಗಿ ಬೆಳೆಗಾರರ ನೆರವಿಗೆ ಧಾವಿಸಬೇಕು. ಒಣದ್ರಾಕ್ಷಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು. ಪೌಷ್ಟಿಕಾಂಶಯುಕ್ತವಾದ ಇದನ್ನು ಸರ್ಕಾರವೇ ಖರೀದಿಸಿ ಅಂಗನವಾಡಿ ಕೇಂದ್ರಗಳಿಗೆ ವಿತರಿಸಬೇಕು’ ಎಂದು ದ್ರಾಕ್ಷಿ ಬೆಳೆಗಾರರೂ ಆಗಿರುವ ಅಥಣಿಯ ಮಾಜಿ ಶಾಸಕ ಷಹಜಹಾನ್ ಡೊಂಗರಗಾಂವ ಒತ್ತಾಯಿಸಿದರು.

ವಿಜಯಪುರ ಜಿಲ್ಲೆಯ ರೈತರೊಬ್ಬರ ಜಮೀನಿನಲ್ಲಿ ಬೆಳೆದಿರುವ ದ್ರಾಕ್ಷಿ

ಬೆಳಗಾವಿಯ ರೈತರು ಮೀರಜ್, ಸಾಂಗ್ಲಿ, ಆಂಧ್ರಪ್ರದೇಶ ಮಾರುಕಟ್ಟೆಗೆ ದ್ರಾಕ್ಷಿ ಕಳುಹಿಸುತ್ತಿದ್ದರು. ಮಹಾರಾಷ್ಟ್ರ, ಆಂಧ್ರದಲ್ಲಿ ಈ ಬಾರಿ ಹೆಚ್ಚಾಗಿ ದ್ರಾಕ್ಷಿ ಬೆಳೆಯಲಾಗಿದೆ. ಹಾಗಾಗಿ,ಜಿಲ್ಲೆಯಲ್ಲಿ ಬೆಳೆದಿರುವ ದ್ರಾಕ್ಷಿಗೆ ಬೇಡಿಕೆ ಕುಸಿದಿದೆ
ಮಹಾಂತೇಶ ಮುರಗೋಡ, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ, ಬೆಳಗಾವಿ

ರಫ್ತು ಸ್ಥಗಿತ; ಧಾರಣೆ ಕುಸಿತ

• ಬಸವರಾಜ್ ಸಂಪಳ್ಳಿ

ವಿಜಯಪುರ: ರಷ್ಯಾ, ಇರಾನ್, ಇರಾಕ್, ಸೌದಿ ಅರೇಬಿಯಾ ಮತ್ತು ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನ, ಶ್ರೀಲಂಕಾದಲ್ಲಿ ದ್ರಾಕ್ಷಿಗೆ ಬೇಡಿಕೆ ಕುಸಿದಿದೆ. ದ್ರಾಕ್ಷಿಯಲ್ಲಿ ರಾಸಾಯನಿಕ ಅಂಶ ಹೆಚ್ಚಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ರಫ್ತು ಸ್ಥಗಿತವಾಗಿದೆ. ಹಾಗಾಗಿ, ಕಳೆದ ಎರಡು ವರ್ಷಗಳಿಂದ ರಾಜ್ಯದ ಒಣದ್ರಾಕ್ಷಿ ಮಾರುಕಟ್ಟೆಗೆ ದೊಡ್ಡ ಪೆಟ್ಟು ಬಿದ್ದಿದೆ.

ರಾಜ್ಯದಲ್ಲಿ ಸದ್ಯ ದ್ರಾಕ್ಷಿ ಸುಗ್ಗಿ (ಕೊಯ್ಲು) ಆರಂಭವಾಗಿದೆ. ಮಾರುಕಟ್ಟೆಯಲ್ಲಿ 1 ಕೆ.ಜಿ ಒಣದ್ರಾಕ್ಷಿಗೆ ₹130 ರಿಂದ ₹150 ದರ ಇದೆ. 1 ಕೆ.ಜಿ ಹಸಿ ದ್ರಾಕ್ಷಿಗೆ ₹ 30ರಿಂದ ₹40 ದರ ಇದೆ. ಕಳೆದ ವರ್ಷಕ್ಕಿಂತ ₹10ರಿಂದ ₹20 ಕಡಿಮೆ ಆಗಿದೆ.

‘ಕಳೆದ ವರ್ಷದ ಶೇ 20ರಷ್ಟು ಒಣದ್ರಾಕ್ಷಿ ಮಾರಾಟವಾಗದೇ ಇನ್ನೂ ಶೈತ್ಯಾಗಾರಗಳಲ್ಲಿಯೇ ಇದೆ. ಈಗ ಹೊಸ ಬೆಳೆ ಬರುತ್ತಿದೆ. ಆದರೆ, ರಫ್ತು ಸಂಪೂರ್ಣ ಸ್ಥಗಿತವಾದ ಕಾರಣ ಮಾರುಕಟ್ಟೆಯಲ್ಲಿ ಹಸಿ ಮತ್ತು ಒಣ ದ್ರಾಕ್ಷಿ ದರ ಕುಸಿದಿದೆ’ ಎಂದು ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಹುಲ್ ಬಾವಿದೊಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ದ್ರಾಕ್ಷಿ ಹವಾಮಾನ ಆಧಾರಿತ ಬೆಳೆ. ಹವಾಮಾನದಲ್ಲಿ ಸ್ವಲ್ಪ ಏರುಪೇರಾದರೂ ಬೆಳೆ ಮತ್ತು ಇಳುವರಿ ಮೇಲೆ ಪರಿಣಾಮ ಬೀರುತ್ತದೆ. ಮೋಡ, ಮಳೆ, ಮಂಜಿನ ಹಿನ್ನೆಲೆಯಲ್ಲಿ ಬೆಳೆ ರಕ್ಷಿಸಿಕೊಳ್ಳಲು ಮತ್ತು ಹೆಚ್ಚು ಇಳುವರಿ ಪಡೆಯಲು ರೈತರು ರಾಸಾಯನಿಕ ಔಷಧಗಳ ಮೊರೆ ಹೋಗುತ್ತಾರೆ’ ಎಂದರು.

‘ಒಣದ್ರಾಕ್ಷಿ ಮಾಡುವಾಗಲೂ ಬಂಗಾರದ ಬಣ್ಣ ಬರಲಿ ಎಂದು ಹೆಚ್ಚು ರಾಸಾಯನಿಕ (ಗಂಧಕ, ಡಿಪಿಂಗ್ ಆಯಿಲ್, ಕಾರ್ಬೊನೇಟ್) ಬಳಸುತ್ತಾರೆ. ಇದು ತಿನ್ನುವವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕಾರಣ ಜನರು ದ್ರಾಕ್ಷಿ ಬಳಕೆಯನ್ನು ಕಡಿಮೆ ಮಾಡಿದ್ದಾರೆ’ ಎಂದು ತಿಳಿಸಿದರು.

‘ದ್ರಾಕ್ಷಿ ಹಾಗೂ ದ್ರಾಕ್ಷ ರಸ ಅಭಿವೃದ್ಧಿ ಮಂಡಳಿಯು ಸಂಕಷ್ಟದಲ್ಲಿರುವ ರಾಜ್ಯದ ಬೆಳೆಗಾರರ ನೆರವಿಗೆ ಬರುತ್ತಿಲ್ಲ. ಸರ್ಕಾರ ಮಂಡಳಿಗೆ ಹೆಚ್ಚಿನ ಅನುದಾನ ನೀಡಬೇಕು. ವಿಜಯಪುರ ಇ-ಟ್ರೇಡಿಂಗ್ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ. ದಲ್ಲಾಳಿಗಳು ಹೊಂದಾಣಿಕೆ ಮಾಡಿಕೊಂಡು ರೈತರಿಗೆ ಸಮರ್ಪಕವಾಗಿ ಬೆಲೆ ಸಿಗದಂತೆ ವಂಚಿಸುತ್ತಿದ್ದಾರೆ’ ಎಂದು ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕೇರ ಹೇಳಿದರು.

ಮಿತಿಮೀರಿ ರಾಸಾಯನಿಕ ಬಳಕೆಯಿಂದ ಬೆಳೆಯುವವರೇ ದ್ರಾಕ್ಷಿ ತಿನ್ನುತ್ತಿಲ್ಲ. ಸಂಬಂಧಿಕರು, ಪರಿಚಯಸ್ಥರಿಗೂ ತಿನ್ನಬೇಡಿ ಎಂದು ಹೇಳುತ್ತಾರೆ. ದ್ರಾಕ್ಷಿ ಸೇವನೆಯಿಂದ ಜನ ವಿಮುಖರಾಗುತ್ತಿದ್ದಾರೆ
ರಾಹುಲ್ ಬಾವಿದೊಡ್ಡಿ, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ, ವಿಜಯಪುರ

ದ್ರಾಕ್ಷಿ ಬೆಳೆಗಾರರು ಸಾವಯವ ಕೃಷಿಗೆ ಆದ್ಯತೆ ನೀಡಬೇಕು. ಔಷಧ ಮುಕ್ತವಾಗಿ ಬೆಳೆಯಬೇಕು. ಸರ್ಕಾರವೂ ಸಾವಯವ ದ್ರಾಕ್ಷಿ ಉತ್ಪಾದನೆಗೆ ಹೆಚ್ಚು ಪ್ರೋತ್ಸಾಹಿಸಬೇಕು
ಅಭಯಕುಮಾರ್ ನಾಂದ್ರೇಕೇರ, ಅಧ್ಯಕ್ಷ, ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘ

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	950-1000
ನಡುಗೋಲು	1050-1100
ರಾಶಿ	1150-1200
ರಾಶಿ ಉತ್ತಮ	1300-1350
ಹೆರಕಿದ್ದು	1900-2000
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	500

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-33000
ಹಳತು	33000-42500
ಪುತ್ತೂರು	
ಕೋಕ	11500-26000
ಹೊಸತು	26500-34000
ಸಾಗರ	
ಬಿಳಿಗೋಟು	19699-24832
ಚಾಲಿ	27313-34599
ಕೋಕ	12989-25989
ಕೆಂಪುಗೋಟು	17869-32579
ರಾಶಿ	31389-47889
ಸಿಪ್ಪೆಗೋಟು	8290-17229
ಚಿತ್ರದುರ್ಗ	
ಅಪಿ	46439-46899
ಬೆಟ್ಟೆ	35119-35559
ಕೆಂಪುಗೋಟು	28509-28910
ರಾಶಿ	45929-46369
ಶಿವಮೊಗ್ಗ	
ಬೆಟ್ಟೆ	31179-53589
ಗೊರಬಲು	16509-34119
ರಾಶಿ	30069-47989
ಸರಕು	41199-82240
ಸಿದ್ದಾಪುರ	
ಬಿಳಿಗೋಟು	24819-26800
ಚಾಲಿ	35899-36699
ಕೋಕ	24099-25119
ಹೊಸಚಾಲಿ	29099-31899
ಕೆಂಪುಗೋಟು	30689-33689
ರಾಶಿ	43009-46599
ತಟ್ಟಿಬೆಟ್ಟೆ	38869-47219
ಶಿರಸಿ	
ಬೆಟ್ಟೆ	38099-43599
ಬಿಳಿಗೋಟು	24009-30898
ಚಾಲಿ	34099-37913
ಕೆಂಪುಗೋಟು	29800-34689
ರಾಶಿ	43269-46299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14,200	-	188.10 ಸೆಂಟ್ಸ್
ಎಸಿ	-	7,700	-	
ಆರ್‌ಪಿ	-	13,700	-	ಲಂಡನ್
ಆರ್‌ಸಿ	-	282 on OT	-	3,177 ಡಾಲರ್

ಮುಂಬೈ ಧಾರಣೆ

ಶೇಂಗಾ
22-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	880 (860)
ಪಾಮ್ ವಾರದ ಡೆಲಿವರಿ	858 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,800 (62,000)
ಬೆಳ್ಳಿ ಕೆ.ಜಿ ₹70,350 (70,750)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಒಣಮೆಣಸಿನಕಾಯಿ ಧಾರಣೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಳವಣಿಕಿ (ರೋಣ ತಾಲ್ಲೂಕು): ಮಾರುಕಟ್ಟೆಯಲ್ಲಿ ಒಣಮೆಣಸಿನಕಾಯಿ ಧಾರಣೆಯು ದಿಢೀರ್ ಕುಸಿದಿದ್ದು, ರೈತರಲ್ಲಿ ಆತಂಕ ಹೆಚ್ಚಿಸಿದೆ.

ಕಳೆದ ತಿಂಗಳು ಹುಬ್ಬಳ್ಳಿ, ಬ್ಯಾಡಗಿ ಮತ್ತು ಗದಗ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಲ್ ಒಣಮೆಣಸಿನಕಾಯಿ ₹60 ಸಾವಿರಕ್ಕೆ ಮಾರಾಟವಾಗಿತ್ತು. ಈಗ ಖರೀದಿದಾರರು ₹20 ಸಾವಿರಕ್ಕೆ ಕೇಳುತ್ತಿದ್ದಾರೆ ಎಂದು ಬೆಳೆಗಾರರು ಅಳಲು ತೋಡಿಕೊಂಡಿದ್ದಾರೆ.

‘ಉತ್ತಮ ಬೆಲೆ ಸಿಗದ ಕಾರಣ ಒಣ ಮೆಣಸಿನಕಾಯಿಯನ್ನು ಮಾರುಕಟ್ಟೆಯಿಂದ ಮನೆಗೆ ತರುತ್ತಿದ್ದೇವೆ. ಬೆಳೆಗೆ ಔಷಧೋಪಚಾರ, ಕಾರ್ಮಿಕರ ಕೂಲಿ ಸೇರಿದಂತೆ ಬೆಳೆಯಲು ಖರ್ಚು ಮಾಡಿರುವ ಹಣವೂ ಕೈಗೆ ಸಿಗುತ್ತಿಲ್ಲ. ಮಾರಾಟ ಮಾಡಲು ಮನಸ್ಸಿಲ್ಲದೆ ಜಮೀನುಗಳಲ್ಲಿ ಬಣವೆ ಮಾಡಿ ಶೇಖರಿಸಿ ಇಡಲಾಗುತ್ತಿದೆ’ ಎಂದು ರೈತರು ತಿಳಿಸಿದರು.

‘ಬೆಳವಣಿಕಿ, ಕೌಜಗೇರಿ, ಯಾವಗಲ್ಲ, ಮಲ್ಲಾಪೂರ, ಸಂದಿಗವಾಡ, ಚಿಕ್ಕಮಣ್ಣೂರ, ಮಾಳವಾಡ, ಹೊನ್ನಾಪೂರ ಸೇರಿ ಹಲವು ಗ್ರಾಮಗಳ ಬೆಳೆಗಾರರು ಮೆಣಸಿನಕಾಯಿಯನ್ನು ಮನೆಯಲ್ಲೇ ಸಂಗ್ರಹಿಸಿಟ್ಟುಕೊಂಡಿದ್ದಾರೆ’ ಎಂದು ರೈತ ಹನಮಂತಗೌಡ ಅಡೂರ ತಿಳಿಸಿದರು.

ಸಂಕಷ್ಟ ಅರಿಯಲು ಚಾಲಕರ ಜೊತೆ ಸಿಇಒ ಪ್ರಯಾಣ

ಒಎನ್‌ಡಿಸಿ ಜತೆ ಉಬರ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ವಾಣಿಜ್ಯಕ್ಕಾಗಿನ ಮುಕ್ತ ವ್ಯವಸ್ಥೆಯೊಟ್ಟಿಗೆ (ಒಎನ್‌ಡಿಸಿ) ಉಬರ್ ಕಂಪನಿಯು ಗುರುವಾರ ಒಡಂಬಡಿಕೆಗೆ ಸಹಿ ಹಾಕಿದೆ.

ಇ-ವಾಣಿಜ್ಯ ವಹಿವಾಟುಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಕೇಂದ್ರ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ಒಎನ್‌ಡಿಸಿ ವೇದಿಕೆಯನ್ನು ಆರಂಭಿಸಿದೆ. ಈ ಒಪ್ಪಂದದಿಂದ ಉಬರ್ ಆ್ಯಪ್ ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ತಲುಪಲು ನೆರವಾಗಲಿದೆ ಎಂದು ಕಂಪನಿ ಹೇಳಿದೆ.

ಅಲ್ಲದೆ, ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಸೇವೆ ಒದಗಿಸಲು ನಿರ್ಧರಿಸಿರುವ ಕಂಪನಿಯ ಉದ್ದೇಶವೂ ಸಾಕಾರವಾಗಲಿದೆ ಎಂದು ತಿಳಿಸಿದೆ.

ಚಾಲಕರ ಜೊತೆ ಪ್ರಯಾಣ: ‘ನಾನು ಉಬರ್ ವಾಹನಗಳಲ್ಲಿ ಪ್ರಯಾಣ ಮಾಡುತ್ತೇನೆ. ಆ ವೇಳೆ ಚಾಲಕರ ಜೊತೆ ಮಾತಾಡುತ್ತೇನೆ. ಅವರು ಚಾಲನೆ ಮಾಡುವಾಗ ಎದುರಿಸುತ್ತಿರುವ ಸಂಕಷ್ಟಗಳನ್ನು ಅರ್ಥೈಸಿಕೊಂಡು ಪರಿಹಾರ ಕೈಗೊಳ್ಳಲು ಇದರಿಂದ ಸಹಕಾರಿಯಾಗುತ್ತಿದೆ’ ಎಂದು ಉಬರ್ ಗ್ಲೋಬಲ್ ಸಿಇಒ ದಾರಾ ಖೋಸ್ರೋಶಾಹಿ ಹೇಳಿದರು.

ನಗರದಲ್ಲಿ ಆಯೋಜಿಸಿದ್ದ ‘ಬಿಲ್ಡಿಂಗ್ ಪಾಪ್ಯುಲೇಷನ್ ಸ್ಕೇಲ್ ಟೆಕ್ನಾಲಜಿ’ ವಿಷಯ ಕುರಿತು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಜೊತೆ ಚರ್ಚಿಸಿದ ಅವರು, ‘ಭಾರತದಲ್ಲಿ ಉಬರ್ ಸೇವೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ವಿಸ್ತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ತಿಳಿಸಿದರು.

ಭಾರತದ ಡಿಜಿಟಲ್ ಸಾರ್ವಜನಿಕ ಮೂಲ ಸೌಕರ್ಯದ (ಡಿಪಿಐ) ಬಗ್ಗೆ ವಿಶ್ವದಾದ್ಯಂತ ಇರುವ ಕಂಪನಿಗಳು ಮತ್ತಷ್ಟು ಮಾಹಿತಿ ಅರಿಯಲು ಒಎನ್‌ಡಿಸಿ ಜೊತೆಗಿನ ಒಪ್ಪಂದ ವೇದಿಕೆಯಾಗಲಿದೆ ಎಂದರು.

ದೇಶೀಯ ಮಾರುಕಟ್ಟೆಯು ಉಬರ್‌ಗೆ ಉತ್ತಮ ವೇದಿಕೆ ಕಲ್ಪಿಸಿದೆ. ಕಂಪನಿ ಸಹ ಮತ್ತಷ್ಟು ಗ್ರಾಹಕರನ್ನು ತಲುಪಲು ತಂತ್ರಜ್ಞಾನದ ಅಭಿವೃದ್ಧಿಯತ್ತ ಹೆಜ್ಜೆ ಇಟ್ಟಿದೆ ಎಂದರು.

ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಮಾತನಾಡಿ, ‘ಜಗತ್ತಿನಲ್ಲಿಯೇ ಭಾರತವು ನೇರ ನಗದು ವರ್ಗಾವಣೆಯಲ್ಲಿ (ಡಿಬಿಟಿ) ಮುಂಚೂಣಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾಹಿತಿ ತಂತ್ರಜ್ಞಾನ ವಲಯದ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು ಎಲ್ಲಾ ಭಾಷೆಗಳಲ್ಲಿ ಲಭ್ಯವಾಗಲಿದ್ದು, ದೇಶವು ವೇಗವಾಗಿ ಬೆಳವಣಿಗೆ ಹೊಂದಲು ನೆರವಾಗಲಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಬರ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಪ್ರಭಜೀತ್ ಸಿಂಗ್ ಮತ್ತು ಒಎನ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಟಿ. ಕೋಶಿ ಅವರು ಪರಸ್ಪರ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದರು.

ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಬರ್ ಗ್ಲೋಬಲ್ ಸಿಇಒ ದಾರಾ ಖೋಸ್ರೋಶಾಹಿ ಅವರನ್ನು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ

ದೇಶದ 125 ನಗರಗಳಲ್ಲಿ ಜನರಿಗೆ ಸುರಕ್ಷಿತ ಮತ್ತು ಕೈಗೆಟುಕುವ ದರದಲ್ಲಿ ಉಬರ್ ಸೇವೆ ನೀಡಲಾಗುತ್ತಿದೆ. ಇದರ ಮತ್ತಷ್ಟು ವಿಸ್ತರಣೆಗೆ ಈ ಒಪ್ಪಂದ ನೆರವಾಗಲಿದೆ
ದಾರಾ ಖೋಸ್ರೋಶಾಹಿ, ಗ್ಲೋಬಲ್ ಉಬರ್ ಸಿಇಒ

54,760 ಟನ್ ಈರುಳ್ಳಿ ರಫ್ತಿಗೆ ಅನುಮತಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬಾಂಗ್ಲಾದೇಶ, ಮಾರಿಷಸ್, ಬಹರೇನ್ ಹಾಗೂ ಭೂತಾನ್‌ಗೆ ಒಟ್ಟು 54,760 ಟನ್ ಈರುಳ್ಳಿ ರಫ್ತು ಮಾಡಲು ವ್ಯಾಪಾರಿಗಳಿಗೆ ಅನುಮತಿ ನೀಡಿದೆ.

‘ಮಾರ್ಚ್ 31ರ ವರೆಗೆ ನಿಗದಿ ಪಡಿಸಿರುವ ಪ್ರಮಾಣದಷ್ಟು ಈರುಳ್ಳಿ ರಫ್ತಿಗೆ ಮಾತ್ರವೇ ಅನುಮತಿ ನೀಡಲಾಗಿದೆ. ದ್ವಿಪಕ್ಷೀಯ ಒಪ್ಪಂದದ ಅನ್ವಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಶಿಫಾರಸ್ಸಿನ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

₹20 ಲಕ್ಷ ಕೋಟಿಗೂ ಹೆಚ್ಚು ಕೃಷಿ ಸಾಲ ವಿತರಣೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜನವರಿ ಅಂತ್ಯದವರೆಗೆ ದೇಶದಲ್ಲಿ ರೈತರಿಗೆ ₹20.39 ಲಕ್ಷ ಕೋಟಿಯಷ್ಟು ಕೃಷಿ ಸಾಲ ವಿತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

2023-24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸರ್ಕಾರವು ₹20 ಲಕ್ಷ ಕೋಟಿ ಸಾಲ ನೀಡುವ ಗುರಿ ನಿಗದಿಪಡಿಸಿತ್ತು. ಆದರೆ, ಬ್ಯಾಂಕ್‌ಗಳು ಈ ಗುರಿಯನ್ನು ಮೀರಿ ಸಾಲ ನೀಡಿವೆ ಎಂದು ಹೇಳಿದೆ.

2013-14ನೇ ಸಾಲಿನಡಿ ಕೃಷಿ ವಲಯಕ್ಕೆ ಒಟ್ಟು ₹7.3 ಲಕ್ಷ ಕೋಟಿ ಸಾಲ ನೀಡಲಾಗಿತ್ತು. ಒಂದು ದಶಕದ ಅವಧಿಯಲ್ಲಿ ಸಾಲ ನೀಡಿಕೆಯಲ್ಲಿ ಗಮನಾರ್ಹವಾಗಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕೃಷಿ ಮತ್ತು ಇತರೆ ಪೂರಕ ಚಟುವಟಿಕೆಗಳಲ್ಲಿ ತೊಡಗಿರುವ ರೈತರಿಗೆ ವಾರ್ಷಿಕ ಶೇ 7ರ ಬಡ್ಡಿದರದಲ್ಲಿ ₹3 ಲಕ್ಷದವರೆಗೆ ಅಲ್ಪಾವಧಿ ಕೃಷಿ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ತ್ವರಿತ ಮತ್ತು ಸಕಾಲದಲ್ಲಿ ಸಾಲ ಮರುಪಾವತಿ ಮಾಡುವ ರೈತರಿಗೆ ಹೆಚ್ಚುವರಿಯಾಗಿ ಶೇ3ರ ಬಡ್ಡಿ ಸಹಾಯಧನವೂ ದೊರೆಯಲಿದೆ. ಹಾಗಾಗಿ, ಸಕಾಲದಲ್ಲಿ ಮರುಪಾವತಿಸುವ ರೈತರು ವಾರ್ಷಿಕ ಶೇ4ರಷ್ಟು ಬಡ್ಡಿಯನ್ನಷ್ಟೇ ಪಾವತಿಸುತ್ತಾರೆ ಎಂದು ಹೇಳಿದೆ.

2022-23ರಲ್ಲಿ ₹18.50 ಲಕ್ಷ ಕೋಟಿ ಕೃಷಿ ಸಾಲ ನೀಡುವ ಗುರಿ ಇತ್ತು. ಒಟ್ಟು ₹21.55 ಲಕ್ಷ ಕೋಟಿ ಸಾಲ ವಿತರಿಸಲಾಗಿತ್ತು ಎಂದು ತಿಳಿಸಿದೆ.

ಸಕ್ಕರೆ ಕಂಪನಿಗಳ ಷೇರು ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಬ್ಬಿಗೆ ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರವನ್ನು (ಎಫ್‌ಆರ್‌ಪಿ) ಪ್ರತಿ ಕ್ವಿಂಟಲ್‌ಗೆ ₹25 ಹೆಚ್ಚಳ ಮಾಡಿರುವ ಬೆನ್ನಲ್ಲೇ ಗುರುವಾರ ಸಕ್ಕರೆ ಕಂಪನಿಗಳ ಷೇರಿನ ಮೌಲ್ಯ ಶೇ 3ರಷ್ಟು ಇಳಿಕೆಯಾಗಿದೆ.

ಶ್ರೀರೇಣುಕಾ ಶುಗರ್ಸ್, ದಾಲ್ಮಿಯಾ ಭಾರತ್ ಶುಗರ್ ಆ್ಯಂಡ್ ಇಂಡಸ್ಟ್ರೀಸ್ ಮತ್ತು ತ್ರಿವೇಣಿ ಎಂಜಿನಿಯರಿಂಗ್ ಆ್ಯಂಡ್ ಇಂಡಸ್ಟ್ರೀಸ್ ಸೇರಿದಂತೆ ಹಲವು ಕಂಪನಿಗಳ ಷೇರುಗಳು ಕುಸಿದಿವೆ.

ಷೇರು ಸೂಚ್ಯಂಕ ಏರಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 535 ಅಂಶ ಏರಿಕೆಯಾಗಿ 73,158ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 162 ಅಂಶ ಹೆಚ್ಚಳವಾಗಿ 22,217ಕ್ಕೆ ಕೊನೆಗೊಂಡಿತು.

ಇಬ್ಬರಿಗೆ ಗುಂಡಿಕ್ಕಿ ಮರಣದಂಡನೆ

ಘಜ್ನಿ (ಎಪಿ, ಎಎಫ್‌ಪಿ): ಅಫ್ಗಾನಿಸ್ತಾನದ ತಾಲಿಬಾನ್ ಆಡಳಿತವು ಇಲ್ಲಿನ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ಕೊಲೆ ಪ್ರಕರಣದಲ್ಲಿ ಅಪರಾಧಿಗಳಾಗಿದ್ದ ಇಬ್ಬರನ್ನು ಸಾರ್ವಜನಿಕವಾಗಿ ಗುಂಡಿಕ್ಕಿ ಕೊಲ್ಲುವ ಮೂಲಕ ಮರಣದಂಡನೆ ಶಿಕ್ಷೆ ಜಾರಿಗೊಳಿಸಿದೆ.

ಘಜ್ನಿ ನಗರದ ಅಲಿ ಲಾಲ್ ಪ್ರದೇಶದಲ್ಲಿ ಎ.ಪಿ ಪತ್ರಕರ್ತ ಸೇರಿದಂತೆ ಸಾವಿರಾರು ಜನರು ಇದಕ್ಕೆ ಸಾಕ್ಷಿಯಾದರು.

ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಈ ಇಬ್ಬರ ವಿರುದ್ಧ ಕೆಲ ನ್ಯಾಯಾಲಯಗಳು ಮತ್ತು ತಾಲಿಬಾನ್ ಪರಮೋಚ್ಚ ನಾಯಕ ಹಿಬತ್ ಉಲ್ಲಾ ಅಖುಂದ್‌ಝುದಾ ಅವರು ಮರಣದಂಡನೆಗೆ ಆದೇಶಿಸಿದ್ದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಮರಣದಂಡನೆ ಜಾರಿಗೊಳಿಸಿದ ಕ್ರೀಡಾಂಗಣದ ಹೊರಗೆ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ಅಪರಾಧಿಗಳನ್ನು ಕ್ಷಮಿಸುವಂತೆ ಈ ವೇಳೆ ಧಾರ್ಮಿಕ ಮುಖಂಡರು ಪ್ರಾರ್ಥಿಸಿದರು.

ಮಧ್ಯಾಹ್ನ 1 ಗಂಟೆಗೆ ಶಿಕ್ಷೆಯನ್ನು ಜಾರಿಗೊಳಿಸಲಾಯಿತು. 15 ಗುಂಡುಗಳನ್ನು ಹಾರಿಸಲಾಯಿತು. ಇದರಲ್ಲಿ ಒಬ್ಬರಿಗೆ ಎಂಟು, ಮತ್ತೊಬ್ಬರಿಗೆ ಏಳು ಗುಂಡುಗಳು ತಗುಲಿದವು. ಬಳಿಕ ಆಂಬ್ಯುಲೆನ್ಸ್‌ಗಳಲ್ಲಿ ಮೃತ ದೇಹಗಳನ್ನು ತೆಗೆದುಕೊಂಡು ಹೋಗಲಾಯಿತು. 2021ರಲ್ಲಿ ಅಫ್ಗಾನಿಸ್ತಾನದಲ್ಲಿ ಅಧಿಕಾರ ಪುನರ್ ಸ್ಥಾಪಿಸಿದ ತಾಲಿಬಾನ್, ಅಲ್ಲಿಂದ ಇಲ್ಲಿಯವರೆಗೆ ಒಟ್ಟು ನಾಲ್ಕು ಜನರನ್ನು ಸಾರ್ವಜನಿಕವಾಗಿ ಮರಣದಂಡನೆಗೆ ಒಳಪಡಿಸಿದಂತಾಗಿದೆ.

ಇರಾನ್ ಸಂಸತ್ ಚುನಾವಣೆ: ಮಹಿಳಾ ಸ್ಪರ್ಧಿಗಳ ಸಂಖ್ಯೆ ದ್ವಿಗುಣ

ಟೆಹರಾನ್ (ಎಪಿ): ಇರಾನ್ ಸಂಸತ್ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಗುರುವಾರ ತಮ್ಮ ಪ್ರಚಾರ ಕಾರ್ಯ ಆರಂಭಿಸಿದ್ದಾರೆ.

2022ರ ರಾಷ್ಟ್ರವ್ಯಾಪಿ ಪ್ರತಿಭಟನೆಗಳ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಆಗ ಉಂಟಾಗಿದ್ದ ಹಿಂಸಾಚಾರದಲ್ಲಿ 22 ವರ್ಷದ ಮಹ್ಸಾ ಅಮೀನಿ ಎನ್ನುವ ಯುವತಿ ಪೊಲೀಸ್ ಕಸ್ಟಡಿಯಲ್ಲಿ ಸಾವಿಗೀಡಾಗಿದ್ದರು.

ಮಾರ್ಚ್ 1ರಂದು 290 ಸ್ಥಾನಗಳಿಗಾಗಿ ಚುನಾವಣೆ ನಡೆಯುತ್ತಿದ್ದು, ಕಣದಲ್ಲಿ 15,200 ಸ್ಪರ್ಧಿಗಳಿದ್ದಾರೆ ಎಂದು ಸರ್ಕಾರಿ ಟಿವಿ ವಾಹಿನಿ ವರದಿ ಮಾಡಿದೆ.

ಜನಪ್ರತಿನಿಧಿಗಳ ಅಧಿಕಾರದ ಅವಧಿ ನಾಲ್ಕು ವರ್ಷ ವಾಗಿದೆ. 2020ರಲ್ಲಿ ಸ್ಪರ್ಧಿಸಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಅಭ್ಯರ್ಥಿಗಳು ಈ ಬಾರಿ ಕಣದಲ್ಲಿದ್ದಾರೆ. 2020ರಲ್ಲಿ ಅತಿ ಕಡಿಮೆ ಮತದಾನ ಪ್ರಮಾಣ (ಶೇ 42) ದಾಖಲಾಗಿತ್ತು. ಈ ಬಾರಿಯ ಚುನಾವಣೆಯಲ್ಲಿ ಮಹಿಳಾ ಸ್ಪರ್ಧಿಗಳ ಸಂಖ್ಯೆ ಹೆಚ್ಚಳವಾಗಿರುವುದು ಗಮನಾರ್ಹ. 2020ರಲ್ಲಿ 819 ಮಹಿಳೆಯರು ಸ್ಪರ್ಧಿಸಿದ್ದರೆ, ಈ ಬಾರಿ 1713 ಮಹಿಳೆಯರು ಕಣದಲ್ಲಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೋದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080- 22429289 9448119290 9019301300 8088826815

19.4.2024 ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್ 21.4.2024ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ,ಪ್ರಯಾಗರಾಜ್, ಅಯೋಧ್ಯಾ, ಕಾಶಿ,ಗಯಾ. 15.5.2024ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346. 22.3.24 7 ದಿನ ತಮಿಳುನಾಡು. 26.4.24 8 ದಿನ ಕಾಶಿ ಅಯೋಧ್ಯ. 17.5.24 13 ದಿನ ಚಾರ್‌ಧಾಮ್.

13.3.2024 12 ದಿನಗಳ ಗುಜರಾತ್ ಮಹಾಕಾಳೇಶ್ವರ ಓಂಕಾರೇಶ್ವರ ಪ್ರವಾಸ. 13.3.2024 12 ದಿನಗಳ ಸಂಪೂರ್ಣ ರಾಜಸ್ಥಾನ್ ಪ್ರವಾಸ. 22.4.2024 6 ದಿನಗಳ ದೆಹಲಿ, ಆಗ್ರಾ, ಮಥುರ, ಜೈಪುರ್ ಪ್ರವಾಸ. 16.04.2024 9 ದಿನಗಳ ಕಾಶ್ಮೀರ ವೈಷ್ಣೋದೇವಿ ಅಮೃತಸರ ಪ್ರವಾಸ. 26.03.2024 12 ದಿನಗಳ ದೆಹಲಿ ವೈಷ್ಣೋದೇವಿ ಅಮೃತಸರ ಆಗ್ರಾ, ಅಯೋಧ್ಯ, ಕಾಶಿ ಪ್ರವಾಸ. 25.4.2024 11 ದಿನಗಳ ಪುರಿ, ಕೋಲ್ಕತಾ ಡಾರ್ಜಿಲಿಂಗ್ ಪ್ರವಾಸ. 15.5.2024 13 ದಿನಗಳ ಬದರಿನಾಥ ಕೇದಾರನಾಥ ಯಮುನೋತ್ರಿ ಗಂಗೋತ್ರಿ ಪ್ರವಾಸ. ಸಂಪರ್ಕಿಸಿ: ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು- 9902008056. ದಾವಣಗೆರೆ- 6362547001. ಹುಬ್ಬಳ್ಳಿ- 8660880048

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಭವಿಷ್ಯ
Astrology

ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000- 17,000. 8951315839, 9141634619

ರಾಂಚಿ: ನಾಲ್ಕನೇ ಟೆಸ್ಟ್ ಇಂದಿನಿಂದ ● ಆಕಾಶ್ ದೀಪ್‌ಗೆ ಅವಕಾಶ ಸಾಧ್ಯತೆ

ಭಾರತಕ್ಕೆ ಸರಣಿ ಜಯದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ರಾಂಚಿ: ದಿಗ್ಗಜ ಆಟಗಾರ ಎಂ.ಎಸ್.ಧೋನಿ ಅವರ ತವರಿನಲ್ಲಿ ಭಾರತಕ್ಕೆ ಸರಣಿ ಜಯದ ಅವಕಾಶ ಒದಗಿರುವುದು ಆಕಸ್ಮಿಕ. ಆದರೆ ಇಂಗ್ಲೆಂಡ್ ವಿರುದ್ಧ ಶುಕ್ರವಾರ ಆರಂಭವಾಗುವ ನಾಲ್ಕನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ತಂಡದ ಸಮತೋಲನದ ಬಗ್ಗೆ ಕೆಲಮಟ್ಟಿಗೆ ಸಂದೇಹಗಳೂ ಇವೆ.

ಕಾರ್ಯಭಾರ ತಗ್ಗಿಸುವ ಭಾಗವಾಗಿ ಮುಂಚೂಣಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಕೆಲವು ಆಟಗಾರರು ಗಾಯಾಳಾಗಿದ್ದಾರೆ. ಜೊತೆಗೆ ಪಿಚ್ ಹೇಗೆ ವರ್ತಿಸಬಹುದೆಂಬುದು ಅಂದಾಜಿಗೆ ನಿಲುಕುತ್ತಿಲ್ಲ. ಭಾರತ ಐದು ಟೆಸ್ಟ್‌ಗಳ ಸರಣಿಯಲ್ಲಿ ಈಗ 2–1 ಮುನ್ನಡೆ ಸಾಧಿಸಿದೆ.

ಮಾಮೂಲಿನಂತೆ ಈ ಪಿಚ್ ಸಹ ಸ್ಪಿನ್ನರ್‌ಗಳಿಗೆ (ಭಾರತದಲ್ಲಿ ಸಾಮಾನ್ಯ) ನೆರವಾಗುವ ನಿರೀಕ್ಷೆಯಿದೆ. ಆದರೆ ಎಷ್ಟನೇ ದಿನ ಮತ್ತು ಯಾವ ಮಟ್ಟದಲ್ಲಿ ಎಂಬುದು ಗೋಜಲಾಗಿದೆ. ಇಲ್ಲಿ ಆಡಿರುವ ಕೊನೆಯ ಕೆಲವು ಪಂದ್ಯಗಳಲ್ಲಿ ಪಿಚ್ ಬೇರೆ ಬೇರೆ ರೀತಿ ವರ್ತಿಸಿದೆ.

ವಿಕೆಟ್‌ನ ಎರಡೂ ಕಡೆ ಚೆಂಡು ತಿರುವು ಪಡೆಯಲು ಅನುಕೂಲವಾಗುವ ಮುನ್ಸೂಚನೆಗಳು ಕಾಣುತ್ತಿವೆ. ಕೆಲವೇ ವರ್ಷಗಳ ಹಿಂದೆ ಇಂಥ ಪಿಚ್ ಭಾರತಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಸ್ಪಿನ್ನರ್‌ಗಳನ್ನು ಎದುರಿಸುವಲ್ಲಿ ಅಂಥ ಆತ್ಮವಿಶ್ವಾಸ ಕಾಣುತ್ತಿಲ್ಲ.

ಇಂಗ್ಲೆಂಡ್ ಆಟಗಾರರು ಚೆಂಡಿನ ಲೆಂತ್ ಅಳೆದು ಮುನ್ನುಗ್ಗಿ ಹೊಡೆಯುವ ಬದಲು ಸ್ವೀಪ್, ರಿವರ್ಸ್ ಸ್ವೀಪ್‌ನಂಥ ಹೊಡೆತಗಳನ್ನು ನೆಚ್ಚಿಕೊಂಡಿದ್ದಾರೆ. ಅದರಲ್ಲಿ ವಿಫಲರಾದಾಗ, ಮುಜುಗರವಾಗುವಂತೆ ಕುಸಿತ ಕಂಡಿದ್ದಾರೆ. ಮೂರನೇ ಟೆಸ್ಟ್‌ನ ಅಂತಿಮ ದಿನ ಪ್ರವಾಸಿಗರು 30.4 ಓವರುಗಳಲ್ಲಿ 122 ರನ್‌ಗಳಿಗೆ ಉರುಳಿದ್ದು ಇದಕ್ಕೆ ನಿದರ್ಶನ. ಬಾಝ್‌ಬಾಲ್ ತಂತ್ರ ತಿರುಗುಬಾಣವಾಯಿತು. ಆದರೆ ಬೆನ್ ಸ್ಟೋಕ್ಸ್ ವಿಚಲಿತರಾಗಿಲ್ಲ. ಉಳಿದ ಪಂದ್ಯಗಳಲ್ಲೂ ಅದೇ ರೀತಿಯ ಅಕ್ರಮಣಕಾರಿ ಆಟ ಮುಂದುವರಿಸುವುದಾಗಿ ಹೇಳಿದ್ದಾರೆ.

ಪಿಚ್ ಬಗ್ಗೆ ಇಂಗ್ಲೆಂಡ್ ಹೆಚ್ಚು ತಲೆಕೆಡಿಸಿಕೊಂಡಿದೆ. ನಾಯಕ ಸ್ಟೋಕ್ಸ್ ಅವರಿಂದ ಹಿಡಿದು ಓಲಿ ಪೋಪ್ ವರೆಗೆ ಪಿಚ್ ಹೇಗೆ ವರ್ತಿಸಬಹುದೆಂಬ ಬಗ್ಗೆ ಸಾಕಷ್ಟು ಗೊಂದಲವಿದೆ. ಇದೊಂದು ಬಿಡಿಸಲಾಗ ಒಗಟಾಗಿದೆ. ಪರಿಸ್ಥಿತಿ ಮತ್ತು ಪಿಚ್‌ಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ ಎಂದಿದ್ದ ತಂಡ ಈಗ ಆ ಬಗ್ಗೆಯೇ ಯೋಚಿಸುತ್ತಿದೆ.

ಭಾರತ ತಂಡದ ಕಥೆಯೂ ಭಿನ್ನವಾಗಿಲ್ಲ. ಅನುಭವಿ ಕೋಚ್ ರಾಹುಲ್ ದ್ರಾವಿಡ್ ಅವರೂ ಸಹ ಇದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಂಡಿದ್ದರು. ಗುರುವಾರವೂ ಅವರು, ಸಣ್ಣದಾಗಿ ಕತ್ತರಿಸಿದ ಪಿಚ್ ಮೇಲಿನ ಹುಲ್ಲು, ಶುಚಿಗೊಳಿಸುವ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದರು. ಕ್ಯುರೇಟರ್ ಡಾ.ಶ್ಯಾಮ್ ಬಹಾದ್ದೂರ್ ಸಿಂಗ್ ಮತ್ತು ಇತರ ಸಿಬ್ಬಂದಿ ಜೊತೆ ಚರ್ಚಿಸಿದರು.

ಈ ಪಂದ್ಯದಲ್ಲಿ ಬೂಮ್ರಾ ಅವರಿಂದ ತೆರವಾಗಿರುವ ಸ್ಥಾನದಲ್ಲಿ ಆಕಾಶ್ ದೀಪ್ ಅವರಿಗೆ ಪದಾರ್ಪಣೆ ಅವಕಾಶ ಸಿಗಬಹುದು. ಮೂರನೇ ಟೆಸ್ಟ್‌ನಲ್ಲಿ ವಿಫಲರಾದ ರಜತ್ ಪಾಟಿದಾರ್ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು.

ಎರಡು ಬದಲಾವಣೆ: ಇನ್ನೊಂದೆಡೆ ಮೂರನೇ ಟೆಸ್ಟ್‌ನ ದಯನೀಯ ಸೋಲು ಇಂಗ್ಲೆಂಡ್ ತಂಡದ ಆತ್ಮವಿಶ್ವಾಸವನ್ನು ಕೆಲಮಟ್ಟಿಗೆ ಕದಡಿಸಿದೆ.

ಈ ಹಿಂದಿನ ಪಂದ್ಯಗಳಂತೆ ಈ ಪಂದ್ಯಕ್ಕೂ ಇಂಗ್ಲೆಂಡ್ ಒಂದು ದಿನ ಮೊದಲೇ 11ರ ತಂಡವನ್ನು ಅಂತಿಮಗೊಳಿಸಿದೆ. ಮಾರ್ಕ್ ವುಡ್ ಬದಲಿಗೆ 30 ವರ್ಷದ ವೇಗದ ಬೌಲರ್ ಓಲಿ ರಾಬಿನ್ಸನ್ ತಂಡವನ್ನು ಸೇರಿಕೊಂಡಿದ್ದಾರೆ. ರೆಹಾನ್ ಅಹ್ಮದ್ ಬದಲು ಆಫ್ ಸ್ಪಿನ್ನರ್, 20 ವರ್ಷದ ಶೋಯೆಬ್ ಬಷೀರ್ ಅವರಿಗೆ ಪದಾರ್ಪಣೆ ಅವಕಾಶ ನೀಡಿದೆ.

ಮಳೆ ಸಾಧ್ಯತೆ: ಹವಾಮಾನ ವರದಿಯ ಕೊನೆಯ ಮೂರು ದಿನ ಮಳೆಯಾಗುವ ಸಾಧ್ಯತೆಯೂ ಇದೆ. ಗುರುವಾರ ಸಂಜೆ ಜೋರು ಗಾಳಿಯ ನಂತರ ತುಂತುರು ಮಳೆಯಾಗಿದೆ.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಜತ್ ಪಾಟಿದಾರ್, ಸರ್ಫರಾಜ್ ಖಾನ್, ಧ್ರುವ್ ಜುರೇಲ್ (ವಿಕೆಟ್ ಕೀಪರ್), ಕೆ.ಎಸ್.ಭರತ್ (ವಿಕೆಟ್ ಕೀಪರ್), ದೇವದತ್ತ ಪಡಿಕ್ಕಲ್, ಆರ್.ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆಕಾಶ್ ದೀಪ್.

ಇಂಗ್ಲೆಂಡ್ (11ರ ತಂಡ): ಬೆನ್ ಸ್ಟೋಕ್ಸ್ (ನಾಯಕ), ಜಾಕ್ ಕ್ರಾಲಿ, ಬೆನ್ ಡಕೆಟ್, ಜೋ ರೂಟ್, ಜಾನಿ ಬೇಸ್ಟೊ, ಶೋಯೆಬ್ ಬಷೀರ್, ಬೆನ್ ಫೋಕ್ಸ್, ಟಾಮ್ ಹಾರ್ಟ್ಲಿ, ಓಲಿ ಪೋಪ್, ಓಲಿ ರಾಬಿನ್ಸನ್, ಜೇಮ್ಸ್ ಆ್ಯಂಡರ್ಸನ್.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ತಾಲೀಮು ನಡೆಸಿದ ಭಾರತ ತಂಡದ ಬೌಲರ್‌ಗಳಾದ ಮುಕೇಶ್ ಕುಮಾರ್, ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್ –ಪಿಟಿಐ ಚಿತ್ರ



ಅಭ್ಯಾಸದಲ್ಲಿ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ –ಎಎಫ್‌ಪಿ ಚಿತ್ರ

ಮುಂಬೈಗೆ 'ಕ್ಯಾಪಿಟಲ್ಸ್' ಸವಾಲು

ಬಾಲಿವುಡ್ ರಂಗಿನಲ್ಲಿ ಅರಳಲಿದೆ ಡಬ್ಲ್ಯುಪಿಎಲ್: ಇಂದಿನಿಂದ ಮಹಿಳಾ ಟಿ20

● ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಝಗಮಗಿಸುವ ದೀಪಗಳ ಬೆಳಕು ಚೆಲ್ಲಿತ್ತು. ಅದನ್ನು ಮೀರಿಸುವ ಪೈಪೋಟಿಯಲ್ಲಿ ಬಾಲಿವುಡ್ ತಾರೆಯರ ಹೊಳಪು ಕೂಡ ಹರಡಿತ್ತು. ಆ ಸೂಪರ್‌ಸ್ಟಾರ್‌ಗಳನ್ನು ಕಣ್ಣರಳಿಸಿ ನೋಡುತ್ತ ನಿಂತಿದ್ದವರು ಮಹಿಳಾ ಕ್ರಿಕೆಟ್ ತಾರೆಯರು. ಅವರೆಲ್ಲರನ್ನೂ ನೋಡುತ್ತ ಕೇಕೆ ಹಾಕಿ ಚಪ್ಪಾಳೆ ತಟ್ಟುತ್ತಿದ್ದವರ ದಂಡು ಪ್ರೇಕ್ಷಕರ ಗ್ಯಾಲರಿಯಲ್ಲಿತ್ತು.

ಶುಕ್ರವಾರ ಇಲ್ಲಿ ಆರಂಭವಾಗಲಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಉದ್ಘಾಟನೆಗೆ ನಡೆಯಲಿರುವ ಅದ್ದೂರಿ ಕಾರ್ಯಕ್ರಮದ ತಯಾರಿಯಲ್ಲಿದ್ದ ಬಾಲಿವುಡ್ ನಟರಾದ ಶಾರುಖ್ ಖಾನ್, ಟೈಗರ್ ಶ್ರಾಫ್, ಶಾಹೀದ್ ಕಪೂರ್ ಮತ್ತು ವರುಣ್ ಧವನ್ ಅವರು ನೃತ್ಯದ ತಾಲೀಮು ನಡೆಸಿದರು. ಆ ವೇದಿಕೆಯ ಹಿಂಭಾಗದಲ್ಲಿಯೇ ಮುಂಬೈ ಇಂಡಿಯನ್ಸ್ ಮತ್ತು ದೆಹಲಿ ಕ್ಯಾಪಿಟಲ್ಸ್ ತಂಡದ ಆಟಗಾರ್ತಿಯರೂ ಕ್ರಿಕೆಟ್ ಅಭ್ಯಾಸ ಮಾಡಿದರು. ಆಗಾಗ ವೇದಿಕೆಯ ಬಳಿ ಸಾಗಿ ಸಿನಿತಾರೆಯರ 'ರಿಹರ್ಸಲ್' ವೀಕ್ಷಿಸಿದರು.

ಹೋದ ವರ್ಷದ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ರನ್ನರ್ಸ್ ಅಪ್ ಡೆಲ್ಲಿ ತಂಡಗಳು ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಮಾರ್ಚ್ 4ರವರೆಗೆ ಇದೇ ತಾಣದಲ್ಲಿ ಒಟ್ಟು ಹನ್ನೊಂದು ಪಂದ್ಯಗಳು ನಡೆಯಲಿವೆ. ಐದು ತಂಡಗಳು ಪೈಪೋಟಿ ನಡೆಸಲಿವೆ. ನಂತರದ ಹಂತದ ಪಂದ್ಯಗಳು ದೆಹಲಿಯಲ್ಲಿ ನಡೆಯಲಿವೆ.

ಯುವ ಆಟಗಾರ್ತಿಯರಿಗೆ ಅವಕಾಶ: ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಜ್ಜೆಗುರುತು ಮೂಡಿಸುವ ಛಲದಲ್ಲಿರುವ ಯುವ ಆಟಗಾರ್ತಿಯರಿಗೆ ಈ ಟೂರ್ನಿಯಲ್ಲಿ ಅನುಭವಿ ಆಟಗಾರ್ತಿಯರೊಂದಿಗೆ ಆಡುವ ಅವಕಾಶ ದೊರೆಯುತ್ತಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ಮೆಗ್ ಲ್ಯಾನಿಂಗ್ ಅವರು ದೆಹಲಿ ತಂಡವನ್ನು ಮುನ್ನಡೆಸುತ್ತಿದ್ದಾರೆ. ಈ ತಂಡದಲ್ಲಿರುವ ಭಾರತದ ಉದಯೋನ್ಮುಖ ಆಟಗಾರ್ತಿ ತಿತಾಸ್ ಸಾಧು, ರಾಧಾ ಯಾದವ್, ಶಿಖಾ ಪಾಂಡೆ ಅವರಂತಹವರಿಗೆ ಉತ್ತಮ ಮಾರ್ಗದರ್ಶನ ದೊರೆಯುವ ನಿರೀಕ್ಷೆ ಇದೆ.

'ಭಾರತದಲ್ಲಿ ದೇಶಿ ಕ್ರಿಕೆಟ್‌ನಲ್ಲಿ ಮಹಿಳೆಯರು ಬೆಳೆಯಲು ಹೆಚ್ಚಿನ ಅವಕಾಶವನ್ನು ಡಬ್ಲ್ಯುಪಿಎಲ್ ನೀಡುತ್ತಿದೆ. ಇದರಿಂದಾಗಿ ಭಾರತದಲ್ಲಿ ಮಹಿಳಾ ಕ್ರಿಕೆಟ್ ಬೆಳವಣಿಗೆ ಏರುಗತಿಯಲ್ಲಿದೆ' ಎಂದು ಮೆಗ್ ಲ್ಯಾನಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮುಂಬೈ ತಂಡವು ತನ್ನ ಗೆಲುವಿನ ಓಟವನ್ನು ಈ ಬಾರಿಯೂ ಮುಂದುವರಿಸುವ ಛಲದಲ್ಲಿದೆ. ಹೋದ ವರ್ಷ ಇದ್ದ ಬಹುತೇಕ ಆಟಗಾರ್ತಿಯರು ಈ ಸಲವೂ ಇದ್ದಾರೆ. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡದಲ್ಲಿ ನಥಾಲಿ ಶಿವರ್, ಅಮೆಲಿಯಾ ಕೆರ್, ಹಯಲಿ ಮ್ಯಾಥ್ಯೂಸ್ ಅವರು ಪ್ರಮುಖರಾಗಿದ್ದಾರೆ. ಯುವ ಆಟಗಾರ್ತಿ ಅಮನದೀಪ್ ಕೌರ್ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಉದ್ಘಾಟನೆ: ಶುಕ್ರವಾರ ಸಂಜೆ 6.30ಕ್ಕೆ ಉದ್ಘಾಟನೆ ಕಾರ್ಯಕ್ರಮ ಆರಂಭವಾಗಲಿದೆ. ಬಾಲಿವುಡ್ ತಾರೆಯರ ನೃತ್ಯ, ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಬಿಸಿಸಿಐ ಮತ್ತು ಐಪಿಎಲ್ ಸಮಿತಿಯ ಪದಾಧಿಕಾರಿಗಳು ಹಾಜರಿರುವರು.

ತಂಡಗಳು: ಮುಂಬೈ ಇಂಡಿಯನ್ಸ್: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಶಬ್ನಿಮ್ ಇಸ್ಮಾಯಿಲ್, ಹಯಲಿ ಮ್ಯಾಥ್ಯೂಸ್, ಪೂಜಾ ವಸ್ತ್ರಕರ್, ಐಸಿ ವಾಂಗ್, ಪ್ರಿಯಾಂಕಾ ಬಾಲಾ, ಫಾತಿಮಾ ಜಾಫರ್, ಹುಮೈರಾ ಖಾಜಿ, ಅಮನದೀಪ್ ಕೌರ್, ಶೋಲಿ ಟ್ರಯಾನ್, ನತಾಲೀ ಶೀವರ್ ಬ್ರಂಟ್, ಅಮೆಲಿಯಾ ಕೆರ್, ಕೀರ್ತನಾ ಬಾಲಕೃಷ್ಣ, ಯಷ್ಟಿಕಾ ಭಾಟಿಯಾ, ಅಮನ್ಜೋತ್ ಕೌರ್, ಸಂಜೀವನ್ ಸಜನಾ, ಜಿಂತಿಮಣಿ ಕಲಿಟಾ, ಸೈಕಾ ಇಶಾಕಿ. **ಡೆಲ್ಲಿ ಕ್ಯಾಪಿಟಲ್ಸ್:** ಮೆಗ್ ಲ್ಯಾನಿಂಗ್ (ನಾಯಕಿ), ಪೂನಂ ಯಾದವ್, ಮರಿಜಾನೆ ಕಾಪ್, ಲಾರಾ ಹ್ಯಾರಿಸ್, ರಾಧಾ ಯಾದವ್, ತಾನಿಯಾ ಭಾಟಿಯಾ, ಮಿನು ಮಣಿ, ಅಶ್ವಿನಿ ಕುಮಾರಿ, ಅಲೈಸ್ ಕ್ಯಾಪ್ಸೆ, ಜೆಸ್ ಜಾನ್ಸನ್, ಸ್ನೇಹಾ ದೀಪ್ತಿ, ಶಿಖಾ ಪಾಂಡೆ, ಅನಾಬೆಲ್ ಸದರ್ಲೆಂಡ್, ಜೆಮೈಮಾ ರಾಡ್ರಿಗ್ರಸ್, ಅರುಂಧತಿ ರೆಡ್ಡಿ, ಶಫಾಲಿ ವರ್ಮಾ, ಅಪರ್ಣಾ ಮಂಡಲ್, ತಿತಾಸ್ ಸಾಧು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಟಾಟಾ ಮಹಿಳಾ ಪ್ರೀಮಿಯರ್ ಲೀಗ್ ಉದ್ಘಾಟನೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬಾಲಿವುಡ್ ನಟ ಶಾರುಖ್ ಖಾನ್ ಕಾರ್ಯಕ್ರಮ ನೀಡಲು ಅಭ್ಯಾಸದಲ್ಲಿ ತೊಡಗಿದ್ದರು
ಪ್ರಜಾವಾಣಿ ಚಿತ್ರಗಳು / ಕಿಶೋರ್ ಕುಮಾರ್ ಬೋಳಾರ್

ಮುಂಬೈ ಇಂಡಿಯನ್ಸ್ ನಾಯಕಿ ಹರ್ಮನ್‌ಪ್ರೀತ್ ಕೌರ್ ಅಭ್ಯಾಸದಲ್ಲಿ ತೊಡಗಿರುವುದು

ಡೆಲ್ಲಿ ತಂಡದೊಂದಿಗೆ ಡಿಪಿ ವರ್ಲ್ಡ್ ಪಾಲುದಾರಿಕೆ

ಡಿಪಿ ವರ್ಲ್ಡ್ ಸಂಸ್ಥೆಯು ದೆಹಲಿ ಕ್ಯಾಪಿಟಲ್ ತಂಡದೊಂದಿಗೆ ಟೈಟಲ್ ಪಾಲುದಾರಿಕೆ ಮಾಡಿಕೊಂಡಿವೆ. ಸ್ಮಾರ್ಟ್ ಎಂಡ್-ಟು-ಎಂಡ್ ಸಪ್ಲೈ ಚೇನ್ ಪರಿಹಾರಗಳನ್ನು ಪೂರೈಕೆ ಮಾಡುವಲ್ಲಿ ಡಿಪಿ ವರ್ಲ್ಡ್ ಮುಂಚೂಣಿಯಲ್ಲಿದೆ.

ಈ ಪಾಲುದಾರಿಕೆಯ ಭಾಗವಾಗಿ ದೆಹಲಿ ಕ್ಯಾಪಿಟಲ್ಸ್‌ನ ಅಧಿಕೃತ ಮ್ಯಾಚ್ ಜೆರ್ಸಿ ಮತ್ತು ಟ್ರೈನಿಂಗ್ ಜೆರ್ಸಿಯಲ್ಲಿ ಡಿಪಿ ವರ್ಲ್ಡ್‌ನ ಲೋಗೋ ಪ್ರಮುಖವಾಗಿ ಕಾಣಿಸಿಕೊಳ್ಳಲಿದೆ. ಈಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಜೆರ್ಸಿ ಬಿಡುಗಡೆ ಮಾಡಲಾಯಿತು.

ದೆಹಲಿ ಕ್ಯಾಪಿಟಲ್ಸ್‌ನ ಸಿಇಒ ಸುಖವಿಂದರ್ ಸಿಂಗ್, 'ಮಹಿಳಾ ತಂಡಕ್ಕೆ ಡಿಪಿ ವರ್ಲ್ಡ್ ಟೈಟಲ್ ಪಾಲುದಾರ ಸಂಸ್ಥೆಯಾಗುತ್ತಿರುವುದಕ್ಕೆ ನಮಗೆ ಸಂತಸವಾಗುತ್ತಿದೆ. ಮಹಿಳೆಯರನ್ನು ಕ್ರೀಡೆಯ ಕಡೆಗೆ ಆಸಕ್ತಿ ತೋರುವಂತೆ ಮಾಡುವ ಬದ್ಧತೆಯನ್ನು ಹೊಂದಿರುವ ಡಿಪಿ ವರ್ಲ್ಡ್‌ನ ದೀರ್ಘಾವಧಿಯ ಬದ್ಧತೆಯು ಶ್ಲಾಘನೀಯ' ಎಂದಿದ್ದಾರೆ.

ರಣಜಿ: ಕ್ವಾರ್ಟರ್‌ಫೈನಲ್ ಇಂದಿನಿಂದ

ಮುಂಬೈ (ಪಿಟಿಐ): ಒಂದೂವರೆ ತಿಂಗಳ ಕಾಲ ನಡೆದ ರಣಜಿ ಟ್ರೋಫಿ ಲೀಗ್ ಪಂದ್ಯಗಳಲ್ಲಿ ಉತ್ತಮ ಸಾಧನೆ ತೋರಿರುವ ಎಂಟು ತಂಡಗಳು ಶುಕ್ರವಾರದಿಂದ ಕ್ವಾರ್ಟರ್ ಫೈನಲ್ ಪಂದ್ಯಗಳನ್ನು ಆಡಲಿವೆ. ಹತ್ತು ವರ್ಷಗಳಿಂದ ಈ ಪ್ರಶಸ್ತಿಯ ಬರ ಎದುರಿಸುತ್ತಿರುವ ಕರ್ನಾಟಕ ನಾಗ್ಪುರದಲ್ಲಿ ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಮಾಜಿ ಚಾಂಪಿಯನ್ ವಿದರ್ಭ ತಂಡವನ್ನು ಎದುರಿಸಲಿದೆ.

'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದಿರುವ 41 ಬಾರಿಯ ಚಾಂಪಿಯನ್ ಮುಂಬೈ ತವರಿನಲ್ಲಿ (ಬಿಕೆಸಿ ಕ್ರೀಡಾಂಗಣದಲ್ಲಿ) ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ ಬರೋಡಾ ತಂಡವನ್ನು ಎದುರಿಸಲಿದೆ. ಫಿಟ್ನೆಸ್ ಸಮಸ್ಯೆ ಎದುರಿಸುತ್ತಿರುವ ಶ್ರೇಯಸ್ ಅಯ್ಯರ್, ಗಾಯಾಳಾಗಿರುವ ಶಿವಂ ದುಬೆ ಅವರ ಅನುಪಸ್ಥಿತಿ ಮುಂಬೈ ತಂಡಕ್ಕೆ ಹಿನ್ನಡೆ. 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಮಿಂಚಿದ್ದ ಬ್ಯಾಟರ್ ಮುಷೀರ್ ಖಾನ್ ತಂಡಕ್ಕೆ ಮರಳಿದ್ದಾರೆ. ಏಳು ಪಂದ್ಯಗಳಲ್ಲಿ 493 ರನ್ ಹೊಡೆದಿರುವ ಭೂಪೇನ್ ಲಾಲ್ವಾನಿ ಈಗ ತಂಡದ ಪ್ರಮುಖ ಬ್ಯಾಟರ್. ವೇಗದ ಬೌಲರ್ ಮೋಹಿತ್ ಅವಸ್ಥಿ (31 ವಿಕೆಟ್) ಅವರ ಮೇಲೆ ತಂಡ ಭರವಸೆಯಿಟ್ಟಿದೆ.

ಬರೋಡಾ ಪರ ಶಾಶ್ವತ್ ರಾವತ್ (628 ರನ್) ಸ್ಥಿರ ಪ್ರದರ್ಶನ ನೀಡಿದ್ದಾರೆ.

ತಮಿಳುನಾಡು ತಂಡ ಕೊಯಮತ್ತೂರಿನಲ್ಲಿ ನಡೆಯಲಿರುವ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಬಲ ಸೌರಾಷ್ಟ್ರ ತಂಡವನ್ನು ಎದುರಿಸಲಿದೆ. ತಮಿಳುನಾಡು ಆರು ವರ್ಷಗಳಲ್ಲಿ ನಾಕೌಟ್ ತಲುಪಿದ್ದು ಇದೇ ಮೊದಲು.

ಚೇತೇಶ್ವರ ಪೂಜಾರ ಈ ಬಾರಿ ಮೂರು ಶತಕ ಸೇರಿದಂತೆ 780 ರನ್ ಪೇರಿಸಿ ಒಳ್ಳೆಯ ಲಯದಲ್ಲಿದ್ದಾರೆ. ಅರ್ಪಿತ್ ವಾಸವದಾ (440) ಮತ್ತು ಪ್ರೇರಕ್ ಮಂಕಡ್ (426) ಕೊಡುಗೆಯೂ ತಂಡಕ್ಕೆ ನೆರವಾಗಿದೆ. ಈ ತಂಡದ ಧರ್ಮೇಂದ್ರಸಿನ್ಹ ಜಡೇಜ 39 ವಿಕೆಟ್ ಪಡೆದಿದ್ದು, ಟೂರ್ನಿಯ ಅತಿ ಯಶಸ್ವಿ ಬೌಲರ್ ಆಗುವ ಅವಕಾಶ ಪಡೆದಿದ್ದಾರೆ.

ತಮಿಳುನಾಡು ಪರ ನಾರಾಯಣ ಜಗದೀಶನ್ (775 ರನ್) ಒಳ್ಳೆಯ ಲಯದಲ್ಲಿದ್ದಾರೆ. ಬಾಬಾ ಇಂದ್ರಜಿತ್ (606) ಅವರೂ ಕೆಲಪಂದ್ಯಗಳಲ್ಲಿ ತಂಡವನ್ನು ಕಾಪಾಡಿದ್ದಾರೆ. ಸ್ಪಿನ್ನರ್‌ಗಳಾದ ಸಾಯಿ ಕಿಶೋರ್ (38 ವಿಕೆಟ್) ಮತ್ತು ಎಸ್.ಅಜಿತ್ ರಾಮ್ (36) ಅವರು ಯಶಸ್ವಿ ಬೌಲರ್‌ಗಳಾಗಿದ್ದಾರೆ.

ಮಧ್ಯಪ್ರದೇಶಕ್ಕೆ ಆಂಧ್ರ ಸವಾಲು: ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಮಧ್ಯ ಪ್ರದೇಶ, ಆಂಧ್ರ ತಂಡವನ್ನು ಎದುರಿಸಲಿದೆ.

ರಿಕಿ ಭುಯಿ (861 ರನ್) ಅವರು ರಣಜಿ ಋತುವಿನ ಅತಿ ಯಶಸ್ವಿ ಆಟಗಾರ ಎನಿಸಿದ್ದಾರೆ. ಹನುಮ ವಿಹಾರಿ (453) ಕೂಡ ಉಪಯುಕ್ತ ಇನಿಂಗ್ಸ್ ಆಡಿದ್ದಾರೆ. 'ಬಿ' ಗುಂಪಿನಲ್ಲಿ ಆಂಧ್ರ ತಂಡ ಎರಡನೇ ಸ್ಥಾನ (ಮುಂಬೈ ಪ್ರಥಮ) ಪಡೆದಿತ್ತು.

ಮಧ್ಯಪ್ರದೇಶ ಈ ಟೂರ್ನಿಯಲ್ಲಿ ಅಜೇಯ ಸಾಧನೆ ಪ್ರದರ್ಶಿಸಿ ಗಮನ ಸೆಳೆದಿದೆ. ವೆಂಕಟೇಶ ಅಯ್ಯರ್ (510), ಕುಮಾರ ಕಾರ್ತಿಕೇಯ (34 ವಿಕೆಟ್) ತಂಡದ ಪ್ರಮುಖ ಆಟಗಾರರು.

ಪಂದ್ಯಗಳು ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಜಿಯೊ ಸಿನಿಮಾ

ಚೇತೇಶ್ವರ ಪೂಜಾರ

ಪುಣೆ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ

ಪೂಣಚ್ಚಗೆ ಮಣಿದ ನಗಾಲ್

ಪುಣೆ (ಪಿಟಿಐ): ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಭಾರತದ ನಿಕಿ ಪೂಣಚ್ಚ ಅವರು ಅಗ್ರ ಶ್ರೇಯಾಂಕಿತ ಸುಮಿತ್ ನಗಾಲ್ ಅವರನ್ನು ಸೋಲಿಸಿ ಎಟಿಪಿ ಚಾಲೆಂಜರ್ 100 ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಒಂದು ಗಂಟೆ 9 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಪೂಣಚ್ಚ ಅವರು ಸ್ವದೇಶದ ನಗಾಲ್ ಅವರನ್ನು 6-4, 6-3 ಸೆಟ್‌ಗಳಿಂದ ಸೋಲಿಸಿದರು.

ಮಹಾಳುಂಗೆ ಬಾಲೆವಾಡಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ನಗಾಲ್ ಮೊದಲ ಸೆಟ್‌ನಲ್ಲಿ 4-2 ರಿಂದ ಮುನ್ನಡೆ ಸಾಧಿಸಿದರು. ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಪೂಣಚ್ಚ, ವೇಗದ ಸರ್ವ್ ಮತ್ತು ನಿಖರ ರಿಟರ್ನ್‌ಗಳ ಮೂಲಕ ಹಿಡಿತ ಸಾಧಿಸಿದರು.

ಇಸ್ಲಾಮಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಪಾಕಿಸ್ತಾನ ವಿರುದ್ಧದ ಡೇವಿಸ್ ಕಪ್ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಪೂಣಚ್ಚ, ಇಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ ಆಸ್ಟ್ರೇಲಿಯಾದ ಏಳನೇ ಶ್ರೇಯಾಂಕದ ಡೇವ್ ಸ್ವೀನಿ ಅವರನ್ನು ಎದುರಿಸಲಿದ್ದಾರೆ. ಸ್ವೀನಿ ಇನ್ನೊಂದು ಪಂದ್ಯದಲ್ಲಿ 6-4, 6-1 ಸೆಟ್‌ಗಳಿಂದ ಪೋಲೆಂಡ್‌ನ ಮಾಕ್ಸ್ ಕಾಸಿನೋವ್ಸ್ಕಿ ಅವರನ್ನು ಹಿಮ್ಮೆಟ್ಟಿಸಿದರು.

ಶಶಿಕುಮಾರ್ ಮುಕುಂದ್ ಕ್ವಾರ್ಟರ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕಿತ ಆಸ್ಟ್ರೇಲಿಯಾದ ಆಟಗಾರ ಆಡಮ್ ವಾಲ್ಟನ್ ಅವರನ್ನು ಎದುರಿಸಲಿದ್ದಾರೆ.

ಒಂದು ಗಂಟೆ 27 ನಿಮಿಷಗಳ ಕಾಲ ನಡೆದ ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲಿ ರಾಮಕುಮಾರ್ ರಾಮನಾಥನ್ 6-4, 6-4 ಸೆಟ್‌ಗಳಿಂದ ರಷ್ಯಾದ ಅಲೆಕ್ಸಿ ಝುಖರೋವ್ ವಿರುದ್ಧ ಸೋಲನುಭವಿಸಿದರು.

ಅಮೆರಿಕದ ಟ್ರಿಸ್ಟಾನ್ ಬೋಯರ್ ವಿರುದ್ಧ 6-1, 6-2 ಸೆಟ್‌ಗಳಿಂದ ಜಯ ಸಾಧಿಸಿದ ಜಖುರೋವ್, ಕ್ವಾರ್ಟರ್ ಫೈನಲ್‌ನಲ್ಲಿ ಅಬ್ದುಕೋವಿಕ್ ಅವರನ್ನು ಎದುರಿಸಲಿದ್ದಾರೆ.

ಭಾರತದ ಎರಡು ಜೋಡಿಗಳು ಡಬಲ್ಸ್ ಸೆಮಿಫೈನಲ್‌ಗೆ ಅರ್ಹತೆ ಪಡೆದಿವೆ. ರಾಮಕುಮಾರ್ ರಾಮನಾಥನ್ ಮತ್ತು ಸಾಕೇತ್ ಮೈನೇನಿ ಜೋಡಿ 6-2, 6-7(4), 10-2 ಅಂತರದಲ್ಲಿ ಡುಜೆ ಅಜುಕೋವಿಕ್ (ಕ್ರೊಯೇಷಿಯಾ) ಮತ್ತು ಎನ್ರಿಕೊ ಡಲ್ಲಾ ವಾಲೆ (ಇಟಲಿ) ವಿರುದ್ಧ ಜಯ ಸಾಧಿಸಿತು.

ಭಾರತದ ನಿಕಿ ಪೂಣಚ್ಚ

ಕೆ.ಹೊಯ್ಸಳ

ಹೃದಯಾಘಾತ: ಕ್ರಿಕೆಟಿಗ ಸಾವು

ಬೆಂಗಳೂರು: ನಗರದಲ್ಲಿ ಗುರುವಾರ ಆಡಿಟ್ ಮತ್ತು ಅಕೌಂಟ್ಸ್ ಇಲಾಖೆಯ ದಕ್ಷಿಣ ವಲಯ ಕ್ರಿಕೆಟ್ ಟೂರ್ನಿಯ ಪಂದ್ಯದ ವೇಳೆ ಕರ್ನಾಟಕ ತಂಡದ ಆಟಗಾರ ಕೆ.ಹೊಯ್ಸಳ (35) ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಆರ್‌ಎಸ್‌ಐ ಕ್ರೀಡಾಂಗಣದಲ್ಲಿ ಆರಂಭವಾದ ಈ ಎರಡು ದಿನಗಳ ಟೂರ್ನಿಯಲ್ಲಿ ಕರ್ನಾಟಕ ತಂಡ ಒಂದು ರನ್‌ನಿಂದ ತಮಿಳುನಾಡು ತಂಡವನ್ನು ಸೋಲಿಸಿದ್ದು, ಈ ಪಂದ್ಯದಲ್ಲಿ ಅವರು ಉತ್ತಮ ಪ್ರದರ್ಶನ ನೀಡಿದ್ದರು. ಪಂದ್ಯದ ನಂತರ ಮಧ್ಯಾಹ್ನ ಊಟಕ್ಕೆ ಕುಳಿತುಕೊಳ್ಳುವ ಮೊದಲು ಹಠಾತ್ತಾಗಿ ಅವರು ಕುಸಿದುಬಿದ್ದರು ಎಂದು ತಂಡದ ಸಿಬ್ಬಂದಿ ಒಬ್ಬರು ತಿಳಿಸಿದರು.

ಮಧ್ಯಮ ಕ್ರಮಾಂಕದ ಬ್ಯಾಟರ್ ಹಾಗೂ ಮಧ್ಯಮ ವೇಗದ ಬೌಲರ್ ಆಗಿದ್ದ ಅವರು 25 ವರ್ಷದೊಳಗಿನವರ ಟೂರ್ನಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ಕೆಪಿಎಲ್ ಟೂರ್ನಿಯಲ್ಲೂ ಆಡಿದ್ದರು.

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಕರ್ನಾಟಕ

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಅರುಣಾಚಲ ಪ್ರದೇಶದಲ್ಲಿ ಗುರುವಾರ ನಡೆದ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಡೆಲ್ಲಿ ತಂಡದ ವಿರುದ್ಧ 1–1ರಿಂದ ಡ್ರಾ ಸಾಧಿಸಿತು.

ಉಭಯ ತಂಡಗಳ ಎರಡೂ ಗೋಲುಗಳು ಮೊದಲಾರ್ಧದಲ್ಲೇ ದಾಖಲಾದವು. ಕರ್ನಾಟಕ ಪರ ಪ್ರಬಿನ್ ತಿಗ್ಗ (26ನೇ ನಿ.) ಚೆಂಡನ್ನು ಗುರಿ ಸೇರಿಸಿದರೆ, ಅಪ್ಪು ಆರೋಗ್ಯ ಸ್ವಾಮಿ (23ನೇ ನಿ.) ಡೆಲ್ಲಿ ಪರ ಗೋಲು ತಂದಿತ್ತರು.

ಶಿಕ್ಷೆ ಪ್ರಶ್ನಿಸಿ ಲಾಮಿಛಾನೆ ಮೇಲ್ಮನವಿ

ಕಠ್ಮಂಡು (ಎಎಫ್‌ಪಿ): ನೇಪಾಳ ಕ್ರಿಕೆಟ್ ತಂಡದ ಮಾಜಿ ನಾಯಕ ಸಂದೀಪ್ ಲಾಮಿಛಾನೆ ಅವರು ಅತ್ಯಾಚಾರ ಪ್ರಕರಣದಲ್ಲಿ ಎಂಟು ವರ್ಷಗಳ ಜೈಲು ಶಿಕ್ಷೆಯನ್ನು ಪ್ರಶ್ನಿಸಿ ಗುರುವಾರ ಮೇಲ್ಮನವಿ ಸಲ್ಲಿಸಿದ್ದಾರೆ. ಪ್ರಕರಣ ವಿಚಾರಣೆ ವೇಳೆ ಜೈಲಿನಿಂದ ಹೊರಗೆ ಉಳಿಯಲು ಅವರಿಗೆ ಅನುಮತಿ ನೀಡಲಾಗಿದೆ.

ಡಿಸೆಂಬರ್‌ನಲ್ಲಿ ಯುವತಿ ಮೇಲೆ ಅತ್ಯಾಚಾರ ಎಸಗಿದ ಆರೋಪದಲ್ಲಿ 23 ವರ್ಷದ ಸಂದೀಪ್‌ಗೆ ಶಿಕ್ಷೆ ವಿಧಿಸಲಾಗಿತ್ತು.

'ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೇವೆ. ಮೇಲ್ಮನವಿ ವಿಚಾರಣೆ ವೇಳೆ ಲಾಮಿಛಾನೆ ಬಂಧನದಿಂದ ಹೊರಗುಳಿಯಬೇಕೆಂಬ ಅರ್ಜಿಯನ್ನು ಸ್ವೀಕರಿಸಲಾಗಿದೆ' ಎಂದು ಅವರ ವಕೀಲ ಸರೋಜ್ ಘಿಮಿರೆ ತಿಳಿಸಿದ್ದಾರೆ.

ಸಂದೀಪ್ 2018ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಆಡಿದ್ದರು.

ಸೈಕ್ಲಿಂಗ್: ಭಾರತಕ್ಕೆ ಎರಡು ಚಿನ್ನದ ಪದಕ

ನವದೆಹಲಿ (ಪಿಟಿಐ): ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಗುರುವಾರ ಭಾರತದ ಸೈಕ್ಲಿಸ್ಟ್‌ಗಳು ಪ್ಯಾರಾ ವಿಭಾಗದಲ್ಲಿ ಎರಡು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದಿದ್ದಾರೆ. ಐದು ಅಗ್ರ ಸ್ಥಾನಗಳೊಂದಿಗೆ ಮಲೇಷ್ಯಾ ಮೇಲುಗೈ ಸಾಧಿಸಿದೆ.

ಅರ್ಷದ್ ಶೇಖ್ ಮತ್ತು ಜಲಾಲುದ್ದೀನ್ ಅನ್ಸಾರಿ ಸಿ2 15 ಕಿ.ಮೀ ಸ್ಕ್ರಾಚ್ ಫೈನಲ್‌ನಲ್ಲಿ ಚಿನ್ನ-ಬೆಳ್ಳಿ ಗೆದ್ದರೆ, ಮಹಿಳಾ ಸಿ2 ವಿಭಾಗದ 15 ಕಿ.ಮೀ ಸ್ಕ್ರಾಚ್ ಸ್ಪರ್ಧೆಯಲ್ಲಿ ಜ್ಯೋತಿ ಗಡೇರಿಯಾ ವಿಜೇತರಾಗಿದ್ದಾರೆ.

ಸಿ3 ಕ್ಲಾಸ್ 15 ಕಿ.ಮೀ ಸ್ಕ್ರಾಚ್ ವಿಭಾಗದ ಫೈನಲ್‌ನಲ್ಲಿ ಪವನ್ ಕುಮಾರ್ ಕೊಮ್ಮೋಜಿ ಕಂಚಿನ ಪದಕ ಗೆದ್ದರು. ಈ ಸ್ಪರ್ಧೆಯಲ್ಲಿ ಮಲೇಷ್ಯಾದ ಆದಿ ರೈಮಿಕ್ ಮತ್ತು ಇಂಡೊನೇಷ್ಯಾದ ಟಿಫಾನ್ ಅಬಿದ್ ಅಲನಾ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದರು.

ಪುರುಷರ ಜೂನಿಯರ್ ಸ್ಕ್ರಾಚ್ ರೇಸ್‌ನಲ್ಲಿ ಸುಜಲ್ ಯಾದವ್ ಐದನೇ ಸ್ಥಾನ ಪಡೆದರೆ, ಕಜಕಿಸ್ತಾನ, ಚೈನೀಸ್ ತೈಪೆ ಮತ್ತು ಹಾಂಗ್ ಕಾಂಗ್ ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದವು.

ಮಹಿಳೆಯರ ಜೂನಿಯರ್ ಸ್ಕ್ರಾಚ್ ಸ್ಪರ್ಧೆಯಲ್ಲಿ ಜೆಪಿ ಧನ್ಯಧಾ ಏಳನೇ ಸ್ಥಾನ ಪಡೆದರೆ, ಚೈನೀಸ್ ತೈಪೆಯ ವೆನ್ ಕ್ಸಿನ್ ಹುವಾಂಗ್ ಚಿನ್ನ ಗೆದ್ದರು.

ಮಹಿಳಾ ಎಲೈಟ್ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಭಾರತದ ಮಯೂರಿ ಧನರಾಜ್ ಲುಟೆ ಮತ್ತು ತ್ರಿಶ್ಯಾ ಪಾಲ್ ಪದಕಗಳಿಂದ ವಂಚಿತರಾಗಿದ್ದಾರೆ.

ಆರ್ಚರಿ: ಫೈನಲ್‌ಗೆ ಭಾರತದ ಸ್ಪರ್ಧಿಗಳು

ಬಾಗ್ದಾದ್ (ಪಿಟಿಐ): ಇಪ್ಪತ್ತು ತಿಂಗಳ ಬಳಿಕ ಪುನರಾಗಮನ ಮಾಡಿರುವ ಮಾಜಿ ವಿಶ್ವ ನಂ.1 ದೀಪಿಕಾ ಕುಮಾರಿ ಸೇರಿದಂತೆ ಭಾರತದ ಆರ್ಚರಿ ಸ್ಪರ್ಧಿಗಳು ಗುರುವಾರ ಇಲ್ಲಿ ನಡೆದ ಏಷ್ಯಾ ಕಪ್ ಲೆಗ್ 1 ನಲ್ಲಿ ಆರು ತಂಡ ಸ್ಪರ್ಧೆಗಳ ಫೈನಲ್‌ಗೆ ಪ್ರವೇಶಿಸಿದ್ದು, ಪದಕ ಖಚಿತಪಡಿಸಿಕೊಂಡಿದ್ದಾರೆ.

ಮೂರು ಬಾರಿಯ ಒಲಿಂಪಿಯನ್, ಮಹಿಳಾ ರಿಕರ್ವ್ ತಂಡ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಸಿಮ್ರನ್ಜೀತ್ ಕೌರ್ ನಂತರ ಎರಡನೇ ಸ್ಥಾನ ಪಡೆದರು.

ಎಲಿಮಿನೇಷನ್ ಸುತ್ತಿನಲ್ಲಿ ಭಜನ್ ಕೌರ್ ಅವರನ್ನು ಒಳಗೊಂಡ ಭಾರತ ಮಹಿಳಾ ರಿಕರ್ವ್ ತಂಡವು ಆತಿಥೇಯ ಇರಾಕ್ ಅನ್ನು ಪರಾಭಾವಗೊಳಿಸಿದೆ. ಉಜ್ಬೇಕಿಸ್ತಾನ ವಿರುದ್ಧ ಚಿನ್ನದ ಪದಕಕ್ಕಾಗಿ ಸೆಣಸಲಿದೆ.

ಪುರುಷರ ರಿಕರ್ವ್ ತಂಡದಲ್ಲಿ ಧೀರಜ್ ಬೊಮ್ಮದೇವರ, ಪ್ರವೀಣ್‌ಜಾಧವ್‌ಮತ್ತುತರುಣ್‌ದೀಪ್‌ರಾಯ್‌ನೇರಸೆಟ್‌ಗಳಲ್ಲಿ ಗೆಲುವು ಸಾಧಿಸಿದರು. ಫೈನಲ್‌ನಲ್ಲಿ ಭಾರತ, ಬಾಂಗ್ಲಾದೇಶವನ್ನು ಎದುರಿಸಲಿದೆ.

ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ಭಾರತವು ಸಿರಿಯಾ ಮತ್ತು ಕತಾರ್ ತಂಡಗಳನ್ನು ನೇರ ಸೆಟ್‌ಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿತು. ಅಲ್ಲಿ ಧೀರಜ್ ಮತ್ತು ಸಿಮ್ರನ್ ಜೀತ್ ಜೋಡಿ ಬಾಂಗ್ಲಾದೇಶದ ಜೋಡಿಯನ್ನು ಎದುರಿಸಲಿದೆ.

ಪುರುಷರ ಕಾಂಪೌಂಡ್ ತಂಡ ಫೈನಲ್‌ನಲ್ಲಿ ಭಾರತದ ಪ್ರಥಮೇಶ್ ಜವ್ಕರ್, ಪ್ರಿಯಾಂಶ್ ಮತ್ತು ಕುಶಾಲ್ ದಲಾಲ್ ಆತಿಥೇಯ ಇರಾಕ್ ತಂಡವನ್ನು 233-223 ಅಂತರದಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದರು.

ಅದಿತಿ ಸ್ವಾಮಿ, ಪ್ರಿಯಾ ಗುರ್ಜರ್ ಮತ್ತು ಪರ್ನೀತ್ ಕೌರ್ ಅವರನ್ನೊಳಗೊಂಡ ಭಾರತ ತಂಡ ಅಫ್ಗಾನಿಸ್ತಾನವನ್ನು 234-210 ಅಂಕಗಳಿಂದ ಮಣಿಸಿ ಫೈನಲ್ ಪ್ರವೇಶಿಸಿತು.

ಕಾಂಪೌಂಡ್ ಮಿಶ್ರ ವಿಭಾಗದಲ್ಲಿ ಜಾವ್ಕರ್ ಮತ್ತು ಅದಿತಿ ಜೋಡಿ ಕೊನೆಯ ನಾಲ್ಕು ಹಂತದಲ್ಲಿ ಬಾಂಗ್ಲಾದೇಶವನ್ನು 157-146 ಅಂಕಗಳಿಂದ ಸೋಲಿಸಿತು. ಫೈನಲ್‌ನಲ್ಲಿ ಇರಾನ್ ಜೋಡಿಯ ವಿರುದ್ಧ ಸೆಣಸಲಿದೆ.

ದೀಪಿಕಾ ಕುಮಾರಿ

'ಪ್ರವಾಸಿಗರ ಸ್ವರ್ಗ'ಕ್ಕೆ ಚೊಚ್ಚಲ ಪ್ರವಾಸ ಕೈಗೊಂಡ ಸಚಿನ್

ಗಲ್ಲಿ ಕ್ರಿಕೆಟ್ ಆಡಿದ ತೆಂಡೂಲ್ಕರ್

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಪ್ರವಾಸ ಕೈಗೊಂಡಿರುವ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ಸ್ಥಳೀಯ ಯುವಕರೊಂದಿಗೆ ಕ್ರಿಕೆಟ್ ಆಟವಾಡುವ ಮೂಲಕ ಗಮನ ಸೆಳೆದಿದ್ದಾರೆ.

ಕುಟುಂಬದ ಜತೆ ಜಮ್ಮು ಮತ್ತು ಕಾಶ್ಮೀರಕ್ಕೆ ಚೊಚ್ಚಲ ಭೇಟಿ ನೀಡಿರುವ ತೆಂಡೂಲ್ಕರ್, ಉರಿ ಪಟ್ಟಣದಲ್ಲಿ ತಮ್ಮ ಕಾರನ್ನು ರಸ್ತೆ ಬದಿ ನಿಲ್ಲಿಸಿ, ಕೆಲವು ಯುವಕರು ರಟ್ಟಿನ ಪೆಟ್ಟಿಗೆ ಮತ್ತು ಖಾಲಿ ಕ್ಯಾನ್ ಅನ್ನು ವಿಕೆಟ್‌ಗಳಾಗಿ ಇಟ್ಟುಕೊಂಡು ರಸ್ತೆಯಲ್ಲಿ ಕ್ರಿಕೆಟ್ ಆಡುತ್ತಿರುವುದನ್ನು ನೋಡಿದರು.

'ನಾನು ಆಡಬಹುದೇ ಎಂದು ಸಚಿನ್ ಕೇಳಿದರು. ನಿಮ್ಮ ಬೌಲರ್ ಯಾರು? ಎಂದು ಬ್ಯಾಟ್ ಹಿಡಿದ ಸಚಿನ್, ತಮ್ಮ ಆರಂಭಿಕ ದಿನಗಳಿಗೆ ಮರಳಿದರು. ಪತ್ನಿ ಅಂಜಲಿ ಸಹ ಪತಿಯ ಆಟ ನೋಡಿ ಸಂತಸಪಟ್ಟರು.

ಕ್ರಿಕೆಟ್ ಆಡಿರುವ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಸಚಿನ್, 'ಕ್ರಿಕೆಟ್ ಮತ್ತು ಕಾಶ್ಮೀರ: ಪ್ರವಾಸಿಗರ ಸ್ವರ್ಗದಲ್ಲಿ ಪಂದ್ಯ' ಎಂದು ಬಣ್ಣಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

2013ರಲ್ಲಿ ಕ್ರಿಕೆಟ್‌ನಿಂದ ನಿವೃತ್ತರಾದ ಸಚಿನ್, ಕಂದು ಬಣ್ಣದ ಜಾಕೆಟ್ ಧರಿಸಿದ್ದರು. ಒಂಬತ್ತು ಎಸೆತಗಳನ್ನು ಎದುರಿಸಿ, ನೇರ ಡ್ರೈವ್ ಮತ್ತು ಸ್ಕೂಪ್ ಶಾಟ್‌ಗಳನ್ನು ಆಡಿದರು. ತಲೆಕೆಳಗಾಗಿ ಬ್ಯಾಟ್ ಹಿಡಿದು ಚೆಂಡನ್ನು ಹಿಟ್ ಮಾಡಿದರು. ಕೊನೆಯ ಎಸೆತದಲ್ಲಿ ಬೌಲರ್‌ಗೆ 'ನೀವು ನನ್ನನ್ನು ಔಟ್ ಮಾಡಬೇಕಾಗುತ್ತದೆ' ಎಂದು ತಮಾಷೆಯಾಗಿ ಹೇಳಿದರು.

ಯುವಕರಿಗೆ ತೆಂಡೂಲ್ಕರ್ ಅವರನ್ನು ಔಟ್ ಮಾಡಲು ಸಾಧ್ಯವಾಗಲಿಲ್ಲ. ಬಳಿಕ ಅಭಿಮಾನಿಗಳೊಂದಿಗೆ ಸೆಲ್ಫಿ ತೆಗೆದುಕೊಂಡು, ಅವರೊಂದಿಗೆ ಕೆಲ ನಿಮಿಷ ಕಳೆದರು.

ಕಳೆದ ವಾರ ಇಲ್ಲಿಗೆ ಆಗಮಿಸಿದ ಸಚಿನ್, ಪಹಲ್ಗಾಮ್‌ಗೆ ತೆರಳುವ ಮೊದಲು ದಕ್ಷಿಣ ಕಾಶ್ಮೀರದ ಸಂಗಮ್ ಪ್ರದೇಶದ ಕ್ರಿಕೆಟ್ ಬ್ಯಾಟ್ ತಯಾರಕರನ್ನು ಭೇಟಿ ಮಾಡಿದರು. ಪೈನ್ ಮತ್ತು ಪೀಕ್ ಹೋಟೆಲ್‌ನಲ್ಲಿ ತಂಗಿದ್ದರು. ಹೋಟೆಲ್ ಸಿಬ್ಬಂದಿಯ ಆತಿಥ್ಯ ಮೆಚ್ಚಿ, 'ನಾನು ಮತ್ತೊಮ್ಮೆ ಇಲ್ಲಿಗೆ ಬಂದು ಹೆಚ್ಚು ಸಮಯ ಕಳೆಯಲು ಇಷ್ಟಪಡುತ್ತೇನೆ' ಎಂದು ಅವರು ಬರೆದಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಉರಿ ಸೆಕ್ಟರ್‌ನ ನಿಯಂತ್ರಣ ರೇಖೆಯ ಕೊನೆಯ ಸ್ಥಳ ಅಮನ್ ಸೇತುಗೆ ಭೇಟಿ ನೀಡಿದರು. ಈ ವೇಳೆ ಸೈನಿಕರೊಂದಿಗೆ ಸಂವಾದ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರವಾಸದಲ್ಲಿ ತೆಂಡೂಲ್ಕರ್ ಅವರೊಂದಿಗೆ ಅವರ ಮಗಳು ಸಾರಾ ಕೂಡ ಇದ್ದಾರೆ. ಶ್ರೀನಗರ-ಜಮ್ಮು ರಾಷ್ಟ್ರೀಯ ಹೆದ್ದಾರಿಯ ಚುರ್ಸೂನಲ್ಲಿರುವ ಕ್ರಿಕೆಟ್ ಬ್ಯಾಟ್ ತಯಾರಿಕಾ ಘಟಕಕ್ಕೆ ಭೇಟಿ ನೀಡಿದರು.

ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗದಲ್ಲಿ ಸ್ಥಳೀಯರೊಂದಿಗೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಕ್ರಿಕೆಟ್ ಆಡಿದರು –ಪಿಟಿಐ ಚಿತ್ರ

ಐಪಿಎಲ್: ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ–ಸಿಎಸ್‌ಕೆ ಮುಖಾಮುಖಿ

ನವದೆಹಲಿ(ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) 17ನೇ ಆವೃತ್ತಿಯು ಮಾರ್ಚ್ 22ರಿಂದ ಆರಂಭವಾಗಲಿದ್ದು, ಮೊದಲ 17 ದಿನ ನಡೆಯಲಿರುವ 21 ಪಂದ್ಯಗಳ ವೇಳಾಪಟ್ಟಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಗುರುವಾರ ಬಿಡುಗಡೆ ಮಾಡಿದೆ.

ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು (ಆರ್‌ಸಿಬಿ) ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಉದ್ಘಾಟನಾ ಪಂದ್ಯದಲ್ಲೇ ಸ್ಟಾರ್ ಆಟಗಾರರಾದ 42 ವರ್ಷದ ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಮುಖಾಮುಖಿಯಾಗುವರು. ಪ್ರಕಟಗೊಂಡ ವೇಳಾಪಟ್ಟಿಯಲ್ಲಿ ಆರ್‌ಸಿಬಿ ತಂಡವು ಬೆಂಗಳೂರಿನಲ್ಲಿ ಮೂರು ಪಂದ್ಯ ಸೇರಿದಂತೆ ಒಟ್ಟು ಐದು ಪಂದ್ಯಗಳನ್ನು ಆಡಲಿದೆ.

ಮಾರ್ಚ್ 22ರಿಂದ ಏ.7ರವರೆಗೆ ಪ್ರಕಟಿಸಲಾದ ಈ ವೇಳಾಪಟ್ಟಿ ತಾತ್ಕಾಲಿಕವಾಗಿದ್ದು, ಲೋಕಸಭೆ ಚುನಾವಣೆ ಘೋಷಣೆಯಾದ ಬಳಿಕ ಪರಿಷ್ಕರಿಸುವ ಸಾಧ್ಯತೆಯೂ ಇದೆ. ಅಲ್ಲದೆ, ಮತದಾನದ ದಿನಾಂಕಗಳನ್ನು ಗಮನಿಸಿ ಉಳಿದ ವೇಳಾಪಟ್ಟಿ ಅಂತಿಮಗೊಳಿಸಲು ಸ್ಥಳೀಯ ಅಧಿಕಾರಿಗಳೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಬಿಸಿಸಿಐ ತಿಳಿಸಿದೆ.

ಮುಂದಿನ ತಿಂಗಳಲ್ಲಿ ಚುನಾವಣಾ ಆಯೋಗವು ಲೋಕಸಭೆ ಚುನಾವಣೆಯ ವೇಳಾಪಟ್ಟಿ ಪ್ರಕಟಿಸುವ ನಿರೀಕ್ಷೆಯಿದೆ.

ಈ ಬಾರಿಯೂ ಇಡೀ ಟೂರ್ನಿ ಭಾರತದಲ್ಲೇ ನಡೆಯಲಿದೆ. ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ 2009ರಲ್ಲಿ ಟೂರ್ನಿಯ ಪಂದ್ಯಗಳು ಪೂರ್ಣಪ್ರಮಾಣದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿತ್ತು. 2014ರಲ್ಲಿ ಕೆಲವು ಪಂದ್ಯಗಳು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿದ್ದವು. ಆದರೆ, 2019ರಲ್ಲಿ ಸಾರ್ವತ್ರಿಕ ಚುನಾವಣೆ ಹೊರತಾಗಿಯೂ ಐಪಿಎಲ್ ಅಬಾಧಿತವಾಗಿ ನಡೆದಿತ್ತು.

ವಿಶ್ವದ ಅತ್ಯಂತ ಶ್ರೀಮಂತ ಐಪಿಎಲ್ ಟೂರ್ನಿ ಬಿಸಿಸಿಐ ಮತ್ತು ಅಗ್ರ ಆಟಗಾರರಿಗೆ ಭಾರೀ ಆದಾಯವನ್ನು ತಂದುಕೊಡುತ್ತಿದೆ. ಈ ಬಾರಿ ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್, ಲೀಗ್‌ನ ಇತಿಹಾಸದಲ್ಲೇ ಅತಿ ಹೆಚ್ಚಿನ ಮೊತ್ತಕ್ಕೆ (₹24.75 ಕೋಟಿ) ಕೋಲ್ಕತ್ತ ನೈಟ್ ರೈಡರ್ಸ್ ಪಾಲಾಗಿದ್ದರು. ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ₹ 20.50 ಕೋಟಿಗೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ತೆಕ್ಕೆಗೆ ಜಾರಿದ್ದರು.

ಮೊಹಮ್ಮದ್ ಶಮಿ ಅಲಭ್ಯ

ನವದೆಹಲಿ (ಪಿಟಿಐ): ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಎಡ ಪಾದದ ನೋವಿನಿಂದ ಬಳಲುತ್ತಿದ್ದು, ಲಂಡನ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಲಿರುವ ಕಾರಣ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವುದಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮೂಲವೊಂದು ಗುರುವಾರ ತಿಳಿಸಿದೆ.

33 ವರ್ಷದ ಶಮಿ ಅವರು ಹಾಲಿ ಭಾರತ–ಇಂಗ್ಲೆಂಡ್ ಟೆಸ್ಟ್ ಸರಣಿಯಲ್ಲೂ ಆಡುತ್ತಿಲ್ಲ. ಅವರು ಕೊನೆಯ ಬಾರಿ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಆಡಿದ್ದರು.

‘ಶಮಿ ಜನವರಿ ಕೊನೆಯ ವಾರ ಲಂಡನ್‌ನಲ್ಲಿದ್ದು, ಪಾದಕ್ಕೆ ನೀಡುವ ವಿಶೇಷ ಚುಚ್ಚುಮದ್ದು ಪಡೆದಿದ್ದರು. ಮೂರು ವಾರಗಳ ನಂತರ ನಿಧಾನಗತಿಯ ಓಟ ಆರಂಭ ಮಾಡುವಂತೆ ತಿಳಿಸಲಾಗಿತ್ತು. ಆದರೆ ಚುಚ್ಚುಮದ್ದು ಪರಿಣಾಮ ಬೀರಿಲ್ಲ. ಈಗ ಶಸ್ತ್ರಚಿಕಿತ್ಸೆಯೊಂದೇ ದಾರಿಯಾಗಿದೆ. ಅವರು ಶೀಘ್ರದಲ್ಲೇ ಶಸ್ತ್ರಚಿಕಿತ್ಸೆಗೆಂದು ಇಂಗ್ಲೆಂಡ್‌ಗೆ ತೆರಳಲಿದ್ದಾರೆ’ ಎಂದು ಬಿಸಿಸಿಐನ ಮೂಲವೊಂದು ತಿಳಿಸಿದೆ.

ಐಪಿಎಲ್ 2024ರ ವೇಳಾಪಟ್ಟಿ (ಮಾರ್ಚ್ 22ರಿಂದ ಏ.7ರವರೆಗೆ)

ದಿನಾಂಕ		ತಂಡಗಳು	ಸಮಯ	ಸ್ಥಳ
ಮಾರ್ಚ್	22	ಚೆನ್ನೈ ಸೂಪರ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ರಾತ್ರಿ 8.00	ಚೆನ್ನೈ
	23	ಪಂಜಾಬ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30	ಮೊಹಾಲಿ
	23	ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್	ರಾತ್ರಿ 7.30	ಕೋಲ್ಕತ್ತ
	24	ರಾಜಸ್ಥಾನ ರಾಯಲ್ಸ್–ಲಖನೌ ಸೂಪರ್ ಜೈಂಟ್ಸ್	ಮಧ್ಯಾಹ್ನ 3.30	ಜೈಪುರ
	24	ಗುಜರಾತ್ ಟೈಟನ್ಸ್–ಮುಂಬೈ ಇಂಡಿಯನ್ಸ್	ರಾತ್ರಿ 7.30	ಅಹಮದಾಬಾದ್
	25	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್	ರಾತ್ರಿ 7.30	ಬೆಂಗಳೂರು
	26	ಚೆನ್ನೈ ಸೂಪರ್ ಕಿಂಗ್ಸ್–ಗುಜರಾತ್ ಟೈಟನ್ಸ್	ರಾತ್ರಿ 7.30	ಚೆನ್ನೈ
	27	ಸನ್‌ರೈಸರ್ಸ್ ಹೈದರಾಬಾದ್–ಮುಂಬೈ ಇಂಡಿಯನ್ಸ್	ರಾತ್ರಿ 7.30	ಹೈದರಾಬಾದ್
	28	ರಾಜಸ್ಥಾನ ರಾಯಲ್ಸ್–ಡೆಲ್ಲಿ ಕ್ಯಾಪಿಟಲ್ಸ್	ರಾತ್ರಿ 7.30	ಜೈಪುರ
	29	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಕೋಲ್ಕತ್ತ ನೈಟ್ ರೈಡರ್ಸ್	ರಾತ್ರಿ 7.30	ಬೆಂಗಳೂರು
	30	ಲಖನೌ ಸೂಪರ್ ಜೈಂಟ್ಸ್–ಪಂಜಾಬ್ ಕಿಂಗ್ಸ್	ರಾತ್ರಿ 7.30	ಲಖನೌ
	31	ಗುಜರಾತ್ ಟೈಟನ್ಸ್–ಸನ್‌ರೈಸರ್ಸ್ ಹೈದರಾಬಾದ್	ಮಧ್ಯಾಹ್ನ 3.30	ಅಹಮದಾಬಾದ್
	31	ಡೆಲ್ಲಿ ಕ್ಯಾಪಿಟಲ್ಸ್–ಚೆನ್ನೈ ಸೂಪರ್ ಕಿಂಗ್ಸ್	ರಾತ್ರಿ 7.30	ವಿಶಾಖಪಟ್ಟಣ
ಏಪ್ರಿಲ್	1	ಮುಂಬೈ ಇಂಡಿಯನ್ಸ್–ರಾಜಸ್ಥಾನ ರಾಯಲ್ಸ್	ರಾತ್ರಿ 7.30	ಮುಂಬೈ
	2	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಲಖನೌ ಸೂಪರ್ ಜೈಂಟ್ಸ್	ರಾತ್ರಿ 7.30	ಬೆಂಗಳೂರು
	3	ಡೆಲ್ಲಿ ಕ್ಯಾಪಿಟಲ್ಸ್–ಕೋಲ್ಕತ್ತ ನೈಟ್ ರೈಡರ್ಸ್	ರಾತ್ರಿ 7.30	ವಿಶಾಖಪಟ್ಟಣ
	4	ಗುಜರಾತ್ ಟೈಟನ್ಸ್–ಪಂಜಾಬ್ ಕಿಂಗ್ಸ್	ರಾತ್ರಿ 7.30	ಅಹಮದಾಬಾದ್
	5	ಸನ್‌ರೈಸರ್ಸ್ ಹೈದರಾಬಾದ್–ಚೆನ್ನೈ ಸೂಪರ್ ಕಿಂಗ್ಸ್	ರಾತ್ರಿ 7.30	ಹೈದರಾಬಾದ್
	6	ರಾಜಸ್ಥಾನ ರಾಯಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ರಾತ್ರಿ 7.30	ಜೈಪುರ
	7	ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30	ಮುಂಬೈ
	7	ಲಖನೌ ಸೂಪರ್ ಜೈಂಟ್ಸ್–ಗುಜರಾತ್ ಟೈಟನ್ಸ್	ರಾತ್ರಿ 7.30	ಲಖನೌ

ಸುಧಾ, ಮಯೂರ, ಸ್ಪರ್ಧಾವಾಣಿ ಓದಿರಿ

SHOWROOMS: KARNATAKA: BENGALURU: RENAULT Bannerghatta Road Mob: +91 8546820204, RENAULT Mysore Road Mob: +91 8527240549 & +91 7026666922, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626 & +91 7353760555, RENAULT Kalyan Nagar Mob: +91 8527236137 & +91 8722866664, RENAULT Sarjapura Mob: +91 8448481374, +91 8746811000 & +91 8496915111, RENAULT Yelahanka Mob: +91 8527234592, +91 9071767600 & +91 8884498993, RENAULT Yeswanthpur Mob: +91 9311832962 & +91 9311832968. **TUMKUR:** RENAULT Tumkur Mob: +91 7353764337.